ಭಾನುವಾರ, ಸೆಪ್ಟೆಂಬರ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 269 | ಪುಟ 20
www.prajavani.net prajavani.net prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶೀತಲ್ ಇತಿಹಾಸ
ಭಾರತದ ಶೀತಲ್ ದೇವಿ ಅವರು ದಕ್ಷಿಣ ಕೊರಿಯಾದ ಗ್ವಾಂಗ್‌ಜುನಲ್ಲಿ ನಡೆಯುತ್ತಿರುವ ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದರು



ಕೀರ್ತನಾಗೆ ಪ್ರಶಸ್ತಿ
ಕರ್ನಾಟಕದ ಕೀರ್ತನಾ ಪಾಂಡ್ಯನ್ ಅವರು ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ 6–ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ತಮಿಳುನಾಡಿನ ಅನುಪಮಾ ಆರ್. ಅವರನ್ನು ಸೋಲಿಸಿ, ಪ್ರಶಸ್ತಿ ಗೆದ್ದುಕೊಂಡರು



ಬರೇಲಿ ಹಿಂಸಾಚಾರ: 8 ಮಂದಿ ಸೆರೆ 9
ಕಲ್ಯಾಣ–ಉತ್ತರ ಕರ್ನಾಟಕದ ಸಂಪರ್ಕ ಕಡಿತ 8

ಕರೂರು ಕಾಲ್ತುಳಿತ: 38 ಸಾವು

ಟಿವಿಕೆ ಮುಖ್ಯಸ್ಥ–ನಟ ವಿಜಯ್ ರ‍್ಯಾಲಿ ಕಾಲಕ್ಕೆ ತಮಿಳುನಾಡಿನಲ್ಲಿ ಭಾರಿ ದುರಂತ

ಪ್ರಜಾವಾಣಿ ವಾರ್ತೆ/ಪಿಟಿಐ

ಕರೂರು (ತಮಿಳುನಾಡು): ‘ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ಕರೂರು ಜಿಲ್ಲೆಯಲ್ಲಿ ಶನಿವಾರ ನಡೆಸಿದ ರ‍್ಯಾಲಿಯಲ್ಲಿ ಕಾಲ್ತುಳಿತ ಉಂಟಾದ ಕಾರಣ ಉಸಿರುಗಟ್ಟಿ ಕನಿಷ್ಠ 38 ಮಂದಿ ಮೃತಪಟ್ಟಿದ್ದಾರೆ.

ಮೃತರಲ್ಲಿ 16 ಮಂದಿ ಮಹಿಳೆಯರು ಹಾಗೂ 8 ಜನ ಮಕ್ಕಳು ಸೇರಿದ್ದಾರೆ. ಇದೇ ವೇಳೆ ಪ್ರಜ್ಞೆತಪ್ಪಿದ ಸುಮಾರು 58 ಮಂದಿಯನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗಬಹುದು ಎನ್ನಲಾಗುತ್ತಿದೆ. ‘ಈಗಲೇ ಸಾವಿನ ಸಂಖ್ಯೆಯನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ’ ಎಂದು ಕರೂರು ವೈದ್ಯಕೀಯ ಕಾಲೇಜಿನ ಡೀನ್ ಆರ್. ಶಾಂತಿಮಲರ್ ಹೇಳಿದ್ದಾರೆ.

ಕಾಲ್ತುಳಿತ ಘಟನೆ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಅರುಣಾ ಜಗದೀಶನ್ ನೇತೃತ್ವದ ಸಮಿತಿ ರಚನೆ ಮಾಡಿ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಆದೇಶಿಸಿದ್ದಾರೆ.

ವಿಜಯ್ ಅವರು ತಮ್ಮ ಪಕ್ಷದ ಪರ ರಾಜ್ಯದಾದ್ಯಂತ ಪ್ರಚಾರ ನಡೆಸುತ್ತಿದ್ದಾರೆ. ವಿಜಯ್ ನಿಗದಿತ ಅವಧಿಗಿಂತ ಸುಮಾರು ಆರು ತಾಸು ತಡವಾಗಿ ರ‍್ಯಾಲಿ ನಡೆಯುತ್ತಿದ್ದ ಸ್ಥಳಕ್ಕೆ ಬಂದರು. ಈ ವೇಳೆಯಲ್ಲಿ ಸ್ಥಳದಲ್ಲಿ ಜನ ಜಮಾವಣೆಗೊಳ್ಳುತ್ತಲೇ ಸಾಗಿದರು. ನಟನನ್ನು ನೋಡಲು ಪಕ್ಷದ ಕಾರ್ಯಕರ್ತರು ಹಾಗೂ ಸಾವಿರಾರು ಅಭಿಮಾನಿಗಳು ಸೇರಿದ್ದರು. ಪುಟ್ಟ ಮಕ್ಕಳು ಕೂಡ ದೊಡ್ಡ ಸಂಖ್ಯೆಯಲ್ಲಿದ್ದರು.

9

ಮುಖ್ಯಾಂಶಗಳು
- ಮೃತರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ಘೋಷಣೆ
- ಗಾಯಗೊಂಡವರಿಗೆ ತಲಾ ₹1ಲಕ್ಷ ಘೋಷಿಸಿದ ಸಿ.ಎಂ ಸ್ಟಾಲಿನ್



ನಟ ವಿಜಯ್ ಅವರು ಕರೂರು ಜಿಲ್ಲೆಯಲ್ಲಿ ಶನಿವಾರ ನಡೆಸಿದ ರ‍್ಯಾಲಿಯಲ್ಲಿ ಸಾವಿರಾರು ಜನರು ಸೇರಿದ್ದರು



ದುರದೃಷ್ಟಕರ ಘಟನೆಯಿಂದ ದುಃಖವಾಗಿದೆ. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ಸಿಗಲಿ. ಗಾಯಗೊಂಡ ಎಲ್ಲರೂ ಶೀಘ್ರ ಗುಣಮುಖರಾಗಲಿ
ನರೇಂದ್ರ ಮೋದಿ, ಪ್ರಧಾನಿ



ಕರೂರಿನಲ್ಲಿ ನಡೆದ ಕಾಲ್ತುಳಿತ ಹೃದಯ ವಿದ್ರಾವಕ. ನೊಂದವರಿಗೆ, ಗಾಯಾಳುಗಳಿಗೆ ತಕ್ಷಣವೇ ಸ್ಪಂದಿಸುವಂತೆ ಸಚಿವರು, ಮಾಜಿ ಸಚಿವರಿಗೆ ಹಾಗೂ ಜಿಲ್ಲಾಧಿಕಾರಿ, ಎಡಿಜಿಪಿಗೆ ಸೂಚಿಸಿರುವೆ
ಎಂ.ಕೆ. ಸ್ಟಾಲಿನ್, ಮುಖ್ಯಮಂತ್ರಿ

ದೇಶದ ಮೊದಲ ಬುಲೆಟ್ ರೈಲಿಗೆ 2027ಕ್ಕೆ ಚಾಲನೆ
ದೆಹಲಿ: ಗುಜರಾತ್‌ನ ಸೂರತ್ ಮತ್ತು ಬಿಲಿಮೊರಾ ನಡುವಿನ 50 ಕಿ.ಮೀ. ಉದ್ದದ ಬುಲೆಟ್ ರೈಲು ಯೋಜನೆ 2027ರಲ್ಲಿ ಪೂರ್ಣಗೊಳ್ಳಲಿದ್ದು, ಈ ಮೂಲಕ ದೇಶದ ಮೊದಲ ಬುಲೆಟ್ ರೈಲು ಸಂಚಾರಕ್ಕೆ ಚಾಲನೆ ಸಿಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಶನಿವಾರ ಹೇಳಿದರು. ಸುದ್ದಿ 10

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮದ್ಯ ತಯಾರಿಕಾ ಉದ್ಯಮ ‘ಬಂದಿ’

- ಯತೀಶ್ ಕುಮಾರ್ ಜಿ.ಡಿ
- ಎಸ್. ಸಂಪತ್

ಒಳನೋಟ

ಬೆಂಗಳೂರು: ‘ಇತರ ಉದ್ಯಮಗಳಿಗಿಂತ ಭಿನ್ನ ಎಂಬಂತೆ ಮದ್ಯ ಉದ್ಯಮವನ್ನು ಬಿಂಬಿಸಲಾಗಿದೆ. ಸರ್ಕಾರವೂ ಈ ಉದ್ಯಮವನ್ನು ಪೂರ್ವಗ್ರಹದಿಂದಲೇ ನೋಡುತ್ತಿದ್ದು, ಕೇವಲ ಆದಾಯದ ಮೂಲವಾಗಿ ಪರಿಗಣಿಸುತ್ತಿದೆ. ಸರ್ಕಾರಿ ವ್ಯವಸ್ಥೆಯಂತೂ ಪರಿ ಪರಿಯಾಗಿ ಹಿಂಡಿ ಹಿಪ್ಪೆ ಮಾಡುತ್ತಿದೆ. ಒಂದು ರೀತಿಯಲ್ಲಿ ನಾವು ಅನಾಥ ಮಕ್ಕಳಂತೆ ಆಗಿದ್ದೇವೆ. ಹೊಡೆದರೆ ಹೊಡಿಸಿಕೊಳ್ಳಬೇಕು, ಬಡಿದರೆ ಬಡಿಸಿಕೊಳ್ಳಬೇಕು ಎಂಬಂತಾಗಿದೆ ನಮ್ಮ ಸ್ಥಿತಿ’ ಎಂಬುದು ಮದ್ಯ ತಯಾರಿಕೆ ಉದ್ಯಮಿಗಳ ಬೇಸರದ ನುಡಿಗಳು.

‘ಸರ್ಕಾರ ಮತ್ತು ಆಡಳಿತ ವ್ಯವಸ್ಥೆಗೆ ನಾವು ಕಾಮಧೇನು ಇದ್ದಂತೆ. ಆದರೆ ನಮಗೆ ಹೆಜ್ಜೆ ಹೆಜ್ಜೆಗೂ ಸಂಕಷ್ಟ, ಸವಾಲು, ಸಮಸ್ಯೆಗಳು ಕಾಡುತ್ತಿವೆ. ನಾನಾ ಸಂಕೋಲೆಗಳಲ್ಲಿ ಸಿಲುಕಿ ನರಳುತ್ತಿದ್ದೇವೆ. ನಮ್ಮ ಕೈಕಾಲುಗಳನ್ನು ಕಟ್ಟಿ ಈಜಾಡಿ ಎಂದರೆ ಈಜುವುದಾದರೂ ಹೇಗೆ’ ಎಂಬುದು ಅವರ ಪ್ರಶ್ನೆ.


ಕರ್ನಾಟಕ ಸೇರಿದಂತೆ ದೇಶದ ಬಹುತೇಕ ರಾಜ್ಯಗಳ ಆದಾಯದ ಪ್ರಮುಖ ಮೂಲಗಳಲ್ಲಿ ಮದ್ಯವೂ ಒಂದು. ಹೀಗಾಗಿ ಸರ್ಕಾರಗಳು ಆದಾಯ ಹೆಚ್ಚಿಸಿಕೊಳ್ಳಲು ಸುಲಭವಾಗಿ ಮದ್ಯ ಉದ್ಯಮದ ಬುಟ್ಟಿಗೆ ಕೈಹಾಕುತ್ತವೆ. ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕ, ಸನ್ನದು ಶುಲ್ಕ ಸೇರಿದಂತೆ ನಾನಾ ರೀತಿಯ ತೆರಿಗೆ, ಶುಲ್ಕಗಳನ್ನು ವಿಧಿಸಿ ಮತ್ತು ಅವುಗಳನ್ನು ಪರಿಷ್ಕರಿಸಿ ತನ್ನ ರಾಜಸ್ವ ಸಂಗ್ರಹವನ್ನು ಹೆಚ್ಚಿಸಿಕೊಂಡು ಬರುತ್ತಿದೆ. ಮದ್ಯದ ಮೇಲೆ ಅತ್ಯಧಿಕ ತೆರಿಗೆಯನ್ನು ವಿಧಿಸುತ್ತಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವೂ ಒಂದು. 6

ಸನ್ನದು ಶುಲ್ಕದ ವಿವರ (₹ಗಳಲ್ಲಿ)

ವಿವರ	2000–2014	2014–24	2025ರಿಂದ
ಮದ್ಯ ಉತ್ಪಾದನಾ ಡಿಸ್ಟಿಲರಿ	30 ಲಕ್ಷ	45 ಲಕ್ಷ	67.50 ಲಕ್ಷ
ಬ್ರುವರಿ	18 ಲಕ್ಷ	27 ಲಕ್ಷ	40.50 ಲಕ್ಷ

(ಆಧಾರ: ಅಬಕಾರಿ ಇಲಾಖೆಯ ಅಂಕಿ ಅಂಶ)

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ


ವೈಟ್ ಫೀಲ್ಡ್ ಪ್ರೆಸ್ಟೀಜ್ ಮೇಬೆರಿಯಲ್ಲಿ ಶಿವ ಆಧಾರಿತ ಬೊಂಬೆಗಳನ್ನಿಟ್ಟು ದಸರಾ ಆಚರಿಸಲಾಯಿತು

ದಸರಾ ಬೊಂಬೆಗಳ ಚಿತ್ರ ಕಳುಹಿಸಿ
ದಸರಾ ಹಬ್ಬದ ಪ್ರಯುಕ್ತ ಮನೆಗಳಲ್ಲಿ ಬೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರೆ ಅವುಗಳ ಫೋಟೊ ಕಳುಹಿಸಿ. ಆಯ್ದ ಚಿತ್ರಗಳನ್ನು ಪ್ರಕಟಿಸಲಾಗುವುದು.
9606038256


ರಾಜರಾಜೇಶ್ವರಿ ನಗರದ ಕೆಂಪೇಗೌಡ ಜೋಡಿ ರಸ್ತೆಯಲ್ಲಿರುವ 'ಉಷಾ ವಿಕ್ರಾಂತ್ ಆಸ್ಪತ್ರೆ'ಯಲ್ಲಿ ದಸರಾ ಪ್ರಯುಕ್ತ ಸುಂದರ ಗೊಂಬೆಗಳನ್ನು ಪ್ರದರ್ಶನಕ್ಕಿಡಲಾಗಿದೆ


ಗಿರಿನಗರದ ಕೆ. ಪದ್ಮಾವತಿಯವರ ಮನೆಯಲ್ಲಿ ಜೋಡಿಸಿರುವ ಗೊಂಬೆಗಳು


ಟಿ. ದಾಸರಹಳ್ಳಿಯ ಹೇಮಲತಾ ಅವರ ಮನೆಯಲ್ಲಿ ಜೋಡಿಸಿಡಲಾದ ಗೊಂಬೆಗಳು


ಅನಂತ್ ಕುಮಾರ್ ಯೋಗ ಕೇಂದ್ರದಲ್ಲಿ ಯೋಗ ಶಿಕ್ಷಕಿ ನಂದಿನಿ ಪ್ರಸಾದ್ ಕೂರಿಸಿರುವ ಗೊಂಬೆಗಳು


ಅರವಿಂದ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಜೋಡಿಸಿಟ್ಟ ಗೊಂಬೆಗಳು

ದಸರಾ– ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ

ಗಮನ ಸೆಳೆದ ವಸ್ತುಪ್ರದರ್ಶನ, ದಾಂಡಿಯಾ ನೃತ್ಯ

ಪ್ರಜಾವಾಣಿ ವಾರ್ತೆ

ಯಲಹಂಕ: ದಸರಾ ಒಂದು ಧರ್ಮಕ್ಕೆ ಸೀಮಿತವಾದ ಹಬ್ಬವಲ್ಲ, ಬದಲಿಗೆ ನಾಡಿನಲ್ಲಿರುವ ಎಲ್ಲ ಜಾತಿ, ಧರ್ಮದವರೂ ಒಗ್ಗಟ್ಟಾಗಿ ಆಚರಿಸುವ ಹಬ್ಬವಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಕೆಬಿಜಿ ಸ್ವಯಂಸೇವಕರು ಮತ್ತು ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ 'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್' ಸಹಯೋಗದೊಂದಿಗೆ ಸಹಕಾರ ನಗರದಲ್ಲಿ ಆಯೋಜಿಸಿರುವ ಎರಡು ದಿನಗಳ ದಸರಾ ಉತ್ಸವ-ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

'ಒಂಬತ್ತು ದಿನ ನಡೆಯುವ ದಸರಾ ವಿಶಿಷ್ಟ ಹಬ್ಬವಾಗಿದೆ. ಒಂದೊಂದು ದಿನವೂ ಕಲೆ, ಸಾಹಿತ್ಯ, ಸಂಗೀತ ಜಾನಪದ ನೃತ್ಯ ಸೇರಿ ನಾಡಿನ ಎಲ್ಲಾ ಬಗೆಯ ಕಲಾ ಪ್ರಕಾರಗಳನ್ನೂ ಕೊಂಡಾಡಲಾಗುತ್ತದೆ. ಈ ಉತ್ಸವದಲ್ಲಿ ನಾಡಿನ ಎಲ್ಲಾ ಜಾತಿ-ಧರ್ಮದ ಜನರೂ ಪಾಲ್ಗೊಂಡು ಸಂಭ್ರಮಿಸುತ್ತಾರೆ. ಸಮಾಜದ ಎಲ್ಲಾ ಬಗೆಯ ಜನರನ್ನೂ ಒಂದೆಡೆ ಸೇರಿಸುವ ಕೀರ್ತಿ, ನಾಡಹಬ್ಬ ದಸರಾಗೆ ಮಾತ್ರವಿದೆ. ಹೀಗಾಗಿ ಈ ಹಬ್ಬ ಧರ್ಮಾತೀತವಾದದ್ದು' ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

'ದಸರಾ ಹಬ್ಬವೆಂದರೆ ಗೊಂಬೆಗಳ ಪ್ರದರ್ಶನ. ಆದರೆ, ನಮ್ಮಜನರು ಈಗ ಈ ಹಳೆಯ ಸಂಪ್ರದಾಯವನ್ನು ಮರೆಯುತ್ತಿದ್ದಾರೆ' ಎಂದು ಸಚಿವರು ಹೇಳಿದರು.

ಅಲ್ಲದೇ, ಗೊಂಬೆಗಳ ಪ್ರದರ್ಶನ ಉತ್ತೇಜಿಸುವ ನಿಟ್ಟಿನಲ್ಲಿ 'ಭಾನುವಾರ ಬೆಳಗ್ಗೆಯಿಂದಲೇ ಗೊಂಬೆಗಳ ಪ್ರದರ್ಶನ ಇಟ್ಟವರ ಮನೆಗಳಿಗೆ ತೆರಳಿ ಉಡುಗೊರೆ ನೀಡಲಾಗುವುದು.

ಮುಖ್ಯಾಂಶಗಳು
- ದಸರಾ ಹಬ್ಬವೆಂದರೆ ಗೊಂಬೆಗಳ ಪ್ರದರ್ಶನ: ಸಚಿವ ಕೃಷ್ಣ ಬೈರೇಗೌಡ
- ಗೊಂಬೆ ಕೂರಿಸಿದವರಿಗೆ ಉಡುಗೊರೆ
- ವಿವಿಧ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ

ಈ ಮೂಲಕ ನಮ್ಮ ಸಂಪ್ರದಾಯ ಮುಂದಿನ ಪೀಳಿಗೆಗೂ ಉಳಿಯಲು ಪ್ರೇರೇಪಿಸಲಾಗುವುದು' ಎಂದು ಸಚಿವ ತಿಳಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಎನ್.ಕೆ. ಮಹೇಶ್‌ಕುಮಾರ್, ವಿ.ವಿ. ಪಾರ್ತಿಬರಾಜನ್, ವಿ.ಹರಿ, ಆರ್.ಎಂ.ಶ್ರೀನಿವಾಸ್, ಬಿ.ಎಸ್. ಗೋಪಾಲಕೃಷ್ಣ, ಶಾಂತಮ್ಮ, ಎಚ್.ಎ.ಶಿವಕುಮಾರ್, ಹನುಮಂತಿ, ಕೆ.ದಿಲೀಪ್ ಕುಮಾರ್, ರಾಮಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಿ, ಪೂಜೆ ನೆರವೇರಿಸಿ, ಪ್ರಸಾದ ವಿತರಣೆ ಮಾಡಲಾಯಿತು. ಲಲಿತ ಸಹಸ್ರನಾಮ ಪಾರಾಯಣ, ದೇವರನಾಮ ಗಾಯನ, ದೃಷ್ಟಿ ಆರ್ಟ್ ಸೆಂಟರ್‌ನ ಅನುರಾಧಾ ವಿಕ್ರಾಂತ್ ತಂಡದಿಂದ ದುರ್ಗಾದೇವಿಯ ಒಂಬತ್ತು ಅವತಾರಗಳ ನೃತ್ಯನಾಟಕ ಹಾಗೂ ಸಹಕಾರನಗರ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ದಾಂಡಿಯಾ ನೃತ್ಯವನ್ನು ಪ್ರಸ್ತುತಪಡಿಸಿದರು.


ಸಹಕಾರನಗರದಲ್ಲಿ ಆಯೋಜಿಸಿರುವ ದಸರಾ ಉತ್ಸವದಲ್ಲಿ ಪ್ರತಿಷ್ಠಾಪಿಸಿರುವ ಚಾಮುಂಡೇಶ್ವರಿ ದೇವಿಗೆ ಮಹಿಳೆಯರು ಪೂಜೆ ನೆರವೇರಿಸಿದರು


ಸಮಾಜದ ಎಲ್ಲಾ ಬಗೆಯ ಜನರನ್ನೂ ಒಂದೆಡೆ ಸೇರಿಸುವ ಕೀರ್ತಿ, ನಾಡಹಬ್ಬ ದಸರಾಗೆ ಮಾತ್ರವಿದೆ. ಹೀಗಾಗಿ ಈ ಹಬ್ಬ ಧರ್ಮಾತೀತವಾದದ್ದು, ಈ ಉತ್ಸವದಲ್ಲಿ ನಾಡಿನ ಎಲ್ಲಾ ಜನರೂ ಪಾಲ್ಗೊಂಡು ಸಂಭ್ರಮಿಸುತ್ತಾರೆ
ಕೃಷ್ಣಬೈರೇಗೌಡ, ಕಂದಾಯ ಸಚಿವ

ವಸ್ತುಪ್ರದರ್ಶನ: ದಸರ ಉತ್ಸವದಲ್ಲಿ ಗೃಹೋಪಯೋಗಿ ವಸ್ತುಗಳು, ಬಟ್ಟೆ, ಮಣ್ಣಿನ ಮಡಕೆ, ಪಿಒಪಿ ಬೊಂಬೆಗಳು, ಕೃತಕ ಆಭರಣಗಳು, ಅಲಂಕಾರಿಕ ವಸ್ತುಗಳು, ಸಿರಿಧಾನ್ಯಗಳು, ಸಾವಯವ ಪದಾರ್ಥಗಳು, ತಿಂಡಿ-ತಿನಿಸುಗಳೂ ಸೇರಿದಂತೆ 50ಕ್ಕೂ ಹೆಚ್ಚು ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿದೆ.


ಸಹಕಾರನಗರ ದಸರಾ ಉತ್ಸವದಲ್ಲಿ ದಸರಾ ಬೊಂಬೆಪ್ರದರ್ಶನ ಏರ್ಪಡಿಸಲಾಗಿದೆ

ಐವರ ಬಂಧನ

ಹೊಸಕೋಟೆ: ನಕಲಿ ಚಿನ್ನ ಮಾರಾಟ ಮಾಡಿ ವಂಚಿಸುತ್ತಿದ್ದ ಅಂತರ ಜಿಲ್ಲಾ ವಂಚಕರ ತಂಡವನ್ನು ಹೊಸಕೋಟೆ ಪೊಲೀಸರು ಬಂಧಿಸಿ ಎಂಟು ಕೆ.ಜಿ. ನಕಲಿ ಚಿನ್ನ, ₹63 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ.

ಅನುಷಾಗೆ 'ಯುವರಾಣಿ ಆಫ್ ಯಶವಂತಪುರ 2025' ಗರಿ

ಯುವರಾಜ ಪ್ರಶಸ್ತಿಗೆ ಆದಿತ್ಯ ಭಾಜನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಶವಂತಪುರ ಕ್ಷೇತ್ರ ಯುವ ದಸರಾ ಅಂಗವಾಗಿ ನಡೆದ ಪುರುಷ ಹಾಗೂ ಮಹಿಳೆಯರ ಫ್ಯಾಷನ್ ಶೋ ಕಾರ್ಯಕ್ರಮದಲ್ಲಿ ಆದಿತ್ಯ ಆದ್ಯ ಸ್ವಾಮಿ ಹಾಗೂ ಅನುಷಾ ಕ್ರಮವಾಗಿ 'ಯುವರಾಜ ಆಫ್ ಯಶವಂತಪುರ ಕ್ಷೇತ್ರ-2025' ಮತ್ತು 'ಯುವರಾಣಿ ಆಫ್ ಯಶವಂತಪುರ ಕ್ಷೇತ್ರ 2025' ಪ್ರಶಸ್ತಿಗೆ ಭಾಜನರಾದರು.

ನವರಾತ್ರಿ ಅಂಗವಾಗಿ ಯಶವಂತಪುರ ಕ್ಷೇತ್ರದ ಕೆಂಗೇರಿ ಗಣೇಶ ಆಟದ ಮೈದಾನದಲ್ಲಿ ಆಯೋಜನೆಗೊಂಡಿದ್ದ ಯುವ ದಸರಾದ ಭಾಗವಾಗಿ ಫ್ಯಾಷನ್ ಶೋ ಹಾಗೂ ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಕಾಲೇಜು ವಿದ್ಯಾರ್ಥಿನಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ತಮ್ಮ ಪ್ರತಿಭೆ ಹಾಗೂ ಸೌಂದರ್ಯದಿಂದ ತೀರ್ಪುಗಾರರ ಮನಗೆದ್ದ ಅನುಷಾ ಹಾಗೂ ಆದಿತ್ಯ ಆದ್ಯ ಸ್ವಾಮಿ ಕ್ರಮವಾಗಿ ಯುವರಾಣಿ ಹಾಗೂ ಯುವರಾಜ ಪ್ರಶಸ್ತಿಗೆ ಆಯ್ಕೆಯಾದರು.

ಎರಡು ದಿನದ ಈ ಕಾರ್ಯಕ್ರಮದಲ್ಲಿ ಮೊದಲನೆ ದಿನ ಆಯೋಜನೆಗೊಂಡಿದ್ದ ಕಾಲೇಜು ಯುವಕ ಯುವತಿಯರ ನೃತ್ಯ ಹಾಗೂ ಫ್ಯಾಷನ್ ಶೋ ಜನರ ಮನಸೂರೆಗೊಂಡಿತ್ತು.


ರಘು ದೀಕ್ಷಿತ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು

ಶನಿವಾರ ಸಂಜೆ ನಡೆದ ಸ್ವರ ಮಾಂತ್ರಿಕ ರಘು ದೀಕ್ಷಿತ್ ಅವರ ಸಂಗೀತ ಸಂಜೆ ಕಲಾ ರಸಿಕರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತು.

ಕ್ಷೇತ್ರದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಸಂಗೀತ ಪ್ರಿಯರು ರಘು ದೀಕ್ಷಿತ್ ತಂಡದ ಹಾಡುಗಳಿಗೆ ಹೆಜ್ಜೆ ಹಾಕಿ ಖುಷಿ ಪಟ್ಟರು. ಶಿಳ್ಳೆ ಚಪ್ಪಾಳೆ ಹಾಕಿ ಸಂತಸ ವ್ಯಕ್ತಪಡಿಸಿದರು.

ಶಾಸಕ ಎಸ್. ಟಿ. ಸೋಮಶೇಖರ್ ಮಾತನಾಡಿ, ಮುಂದಿನ ದಿನಗಳಲ್ಲಿ ನಾಲ್ಕು ದಿನ ಕಾರ್ಯಕ್ರಮ ಆಯೋಜಿಸಲಾಗುವುದು. ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು ಎಂದರು

'ಗೆಳೆಯರು ಹಾಗೂ ಹಿತೈಷಿಗಳ ಸಹಕಾರದಿಂದ ಸಂಗೀತ ಕ್ಷೇತ್ರಕ್ಕೆ ಕಾಲಿರಿಸಿ 25 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವೆ. ಸಹಕಾರ ನೀಡಿರುವ ಎಲ್ಲರಿಗೂ ಧನ್ಯವಾದಗಳು' ಎಂದು ರಘು ದೀಕ್ಷಿತ್ ನೆನಪಿಸಿಕೊಂಡರು

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರದ 66/11 ಕೆ.ವಿ., ಎಸ್‌ಆರ್‌ಎಸ್ 220/66/11 ಕೆ.ವಿ. ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಇದೇ 28ರಂದು (ಭಾನುವಾರ) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಬಸವೇಶ್ವರನಗರ, ವಿಜಯನಗರ, ಗೋವಿಂದರಾಜನಗರ, ಕಾಮಾಕ್ಷಿಪಾಳ್ಯ, ಆರ್.ಪಿ.ಸಿ. ಲೇಔಟ್, ಪ್ರಶಾಂತನಗರ, ಎಂ.ಸಿ. ಲೇಔಟ್, ಮಾರೇನಹಳ್ಳಿ, ಹೊಸಹಳ್ಳಿ, ತಿಮ್ಮೇನಹಳ್ಳಿ, ವಿನಾಯಕ ಲೇಔಟ್, ಕಾವೇರಿಪುರ, ರಂಗನಾಥಪುರ, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ನಾಗರಬಾವಿ, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಎಚ್.ಬಿ. ಕಾಲೊನಿ, ಮಾಗಡಿ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ ಮತ್ತು ಸುತ್ತ ಮುತ್ತಲಿನ ಪ್ರದೇಶಗಳು.

ಪೀಣ್ಯ 10ನೇ ಮುಖ್ಯರಸ್ತೆ, 11ನೇ ಮುಖ್ಯರಸ್ತೆ, ಉಡುಪಿ ಹೋಟೆಲ್ ಸುತ್ತಮುತ್ತ, ಐಆರ್ ಪಾಲಿಟೆಕ್ನಿಕ್ ರಸ್ತೆ, ಲಕ್ಷ್ಮೀದೇವಿ ನಗರ, ಲಗ್ಗೆರೆ ಹಳೆ ಗ್ರಾಮ, ಲವಕುಶ ನಗರ, ರಾಜೀವ್ ಗಾಂಧಿ ನಗರ, ಚೌಡೇಶ್ವರಿ ನಗರ 6ನೇ, 7ನೇ, 8ನೇ, 9ನೇ ಕ್ರಾಸ್, 1ನೇ ಹಂತ ಪಿಯುಎ, ಟಿವಿಎಸ್ ಕ್ರಾಸ್ ರಸ್ತೆ ಬಳಿ, ಇಸ್ರೊ 1ನೇ, 2ನೇ ಕ್ರಾಸ್, 1ನೇ ಹಂತದ ಪಿಐಎ ಏರಿಯಾ ಮತ್ತು ಯಶವಂತಪುರ ಸುತ್ತಮುತ್ತಲಿನ ಪ್ರದೇಶಗಳು.

'ಬಿಕ್ಕಟ್ಟು, ಸವಾಲು ಎದುರಿಸಿದ್ದ ಇಂದಿರಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಧಾನಿಯಾಗಿ ಇಂದಿರಾ ಗಾಂಧಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಹಲವು ಬಿಕ್ಕಟ್ಟು ಹಾಗೂ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಗಿತ್ತು ಎಂದು ಲೇಖಕ ಪೀಟರ್ ರೋನಾಲ್ಡ್ ಡಿಸೋಜಾ ಹೇಳಿದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶನಿವಾರ ಏರ್ಪಡಿಸಿದ್ದ '50 ಇಯರ್ಸ್ ಆಫ್ ದಿ ಇಂಡಿಯನ್ ಎಮರ್ಜೆನ್ಸಿ' ಎಂಬ ಪುಸ್ತಕ ಕುರಿತು ನಡೆದ ಗೋಷ್ಠಿಯಲ್ಲಿ ಮಾತನಾಡಿದರು.

'ಆರ್ಥಿಕ, ರಾಜಕೀಯ ಬಿಕ್ಕಟ್ಟಿನ ಜತೆಗೆ ಬಡತನ, ನಿರುದ್ಯೋಗ, ಅನಕ್ಷರತೆ ಸೇರಿ ಹಲವು ಸಮಸ್ಯೆಗಳಿದ್ದವು. ಎಲ್ಲ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ, ಪರಿಹರಿಸಲು ಪ್ರಯತ್ನಿಸಿದರು. ಪುತ್ರ ಸಂಜಯ್ ಗಾಂಧಿ ಹೊರತುಪಡಿಸಿ ಯಾರನ್ನೂ ಅವರು ಹೆಚ್ಚು ನಂಬುತ್ತಿರಲಿಲ್ಲ. 1975ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಾಗ ಸಾಕಷ್ಟು ವಿರೋಧ ವ್ಯಕ್ತವಾಯಿತು. ಹಲವು ನಾಯಕರನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಯಿತು. ನಂತರದ ಬೆಳವಣಿಗೆ ಯಲ್ಲಿ ಇಂದಿರಾ ಅವರು ಯಾರ ಸಲಹೆಯನ್ನು ಪಡೆಯದೇ ತುರ್ತು ಪರಿಸ್ಥಿತಿಯನ್ನು ಹಿಂದಕ್ಕೆ ಪಡೆದು ಅಚ್ಚರಿ ಮೂಡಿಸಿದ್ದರು' ಎಂದು ತಿಳಿಸಿದರು.

'ವಿರೋಧ ಪಕ್ಷದ ನಾಯಕರಿಗೆ ಪ್ರಚಾರ ಮಾಡಲು ಅವಕಾಶ ನೀಡಿದರು. ತಾನು ಸೋಲುವುದು ಖಚಿತ ಎಂಬುದು ಅವರಿಗೂ ಗೊತ್ತಿತ್ತು. ಇಂದಿರಾ ಗಾಂಧಿ ಧೈರ್ಯವಂತೆ, ಬಿಕ್ಕಟ್ಟು ಉಂಟಾದಾಗ ಎದೆಗುಂದುತ್ತಿರಲಿಲ್ಲ' ಎಂದರು.

ಇತಿಹಾಸಕಾರರಾದ ಜಾನಕಿ ನಾಯರ್ ಮಾತನಾಡಿ, 'ಬಡತನ ನಿರ್ಮೂಲನೆ ಸೇರಿ ಹಲವು ಭರವಸೆಗಳನ್ನು ಈಡೇರಿಸುವುದಾಗಿ ಇಂದಿರಾ ಆಶ್ವಾಸನೆ ನೀಡಿದ್ದರು. ತುರ್ತು ಪರಿಸ್ಥಿತಿ ವಿರೋಧಿಸಿ ರೈತರು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ದಲಿತ ಸಂಘರ್ಷ ಸಮಿತಿ ಮುಂಚೂಣಿಗೆ ಬಂತು' ಎಂದು ವಿವರಿಸಿದರು.

ಸಹ ಪ್ರಾಧ್ಯಾಪಕಿ ರಿಂಕು ಲಾಂಬಾ ಮಾತನಾಡಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ನಡೆಸುವವರ ಬಗ್ಗೆ ಜನರು ತಿಳಿದುಕೊಳ್ಳಬೇಕು. ಯಾವುದೇ ವಿಚಾರದ ಕುರಿತು ಪ್ರಶ್ನಿಸಿ, ತಿಳಿದುಕೊಳ್ಳಲು ಅವಕಾಶ ಇದೆ' ಎಂದರು.

ಪ್ರಾಧ್ಯಾಪಕ ಚಂದನ್ ಗೌಡ ಮಾತನಾಡಿದರು. ಥಾಮಸ್ ಅಬ್ರಹಾಂ ಕಾರ್ಯಕ್ರಮ ನಿರೂಪಿಸಿದರು.


ವಿಚಾರ ಗೋಷ್ಠಿಯಲ್ಲಿ ಥಾಮಸ್ ಅಬ್ರಹಾಂ (ಮಧ್ಯದವರು) ಮಾತನಾಡಿದರು. (ಎಡದಿಂದ) ರಿಂಕು ಲಾಂಬಾ, ಪೀಟರ್ ರೊನಾಲ್ಡ್ ಡಿಸೋಜಾ, ಚಂದನ್ ಗೌಡ ಮತ್ತು ಜಾನಕಿ ನಾಯರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಸಮೀಕ್ಷೆ: ನಿಖರ ಮಾಹಿತಿ ನೀಡಿ’

ಪೌರಕಾರ್ಮಿಕರಿಗೆ ಸೂಚನೆ ನೀಡಿದ ಸಚಿವ ಕೆ.ಎಚ್. ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿರುವ ಪರಿಶಿಷ್ಟ ಜಾತಿಗಳಲ್ಲಿ ಮಾದಿಗ ಸಮುದಾಯದವರ ಸಂಖ್ಯೆ ಹೆಚ್ಚಿದೆ. ಆದರೆ, ಬಹುತೇಕರು ಪೌರಕಾರ್ಮಿಕರಾಗಿರುವುದರಿಂದ ಕೆಲಸಕ್ಕೆ ಹೋಗುತ್ತೀರಿ. ಸಮೀಕ್ಷೆ ವೇಳೆ ಮಾಹಿತಿ ನೀಡುವುದಿಲ್ಲ. ಈ ಬಾರಿ ಹೀಗಾಗದಂತೆ ಎಚ್ಚರ ವಹಿಸಿ’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಸಲಹೆ ತಿಳಿಸಿದರು.

ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕುರಿತು ಕರ್ನಾಟಕ ಮಾದರ ಮಹಾಸಭಾ ಶನಿವಾರ ಹಮ್ಮಿಕೊಂಡಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪ್ರಮುಖರ ಸಭೆಯಲ್ಲಿ ಅವರು ಮಾತನಾಡಿದರು.

‘ನಮ್ಮ ಸಮುದಾಯ ಹೆಚ್ಚಿದೆ ಎಂಬುದನ್ನು ಬಾಯಿ ಮಾತಲ್ಲಿ ಹೇಳಿದರೆ ಸಾಲದು ನಿಖರವಾಗಿ ನಮೂದಿಸಬೇಕು. ನಾಗಮೋಹನದಾಸ್ ಆಯೋಗ ನಡೆಸಿದ ಸಮೀಕ್ಷೆಯ ವೇಳೆ ಬಹಳಷ್ಟು ಜನರು ಹೊರಗುಳಿದಿದ್ದರು. ಈ ಬಾರಿ ಹಾಗಾಗಬಾರದು’ ಎಂದು ಎಚ್ಚರಿಸಿದರು.

ಮಾಜಿ ಸಚಿವ ಎಚ್. ಆಂಜನೇಯ ಅವರು ಮಾತನಾಡಿ, ‘ಬೇರೆ ಸಮುದಾಯದವರು ನಮ್ಮನ್ನು ಕುಗ್ಗಿಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಸಮಯದಲ್ಲಿ ನಾವು ಸಮೀಕ್ಷೆಯಿಂದ ಹೊರಗುಳಿದರೆ ಅವರ ಪ್ರಯತ್ನಕ್ಕೆ ಸಹಕಾರ ನೀಡಿದಂತಾಗುತ್ತದೆ.

ಇಲ್ಲದೇ ಇರುವುದನ್ನು ಬರೆಯಿಸುವುದು ಬೇಡ. ಆದರೆ, ಇರುವವರು ನಿಖರವಾಗಿ ಮಾಹಿತಿ ನೀಡಬೇಕು’ ಎಂದು ಸಲಹೆ ನೀಡಿದರು.



ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪ್ರಮುಖರ ಸಭೆಯಲ್ಲಿ ಎಚ್. ಆಂಜನೇಯ ಅವರು ಮಾತನಾಡಿದರು

‘ಮತ್ತೆ ಆದಿ ಕರ್ನಾಟಕ (ಎ.ಕೆ.), ಆದಿ ದ್ರಾವಿಡ (ಎ.ಡಿ.), ಆದಿ ಆಂಧ್ರ (ಎ.ಎ.) ಎಂದು ನಮೂದಿಸಲು ಹೋಗಬೇಡಿ. ಹಾಗೆ ಬರೆಸಿದರೆ ಒಳಮೀಸಲಾತಿ ಸಿಗುವುದಿಲ್ಲ’ ಎಂದು ತಿಳಿಸಿದರು.

ಕೇಂದ್ರ ಮಾಜಿ ಸಚಿವ ಎ.ನಾರಾಯಣ ಸ್ವಾಮಿ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಗೋನಾಳ್ ಭೀಮಪ್ಪ, ನಿವೃತ್ತ ಐಎಎಸ್ ಅಧಿಕಾರಿಗಳಾದ ಬಿ.ಎಚ್. ಅನಿಲ್ ಕುಮಾರ್, ಬಾಬುರಾವ್ ಮುಡಬಿ, ಪೌರಕಾರ್ಮಿಕರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಕುರಿತಾದ ದುಂಡುಮೇಜಿನ ಸಭೆ

‘ಮತಾಂತರವಾದವರ ಮೀಸಲು ಕಸಿಯಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೌದ್ಧ ಧರ್ಮಕ್ಕೆ ಮತಾಂತರವಾಗಿರುವ ಪರಿಶಿಷ್ಟ ಜಾತಿಗಳ ಜನರಿಗೂ ಮೀಸಲಾತಿ ಮುಂದುವರಿಸಬೇಕು’ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ನವಕರ್ನಾಟಕ ನಿರ್ಮಾಣ ಆಂದೋಲನವು ನಗರದಲ್ಲಿ ಶನಿವಾರ ಆಯೋಜಿಸಿದ್ದ, ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ಕುರಿತಾದ ದುಂಡುಮೇಜಿನ ಸಭೆಯ ನಂತರ ಅವರು ಮಾತನಾಡಿದರು.

‘ಪರಿಶಿಷ್ಟ ಸಮುದಾಯದ ಹಲವು ಮಂದಿ ಬೌದ್ಧ ಧರ್ಮಕ್ಕೆ ಮತಾಂತರವಾಗಿದ್ದಾರೆ. ಅವರೆಲ್ಲರೂ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ‘ಬೌದ್ಧ’ ಎಂದು, ಜಾತಿಯ ಕಾಲಂನಲ್ಲಿ ತಮ್ಮ ಮೂಲಜಾತಿಯ ಹೆಸರನ್ನು ಬರೆಯಿಸಲು ತೀರ್ಮಾನಿಸಿದ್ದಾರೆ. ಮತಾಂತರ ಆಗಿದ್ದಾರೆ ಎಂಬುದನ್ನೇ ನೆಪ ಮಾಡಿಕೊಂಡು ಅವರಿಂದ ಮೀಸಲಾತಿಯನ್ನು ಕಸಿದುಕೊಳ್ಳಬಾರದು. ಈ ರೀತಿ ಮಾಡುವುದು ಅವರ ಹಕ್ಕುಗಳನ್ನು ಕಸಿದುಕೊಂಡಂತೆ ಆಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು’ ಎಂದು ಅವರು ತಿಳಿಸಿದರು.



ನವಕರ್ನಾಟಕ ನಿರ್ಮಾಣ ಆಂದೋಲನ ಆಯೋಜಿಸಿದ್ದ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ಕುರಿತಾದ ದುಂಡು ಮೇಜಿನ ಸಭೆಯಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ, ಕೋಡಿಹಳ್ಳಿ ಚಂದ್ರಶೇಖರ್, ಆರ್.ಮೋಹನ್ ರಾಜ್ ಪಾಲ್ಗೊಂಡಿದ್ದರು
—ಪ್ರಜಾವಾಣಿ ಚಿತ್ರ

‘ಅಂತಹವರಿಗೆ ಮೀಸಲಾತಿ ಮುಂದುವರಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲು, ಸರ್ಕಾರವನ್ನು ಒತ್ತಾಯಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು’ ಎಂದು ವಿವರಿಸಿದರು.

ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಸೇರಿದತೆ ವಿವಿಧ ಜಾತಿ ಸಮುದಾಯಗಳ ಮುಖಂಡರು ಸಭೆಯಲ್ಲಿ ಭಾಗಿಯಾಗಿದ್ದರು.

ಬೆಂಗಳೂರಿಗೆ ಇಬ್ಬರು ಕಮಿಷನರ್ ನೇಮಕಕ್ಕೆ ಚಿಂತನೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು ನಗರಕ್ಕೆ ಇಬ್ಬರು ಪೊಲೀಸ್ ಕಮಿಷನರ್ ನೇಮಕ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಲಾಗಿದೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಐದು ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ. ಅದರ ಭಾಗವಾಗಿ ಇಬ್ಬರು ಪೊಲೀಸ್ ಕಮಿಷನರ್ ನೇಮಕ ಮಾಡಬೇಕು ಎಂಬ ಬೇಡಿಕೆ ಇದೆ’ ಎಂದರು.

ಹೊಸದಾಗಿ ಕಮಿಷನರ್ ಹುದ್ದೆ ಸೃಷ್ಟಿ, ಅದರ ಸಾಧಕ, ಬಾಧಕ, ಬೇಕಾಗುವ ಸಿಬ್ಬಂದಿ, ಖರ್ಚು ವೆಚ್ಚಗಳ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ.



ಜಿ.ಪರಮೇಶ್ವರ

ವಿಸ್ತೃತವಾದ ಚರ್ಚೆ, ಸಮಾಲೋಚನೆಗಳನ್ನು ನಡೆಸಿ ಶೀಘ್ರವೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ಪೊಲೀಸ್ ಅಧಿಕಾರಿ ಹಾಗೂ ಕಾನ್‌ಸ್ಟೆಬಲ್‌ಗಳ ನೇಮಕಾತಿ ಸಮಯದಲ್ಲಿ ಗರಿಷ್ಠ ವಯೋಮಿತಿ ಹೆಚ್ಚಳ ಮಾಡುವ ಬಗ್ಗೆ ಚರ್ಚೆ ನಡೆದಿದೆ.

ಸಬ್‌ಇನ್‌ಸ್ಪೆಕ್ಟರ್, ಕಾನ್‌ಸ್ಟೆಬಲ್‌ಗಳಿಗೆ ಗರಿಷ್ಠ ವಯೋಮಿತಿ ನಿಗದಿಪಡಿಸುವ ಕುರಿತು ಸದ್ಯದಲ್ಲೇ ನಿರ್ಧಾರ ತೆಗೆದುಕೊಳ್ಳಲಾಗುವುದು. ಇದಕ್ಕೆ ಸಂಬಂಧಿಸಿದ ಪ್ರಸ್ತಾವಕ್ಕೆ ಈಗಾಗಲೇ ಅನುಮತಿ ನೀಡಲಾಗಿದೆ. ಸಚಿವ ಸಂಪುಟದಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಮಾಡಲಾಗುವುದು ಎಂದು ಅವರು ತಿಳಿಸಿದರು.

ಲಿಂಗಾಯತ ಪ್ರತ್ಯೇಕ ಧರ್ಮ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ತುಮಕೂರು: ‘ಹಿಂದೂ ಎಂಬುದು ಒಂದು ಜೀವನ ವಿಧಾನ ಹೊರತು ಧರ್ಮವಲ್ಲ’ ಎಂದು ಮುಂಡರಗಿ ತೋಂಟದಾರ್ಯ ಮಠದ ನಿಜಗುಣ ಪ್ರಭು ತೋಂಟದಾರ್ಯ (ನಿಜಗುಣಾನಂದ) ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಬಸವ ಸಂಸ್ಕೃತಿ ಅಭಿಯಾನದ ಅಂಗವಾಗಿ ರಾಜ್ಯ ಲಿಂಗಾಯತ ಮಠಾಧೀಶರ ಒಕ್ಕೂಟ ಏರ್ಪಡಿಸಿದ್ದ ವಚನ ಸಂವಾದದಲ್ಲಿ ವಿದ್ಯಾರ್ಥಿನಿಯೊಬ್ಬರ ಪ್ರಶ್ನೆಗೆ ಉತ್ತರಿಸಿದರು.

‘ಲಿಂಗಾಯತ ಬಸವಣ್ಣ ಸ್ಥಾಪಿಸಿದ ಧರ್ಮ. ವಚನ ಸಾಹಿತ್ಯವೇ ಧರ್ಮ ಗ್ರಂಥ. ಸಕಲರಿಗೂ ಒಳಿತನ್ನು ಬಯಸುವುದೇ ನಿಜವಾದ ಧರ್ಮ. ಅದೇ ಬಸವ ಧರ್ಮ ಅಥವಾ ಲಿಂಗಾಯತ ಧರ್ಮ. ಲಿಂಗಾಯತ ಪ್ರತ್ಯೇಕ ಧರ್ಮ’ ಎಂದರು. ಸುಮಾರು 200ಕ್ಕೂ ಹೆಚ್ಚು ಮಠಾಧೀಶರು ಬಸವ ಸಂಸ್ಕೃತಿ ಅಭಿಯಾನದಡಿ ರಾಜ್ಯಪ್ರವಾಸ ಮಾಡಿ ಜನರಿಗೆ ಸತ್ಯ ತಿಳಿಸಲಾಗುತ್ತಿದೆ ಎಂದರು.

ಸಮೀಕ್ಷೆ ವೇಳೆ ಶಿಕ್ಷಕಿ ಮೇಲೆ ನಾಯಿ ದಾಳಿ

ಚಿಕ್ಕಬಳ್ಳಾಪುರ: ನಗರದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯ ನಡೆಸುತ್ತಿದ್ದ ಶಿಕ್ಷಕಿ ಮೇಲೆ ಶನಿವಾರ ನಾಯಿ ದಾಳಿ ಮಾಡಿದೆ.

ಕೂತನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕಿ ರಂಜನಿ ನಗರದ ತಿಮ್ಮಕ್ಕ ಬಡಾವಣೆಯಲ್ಲಿ ಸಮೀಕ್ಷೆ ನಡೆಸುತ್ತಿದ್ದರು. ಪಿಡಿಒ ನಾರಾಯಣಸ್ವಾಮಿ ಅವರ ಮನೆಯಲ್ಲಿ ಸಮೀಕ್ಷೆ ಪೂರ್ಣಗೊಳಿಸಿ ಹೊರ ಬರುವ ವೇಳೆ ಆ ಮನೆಯಲ್ಲಿದ್ದ ಜರ್ಮನ್ ಶೆಪರ್ಡ್ ನಾಯಿ ಕಾಲಿಗೆ ಕಚ್ಚಿದೆ. ಜಿಲ್ಲಾ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆದರು. ‘ನಾಯಿ ಕಚ್ಚುವುದಿಲ್ಲ ಎಂದು ಆ ಮನೆಯವರು ಹೇಳಿದ್ದರು. ಲಸಿಕೆ ಹಾಕಿಸಿದ್ದೇವೆ ಭಯಪಡಬೇಡಿ ಎಂದು ಅವರು ಹೇಳಿದರು. ಆದರೆ ನಮಗೂ ಭಯ’ ಎಂದು ರಂಜನಿ ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anekal

KHB Sites in Surya City Near Jigani
STRRA & BMRDA Approved Plots
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Anjanapura

SITE FOR Sale Anjanapura 10 Block BDA 50X80 - 4000 sqft South Facing Contact: 9844274211

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE BANASHANKARI 6th Stage, 6th Block 30x40, W/F.Near 100" Road Budget Friendly Call Lingaraju: 9663393533

WEST FACING SITE 30'x45' for sale in Banashankari 1st stage, Srinagar, for price call: 9845380312

BDA AUCTION Site, Banashankari 6th Stage, 10th Block, 20X30 Corner site, North West facing. 9900266984

BDA BSK 5th Stage Near PP Layout Uttarahalli Opposite Pattalamma Temple 30x40 E/F: 9448531837/ 9606922132

BANASHANKARI 6TH Stage,BDA 40x60, Site For Sale Near 100 Feet Road Cheque Payment: 9916817739

Basavanagudi

SALE BDA Site 30x50 North Face Hanumanth Nagar Basavanagudi Near Bramin Cafe Good Location 8880014616

HSR Layout

"HSR-LAYOUT 20X30 Commercial Building 1.80 Lakh Rent, 20x30 Duplex House, 20x30,30x40,40x60 Commercial & Residential Sites for sale. "Krishna"- 9886294610"

Intl Airport Road

NORTH-EAST FACING Corner Site, 1143 Sqft and 1081 Sqft for sale at Boyilahalli Bangalore North Taluka,BIAPA approved E-Khata.Near to International Airport. Contact: 9945155583

Jayanagar

PROPERTY SALE Jayanagar 30X40, 40X60, 45X90 AND JP-NAGAR 30×40, 20×65, 40×60, 50×80: 9845075792/ 9880600899

J P Nagar

BDA LAND 2400 Sft With Old Villa Brokers Excuse Genuine Buyers Only Contact Owner:9341273990

Kengeri

30'×40' WEST facing, BBMP E-Katha site for sale in Krishnagiri police layout. 9250/ per sq.feet. Direct owner. Contact: 9448256608/ 7760990853

FOR SALE Kengeri Upanagara 40x60 BDA Site Rs.15000/- Per Sqft. Clear titles. Contact: 9844092859

Kempegowda Layout

BDA SITE AVAILABLE @ NADAPRABHU KEMPEGOWDA LAYOUT 30x40, 40x60, 50x80 Residential/ Commercial. Contact: 9686469799

SITE FOR-SALE KEMPEGOWDA LAYOUT 7th Block'L' Sectorattached,DC Convertion(BDA NOC) 30x40, 6300/-slightly negotiable. Contact:6364931135

NADA PRABHU Kempegowda layout BDA Site For Sale 30x40, 40x60, 50x80 Contact: 7676900174 6363496142

DIRECT OWNER Near Metro Station, Kempegowda Layout, Vishweshwaraiah Layout, 30x40, 40x60, 50x80 Commercial: 9620696913/ 9880781399

Multiple Locations

AVAILABLE/ WANTED Apartment Basavanagudi, Banashankari, Chamrajpete, Shankarapuram, V.V.Pura, Hanumanthnagar, Girinagar, Residencial/ Commercial Sites Sale: 9900399006

Nagarabhavi

"NAGARABHAVI NEAR Deepa Complex 40x60 East Vastu BDA Site 35 feet Road, Immediate Registration. 9448432633"

30X50 WEST D-Group Nagrabhavi BDA BBMP A-Katha, 30x40 North West Corner, 30x46 Rs. 14500/- 9980409820

Nelamangala

NELMANGALA BMRDA A Katha South West Corner Site 33.5X50, (60ft, 30ft Road) Near NH-4: 8310681025

RMV

SITE FOR SALE 50x88 North East corner BDA site, Kalpana Chawla Road RMV 2nd Stage. Genuine buyers only. Contact: 9535673309

Seshadripuram

SITE SALE, 40'x50' West Facing, Jawahar Street, Platform Road, Seshadripuram, Behind Swati Hotel & Apollo Hospital: 9343368313/ 9844009086

Thanisandra

4800 SQFT., CORNER PROPERTY FOR SALE, 3 sides with road access, NEAR MANYATA TECH PARK, IN THANISANDRA, Behind Elements Mall. Rs. 3.6 CRORE. 9449281474, 8237436295

Vishveshwariah Layout

"30X40 WF RESIDENTIAL 1ST BLOCK, 50x80 COMMERCIAL BDA SITES SALE 6TH BLOCK VISHVESHWARAIAH LAYOUT- 9845143579"

VISHWESHWARAIAH LAYOUT 9th 50x60 NW Site. 2145 Commercial 60ft RTO Road Rs. 24000/- Sqft: 9845793121

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHVESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

"VISHVESWARAIAH 1ST BLOCK 50x80 North 6th Block 40x60 West 5th Block 30x40 Good location. 9448227274/ 7259675150"

AVAILABLE BDA Site Vishweshwaraiah Layout 3rd Block 30X40 West Facing Good Location Genuine Buyers: 7338688111

Bidadi

SITE FOR SALE, 40x60 'E' Khatha, North facing, at Bidadi 2 Sites Available, No Agreement, Single Shot Payment. 50 Lakhs each. Contact: 080-23342399 or 9538995333

Hegganahalli

SITE SALE 160x100ft In Hegganahalli Cross Bangalore A Katha Borewell Brick wall Fenced: 9900287834/ 9448377834

Chandra Layout

BDA AUCTION Site 1632 sqft. North East Corner, Rs. 25000 /sft. Chandra Layout, Near ICICI Bank. 9448016234 9945779309

Mathikere

FOR-LEASE 3BHK Ground Floor Very CloseTo MS-Ramaiha College MSR-Nagar Mattikere For Lease 19L: 7022106263

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

House

BTM Layout

HOUSE FOR Sale at BTM Layout 40x60, Opp Metro Station, Hebbal 30x50 CIL Layout. 9480255422.

Basavanagudi

SALE HOUSE (old) NR Colony (Basavanagudi) West Facing 40x60 Good Residential Area Contact Vani Estates: 9845012548

Jayanagar

JAYANAGAR 8TH BLOCK 30x50 SALE NORTH Facing OLD HOUSE EXCELLENT LOCATION. Rs.44K NEGOTIABLE. SHIVU 9880004149 9035441234

Kengeri

RESIDENCIAL BUILDING SALE 30x50 BBMP E-katha 1 Lakh Rental Income 2BHK:5units, 3BHK:1Unit Near Hoysala Circle Kengeri Upanagar. Brokers Excuse. Call 9738016535

Mathikere

MATHIKERE OLD house for sale 24.5X54sqft South facing behind devasandra Bus stand new BEL road Contact 9360977313 /9900578022

Vidyaranyapura

IMMEDIATE REGISTRATION: 60'x40' BEL 2nd Block 4 BHK Duplex House Prime Location 15500/- S/F. 9844264852

Annapoorneshwari Nagar

BDA SITE Sale, East facing, 30X40, 3 BHK, Annapoorneshwarinagar, Nagarabhavi 2nd stage. Contact: 9019962007

Kodigehalli

FOR-LEASE 2BHK 2nd Floor Lift, Carpark Cauvery Water Telecom Colony Kodigehalli Bangalore Lease 15L: 7022106263

Flat

Banashankari

"BANASHANKARI 2ND STAGE 2BHK Flat higher floor with Club house North door Rs.1.65 Crore "Sri.Ganesh Estate"- 9845286505"

Electronic City

3BHK, 3 BATHROOMS and 2 Balconies. Apartment 1865 Sqft. 31st-floor East facing for sale @ Sobha Brooklyn Towers, Yadavanahalli near Electronic City on Hosur highway. Contact: 9945155583

Vidyaranyapura

3BHK FLAT, 1300sqft G-Floor, near vidyaranyapura for sale. Ph-9902100500 Brokers Excuse.

Intl Airport Road



IAF YELAHANKA Hunasamaranahalli:2BHK 62L, 3BHK 72L, 3BHK with Terrace Sale Rs. 130Lakhs.Ct: 9343757676

Kothnur Dinne

FLAT FOR Sale, Kotnur Dinne, JPN, 39 Lakhs Including Registration, 9663676464

Commerical

BTM Layout

BTM LAYOUT, Sale Commercial Corner, 2,500 sft. Site with Old House. Price: 40,000/- David 9845855663

Kumarapark

COMMERCIAL SPACE- For SALE. Embassy Center, No. 213, 2nd Floor, Kumara Park East, Bengaluru- 560001. Area: 515 Sqft, Prime Location, Ideal for Office. Contact: 6366514777| 9448684033.

Magadi Road

FOR SALE 65x84 West Face Industrial/ Commercial Site BBMP katha, Sajjepalya, close to Sumanahalli Under-Bridge. Call-Ashok- 9900240029.

Nandini Layout

INDUSTRIAL LAND with threefloors building each 1200sqft forsale in truck terminal Kanteerava Studiogate Road Contact 9483400249

Yeshwanthpur

SALE COMMERCIAL Land 5000 SFT APMC Yard Three Side Road near Shankarnagar. RUDRAPPA: 9035334418, 9141326819

Farm House/ Land/ Resorts

Dobaspet

MANAGED FARM Land- For SALE. Whispering Hills, Dabaspete, Plot No. 17. Total Area: 6,578 Sqft. Peaceful Environment, Perfect for Weekend Home. Contact: 6366514777| 9448684033.

Mysore Road

FARM LAND For Sale 14 Guntas Near Chalaghatta Metro Station And RR Dental College Mysore Road: 8970306030

Out-Station

KOTAGIRI, NILGIRIS, Tamil Nadu: 60 Acres Patta Land with Teak Wood for Sale Contact: 9848392893, 9052200009

Industrial & Factory

Mysore Road

INDUSTRIAL CONVERTED LAND AVILABLE FOR SALE AREA 10000SQFT TO 20000 SQFT TO 1ACRE AT KUMBALGODU IND AREA MYSORE ROAD MOB:6366378787/ 9964783877

Tumkur Road

SALE 2.24 Acres Land Suitable for Warehouse, Industry, Residencial, School, Resorts, Nursing College. 9141326819, 9880462738

Commercial Building

Domlur

RENTAL PG building BUA 6000sft site 1600 sft for sale in domlur at Rs 6cr .Agents excuse 9845440436

REAL ESTATE BUYING

Sites

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, SAPTHAGIRI (Opp.BDA Head Office, Kumara Park). 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

800 SQFT Office space for Rent No. 56/6, 2nd Floor, Nandini Layout, FTI Circle, above SBI Bank, Bangalore Contact: 9845030795

1150 SFT SW corner, for showrooms, etc : 8197237859

WAREHOUSE/ OFFICE SPACE available for rent, near Hoodi, Whitefield, Bangalore. Area Gf-20,000 sqft. 1st floor-20,000 sqft. Call 8150943158

BANASHANKARI 6TH STAGE 80 Feet Road,11th Block 50x80 Site Built-to-Suit. And 2nd Block, 80 Feet Road,50x80 RENT for Vacant Site. Call 9945724472

M.G. ROAD Fully furnished 3000 sft Office for Rent, Second Floor Lift/ Parking nearby Metro. Presently occupied by Bank, shifting shortly. Contact SHARIF: 9886335522.

Flats

NEW 2 BHK Rent 33K Telecom Layout, Jakkur, Sriramapura Including Maintenance, Electricity Water. Call: 9880315695

Industrial And Factory

AVAILABLE OF Industrial Shed of 75000 sqft at Soukya Road, Whitefield. Available Built-to-Suit Warehouse 160000 sqft Vijipura Hoskote Contact: 9341234288/ 9663224353/ 9845417487.

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

AUTOMOTIVE

6/10 Wheeler Selling

Tipper

TIPPERS FOR SALE
10-WHEELER TIPPERS - 2 Nos is 2005 Model. & 6-WHEELER TIPPER - 1 No
Good Working Condition.
Contact: **9945192111**
Location: Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

PUBLIC NOTICE
THIS IS TO INFORM THE GENERAL PUBLIC THAT, Mr. Deepak Kapahi, son of Late Issardas Kapahi and Mr. Chandra Kapahi, son of late Issardas Kapahi are the aboslute joint owners of the schedule property. They have kept the schedule property for sale. Further it is informed that, the said Deepak Kapahi has lost the original Sale Deed dated 2-4-1993 registered as document No.4300/1994-95, Book-1, in the office of the Sub-Registrar, Shivajinagar, Bangalore in respect of the schedule property, while in transit in Sindhi Colony. In this regard the said Deepak Kapahi through his PA Holder has lodged a complaint on 11-9-2025 vide Lost report No.1796667/2025. The said Deepak Kapahi has kept the schedule property for sale.
THIS IS TO INFORM THE GENERAL PUBLIC that my client is intending to purchase the schedule property more fully described below from its owner Sri. Deepak Kapahi and Chandra Kapahi.
Any person/s claiming any manner of right, title and interest over the schedule property are called upon to lodge such claim/s or objection/s with the undersigned in writing with supporting documents within 7 (Seven) days from the date of this publication. If no such objections or claims are received within the said period, my client will proceed to purchase the schedule property and the claims received after the said period will not be considered.
SCHEDULE PROPERTY
Flat No. G-5, "SNS Manor", New BBMP No. 2/6, PID No. 3-12-98 (New PID No. 7844685917), Ground Floor, measuring 817 sq.ft. super built-up area, together with an absolute and equal share in the undivided land appurtenant to the apartment and proportionate share in all common areas, situated at #2, Brunton Road, Bangalore - 560025.
Sd/- Krishnapp.N
Advocate
Krishnappa.N & Assocaites
No.915, 1st floor, 5th A Cross,
1st Block, HRBR Layout,
Kalyanangar post Babusabpalya,
Bangalore-560040
M-9341909917

MATRIMONIAL

Grooms Wanted

Muslim

SUNNI GIRL, 32yrs, 5.5', unmarried, Wkg in IT Bangalore. Looking for IT engineer working in Blore. Mail: munird255@gmail.com

BUSINESS

Business to Business

Finance

ALL LOANS from Bank/ Pvt. (Direct): Mortgage (any property- with/ without income), Project takeover, NPA, 3rd party Collateral, Sharing, Subsidy, Startup. Cibil no issue. Low int .Dsa, Mediators also welcome. Cont: 9019388175.

EDUCATIONAL

Private Tuitions

WANTED A qualified lady maths home tutor for 8th standard student at Sahyadri nagar, Belagavi. Contact 9964892744

TOURS & TRAVEL

Holiday Package Tours

GROUP TOURS, Any Destination, Get Quote in 10 Minutes. Sarakki Tours, 9663676464

PERSONAL

Change of Name

CHANGE OF NAME
We, **Ravichandra & Hemalatha N,** R/at No. L80, 1st Cross, Kanakana Palya, Jayanagar 2nd Block, Bengaluru-560011, have changed our minor Son's name from **AADVITH VAIBAV R** to **RITHIK KAARTHIK R** vide affidavit dated 16-05-2025 before notary Jayalingayya Mudenoormath, Bengaluru.

I, KOUSHIK. C, S/o. Mr. Chikkegowda, 33 Years, R/at. No. 34, 6th Cross, Kamat Layout, Channanayakanapalya, Nagasandra Post Bangalore-73. I hereby declare that the below names i.e. 'KOWSHIK. C' and 'C. KOUSHIK' are the names of one and the same person i.e. myself vide Affidavit dated 25.09.2025 before MAMATHA. N.K. Advocate and Notary Bangalore

CHANGE OF NAME
I, **Zainlabddin,** R/at Ward No.12, Door No. 4145m 1st Cross, Extension, Ramanagara Town-562159, have changed my minor Son's name from **Mohammed Shoaib Saleem** to **MOHAMMED SHOIAB SALEEM** vide affidavit dated 20-05-2025 before notary Vinod Kumar, Bengaluru.

I YELLURI VISHAL, Residing at B2-1-114, Sumadhura Sawan MTB Seetharamapalya, Hoodi, Bengaluru- 560048, have changed to New name YELLUR VISHAL RAO, vide affidavit dated 27/09/2025 before notary Veena.J Bangalore.

CHANGE OF NAME
I, **Komala Raj Kumar** W/o Rajkumar S, R/at No.29, Bazzar Street, 1st Main, Gowthampuram, Ulsoor, Bengaluru-560008, have changed my name to **KOMALA** vide affidavit dated 27.09.2025 before notary A.R. Muneer Ahmed, Bengaluru. Henceforth I shall be called **KOMALA** only

CHANGE OF NAME
I, **Chathanath Padinjare Sasikumar,** R/at No. 303, N R Royal Manor Apt, Royal Enclave Layout, Srirampura, Jakkur, Bengaluru-560064, have changed my name to **C P SASIKUMAR MENON** vide affidavit dated 26.09.2025 before notary S.R. Ravikumar, Bengaluru. Henceforth I shall be called **C P SASIKUMAR MENON** only

ಪ್ರಿನ್ಸ್ ಜುವೆಲ್ಲರಿಗೆ ಪ್ರಶಸ್ತಿ



ಪ್ರಿನ್ಸ್ ಜುವೆಲ್ಲರಿಯ ನಿರ್ದೇಶಕ ಆಂಟೋನಿ ಪ್ರಿನ್ಸ್ ಅವರು 'ಇಂಡಿಯಾ ಕೂಲೆಸ್ಟ್ ನೆಕ್ಸ್ಟ್ ಜೆನ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಟಿ ಭೂಮಿ ಪಡ್ನೇಕರ್, ನೈಸರ್ಗಿಕ ವಜ್ರಗಳ ಮಂಡಳಿಯ ಭಾರತ ಮತ್ತು ಪಶ್ಚಿಮ ಏಷ್ಯಾದ ವ್ಯವಸ್ಥಾಪಕ ನಿರ್ದೇಶಕಿ ರಿಚಾ ಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು.

'ಪದವೀಧರರಿಗೆ ನಾಗರಿಕ ಜವಾಬ್ದಾರಿ ಮುಖ್ಯ'

ಸೇಂಟ್ ಜೋಸೆಫ್ ವಿ.ವಿ ಘಟಿಕೋತ್ಸವದಲ್ಲಿ ರಾಜ್ಯಪಾಲ ಗೆಹಲೋತ್ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವೀಧರರು ನಾಗರಿಕ ಜವಾಬ್ದಾರಿ ನಿಭಾಯಿಸಿದಾಗ ಅವರು ಪಡೆದ ಶಿಕ್ಷಣ ಸಮಾಜಮುಖಿಯಾಗುತ್ತದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ಎರಡನೇ ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, 'ವೃತ್ತಿಪರ ಶಿಕ್ಷಣಕ್ಕೆ ವಿಶ್ವವಿದ್ಯಾಲಯಗಳು ಒತ್ತು ನೀಡಬೇಕು. ಅಭಿವೃದ್ಧಿ ಹೊಂದಿದ ರಾಷ್ಟ್ರ ನಿರ್ಮಾಣಕ್ಕೆ ಕಲಿತ ವಿದ್ಯೆ ವಿನಿಯೋಗಿಸಬೇಕು. ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ತಿರುವನಂತಪುರದ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಜರುಗು ನರಸಿಂಹಮೂರ್ತಿ ಮಾತನಾಡಿ, 'ಉದಯೋನ್ಮುಖ ತಂತ್ರಜ್ಞಾನ ಬಳಕೆಗೆ ವಿದ್ಯಾರ್ಥಿಗಳು ಚಿತ್ತ ಹರಿಸಬೇಕು. ತ್ಯಾಜ್ಯ ನಿರ್ವಹಣೆ, ಸೈಬರ್ ಭದ್ರತೆ, ಕೃತಕ ಬುದ್ಧಿಮತ್ತೆಯ ಸವಾಲು ಎದುರಿಸಬೇಕು' ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 2,747 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಶೈಕ್ಷಣಿಕ, ಎನ್‌ಸಿಸಿ, ಕ್ರೀಡೆ, ಮತ್ತು ಸಹಪಠ್ಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 40 ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನ ವಿತರಿಸಿದರು.

ಕುಲಾಧಿಪತಿ ರೆವರೆಂಡ್ ಫಾದರ್ ಡಿಯೋನಿಸಿಯಸ್ ವಾಜ್, ಕಲಪತಿ ರೆವರೆಂಡ್ ವಿಕ್ಟರ್ ಲೋಬೊ, ಸಹ ಕುಲಪತಿಗಳಾದ ರೊನಾಲ್ಡ್ ಜೆ.ಮಸ್ಕರೇನ್ಹಸ್, ರೆವರೆಂಡ್ ಸ್ವೀಬರ್ಟ್ ಡಿಸಿಲ್ವಾ, ರೆಜಿನಾ ಮಥಿಯಾಸ್, ಪರೀಕ್ಷಾ ನಿಯಂತ್ರಕ ಗಾಡ್ವಿನ್ ಡಿಸೋಜಾ, ಕುಲಸಚಿವ ಸೈಯದ್ ವಜೀದ್, ಹಣಕಾಸು ಅಧಿಕಾರಿ ರೆವರೆಂಡ್ ಫಾದರ್ ಅರುಣ್ ಪಿ. ಡಿಸೋಜಾ ಉಪಸ್ಥಿತರಿದ್ದರು.



ಬೆಂಗಳೂರಿನ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ಎರಡನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳು ಚಿನ್ನದ ಪದಕಗಳೊಂದಿಗೆ ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬನ್ನೇರುಘಟ್ಟ ಸಫಾರಿ ವೇಳೆ ವ್ಯಕ್ತಿ ಸಾವು

ಆನೇಕಲ್: ಪತ್ನಿ, ಮಕ್ಕಳೊಂದಿಗೆ ಶನಿವಾರ ಬನ್ನೇರುಘಟ್ಟ ಸಫಾರಿಗೆ ಬಂದಿದ್ದ ಬೆಂಗಳೂರಿನ ನಾಗರಭಾವಿಯ ನಂಜಪ್ಪ(45) ಸಫಾರಿ ಬಸ್ಸಿನಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದು ಮೃತಪಟ್ಟಿದ್ದಾರೆ.

ನಂಜಪ್ಪ ತಮ್ಮ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಬನ್ನೇರುಘಟ್ಟ ಸಫಾರಿ ಬಸ್ಸಿನಲ್ಲಿ ತೆರಳುತ್ತಿದ್ದಾಗ ಪ್ರಜ್ಞೆ ತಪ್ಪಿದರು. ಮೃಗಾಲಯದ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಪ್ರಥಮ ಚಿಕಿತ್ಸೆಗೆಂದು ಕರೆದೊಯ್ಯಲಾಯಿತು. ನಂಜಪ್ಪ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು. ಸಾವಿಗೆ ನಿಖರ ಕಾರಣ ಗೊತ್ತಾಗಿಲ್ಲ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆನೇಕಲ್ ಸರ್ಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದೆ ಎಂದು ಬನ್ನೇರುಘಟ್ಟ ಉದ್ಯಾನ ಪ್ರಕಟಣೆಯಲ್ಲಿ ತಿಳಿಸಿದೆ.



ಕಾರ್ಯಕ್ರಮದಲ್ಲಿ ರಂಗಭಾಷಿಯಂ ಸೆಲ್ವಾಸೆಂಬಿಯನ್, ಕಾರ್ತಿಕ್ ರಾಜೇಂದ್ರನ್, ರಣಧೀರ್ ಕುಮಾರ್ ಹಾಗೂ ಕ್ಷೀರ ಸಾಗರ್ ಸಾಹೂ, ವಿನೋದ್ ಕುಮಾರ್ ಎಟಾಚೇರಿ, ಪ್ರಭುಜಿತ್ ಮೊಹಾಪಾತ್ರ ಮತ್ತು ಪಿಂಟು ಭುನಿಯಾ ಅವರನ್ನು ಅಭಿನಂದಿಸಲಾಯಿತು. ಪ್ರೊ.ಸಿ.ಎಚ್. ಸತೀಶ್ ಕುಮಾರ್, ವಿಶ್ವವಿದ್ಯಾಲಯದ ನಿರ್ದೇಶಕ (ಮಾನವ ಸಂಪನ್ಮೂಲ) ಐಸಾಕ್ ಸಮಲ ಗೆರಾರ್ಡ್ ಉಪಸ್ಥಿತರಿದ್ದರು

ಎಸ್‌ಆರ್‌ಎಂ ವಿಶ್ವ ವಿದ್ಯಾಲಯ: ಅಗ್ರ ವಿಜ್ಞಾನಿಗಳಲ್ಲಿ 7 ಪ್ರಾಧ್ಯಾಪಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಗುರುತಿಸಿರುವ ಜಗತ್ತಿನ ಅತ್ಯುತ್ತಮ ಶೇ 2 ರಷ್ಟು ವಿಜ್ಞಾನಿಗಳ ಪಟ್ಟಿಯಲ್ಲಿ ಆಂಧ್ರಪ್ರದೇಶದ ಎಸ್‌ಆರ್‌ಎಂ ವಿಶ್ವ ವಿದ್ಯಾಲಯದ ಏಳು ಪ್ರಾಧ್ಯಾಪಕರು ಸ್ಥಾನ ಪಡೆದಿದ್ದಾರೆ.

'ಎಲ್ಸ್‌ವೇರ್' ಜರ್ನಲ್ ಈ ಪಟ್ಟಿಯನ್ನು ಪ್ರಕಟಿಸಿದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ರಂಗಭಾಷಿಯಂ ಸೆಲ್ವಾಸೆಂಬಿಯನ್, ಕಾರ್ತಿಕ್ ರಾಜೇಂದ್ರನ್, ರಣಧೀರ್ ಕುಮಾರ್ ಹಾಗೂ ಕ್ಷೀರ ಸಾಗರ್ ಸಾಹೂ ಅವರು ನಗದು ಬಹುಮಾನಕ್ಕೂ (ತಲಾ ₹ 50 ಸಾವಿರ) ಭಾಜನರಾಗಿದ್ದಾರೆ.

ವಿನೋದ್ ಕುಮಾರ್ ಎಟಾಚೇರಿ, ಪ್ರಭುಜಿತ್ ಮೊಹಾಪಾತ್ರ ಮತ್ತು ಪಿಂಟು ಭುನಿಯಾ ಸಹ ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ವಿವಿ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ.ಎಚ್. ಸತೀಶ್ ಕುಮಾರ್, 'ಈ ಮನ್ನಣೆಯು ವಿಶ್ವ ವಿದ್ಯಾಲಯದ ಬಹುಶಿಸ್ತೀಯ ಸಂಶೋಧನೆಗೆ ಸಾಕ್ಷಿಯಾಗಿದೆ.

ವಿಶ್ವ ದರ್ಜೆಯ ಸಂಶೋಧನೆಗಳನ್ನು ಕೈಗೊಳ್ಳುತ್ತಿದ್ದು, ಈ ವಿಜ್ಞಾನಿಗಳು ಸಮಾಜಕ್ಕೆ ಮಾದರಿಯಾಗಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಜಿಬಿಐಟಿ ಎಚ್‌ಡಿಕೆ ಕೂಸು: ಡಿಕೆಶಿ

ಆಗ ಸಹಕರಿಸಿದ್ದ ಗೌಡರಿಂದ ಈಗ ವಿರೋಧ ಏಕೆ: ಡಿಸಿಎಂ ಪ್ರಶ್ನೆ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿ ಸಮಗ್ರ ಉಪನಗರ ಯೋಜನೆ (ಜಿಬಿಐಟಿ) ರೂಪಿಸಿದ್ದೇ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಸುಪುತ್ರ ಎಚ್.ಡಿ. ಕುಮಾರಸ್ವಾಮಿ. ಆಗ ಯೋಜನೆಗೆ ಸಹಕರಿಸಿದ್ದ ಗೌಡರು ಈಗ ಯಾಕೆ ವಿರೋಧಿಸುತ್ತಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.


ಶಿವಕುಮಾರ್

ಯೋಜನೆ ವಿರೋಧಿಸಿ ಬಿಡದಿ ಹೋಬಳಿಯ ಭೈರಮಂಗಲದಲ್ಲಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಬೆಂಬಲಿಸಿ, ಸ್ಥಳಕ್ಕೆ ದೇವೇಗೌಡರು ಭಾನುವಾರ ಭೇಟಿ ನೀಡುವ ಕುರಿತು ಮಾಧ್ಯಮದವರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

ತಮ್ಮ ಪುತ್ರನ ಅವಧಿಯಲ್ಲೇ ಯಾಕೆ ಗೌಡರು ಯೋಜನೆ ರದ್ದು ಮಾಡಿಸಲಿಲ್ಲ. ಬಿಜೆಪಿ ಸರ್ಕಾರ 900 ಎಕರೆಯನ್ನು ಕೆಐಎಡಿಬಿಗೆ ಕೊಟ್ಟಾಗಲೂ ಯಾಕೆ ಸುಮ್ಮನಿದ್ದರು ಎಂದು ಕೇಳಿದರು.

'ಆಗ ಸಹಕಾರ ಕೊಟ್ಟು ಈಗ ಡಿನೋಟಿಫಿಕೇಷನ್ ಮಾಡಿ ಎಂದರೆ ಹೇಗೆ? ಅವರ ಮಾತು ಕೇಳಲು ನಾನೀಗ ತಯಾರಿಲ್ಲ. ಕಾನೂನು ಚೌಕಟ್ಟಿನಲ್ಲಿ ನಾವು ಕೆಲಸ ಮಾಡುತ್ತಿದ್ದೇನೆ. ನಮಗೆ ರೈತರ ಸಹಕಾರವಿದೆ. ಯಾವುದೇ ಕಾರಣಕ್ಕೂ ಯೋಜನೆ ನಿಲ್ಲಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಯೋಜನೆ ವಿರೋಧಿಸಿ ರಾಜಕೀಯ ಹೋರಾಟಕ್ಕೆ ನಾನು ಬೇಸರ ಮಾಡಿಕೊಳ್ಳುವುದಿಲ್ಲ. ಎಲ್ಲರಿಗೂ ವಾಸ್ತವಾಂಶ ಗೊತ್ತಿದೆ. ಪೆನ್ ಹಿಡಿಯುವ ಅಧಿಕಾರವಿದ್ದಾಗ ಇದೇ ಬಿ.ಎಸ್. ಯಡಿಯೂರಪ್ಪ, ಅಶೋಕ್ ಯಾಕೆ ಭೂಮಿ ಬಿಡಿಸಲಿಲ್ಲ? ದೇವೇಗೌಡರು ತಮ್ಮ ಮಗನಿಗೆ ಇದು ಸರಿ ಇಲ್ಲ ಬೇಡ ಎಂದು ಹೇಳಬಹುದಿತ್ತಲ್ಲವೇ? ಆಗ ಇದು ಅವರದ್ದೇ ಕ್ಷೇತ್ರವಾಗಿತ್ತು. ಆಗ ನಾನು ಮಂತ್ರಿಯಾಗಿರಲಿಲ್ಲ. ಅವತ್ತು ಸರಿ ಮಾಡದೇ, ಇವತ್ತು ರಾಜಕಾರಣ ಮಾಡಲು ನಮ್ಮ ಕಡೆ ಬೆರಳು ತೋರಿಸುತ್ತಿದ್ದಾರೆ' ಎಂದು ಕಿಡಿಕಾರಿದರು.

'ಯೋಜನಾ ಪ್ರದೇಶದಲ್ಲಿ ಟೊಯೊಟಾ ಕಂಪನಿಯವರು ಸಹ ನನ್ನನ್ನು ಭೇಟಿ ಮಾಡಿ ವಸತಿ ಉದ್ದೇಶಕ್ಕೆ 300 ಎಕರೆ ಭೂಮಿ ಬೇಕು ಎಂದು ಕೇಳಿದ್ದಾರೆ. ಭೂಮಿ ಕೊಡುವುದು ಮುಖ್ಯವಲ್ಲ. ಆದರೆ, ಜಪಾನ್ ಉಪನಗರದ ಮಾದರಿಯಲ್ಲೇ ಇಲ್ಲೂ ಉಪನಗರ ನಿರ್ಮಿಸಬೇಕು ಎಂದು ನಿರ್ದೇಶನ ನೀಡಿದ್ದೇನೆ' ಎಂದು ತಿಳಿಸಿದರು.

'ಬ್ರೋಕರ್ ಮಾತು ಕೇಳಲ್ಲ'

'ಯೋಜನೆ ಕೈಬಿಡಿ ಎಂದು ಯಾರೂ ಬ್ರೋಕರ್‌ಗಳು ಹೇಳುತ್ತಾರೆಂದು ನಾನು ಕೇಳುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು. ನಿಜವಾದ ರೈತರು, ನಕಲಿ ರೈತರು ಹಾಗೂ ಏಜೆಂಟರು ಯಾರೆಂದು ನನಗೆ ಗೊತ್ತಿದೆ. ಸ್ಥಳೀಯ ಶಾಸಕ ಎಚ್.ಸಿ. ಬಾಲಕೃಷ್ಣ ಅವರ ರಾಜಕೀಯ ವಿರೋಧಿಗಳು ಮಾತ್ರ ಇಂದು ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು.

'ಕೆಐಎಡಿಬಿಗೆ 900 ಎಕರೆ ಕೊಟ್ಟಾಗ ಯಾರ್‍ಯಾರು ಹಣ ಪಡೆದಿದ್ದಾರೆ ಎನ್ನುವ ಪಟ್ಟಿ ಬಿಡುಗಡೆ ಮಾಡಲೇ? ಕಾನೂನಿನ ಚೌಕಟ್ಟಿನಲ್ಲಿ ಮುಂದುವರಿಯುತ್ತಿರುವ ನಾವು, ರೈತರಿಗೆ ದೊಡ್ಡ ಕೊಡುಗೆ ಘೋಷಿಸಿದ್ದೇವೆ. ಪರಿಹಾರ ಬೇಡ ಎನ್ನುವವರಿಗೆ ಹಿಂದಿನ ಅಧಿಸೂಚನೆಯಂತೆ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಕೋರ್ಟ್‌ನಲ್ಲಿ ಪರಿಹಾರದ ಹಣವನ್ನು ಠೇವಣಿ ಇಡುತ್ತೇವೆ' ಎಂದರು.

ಇಂದಿನಿಂದ ಜೆಡಿಎಸ್ ಹೋರಾಟ: ನಿಖಿಲ್

ಬೆಂಗಳೂರು: 'ರಾಜ್ಯ ಸರ್ಕಾರವು ಬಿಡದಿ ಬಳಿ ಟೌನ್‌ಶಿಪ್ ನಿರ್ಮಿಸಲು ರೈತರ ಫಲವತ್ತಾದ 9,000 ಎಕರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದರ ವಿರುದ್ಧ, ಜೆಡಿಎಸ್ ಭಾನುವಾರದಿಂದ ದೊಡ್ಡಮಟ್ಟದ ಹೋರಾಟ ಆರಂಭಿಸಲಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.


ನಿಖಿಲ್ ಕುಮಾರಸ್ವಾಮಿ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ (ಜಿಬಿಐಟಿ) ನಿರ್ಮಾಣಕ್ಕೆ ಹತ್ತು ಹಳ್ಳಿಗಳ ಜಮೀನನ್ನು ಸರ್ಕಾರವು ಗುರುತಿಸಿದೆ. ಇದು ಅತ್ಯಂತ ಫಲವತ್ತಾದ ಮತ್ತು ನೀರಾವರಿ ಜಮೀನಾಗಿದೆ. ಇದನ್ನು ನಂಬಿಕೊಂಡು 3,500 ಕುಟುಂಬಗಳ 16,000 ಜನರು ಬದುಕು ರೂಪಿಸಿಕೊಂಡಿದ್ದಾರೆ. ಅವರ ಬದುಕನ್ನು ಕಸಿದುಕೊಳ್ಳಲು ಸರ್ಕಾರ ಮುಂದಾಗಿದೆ' ಎಂದು ಆರೋಪಿಸಿದರು.

'ಈ ಹಳ್ಳಿಗಳು ಪ್ರತಿ ತಿಂಗಳು 6.50 ಲಕ್ಷ ಲೀಟರ್‌ನಷ್ಟು ಹಾಲು ಉತ್ಪಾದಿಸುತ್ತವೆ. ಅಪಾರ ಪ್ರಮಾಣದ ತರಕಾರಿ, ಸೊಪ್ಪು, ತೆಂಗಿನಕಾಯಿ ಬೆಳೆಯಲಾಗುತ್ತದೆ. ಇಂತಹ ಫಲವತ್ತಾದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ನಿರ್ಧಾರಕ್ಕೂ ಮುನ್ನ, ರೈತರೊಂದಿಗೆ ಸೌಜನ್ಯಕ್ಕಾದರೂ ಸಭೆ ನಡೆಸಿಲ್ಲ. ಇಲ್ಲಿನ ಶೇ 80ರಷ್ಟು ರೈತರು ಈ ಯೋಜನೆಯ ವಿರುದ್ಧ ಇದ್ದಾರೆ' ಎಂದರು.

'ರೈತರನ್ನು ಬೆಂಬಲಿಸಿ ರಾಮನಗರ ಜಿಲ್ಲೆಯ ಭೈರಮಂಗಲ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಭಾನುವಾರ ಹೋರಾಟ ಆರಂಭಿಸಲಾಗುತ್ತದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಸರ್ಕಾರ ಈ ಯೋಜನೆ ಕೈಬಿಡುವವರೆಗೂ, ದೇವನಹಳ್ಳಿಯ ಚನ್ನರಾಯಪಟ್ಟಣ ರೈತರ ಮಾದರಿಯಲ್ಲಿಯೇ ಹೋರಾಟ ನಡೆಸುತ್ತೇವೆ' ಎಂದರು.

ಈ ಹೋರಾಟ ರೈತರ ಪರವಾಗಿಯೋ ಅಥವಾ ಟೌನ್‌ಶಿಪ್ ವಿರುದ್ಧವೋ ಅಥವಾ ಡಿ.ಕೆ.ಶಿವಕುಮಾರ್ ವಿರುದ್ಧವೋ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಇದು ರೈತರ ಪರವಾದ ಹೋರಾಟ. ನಾವು ಯಾರ ವಿರುದ್ಧವೂ ವೈಯಕ್ತಿಕ ಹೋರಾಟ ನಡೆಸುತ್ತಿಲ್ಲ. ಟೌನ್‌ಶಿಪ್ ವಿರೋಧಿಗಳೂ ಅಲ್ಲ' ಎಂದು ನಿಖಿಲ್ ಉತ್ತರಿಸಿದರು.

'ಹಾರೋಹಳ್ಳಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 950 ಎಕರೆ ಸ್ವಾಧೀನ ಮಾಡಿಕೊಂಡಿದ್ದು, ಅದನ್ನು ಬಳಸಿಲ್ಲ. ಆ ಜಮೀನಿನಲ್ಲೇ ಟೌನ್‌ಶಿಪ್ ಅಭಿವೃದ್ಧಿಪಡಿಸಲಿ' ಎಂದರು.

ಪೊಲೀಸ್ ಎದುರಿಗೇ ರೌಡಿಶೀಟರ್ ಹಲ್ಲೆ

ಪ್ರಜಾವಾಣಿ ವಾರ್ತೆ


ಕುಟುಂಬವೊಂದರ ಮೇಲೆ ರೌಡಿ ಶೀಟರ್ ಮೊಗಪ್ಪ ಅಲಿಯಾಸ್ ಜಿಮ್ಮು ಕುಟುಂಬ ಹಲ್ಲೆ ನಡೆಸಿದ ದೃಶ್ಯ

ಬಿಡದಿ (ರಾಮನಗರ): ಹೋಬಳಿಯ ಕೆಂಪಯ್ಯನಪಾಳ್ಯದ ತಾಯಪ್ಪನದೊಡ್ಡಿಯಲ್ಲಿ ಮಹಿಳೆಯೊಬ್ಬರಿಗೆ ಸೇರಿದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ ರೌಡಿ ಶೀಟರ್ ಹಾಗೂ ಆತನ ಕುಟುಂಬ ಪೊಲೀಸರ ಸಮ್ಮುಖದಲ್ಲೇ ಮಹಿಳೆ ಮತ್ತು ಅವರ ಕುಟುಂಬದವರ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದೆ.

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ (ಜಿಬಿಐಟಿ) ವ್ಯಾಪ್ತಿಗೆ ಬರುವ ಈ ಗ್ರಾಮಕ್ಕೆ ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ಸರ್ವೆ ಸಲುವಾಗಿ ಶುಕ್ರವಾರ ಅಧಿಕಾರಿಗಳ ತಂಡ ಜಮೀನಿಗೆ ಭೇಟಿ ನೀಡಿತ್ತು. ಆಗ ರೌಡಿ ಶೀಟರ್ ಮೊಗಪ್ಪ ಅಲಿಯಾಸ್ ಜಿಮ್ಮು ಮತ್ತು ಕುಟುಂಬ ಕೃತ್ಯ ಎಸಗಿದೆ.

ಘಟನೆಗೆ ಸಂಬಂಧಿಸಿದಂತೆ ಬಿಡದಿ ಠಾಣೆ ಪೊಲೀಸರು ತಾಯಪ್ಪನ ದೊಡ್ಡಿಯ ಕರಿಯಪ್ಪ, ದೇವಿರಮ್ಮ, ಮೊಗಪ್ಪ ಅಲಿಯಾಸ್ ಜಿಮ್ಮು ಹಾಗೂ ವಿಶ್ವನಾಥ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಪೈಕಿ ಕರಿಯಪ್ಪ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದು (ಎಂಒಬಿ), ಆತನ ಪುತ್ರ ಮೊಗಪ್ಪ ಬಿಡದಿ ಠಾಣೆಯಲ್ಲಿ ರೌಡಿ ಶೀಟರ್ ಆಗಿದ್ದಾನೆ.

ಆಗಾಗ ಜಗಳ: ಸುಮಿತ್ರ ಬಿ.ಕೆ ಅವರ ಅತ್ತೆ ಮಾದಮ್ಮ ಕೆಂಪಯ್ಯನಪಾಳ್ಯ ಗ್ರಾಮದ ತಾಯಪ್ಪನದೊಡ್ಡಿಯ ಸರ್ವೆ ನಂ. 21/13ರಲ್ಲಿ 2 ಎಕರೆ ಜಮೀನು ಹೊಂದಿದ್ದು, ಸ್ವಾಧೀನದಲ್ಲಿದ್ದಾರೆ. 'ಈ ಜಮೀನು ತಮಗೆ ಸೇರಿದ್ದು, ನೀವ್ಯಾರು ಈ ಕಡೆ ಬರಬಾರದು' ಎಂದು ಕರಿಯಪ್ಪ ಮತ್ತು ಮೊಗಪ್ಪ ಇಬ್ಬರೂ ಸುಮಿತ್ರ ಕುಟುಂಬವನ್ನು ಹೆದರಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದರು.

ಜಮೀನಿಗೆ ಜೆಎಂಸಿ ತಂಡ ಗುರುವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಪೊಲೀಸರೊಂದಿಗೆ ಭೇಟಿ ನೀಡಿ, ಸುಮಿತ್ರ ಕುಟುಂಬದ ಸಮ್ಮುಖದಲ್ಲಿ ಅಳತೆ ಕಾರ್ಯಕ್ಕೆ ಮುಂದಾಯಿತು. ಆಗ ಸ್ಥಳಕ್ಕೆ ಬಂದ ಕರಿಯಪ್ಪ ಮತ್ತು ಕುಟುಂಬ 'ಈ ಜಮೀನು ನಮಗೆ ಸೇರಿದ್ದು' ಎಂದು ತಗಾದೆ ತೆಗೆದು ಅವಾಚ್ಯವಾಗಿ ಸುಮಿತ್ರ ಅವರಿಗೆ ನಿಂದಿಸಿತು.

ಈ ವೇಳೆ ಮಾತಿಗೆ ಮಾತು ಬೆಳೆದಾಗ, ಕರಿಯಪ್ಪ ಕುಟುಂಬವು ಸುಮಿತ್ರ ಕುಟುಂಬದವರ ಮೇಲೆ ಕೈ ಹಾಗೂ ಕಟ್ಟಿಗೆಯಿಂದ ಹಲ್ಲೆ ನಡೆಸಿದೆ. ಸ್ಥಳದಲ್ಲಿದ್ದ ಏಕೈಕ ಪೊಲೀಸ್ ಕಾನ್‌ಸ್ಟೆಬಲ್ ಜಗಳ ಬಿಡಿಸಲು ಯತ್ನಿಸಿದರೂ ಸಾಧ್ಯವಾಗಿಲ್ಲ. ಹಲ್ಲೆ ಮಾಡಿರುವ ಕರಿಯಪ್ಪ, ಕೊಲೆ ಬೆದರಿಕೆ ಸಹ ಹಾಕಿದ್ದಾನೆ ಎಂದು ಪೊಲಿಸರು ಹೇಳಿದರು.

ಹಲ್ಲೆಗೊಳಗಾದ ಸುಮಿತ್ರ ನೀಡಿದ ದೂರಿನ ಮೇರೆಗೆ ಆರೋಪಿಗಳ ವಿರುದ್ಧ ಬಿಎನ್‌ಎಸ್ ಕಲಂ 329 (3) (ಕ್ರಿಮಿನಲ್ ಅತಿಕ್ರಮಣ), 352 (ಶಾಂತಿಗೆ ಭಂಗ), 115 (2) (ಉದ್ದೇಶಪೂರ್ವಕವಾಗಿ ಗಾಯಗೊಳಿಸುವುದು), 118 (1) ಅಪಾಯಕಾರಿ ಅಸ್ತ್ರ ಬಳಸಿ ಗಾಯಗೊಳಿಸುವುದು, 74 (ಮಹಿಳೆ ಮೇಲೆ ದೌರ್ಜನ್ಯ) ಕಲಂಗಳಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಮೊಗಪ್ಪನ ಗಡಿಪಾರಿಗೆ ಪತ್ರ

'ಅಪರಾಧ ಹಿನ್ನೆಲೆಯುಳ್ಳ ತಾಯಪ್ಪನದೊಡ್ಡಿಯ ಕರಿಯಪ್ಪನ ಮಗ ಮೊಗಪ್ಪ ಅಲಿಯಾಸ್ ಜಿಮ್ಮು ರೌಡಿ ಶೀಟರ್ ಆಗಿದ್ದಾನೆ. ಆತನ ವಿರುದ್ಧ ವಿವಿಧ ಪ್ರಕರಣಗಳು ದಾಖಲಾಗಿವೆ. ಇತ್ತೀಚೆಗೆ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದಿಲ್ಲ ಎಂದು ಮುಚ್ಚಳಿಕೆ ಬರೆದು ಕೊಟ್ಟಿದ್ದ ಆತ, ತನ್ನ ಚಾಳಿ ಮುಂದುವರಿಸಿದ್ದಾನೆ. ಆತನನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಮೇಲಧಿಕಾರಿಗಳಿಗೆ ಪತ್ರ ಬರೆಯಲಾಗುವುದು' ಎಂದು ಬಿಡದಿ ಇನ್‌ಸ್ಪೆಕ್ಟರ್ ಶಂಕರ್ ನಾಯಕ್ ತಿಳಿಸಿದರು.

ಚಿಟಿಕೆ ಸುದ್ದಿ

ರೇಷ್ಮೆ ಮಂಡಳಿಗೆ ಗಂಗಾಧರ್ ಅಧ್ಯಕ್ಷ



ರಾಮನಗರ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ (ಕೆಎಸ್‌ಐಸಿ) ಅಧ್ಯಕ್ಷರಾಗಿ ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್. ಗಂಗಾಧರ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಿಪುರ ಹೋಬಳಿಯ ಸೋಗಾಲದ ಗಂಗಾಧ ರ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಡಿಪ್ಲೊಮಾ ಪದವೀಧರ. ರಾಜಕೀಯದ ಜೊತೆಗೆ ಉದ್ಯಮ ವ್ಯವಹಾರದಲ್ಲೂ ತೊಡಗಿಸಿಕೊಂಡಿದ್ದಾರೆ. ಹಿಂದುಳಿದ ವರ್ಗದ ಅವರು ಚನ್ನಪಟ್ಟಣ ತಾಲ್ಲೂಕಿನ ಅಕ್ಕೂರು ಜಿಲ್ಲಾ ಪಂಚಾಯಿತಿ ಕ್ಷೇತ್ರದ ಸದಸ್ಯರಾಗಿ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಕೀರ್ತನಾಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಕೀರ್ತನಾ ಪಾಂಡ್ಯನ್ ಅವರು ಫೈನಲ್‌ನಲ್ಲಿ 4–3 ರಿಂದ ತಮಿಳುನಾಡಿನ ಅನುಪಮಾ ರಾಮಚಂದ್ರನ್ ಅವರನ್ನು ಸೋಲಿಸಿ, ಡೆಹ್ರಾಡೂನ್‌ನಲ್ಲಿ ಶುಕ್ರವಾರ ರಾತ್ರಿ ಮುಕ್ತಾಯಗೊಂಡ ರಾಷ್ಟ್ರೀಯ 6–ರೆಡ್ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ ಆರೋಪಿ

ಪೊಲೀಸರ ಮೇಲೆ ಹಲ್ಲೆಗೆ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ತಪಾಸಣೆ ನಡೆಸುತ್ತಿದ್ದ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ, ನಿಂದಿಸಿದ್ದಲ್ಲದೇ ಹಲ್ಲೆಗೆ ಯತ್ನಿಸಿದ್ದ ಆರೋಪಿ, ಅಕ್ಷಯ್‌ನಗರದ ನಿವಾಸಿ ಆದಿತ್ಯ ಅಗರ್‌ವಾಲ್ (29) ಎಂಬುವವರನ್ನು ಇಂದಿರಾನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪಿಎಸ್‌ಐ ಡಿ.ಕವಿತಾ ನೇತೃತ್ವದ ಪೊಲೀಸ್ ತಂಡವು ಗುರುವಾರ ರಾತ್ರಿ ಮದ್ಯ ಸೇವಿಸಿ ವಾಹನ ಚಾಲನೆ (ಡಿ.ಡಿ ಕೇಸ್) ಮಾಡುತ್ತಿದ್ದವರ ಪತ್ತೆ ಕಾರ್ಯವನ್ನು ನಡೆಸುತ್ತಿತ್ತು. ಈ ವೇಳೆ ಆರೋಪಿಯು ಪೊಲೀಸರನ್ನು ನಿಂದಿಸಿದ್ದರು. ಆರೋಪಿಯನ್ನು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಇಂದಿರಾನಗರದ 100 ಅಡಿ ರಸ್ತೆಯಲ್ಲಿ ತಪಾಸಣೆ ನಡೆಸಲಾಗುತ್ತಿತ್ತು. ಆಲ್ಕೊ ಮೀಟರ್ ಬ್ಲೋ ಮಾಡುವಂತೆ ಸೂಚಿಸಿದ್ದರೂ ಸಾರ್ವಜನಿಕರ ಎದುರು ಸಿಬ್ಬಂದಿಗೆ ಆದಿತ್ಯ ಅಗರ್‌ವಾಲ್ ಅವರು ನಿಂದಿಸಿದ್ದರು. ಅಲ್ಲದೇ ಪಿಎಸ್‌ಐ ಮೇಲೆ ಹಲ್ಲೆ ನಡೆಸಲು ಬಂದಿದ್ದರು. ಬಳಿಕ, ಇಂದಿರಾ ನಗರ ಠಾಣೆಗೆ ಕರೆ ಮಾಡಿ ಹೊಯ್ಸಳ ಸಿಬ್ಬಂದಿಯನ್ನು ಸ್ಥಳಕ್ಕೆ ಬರುವಂತೆ ತಿಳಿಸಲಾಯಿತು. ಸ್ಥಳಕ್ಕೆ ಬಂದ ವಾಹನದಲ್ಲಿ ಆರೋಪಿಯನ್ನು ಠಾಣೆಗೆ ಕರೆದೊಯ್ದು ಬಂಧಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಬಿಗ್‌ಬಾಸ್‌ಗೆ ಬಾಂಬ್ ಬೆದರಿಕೆ

ಬಿಗ್‌ಬಾಸ್‌ನ 12ನೇ ಆವೃತ್ತಿಯ ಶೋಗೆ ಕರೆದುಕೊಳ್ಳದಿದ್ದರೆ ಬಿಗ್‌ಬಾಸ್ ಸೆಟ್‌ಗೆ ಬಾಂಬ್ ಹಾಕುವುದಾಗಿ ಬೆದರಿಕೆ ಹಾಕಿದ್ದ ಆರೋಪಿಯನ್ನು ಕುಂಬಳಗೋಡು ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.



ಬೆದರಿಕೆ ಹಾಕಿದ್ದ ವಿಡಿಯೊವನ್ನು 'ಮಮ್ಮಿ ಅಶೋಕ್ -16' ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಆರೋಪಿ ಅಪ್‌ಲೋಡ್ ಮಾಡಿದ್ದ. ಈ ವಿಡಿಯೊವನ್ನು ಠಾಣೆಯ ಸಾಮಾಜಿಕ ಜಾಲತಾಣ ವಿಭಾಗದ ಸಿಬ್ಬಂದಿ ಗಮನಿಸಿ ಆರೋಪಿಯನ್ನು ಪತ್ತೆಹಚ್ಚಿ ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.


ಅಶೋಕ್

'ಆನ್‌ಲೈನ್‌ನಲ್ಲಿ ಮಾಡಿದ ಬೆದರಿಕೆಯನ್ನು ನೇರವಾಗಿ ಮಾಡಿದ ಬೆದರಿಕೆಯಂತೆಯೇ ಗಂಭೀರವಾಗಿ ಪರಿಗಣಿಸಲಾಗುತ್ತದೆ. ಟೈಪ್ ಮಾಡುವ ಮೊದಲು ಯೋಚಿಸಿ. ಏಕೆಂದರೆ ನಿಮ್ಮ ಪೋಸ್ಟ್‌ಗಳು ನಿಮ್ಮನ್ನು ಜೈಲಿಗೆ ಕಳುಹಿಸಬಹುದು' ಎಂದು ಬೆಂಗಳೂರು ನಗರ ಪೊಲೀಸ್‌ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ನಾಲ್ವರಿಗೆ ಇರಿದ ಆರೋಪಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ವಾಹನ ನಿಲುಗಡೆ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ನಾಲ್ವರಿಗೆ ಚಾಕುವಿನಿಂದ ಇರಿದಿದ್ದ ಆರೋಪಿಯನ್ನು ಕೆ.ಆರ್. ಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವೆಂಕಟೇಶ್ ಬಂಧಿತ ಆರೋಪಿ. ಠಾಣಾ ವ್ಯಾಪ್ತಿಯ ಮಾರಗೊಂಡನಹಳ್ಳಿಯ ಆರ್. ಆರ್. ಲೇಔಟ್‌ನಲ್ಲಿ ಘಟನೆ ನಡೆದಿತ್ತು.

'ಸೆ.24ರಂದು ಹೇಮಂತ್, ಹನುಮಂತಮ್ಮ, ರಮೇಶ್ ಹಾಗೂ ಒಬ್ಬ ಬಾಲಕನಿಗೆ ಆರೋಪಿ ಇರಿದು ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬುಧವಾರ ರಾತ್ರಿ 8.30 ಸುಮಾರಿಗೆ ತಮ್ಮ ದೊಡ್ಡಪ್ಪ ರಮೇಶ್ ಜತೆಗೆ ಹೇಮಂತ್ ಅವರು ಮನೆಯ ಎದುರು ಕುಳಿತಿದ್ದರು. ಈ ವೇಳೆ ವೇಗವಾಗಿ ಬಂದ ಸ್ಕಾರ್ಪಿಯೊ ವಾಹನವೊಂದು ರಸ್ತೆಯಲ್ಲಿದ್ದ ಮೋರಿಯ ಬಳಿ ನಿಲುಗಡೆ ಮಾಡಲಾಗಿತ್ತು. ವಾಹನ ವೇಗವಾಗಿ ಬಂದಿರುವುದನ್ನು ಗಮನಿಸಿದ್ದ ಹೇಮಂತ್ ಅವರು 'ಏಕೆ ಇಷ್ಟು ವೇಗವಾಗಿ ಬರುತ್ತೀರಾ' ಎಂದು ಚಾಲಕ ವೆಂಕಟೇಶ್‌ನನ್ನು ಪ್ರಶ್ನಿಸಿದ್ದರು. ಆಗ ಇಬ್ಬರ ನಡುವೆ ನಡೆದ ಗಲಾಟೆ ವಿಕೋಪಕ್ಕೆ ಹೋಗಿ ಆರೋಪಿ ವೆಂಕಟೇಶ್ ಕಾರಿನಿಂದ ಚಾಕು ತಂದು ನಾಲ್ವರ ಮೇಲೆ ಹಲ್ಲೆ ನಡೆಸಿ ಇರಿದು ಪರಾರಿಯಾಗಿದ್ದ. ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಹನಕ್ಕೆ ಹಾನಿ: ಆರೋಪಿ ಸೆರೆ


ಬೆಂಗಳೂರು: ಬ್ಯಾಡರಹಳ್ಳಿ ಹಾಗೂ ಅನ್ನಪೂರ್ಣೇಶ್ವರಿ ನಗರದಲ್ಲಿ ರಾತ್ರಿ ವೇಳೆ ಮನೆ ಎದುರು ನಿಲುಗಡೆ ಮಾಡಿದ್ದ ವಾಹನಗಳ ಗಾಜು ಒಡೆದು ಹಾನಿಗೊಳಿಸಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ರತ್ನನಗರ ನಿವಾಸಿ ಜಯಂತ್(19), ಲಿಖಿತ್(18), ಕಾಮಾಕ್ಷಿಪಾಳ್ಯದ ಗಗನ್(23) ಬಂಧಿತರು. ಕಾನೂನು ಸಂಘರ್ಷಕ್ಕೆ ಒಳಗಾದ ಮೂವರನ್ನು ವಶಕ್ಕೆ ಪಡೆದು ಬಾಲಮಂದಿರಕ್ಕೆ ಕಳುಹಿಸಲಾಗಿದೆ. ಇತರೆ ಇಬ್ಬರು ಆರೋಪಿಗಳಿಗಾಗಿ ಶೋಧ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ಸೆ.24 ಮತ್ತು ಸೆ.25ರಂದು ಬ್ಯಾಡರಹಳ್ಳಿ ಮತ್ತು ಅನ್ನಪೂರ್ಣೇಶ್ವರಿ ನಗರದಲ್ಲಿ ಆರೋಪಿಗಳು ಮಾರಕಾಸ್ತ್ರ ಹಿಡಿದು ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಸುಮಾರು 25ಕ್ಕೂ ಹೆಚ್ಚು ವಾಹನಗಳನ್ನು ಜಖಂಗೊಳಿಸಿದ್ದರು.

ನೆಕ್ಲೆಸ್ ಕಳವು: ಅರ್ಚಕ ಸೆರೆ

ಬೆಂಗಳೂರು: ಸತ್ಯನಾರಾಯಣ ಪೂಜೆ ಸಂದರ್ಭದಲ್ಲಿ ದೇವರ ಮೇಲಿದ್ದ ನೆಕ್ಲೆಸ್ ಕಳವು ಮಾಡಿದ್ದ ಅರ್ಚಕರೊಬ್ಬರನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಗ್ರಹಾರ ದಾಸರಹಳ್ಳಿ ನಿವಾಸಿ ರಮೇಶ್ ಶಾಸ್ತ್ರಿ (45) ಬಂಧಿತ ಆರೋಪಿ.

ಆರೋಪಿಯಿಂದ 44 ಗ್ರಾಂ ಚಿನ್ನದ ನೆಕ್ಲೆಸ್ ಜಪ್ತಿ ಮಾಡಲಾಗಿದೆ. ಅಶೋಕ್ ಚಂದರಗಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

'ಅಶೋಕ್ ಚಂದರಗಿ ಅವರು ಕಳೆದ ತಿಂಗಳು ಮನೆಯಲ್ಲಿ ವರಮಹಾಲಕ್ಷ್ಮಿ ಪೂಜೆಯ ಜತೆಗೆ ಸತ್ಯನಾರಾಯಣ ಪೂಜೆ ಮಾಡಿಸಿದ್ದರು. ಪೂಜೆ ನೆರವೇರಿಸಲು ರಮೇಶ್ ಶಾಸ್ತ್ರಿ ಅವರನ್ನು ಕರೆಸಿದ್ದರು. ಮನೆಗೆ ಬಂದಿದ್ದ ರಮೇಶ್ ಶಾಸ್ತ್ರಿ ಅವರು ಪೂಜೆ ಮಾಡಿಕೊಟ್ಟಿದ್ದರು. ಪೂಜೆ ಮಾಡುವಾಗ ಮನೆ ಸದಸ್ಯರ ಗಮನವನ್ನು ಬೇರೆಡೆಗೆ ಸೆಳೆದು ದೇವರ ಮೇಲಿದ್ದ ನೆಕ್ಲೆಸ್ ಕಳವು ಮಾಡಿದ್ದರು. ಎರಡು ದಿನದ ಬಳಿಕ ದೇವರ ಫೋಟೊ ತೆಗೆಯುವಾಗ ಚಿನ್ನದ ನೆಕ್ಲೆಸ್ ನಾಪತ್ತೆಯಾಗಿತ್ತು. ಅದನ್ನು ಕಂಡ ಮನೆಯವರು ಗಾಬರಿಗೊಂಡಿದ್ದರು. ತಕ್ಷಣವೇ ರಮೇಶ್ ಶಾಸ್ತ್ರಿ ಅವರಿಗೆ ಕರೆ ಮಾಡಿ ವಿಚಾರಿಸಿದ್ದರು. ನನಗೆ ಗೊತ್ತಿಲ್ಲ ಎಂಬುದಾಗಿ ಅರ್ಚಕ ಹೇಳಿದ್ದರು' ಎಂದು ಮೂಲಗಳು ತಿಳಿಸಿವೆ.

'ಅನುಮಾನಗೊಂಡು ರಮೇಶ್ ಶಾಸ್ತ್ರಿ ಅವರ ವಿರುದ್ಧ ಮನೆಯ ಮಾಲೀಕರು ದೂರು ನೀಡಿದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅನಾರೋಗ್ಯ ಕಾರಣದಿಂದ ಚಿಕಿತ್ಸೆ ಪಡೆಯಲು ನೆಕ್ಲೆಸ್ ಕಳವು ಮಾಡಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ಮದ್ದೂರು ಹಿಂಸಾಚಾರ: ಗುಪ್ತಚರ ವೈಫಲ್ಯ ಕಾರಣ'

ಬೆಂಗಳೂರು: ಮದ್ದೂರು ಗಣೇಶೋತ್ಸವ ಮೆರವಣಿಗೆ ವೇಳೆ ನಡೆದ ಹಿಂಸಾಚಾರಕ್ಕೆ ಜಿಲ್ಲಾಡಳಿತ, ಪೊಲೀಸ್ ಹಾಗೂ ಗುಪ್ತಚರ ದಳದ ವೈಫಲ್ಯ ಕಾರಣ ಎಂದು ಬಿಜೆಪಿ ಸಿದ್ಧಪಡಿಸಿದ ಸತ್ಯಶೋಧನಾ ಸಮಿತಿ ವರದಿ ಹೇಳಿದೆ.

ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್, ಮುಖಂಡರಾದ ವೆಂಕಟೇಶ್ ದೊಡ್ಡೇರಿ, ವಿಜಯಪ್ರಸಾದ್, ಎನ್.ಎಸ್. ಇಂದ್ರೇಶ್, ಮಂಜುಳಾ, ಸ್ವಾಮಿಗೌಡ ಅವರಿದ್ದ ಸತ್ಯಶೋಧನಾ ಸಮಿತಿಯು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿತು.

ನಂತರ ಮಾತನಾಡಿದ ರಾಜ್ಯ ಮುಖ್ಯ ವಕ್ತಾರ ಅಶ್ವಥ ನಾರಾಯಣ, 'ಮದ್ದೂರಿನಲ್ಲಿ 34 ವರ್ಷಗಳಿಂದ ಗಣಪತಿ ಉತ್ಸವ ನಡೆಯುತ್ತಿದ್ದು, ಯಾವ ವರ್ಷವೂ ಘರ್ಷಣೆ ಆಗಿರಲಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣಗೊಂಡ ಬಳಿಕ ಗಲಾಟೆಗೆ ಕುಮ್ಮಕ್ಕು ಕೊಟ್ಟಿದ್ದಾರೆ. ಅಕ್ರಮ ಮಸೀದಿ ವಿರುದ್ಧ ಕ್ರಮ ಜರುಗಿಸಬೇಕು. ಅಮಾನುಷವಾಗಿ ವರ್ತಿಸಿದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗಾಯಾಳುಗಳಿಗೆ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

'ಗಲಭೆಯ ಉದ್ದೇಶದಿಂದಲೇ ಪಟ್ಟಭದ್ರರು ಬೀದಿ ದೀಪ ನಂದಿಸಿದ್ದಾರೆ. ಮೆರವಣಿಗೆ ಮೇಲೆ ಕಲ್ಲು ತೂರಿದ್ದಾರೆ. ಮೆರವಣಿಗೆ ಮಸೀದಿ ಮುಂಭಾಗ ತೆರಳುವಾಗ ಪೊಲೀಸರ ಸೂಚನೆಯಂತೆ ಮ್ಯೂಸಿಕ್, ಬ್ಯಾಂಡ್‌ಸೆಟ್ ಬಾರಿಸಿಲ್ಲ. ಶಾಂತವಾಗಿ ಸಾಗುತ್ತಿದ್ದರೂ ಪೊಲೀಸರು ಲಾಠಿಚಾರ್ಜ್ ಮಾಡಿದ್ದಾರೆ' ಎಂದು ದೂರಿದರು.

ನಿಧನ ವಾರ್ತೆ

ಮುದ್ದಮ್ಮ



ರಾಜರಾಜೇಶ್ವರಿ ನಗರ: ದೊಡ್ಡಕಲ್ಲಸಂದ್ರ ನಾರಾಯಣ ನಗರದ ನಿವಾಸಿಯಾಗಿದ್ದ ಮುದ್ದಮ್ಮ (96) ಅವರು ಶನಿವಾರ ನಿಧನರಾದರು.

ಅವರಿಗೆ ನಾಲ್ವರು ಪುತ್ರರಿದ್ದಾರೆ. ಪಾಂಡುಪುರದಲ್ಲಿ ಮೈಸೂರುಪಾಕ್ ಅಂಗಡಿಯನ್ನು ನಡೆಸುತ್ತಿದ್ದ ಮುದ್ದಮ್ಮ 'ಪಾಂಡವಪುರ ಮುದ್ದಮ್ಮ' ಎಂದೇ ಹೆಸರಾಗಿದ್ದರು. ಭಾನುವಾರ ಬೆಳಿಗ್ಗೆ 10 ಗಂಟೆಗೆ ಬ್ಯಾಟರಾಯನ ದೊಡ್ಡಿಯಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಲ್ಕತ್ತ ರೇಸ್

ಎಲೆನೋರ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಮಾನ್ಸೂನ್ ಡರ್ಬಿ (2025) ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಎಲೆನೋರ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:00ಕ್ಕೆ ಪ್ರಾರಂಭವಾಗಲಿರುವ ದಿನದ ಹನ್ನೊಂದು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಐ ಸ್ಮೆಲ್ ದಿ ಡೇಂಜರ್ 3, ಡೈಮಂಡ್ ಗೋಲ್ಡ್ 10, ಹ್ಯಾಪಿ ಮಾರ್ನಿಂಗ್ 9
2ನೇ ರೇಸ್: ಕ್ಲಿಫೋರ್ಡ್ 3, ಸುಪ್ರೀಮ್ ಗ್ರ್ಯಾಂಡಿಯೂರ್ 5, ಬ್ಲ್ಯಾಕ್ ಈಗಲ್ 1
3ನೇ ರೇಸ್: ಫಾಸ್ಟ್ ಅಪ್ರೋಚ್ 7, ಕೇ ಸ್ಟಾರ್ 2, ಡೋನಾ ಸಿಯೆನ್ನಾ 4
4ನೇ ರೇಸ್: ಥ್ರೀ ಲಿಟ್ಲ್ ವರ್ಡ್ಸ್ 1, ಡ್ಯಾನ್ಸ್ ಅಲಾಂಗ್ 5, ಜೀನ್ ಲಾಫೆಟ್ 7
5ನೇ ರೇಸ್: ಓ ಮೈ ಸ್ವೀಟ್‌ಹಾರ್ಟ್ 6, ಓನ್ಲಿ ಡ್ರೀಮ್ಸ್ 2, ಎನೋಲಾ ಹೋಮ್ಸ್ 1
6ನೇ ರೇಸ್: ಜೂರಿ 2, ನ್ಯಾಚುರಲ್ ಗ್ರೇಸ್ 1, ಮಿಸ್ಟಿಕಲ್ ಡಾನ್ 9
7ನೇ ರೇಸ್: ಆಭೂಷನ್ 7, ಸ್ಪೋಪಿಯರ್ಸರ್ 8, ಕಿಂಗ್ ಲೂಯಿಸ್ 6
8ನೇ ರೇಸ್: ಸಟವುರ್ 6, ಹೈ ಕಮಾಂಡ್ 1, ವಿನ್ಸೆಂಟ್ ವ್ಯಾನ್ ಗೋಗ್ 3
9ನೇ ರೇಸ್: ಎಲೆನೋರ 8, ಹಾರ್ಟ್ 10, ರೇಸಿಂಗ್ ರೂಲರ್ 5
10ನೇ ರೇಸ್: ಪೋಲ್ಕ ಡಾಟ್ 2, ದಿ ಪ್ರೆಸೆನ್ಸ್ 5, ಪಾಲ್ಯೆಟ್ ವಾರಿಯರ್ 5
11ನೇ ರೇಸ್: ಓ ಮೈ ಡಾರ್ಲಿಂಗ್ 1, ಕೂಲ್ ಡ್ಯಾಡಿ 3, ಕೀಟಾರೊ 6

ಉತ್ತಮ ಬೆಟ್: ಪೋಲ್ಕ ಡಾಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
7,8,9,10,11	3,4,5	6,7,8	9,10,11

ರಿಯಲ್ ಬೆಂಗಳೂರು ತಂಡಕ್ಕೆ ಜಯ

ಬೆಂಗಳೂರು: ಅಂತಿಮ ಕ್ಷಣದಲ್ಲಿ ಸಯ್ಯದ್ ಅಹಮದ್ (85ನೇ ನಿ.) ಅವರು ಗಳಿಸಿದ ಗೋಲಿನ ನೆರವಿನಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0ಯಿಂದ ಎಚ್‌ಎಎಲ್ ಫುಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು.


ಎಫ್‌ಸಿ ರಿಯಲ್ ಬೆಂಗಳೂರು ತಂಡದ ಚಂದಂ ಭೀಮಸೇನ್ ಸಿಂಗ್ (ಬಲ) ಹಾಗೂ ಎಚ್‌ಎಎಲ್ ಎಫ್‌ಸಿ ತಂಡದ ಸಹಯ್ ಆ್ಯಬಿಸನ್ ಅವರು ಚೆಂಡಿಗಾಗಿ ಸೆಣಸಿದರು ಚಿತ್ರ: ಪುಷ್ಕರ್ ವಿ.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು 2–0ಯಿಂದ ರೂಟ್ಸ್ ಎಫ್‌ಸಿ ತಂಡದ ಎದುರು ಗೆಲುವು ಸಾಧಿಸಿತು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 3–0ಯಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಸಂಚಾರ ನಿಯಮ ಉಲ್ಲಂಘನೆಗಳ ಪ್ರದರ್ಶನ

ದಂಡದ ಮೊತ್ತ ತೋರುವ 'ಬಿಲ್ ಬೋರ್ಡ್'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಟ್ರಿನಿಟಿ ವೃತ್ತ ಸೇರಿ ಎರಡು ಕಡೆಗಳಲ್ಲಿ ಅಳವಡಿಕೆ
- ಅವಧಿ ಮೀರಿದ ಪಿಯುಸಿಸಿ ಬಗ್ಗೆಯೂ ಮಾಹಿತಿ

ಬೆಂಗಳೂರು: ನಗರದ ಟ್ರಿನಿಟಿ ವೃತ್ತ ಸೇರಿ ಎರಡು ಜಂಕ್ಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ 'ಬಿಲ್ ಬೋರ್ಡ್' ಅನ್ನು ನಗರ ಸಂಚಾರ ವಿಭಾಗದ ಪೊಲೀಸರು ಅಳವಡಿಸಿದ್ದಾರೆ. ಈ ವೃತ್ತದ ಮೂಲಕ ಸಾಗುವಾಗ 'ಬಿಲ್ ಬೋರ್ಡ್' ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳ ದಂಡದ ಮೊತ್ತವನ್ನು ಪ್ರದರ್ಶಿಸಲಿದೆ.

ದಟ್ಟಣೆ ಸಮಸ್ಯೆ ಪರಿಹರಿಸಲು ನಗರ ಸಂಚಾರ ಪೊಲೀಸರು ಹಲವು ಯೋಜನೆಗಳನ್ನು ಜಾರಿ ಮಾಡಿದ್ದಾರೆ. ನಗರದ ಹಲವು ಕಡೆ ಅಳವಡಿಸಿರುವ ಎ.ಐ ಆಧಾರಿತ ಕ್ಯಾಮೆರಾಗಳು ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ಮೇಲೆ ಕಣ್ಣಿಟ್ಟಿದ್ದರೆ, ಟ್ರಿನಿಟಿ ವೃತ್ತದಲ್ಲಿ ಅಳವಡಿಸಿರುವ ಹೊಸ ಬಿಲ್ ಬೋರ್ಡ್, ನಿಯಮ ಉಲ್ಲಂಘನೆಗೆ ಸಂಬಂಧಿಸಿದ ಬಾಕಿ ದಂಡದ ಮಾಹಿತಿಯನ್ನು ಪ್ರದರ್ಶಿಸಲಿದೆ.

ನಗರ ಪೊಲೀಸ್ ಇಲಾಖೆ ಹಾಗೂ 'ಕಾರ್ಸ್ 24' ಸಹಯೋಗದಲ್ಲಿ ಟ್ರಿನಿಟಿ ವೃತ್ತದಲ್ಲಿ ಎ.ಐ ಆಧಾರಿತ ಡಿಜಿಟಲ್ ಜಾಹೀರಾತು ಫಲಕವನ್ನು ಅಳವಡಿಸಿದೆ. ಈ ವೃತ್ತದಿಂದ ಹಾದುಹೋಗುವ ವಾಹನಗಳ ಸಂಚಾರ ಉಲ್ಲಂಘನೆ ಸೇರಿದಂತೆ ಬಾಕಿ ದಂಡದ ಮಾಹಿತಿಯನ್ನು ಈ ಬೋರ್ಡ್‌ನಲ್ಲಿ ಪ್ರದರ್ಶಿಸಲಾಗುತ್ತಿದೆ.



ಟ್ರಿನಿಟಿ ವೃತ್ತದಲ್ಲಿ ಅಳವಡಿಸಿರುವ ಬಿಲ್ ಬೋರ್ಡ್ ಚಿತ್ರ: ಪುಷ್ಕರ್ ವಿ.

ಈ ಬಿಲ್‌ಬೋರ್ಡ್ ಅತ್ಯಾಧುನಿಕ ಎ.ಐ ಆಧಾರಿತ ಕ್ಯಾಮೆರಾಗಳನ್ನು ಹೊಂದಿದ್ದು, ನೂರು ಮೀಟರ್ ದೂರದಿಂದಲೇ ವಾಹನಗಳ ನೋಂದಣಿ ಸಂಖ್ಯೆ ಸ್ಕ್ಯಾನ್ ಮಾಡುತ್ತದೆ. ಬಾಕಿ ಇರುವ ಇ-ಚಲನ್ ಆಗಿರಬಹುದು, ಅವಧಿ ಮೀರಿದ ಮಾಲಿನ್ಯ ನಿಯಂತ್ರಣ (ಪಿಯುಸಿಸಿ) ಪ್ರಮಾಣಪತ್ರ ಅಥವಾ ಇತರ ಸಂಚಾರ ನಿಮಯ ಉಲ್ಲಂಘನೆಗಳನ್ನು ನೇರವಾಗಿ ಪರದೆಯಲ್ಲಿ ಪ್ರದರ್ಶಿಸಲಾಗುತ್ತದೆ.

'ಸದ್ಯ ಎರಡು ಜಂಕ್ಷನ್‌ನಲ್ಲಿ ಮಾತ್ರ ಬಿಲ್‌ಬೋರ್ಡ್ ಅಳವಡಿಸಲಾಗಿದೆ. ಉಳಿದ ಸ್ಥಳಗಳಲ್ಲೂ ಖಾಸಗಿ ಸಂಸ್ಥೆಯ ಸಹಯೋಗದಲ್ಲಿ ಈ ರೀತಿಯ ಬೋರ್ಡ್ ಅಳವಡಿಸಲಾಗುವುದು. ಈ ರೀತಿ ದಂಡದ ಮೊತ್ತವನ್ನು ಬೋರ್ಡ್‌ನಲ್ಲಿ ಪ್ರದರ್ಶನ ಮಾಡುವುದರಿಂದ ವಾಹನ ಚಾಲಕರು ಎಚ್ಚೆತ್ತುಕೊಂಡು ದಂಡವನ್ನು ಬೇಗ ಪಾವತಿಸಲಿದ್ದಾರೆ. ಅಲ್ಲದೇ, ಸಂಚಾರ ನಿಯಮಗಳ ಬಗ್ಗೆಯೂ ಜಾಗೃತಿ ವಹಿಸಲಿದ್ದಾರೆ' ಎಂದು ನಗರ ಸಂಚಾರ ಪೊಲೀಸರು ಹೇಳಿದರು.

ದಸರೆ: ಆನೇಕಲ್‌ನ ಹಸು ಪ್ರಥಮ

ಪ್ರಜಾವಾಣಿ ವಾರ್ತೆ

ಮೈಸೂರು: 'ರೈತ ದಸರಾ' ಪ್ರಯುಕ್ತ ಇಲ್ಲಿ ಶನಿವಾರ ಏರ್ಪಡಿಸಿದ್ದ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರಿನ ಆನೇಕಲ್‌ನ ಅಜಯ್ ಅವರ ಮಿಶ್ರ ತಳಿಯ ಹಸು ಎರಡೂ ಹೊತ್ತು ಸೇರಿ 38 ಕೆ.ಜಿ 150 ಗ್ರಾಂ ಹಾಲು ನೀಡಿ ಪ್ರಥಮ ಸ್ಥಾನ ಪಡೆಯಿತು.

ಪಿರಿಯಾಪಟ್ಟಣ ತಾಲ್ಲೂಕಿನ ಚಿಟ್ಟೇನಹಳ್ಳಿಯ ಸಿ.ಎಸ್.ಸಂಜೀವ್ ಅವರ ಹಸು 37 ಕೆ.ಜಿ 150 ಗ್ರಾಂ, ಬೆಂಗಳೂರು ನಾಗರಭಾವಿಯ ಹರ್ಷಿತ್ ಗೌಡ ಅವರ ಹಸು 37 ಕೆ.ಜಿ. 100 ಗ್ರಾಂ, ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂನ ನಿಶಾಂತ್ ಶಿವರಾಂ ಅವರ ಹಸು 36 ಕೆ.ಜಿ 850 ಗ್ರಾಂ ಹಾಲು ನೀಡಿ, ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದವು.

ಸಚಿವ ಕೆ.ವೆಂಕಟೇಶ್ ಅವರು ಹಸುಗಳ ಮಾಲೀಕರಿಗೆ ಕ್ರಮವಾಗಿ ₹1 ಲಕ್ಷ, ₹80 ಸಾವಿರ, ₹60 ಸಾವಿರ, ₹40 ಸಾವಿರ ನಗದು, ನೆನಪಿನ ಕಾಣಿಕೆ ನೀಡಿದರು.

15 ಸ್ಪರ್ಧಿಗಳು ಭಾಗವಹಿಸಿದ್ದು, ಉಳಿದ ಸ್ಪರ್ಧಿಗಳ ಹಸುಗಳೂ 20 ಕೆ.ಜಿಗೂ ಅಧಿಕ ಹಾಲು ನೀಡಿದ್ದು ಪ್ರೋತ್ಸಾಹಕ ಬಹುಮಾನವಾಗಿ ತಲಾ ₹10 ಸಾವಿರ ನೀಡಲಾಯಿತು.

'ಕೈ' ಕಮಿಷನ್ ದುಪ್ಪಟ್ಟು: ಸಿ.ಎಂ.ಗೆ ಪತ್ರ

ಜ್ಯೇಷ್ಠತೆ ಮತ್ತು ಪಾರದರ್ಶಕ ಕಾಯ್ದೆ ಪಾಲನೆ ಆಗುತ್ತಿಲ್ಲ– ಗುತ್ತಿಗೆದಾರರ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದಿನ ಸರ್ಕಾರಕ್ಕಿಂತ ನಿಮ್ಮ ನೇತೃತ್ವದ ಸರ್ಕಾರದಲ್ಲಿ ಬಿಲ್ ಪಾವತಿಗೆ ಕಮಿಷನ್ ದುಪ್ಪಟ್ಟಾಗಿದೆ' ಎಂದು ಆರೋಪಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಗುತ್ತಿಗೆದಾರರ ಸಂಘ ಪತ್ರ ಬರೆದಿದೆ.

'ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಗುತ್ತಿಗೆದಾರರ ಬಾಕಿ ಹಣ ಬಿಡುಗಡೆಗೆ ಯಾವುದೇ ಕಮಿಷನ್ ತೆಗೆದುಕೊಳ್ಳುವುದಿಲ್ಲ ಎಂದು ತಿಳಿಸಿದ್ದೀರಿ. ಆದರೆ, ಹಿಂದಿನ ಸರ್ಕಾರಕ್ಕಿಂತ ಎಲ್ಲ ಇಲಾಖೆಗಳಲ್ಲೂ ಈಗ ಕಮಿಷನ್ ದುಪ್ಪಟ್ಟು ಆಗಿದೆ ಎಂದು ನಿಮ್ಮ ಗಮನಕ್ಕೆ ತರಲು ಸಂಘ ವಿಷಾದ ವ್ಯಕ್ತಪಡಿಸುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'ರಾಜ್ಯದಲ್ಲಿ ಹಿಂದಿದ್ದ ಬಿಜೆಪಿ ನೇತೃತ್ವದ ಸರ್ಕಾರಕ್ಕಿಂತ ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ, ಅಧಿಕಾರಿಗಳು ಹೆಚ್ಚು ಕಮಿಷನ್ ಪಡೆಯುತ್ತಾರೆ' ಎಂದು ರಾಜ್ಯ ಗುತ್ತಿಗೆದಾರರ ಸಂಘ 2025ರ ಮಾರ್ಚ್‌ನಲ್ಲಿ ಆರೋಪಿಸಿತ್ತು. ಆಗ ಮುಖ್ಯಮಂತ್ರಿಯವರು ಗುತ್ತಿಗೆದಾರರೊಂದಿಗೆ ಸಭೆ ನಡೆಸಿ, ಏಪ್ರಿಲ್‌ನಲ್ಲಿ ಶೇ 50ರಷ್ಟು ಬಾಕಿ ಬಿಲ್ ಬಿಡುಗಡೆ ಮಾಡುವ ಭರವಸೆ ನೀಡಿದ್ದರು.

'ಸುಮಾರು ಎರಡು ವರ್ಷಗಳಿಂದ ಗುತ್ತಿಗೆದಾರರಿಗೆ ಬಾಕಿ ಇರುವ ಹಣ ಬಿಡುಗಡೆ ವಿಚಾರ ಮತ್ತು ಹಲವು ಸಮಸ್ಯೆಗಳ ಬಗ್ಗೆ ನಿಮ್ಮ ಜೊತೆ ಹಲವು ಬಾರಿ ಸಂಘದ ಪದಾಧಿಕಾರಿಗಳು ಚರ್ಚೆ ಮಾಡಿದ್ದೇವೆ. ನಮ್ಮ ಸಂಘವು ಭ್ರಷ್ಟಾಚಾರದ ವಿರುದ್ಧ ಹೋರಾಡಿದ ಫಲವಾಗಿ, ತಮ್ಮ ಸರ್ಕಾರ ಬರುವುದಕ್ಕೆ ಸ್ವಲ್ಪವಾದರೂ ನಾವು ಕಾರಣಕರ್ತರಾಗಿದ್ದೇವೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ' ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ನಮ್ಮನ್ನು ಪ್ರತಿ ಬಾರಿ ಸಮಾಧಾನ ಮಾಡಿ, ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಿದ್ದೀರಿ. ನಿಮಗೆ ಗೌರವ ಕೊಟ್ಟು, ಅಪಾರ ನಂಬಿಕೆಯಿಂದ ಜಿಲ್ಲೆಗಳ ಎಲ್ಲ ಗುತ್ತಿಗೆದಾರರೂ ಸಮಾಧಾನದಿಂದ ಇದ್ದಾರೆ. ಆದರೆ, ಇದುವರೆಗೆ ನಿಮ್ಮ ಸರ್ಕಾರದಿಂದ ನಮಗೆ ಪ್ರಯೋಜನವಾಗಿಲ್ಲ. ಇಲಾಖೆಗಳ ಸಚಿವರು, ಕಾರ್ಯದರ್ಶಿಗಳನ್ನು ಭೇಟಿ ಮಾಡಿದರೂ ಹಣ ಬಿಡುಗಡೆಯಾಗಿಲ್ಲ' ಎಂದು ದೂರಿದ್ದಾರೆ.

'ಜ್ಯೇಷ್ಠತೆ ಮತ್ತು ಪಾರದರ್ಶಕ ಕಾಯ್ದೆ ಅನುಸರಿಸದೆ, ಅವರದೇ 'ಫಾರ್ಮುಲಾ'ಗಳನ್ನು ತಯಾರಿಸಿಕೊಂಡು, ಸ್ಪೆಷಲ್ ಎಲ್‌ಒಸಿ ರೂಪದಲ್ಲಿ ಗುತ್ತಿಗೆದಾರರ ಬಾಕಿ ಹಣದಲ್ಲಿ ಮೂರು ತಿಂಗಳಿಗೊಮ್ಮೆ ಶೇ 15ರಿಂದ ಶೇ 20ರಷ್ಟು ಹಣವನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದಾರೆ' ಪತ್ರದಲ್ಲಿ ಎಂದು ಆರೋಪಿಸಿದ್ದಾರೆ.

ಮುಖ್ಯಾಂಶಗಳು

- ಸುಮಾರು ₹37 ಸಾವಿರ ಕೋಟಿ ಬಾಕಿ
- ಪ್ಯಾಕೇಜ್‌ನಿಂದ ಸಣ್ಣ ಗುತ್ತಿಗೆದಾರರಿಗೆ ತೊಂದರೆ
- ಇಲಾಖೆಗಳ 'ಫಾರ್ಮುಲಾ'ದಲ್ಲಿ ಸ್ಪೆಷಲ್ ಎಲ್‌ಒಸಿ

'ಸಿ.ಎಂ ಆದೇಶ ಮೀರಿ ಪ್ಯಾಕೇಜ್'

'ಪೌರಾಡಳಿತ, ನಗರಾಭಿವೃದ್ಧಿ, ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕಾನೂನು ಹಾಗೂ ನಿಮ್ಮ ಆದೇಶವನ್ನು ಮೀರಿ ಟೆಂಡರ್‌ಗಳನ್ನು ಪ್ಯಾಕೇಜ್ ರೂಪದಲ್ಲಿ ಪರಿವರ್ತಿಸಿ, ತಮಗೆ ಬೇಕಾದ ಬಲಾಢ್ಯ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಪ್ರಕ್ರಿಯೆ ನಡೆಸುತ್ತಿದ್ದಾರೆ.

ಈ ವಿಚಾರವಾಗಿ ಸಂಘ ಹಲವು ಬಾರಿ ಪತ್ರ ಹಾಗೂ ಮೌಖಿಕವಾಗಿ ತಿಳಿಸಿದ್ದರೂ ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ' ಎಂದು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ವಿವರಿಸಲಾಗಿದೆ.

ಸಚಿವರಾದ ರಹೀಂಖಾನ್, ಬೈರತಿ ಸುರೇಶ್, ಸಂತೋಷ್ ಲಾಡ್ ಅವರಿಗೂ ಇದೇ ವಿಷಯವಾಗಿ ಪತ್ರ ಬರೆಯಲಾಗಿದೆ' ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಯಾವ ಇಲಾಖೆ, ಎಷ್ಟು ಬಾಕಿ (₹ಕೋಟಿಗಳಲ್ಲಿ)

ಇಲಾಖೆ	ಬಾಕಿ
ಜಲಸಂಪನ್ಮೂಲ	12,000
ಲೋಕೋಪಯೋಗಿ	9,000
ಪಂಚಾಯತ್ ರಾಜ್	3,600
ಸಣ್ಣ ನೀರಾವರಿ	3,200
ಕೆಆರ್‌ಐಡಿಎಲ್	3,000
ಬಿಬಿಎಂಪಿ	1,800
ನಗರಾಭಿವೃದ್ಧಿ	1,200
ವಸತಿ	900
ಕಾರ್ಮಿಕ	800
ಪೌರಾಡಳಿತ	600
ವಕ್ಫ್	600



ಬಾಕಿ ಬಿಲ್ ಬಿಡುಗಡೆ ಮಾಡುವುದಾಗಿ ಸಿ.ಎಂ ನೀಡಿದ ಭರವಸೆ ಈವರೆಗೂ ಈಡೇರಿಲ್ಲ. ಏಪ್ರಿಲ್‌ನಲ್ಲಿ ಶೇ 50ರಷ್ಟು ಬಾಕಿ ಬಿಲ್ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಅದೂ ಆಗಿಲ್ಲ

ಆರ್. ಮಂಜುನಾಥ್
ಅಧ್ಯಕ್ಷ, ರಾಜ್ಯ ಗುತ್ತಿಗೆದಾರರ ಸಂಘ


ಕಾಂತಾರಕ್ಕೆ ಕೆಎಸ್‌ಡಿಎಲ್ ಸಹ ಪ್ರಾಯೋಜಕ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂತಾರ– ಚಾಪ್ಟರ್ 1 ಸಿನಿಮಾಕ್ಕೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮವು (ಕೆಎಸ್‌ಡಿಎಲ್), ಸುಗಂಧ ಭಾಗಿದಾರ ಆಗಿ ಸಹ ಪ್ರಾಯೋಜಕತ್ವ ನೀಡಲಿದೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

'ಕನ್ನಡ ಚಿತ್ರರಂಗವು ಸ್ಯಾಂಡಲ್‌ವುಡ್ ಎಂದೇ ಹೆಸರಾಗಿದೆ. ಇನ್ನು ಕೆಎಸ್‌ಡಿಎಲ್ ಮೈಸೂರ್ ಸ್ಯಾಂಡಲ್ ಸೋಪ್‌ಗಳಿಗೆ ಖ್ಯಾತಿ. ಈಗ ಚಿತ್ರತಂಡ ಮತ್ತು ಕೆಎಸ್‌ಡಿಎಲ್ ಮಧ್ಯೆ ಒಪ್ಪಂದವಾಗಿದ್ದು, ಚಿತ್ರದ ಪ್ರತಿ ಪ್ರದರ್ಶನದಲ್ಲೂ ಕೆಎಸ್‌ಡಿಎಲ್ ಉತ್ಪನ್ನ ಗಳಿಗೆ ಪ್ರಚಾರ ಸಿಗಲಿದೆ' ಎಂದು ಮಾಹಿತಿ ನೀಡಿದ್ದಾರೆ.

'ಕನ್ನಡ, ತೆಲುಗು, ಹಿಂದಿ, ತಮಿಳು, ಮಲೆಯಾಳ, ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಸೇರಿ 7 ಭಾಷೆಗಳಲ್ಲಿ ಕಾಂತಾರ ತೆರೆ ಕಾಣಲಿದೆ. ಭಾರತದ 7,000 ಹಾಗೂ 30 ರಾಷ್ಟ್ರಗಳ 6,500ಕ್ಕೂ ಹೆಚ್ಚು ಪರದೆಗಳಲ್ಲಿ ಪ್ರದರ್ಶನಗೊಳ್ಳಲಿದೆ. ಅಲ್ಲೆಲ್ಲಾ ಕೆಎಸ್‌ಡಿಎಲ್ ಉತ್ಪನ್ನಗಳಿಗೆ ಪ್ರಚಾರ ಸಿಗಲಿದೆ. ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಣೆಗೆ ಯತ್ನಿಸುತ್ತಿರುವ ಕೆಎಸ್‌ಡಿಎಲ್‌ಗೆ ಇದರಿಂದ ಅನುಕೂಲವಾಗಲಿದೆ' ಎಂದು ವಿವರಿಸಿದ್ದಾರೆ.



ಕೆಎಸ್‌ಡಿಎಲ್ ಪ್ರಾಯೋಜಕತ್ವದ ಪೋಸ್ಟರ್

ಕೊಳ್ಳೇಗಾಲ: 11 ಬಿಜೆಪಿ ಸದಸ್ಯರ ಉಚ್ಚಾಟನೆ

ಕೊಳ್ಳೇಗಾಲ/ಚಾಮರಾಜನಗರ: ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜೊತೆ ಕೈಜೋಡಿಸಿ ಬಿಜೆಪಿ ಅಧಿಕೃತ ಅಭ್ಯರ್ಥಿಯ ಗೆಲುವಿಗೆ ಅಡ್ಡಿಯಾದ ಆರೋಪದ ಮೇಲೆ ಕೊಳ್ಳೇಗಾಲ ನಗರಸಭೆಯ 10 ಬಿಜೆಪಿ ಸದಸ್ಯರು, ಚಾಮರಾಜನಗರ ನಗರಸಭೆ ಒಬ್ಬ ಸದಸ್ಯರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಕೊಳ್ಳೇಗಾಲ ನಗರಸಭೆಯ ಧರಣೇಶ್, ಮಾನಸ, ನಾಸಿರ್ ಶರೀಫ್, ಕವಿತಾ, ನಾಗೇಂದ್ರ, ಜಿ.ಪಿ.ಶಿವಕುಮಾರ್, ಪವಿತ್ರಾ, ಪ್ರಕಾಶ್, ರಾಮಕೃಷ್ಣ, ನಾಗಸಂದ್ರಮ್ಮ, ಚಾಮರಾಜನಗರ ನಗರಸಭೆಯ ಮಹದೇವಯ್ಯ ಉಚ್ಚಾಟನೆಗೊಂಡವರು. ಈ ಎಲ್ಲರನ್ನು 6 ವರ್ಷ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ತಿಳಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ಕಚೇರಿ ಬಳಿ ಸೇರಿದ್ದ ನೂರಾರು ಸಮೀಕ್ಷಕರು

ನೀಗದ ತಾಂತ್ರಿಕ ತೊಂದರೆ– ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಿದ್ಧಪಡಿಸಿರುವ ಆ್ಯಪ್‌ನಿಂದ ಸಮಸ್ಯೆ ಆಗಿದ್ದು ನಿವಾರಿಸಬೇಕು ಎಂದು ಒತ್ತಾಯಿಸಿ' ಸಮೀಕ್ಷರು ಮಹಾನಗರ ಪಾಲಿಕೆಯಲ್ಲಿ ಶನಿವಾರ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಅಧಿಕಾರಿಗಳು ಸಭೆ ನಡೆಸುತ್ತಿದ್ದ ಕೊಠಡಿ ಹೊರಗೆ ಗದ್ದಲ ಏರ್ಪಟ್ಟಿತ್ತು.

ಅನುಕೂಲಕರ ಸ್ಥಳಕ್ಕೆ ನಿಯೋಜಿಸಬೇಕು, ಸಮರ್ಪಕವಾಗಿ ಆ್ಯಪ್ ಅಭಿವೃದ್ಧಿಪಡಿಸಬೇಕು ಎಂದು ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಅವರಿಗೆ ಮನವಿ ಸಲ್ಲಿಸಲು ನೂರಾರು ಮಂದಿ ಬಂದಿದ್ದರು.

ಅದೇ ಸಮಯಕ್ಕೆ ಬಂದ ಅನಾರೋಗ್ಯಪೀಡಿತ ಸಮೀಕ್ಷಕರೊಬ್ಬರು ಮತ್ತು ಅವರ ಸಂಬಂಧಿಕರು, ಅಸಮಾಧಾನ ವ್ಯಕ್ತಪಡಿಸಿದರು. ಸಭೆಯ ನಡುವೆಯೇ ಎದ್ದು ಬಂದ ಅಧಿಕಾರಿಗಳು, ಸಮಸ್ಯೆ ಬಗೆಹರಿಸಲೆಂದೇ ಸಭೆ ನಡೆಸಲಾಗುತ್ತಿದೆ ಎಂಬ ಸಮಜಾಯಿಷಿಗೂ ಕಿವಿಗೊಡಲಿಲ್ಲ.

'ಸಮೀಕ್ಷಕರ ಸಮಸ್ಯೆಗಳನ್ನು ಬಗೆಹರಿಸಿದ್ದೇವೆ. 150ರಷ್ಟು ಸಮೀಕ್ಷಕರನ್ನು ಅವರು ಬಯಸಿದ ಸ್ಥಳಗಳಿಗೆ ನಿಯೋಜಿಸಿದ್ದೇವೆ' ಎಂದು ಉಪ ಆಯುಕ್ತ ಎಂ.ದಾಸೇಗೌಡ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಹಿಂದುಳಿದ ವರ್ಗಗಳ ಆಯೋಗದ ವಿರುದ್ಧ ಬುಡಕಟ್ಟು ರಕ್ಷಣಾ ಸಮಿತಿ ಆರೋಪ

'ಎಸ್‌ಟಿ'ಯಿಂದ 'ಒಬಿಸಿ': ಆಯೋಗಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿರುವ ಹಿಂದುಳಿದ ವರ್ಗಗಳ ಆಯೋಗ, ಪರಿಶಿಷ್ಟ ಪಂಗಡ (ಎಸ್‌ಟಿ) ಪಟ್ಟಿಯಲ್ಲಿರುವ 'ಟೋಕರೆ ಕೋಲಿ' ಮತ್ತು 'ತಳವಾರ' ಜಾತಿಗಳನ್ನು ಇತರ ಹಿಂದುಳಿದ ವರ್ಗಗಳ (ಒಬಿಸಿ) ಜಾತಿ ಪಟ್ಟಿಯಲ್ಲಿ ಸೇರಿಸಿ ಅನ್ಯಾಯ ಮಾಡಿದೆ' ಎಂದು ಆರೋಪಿಸಿರುವ ಬುಡಕಟ್ಟು ರಕ್ಷಣಾ ಸಮಿತಿ, ಆಯೋಗಕ್ಕೆ ಕಾನೂನು ನೋಟಿಸ್ ನೀಡಿದೆ.

'ಸ್ವಾತಂತ್ರ್ಯಕ್ಕೂ ಮೊದಲೇ ಟೋಕರೆ ಕೋಲಿ ಎಸ್‌ಟಿ ಜಾತಿ ಪಟ್ಟಿಯಲ್ಲಿದೆ. ಸಂವಿಧಾನ (ಪರಿಶಿಷ್ಟ ಜಾತಿಗಳು) ಆದೇಶ 1950ರಲ್ಲಿ ಈ ವಿವರವಿದೆ. ಈ ಜಾತಿಯನ್ನು ಈಗ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಯಾವುದೇ ಆಧಾರವಿಲ್ಲದೆ ಮತ್ತು ಈ ಸಮುದಾಯದ ಜನರಿಗೆ ಯಾವುದೇ ಸ್ಪಷ್ಟೀಕರಣ ಅಥವಾ ಸೂಚನೆ ನೀಡದೆ ಈ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ನೋಟಿಸ್‌ನಲ್ಲಿ ವಿವರಿಸಲಾಗಿದೆ.



ಹಾವೇರಿ ನಗರದಲ್ಲಿ ಸಮೀಕ್ಷೆ ನಡೆಸಿದ ಸಮೀಕ್ಷಕರು ಕುಟುಂಬದ ಮುಖ್ಯಸ್ಥರ ಫೋಟೊವನ್ನು ಆ್ಯಪ್‌ನಲ್ಲಿ ದಾಖಲಿಸಿಕೊಂಡರು

'2020ರಲ್ಲಿ ಕಾಯ್ದೆ ತಿದ್ದುಪಡಿ ಮೂಲಕ ತಳವಾರ ಜಾತಿಯನ್ನು ಎಸ್‌ಟಿ ಪಟ್ಟಿಗೆ ಸೇರಿಸಲಾಗಿದೆ. ಅಲ್ಲದೆ, ಕರ್ನಾಟಕ ರಾಜ್ಯ ಸರ್ಕಾರ 2022 ಅ. 29ರಂದು ಅಧಿಸೂಚನೆ ಹೊರಡಿಸಿ, ಪ್ರವರ್ಗ 1ರಲ್ಲಿ ಇದ್ದ ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಿದೆ' ಎಂದೂ ನೋಟಿಸ್‌ನಲ್ಲಿದೆ.

'ತಳವಾರ ಜಾತಿ ಕುರಿತು ಕೇಂದ್ರ ಸರ್ಕಾರ ಮತ್ತು ಎಸ್‌ಟಿ ಆಯೋಗವು ಸ್ಪಷ್ಟೀಕರಣ ಕೋರಿತ್ತು. ಬುಡಕಟ್ಟು ವ್ಯವಹಾರಗಳ ಸಚಿವಾಲಯದ ನಿರ್ದೇಶಕರಿಗೆ 2014ರ ಏಪ್ರಿಲ್ 28ರಂದು ಬರೆದಿದ್ದ ರಾಜ್ಯ ಸರ್ಕಾರ, 'ರಾಜ್ಯದಲ್ಲಿ ಒಂದೇ ಒಂದು ತಳವಾರ ಜಾತಿ ಇದೆ' ಎಂದು ಸ್ಪಷ್ಟಪಡಿಸಿದೆ. ಆದರೆ, ಈಗ ಕೆಲವು ಅಧಿಕಾರಿಗಳು ಈ ಸ್ಪಷ್ಟನೆಗೆ ವಿರುದ್ಧವಾದ ನಿಲುವು ತೆಗೆದುಕೊಳ್ಳುತ್ತಿದೆ. ಯಾವುದೇ ಅಧ್ಯಯನ, ದಾಖಲೆಗಳಿಲ್ಲದೆ ಆಯೋಗವು ಹೊಸ ಜಾತಿಗಳನ್ನು ಸೃಷ್ಟಿಸಿದೆ. ಆ ಮೂಲಕ, ಸಮುದಾಯದ ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸಲಾಗುತ್ತಿದೆ' ಎಂದೂ ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

12.87 ಲಕ್ಷ ಮನೆಗಳ ಸಮೀಕ್ಷೆ ಪೂರ್ಣ

ರಾಜ್ಯದಲ್ಲಿ ಸೆ. 22ರಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ನಡೆಯುತ್ತಿದ್ದು, ಶನಿವಾರದವರೆಗೆ (ಸೆ. 27) 12.87 ಲಕ್ಷ ಮನೆಗಳಿಂದ ದತ್ತಾಂಶ ಸಂಗ್ರಹಿಸಲಾಗಿದೆ.

ಶನಿವಾರ ಸಂಜೆವರೆಗೆ 1.47 ಕೋಟಿ ಮನೆಗಳ ಸಮೀಕ್ಷೆಯ ಗುರಿ ನಿಗದಿಪಡಿಸಲಾಗಿತ್ತು. ಆದರೆ, ಆರಂಭದಲ್ಲಿ 2–3 ದಿನ ಸಮೀಕ್ಷೆಯಲ್ಲಿ ಯಾವುದೇ ಪ್ರಗತಿ ಕಂಡಿರಲಿಲ್ಲ. ಕಳೆದ ಎರಡು ದಿನಗಳಿಂದ ಚುರುಕುಗೊಂಡಿದ್ದು, ಶನಿವಾರ ಒಂದೇ ದಿನ 8.19 ಲಕ್ಷ ಮನೆಗಳಲ್ಲಿ ಸಮೀಕ್ಷೆ ನಡೆದಿದೆ ಎಂದು ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

ಅ. 7ರವರೆಗೆ ಸಮೀಕ್ಷೆ ನಡೆಯಲಿದೆ. ಯಾವುದೇ ಕಾರಣಕ್ಕೂ ಅಂತಿಮ ಗಡುವನ್ನು ವಿಸ್ತರಿಸುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದತ್ತಾಂಶ ಸಂಗ್ರಹ ಕಾರ್ಯ ಚುರುಕುಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು.

ಸಮೀಕ್ಷೆಯ ಅವಧಿಯಲ್ಲಿ ಸುಮಾರು 1.75 ಲಕ್ಷ ಸಮೀಕ್ಷಕರು (ಹೆಚ್ಚಾಗಿ ಸರ್ಕಾರಿ ಶಾಲಾ ಶಿಕ್ಷಕರು) ರಾಜ್ಯದ 2 ಕೋಟಿ ಕುಟುಂಬಗಳ ಅಂದಾಜು 7 ಕೋಟಿ ಜನರ ದತ್ತಾಂಶ ಸಂಗ್ರಹಿಸುವ ಗುರಿ ಹೊಂದಿದ್ದಾರೆ. ಈ ಉದ್ದೇಶಕ್ಕೆ ರಾಜ್ಯ ಸರ್ಕಾರ ₹ 420 ಕೋಟಿ ಅನುದಾನ ಮೀಸಲಿಟ್ಟಿದೆ.

ಸಮೀಕ್ಷಾ ಕಾರ್ಯ ನಿರ್ಲಕ್ಷ್ಯ: ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ



ರಮೇಶ ರಾಠೋಡ

ಲಿಂಗಸುಗೂರು (ರಾಯಚೂರು ಜಿಲ್ಲೆ): ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದಡಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರಮೇಶ ರಾಠೋಡ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ರಮೇಶ ಜಿ.ರಾಠೋಡ ಸಮೀಕ್ಷಾ ಕಾರ್ಯಕ್ಕೆ ಸಹಕರಿಸುತ್ತಿಲ್ಲ. ಪ್ರಗತಿ ಕುಂಠಿತವಾಗಿದೆ ಎಂದು ತಹಶೀಲ್ದಾರ್ ಸತ್ಯಮ್ಮ ಅವರು ಜಿಲ್ಲಾಧಿಕಾರಿಗೆ ಲಿಖಿತ ದೂರು ನೀಡಿದ್ದರು.

ರಮೇಶ ರಾಠೋಡ ಲೋಕಸಭಾ ಚುನಾವಣೆ ವೇಳೆಯೂ ಚುನಾವಣಾ ಕರ್ತವ್ಯದಲ್ಲಿ ನಿರ್ಲಕ್ಷ್ಯ, ಬೇಜವಾಬ್ದಾರಿತನ ತೋರಿದ ಕಾರಣಕ್ಕೆ ಅಮಾನತುಗೊಂಡಿದ್ದರು.

ಮದ್ಯ ತಯಾರಿಕಾ ಉದ್ಯಮ 'ಬಂದಿ'



ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಇರುವ ಅಮೃತ್ ಡಿಸ್ಟಿಲರೀಸ್ ಕಾರ್ಖಾನೆಯ ಭಟ್ಟಿ ಇಳಿಸುವ ವ್ಯವಸ್ಥೆಯ ನೋಟ

ಪ್ರಜಾವಾಣಿ ಚಿತ್ರ/ ಕೃಷ್ಣ ಕುಮಾರ್ ಪಿ.ಎಸ್

ಒಂದನೇ ಪುಟದಿಂದ...

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 2024–25ನೇ ಸಾಲಿನಲ್ಲಿ ಅಬಕಾರಿ ಇಲಾಖೆಯು ₹35,530 ಕೋಟಿ ಆದಾಯ ಸಂಗ್ರಹಿಸಿತ್ತು. ಅದರ ಹಿಂದಿನ ಸಾಲಿನಲ್ಲಿ ₹34,629 ಕೋಟಿ ಸಂಗ್ರಹವಾಗಿತ್ತು. 'ಗ್ಯಾರಂಟಿ' ಯೋಜನೆಗಳಿಗೆ ಹಣ ಹೊಂದಿಸಲು ಸರ್ಕಾರ ಹೆಚ್ಚುವರಿ ಅಬಕಾರಿ ಸುಂಕ ಮತ್ತು ಸನ್ನದು ಶುಲ್ಕವನ್ನು ಏರಿಸಿದೆ ಎಂಬುದು ಜನರ ಅಭಿಪ್ರಾಯ. ಬಿಯರ್ ಮೇಲೆ 2023ರ ಜುಲೈನಿಂದ ಇಲ್ಲಿಯವರೆಗೆ ಸರ್ಕಾರ ಮೂರು ಬಾರಿ ತೆರಿಗೆ ಹೆಚ್ಚಿಸಿದೆ. ಮೊದಲು ಪ್ರತಿ ಲೀಟರ್ ಬಿಯರ್‌ಗೆ ಘೋಷಿತ ಬೆಲೆಯ (ಡಿ.ಪಿ) ಶೇ 175ರಷ್ಟು ಹೆಚ್ಚುವರಿ ಅಬಕಾರಿ ತೆರಿಗೆ ವಿಧಿಸಲಾಗುತ್ತಿತ್ತು. ಅದೀಗ ಶೇ 205ಕ್ಕೆ ಏರಿದೆ!

₹40,000 ಕೋಟಿ ಆದಾಯದ ಗುರಿ: 2025–26ನೇ ಸಾಲಿನಲ್ಲಿ ₹40,000 ಕೋಟಿ ಆದಾಯ ಸಂಗ್ರಹಿಸುವ ಗುರಿಯನ್ನು ಅಬಕಾರಿ ಇಲಾಖೆಗೆ ನಿಗದಿಪಡಿಸಲಾಗಿದೆ. ಅದಕ್ಕೆ ತಕ್ಕಂತೆ ಹೆಚ್ಚುವರಿ ಅಬಕಾರಿ ಸುಂಕ, ಸನ್ನದು ಶುಲ್ಕ ಮತ್ತು ಇತರ ಸುಂಕಗಳ ಸಂಗ್ರಹ ಹೆಚ್ಚಳದ ಮೂಲಕ ಈ ಗುರಿ ಸಾಧಿಸುವ ಯೋಜನೆ ಹೊಂದಿದೆ. ಈ ವರ್ಷದ ಆಗಸ್ಟ್ ಅಂತ್ಯದ ವೇಳೆಗೆ ₹16,359 ಕೋಟಿ ಸಂಗ್ರಹಿಸುವ ಮೂಲಕ ಶೇ 40ರಷ್ಟು ಪ್ರಗತಿಯನ್ನು ಇಲಾಖೆ ಸಾಧಿಸಿದೆ.

2024–25ನೇ ಸಾಲಿನಲ್ಲಿ ಮದ್ಯ ತಯಾರಿಕಾ ಘಟಕಗಳು, ಮದ್ಯ ಮಾರಾಟಗಾರರ ಸನ್ನದು ಮತ್ತು ಸನ್ನದು ನವೀಕರಣದಿಂದ ₹820 ಕೋಟಿಗೂ ಹೆಚ್ಚು ರಾಜಸ್ವ ಸಂಗ್ರಹವಾಗಿತ್ತು. ಪ್ರಸಕ್ತ ಸಾಲಿನ ನಿಗದಿತ ಗುರಿ ಮುಟ್ಟುವ ಉದ್ದೇಶದಿಂದ ಮದ್ಯ ತಯಾರಿಕಾ ಘಟಕಗಳು (ಐಎಂಎಲ್ ಘಟಕಗಳು, ಬ್ರುವರಿ, ವೈನರಿಗಳು, ಮೈಕ್ರೊ ಬ್ರುವರಿ, ಬಾಟ್ಲಿಂಗ್) ಮತ್ತು ಮದ್ಯ ಮಾರಾಟಗಾರರ (ಸಿ.ಎಲ್–1ರಿಂದ 17) ಸನ್ನದು ಮತ್ತು ಸನ್ನದು ನವೀಕರಣ ಶುಲ್ಕವನ್ನು ಶೇ 100ರಷ್ಟು ಹೆಚ್ಚಿಸಿ ಅಬಕಾರಿ ಇಲಾಖೆಯು ಮೇ 15ರಂದು ಕರಡು ಅಧಿಸೂಚನೆ ಹೊರಡಿಸಿತ್ತು. ಅದನ್ನು ಜುಲೈ 1ರಿಂದ ಜಾರಿಗೊಳಿಸಲು ನಿರ್ಧರಿಸಿತ್ತು. ಆದರೆ ಅದಕ್ಕೆ ಮದ್ಯ ಉದ್ಯಮಿಗಳು, ಮದ್ಯ ಮಾರಾಟಗಾರರಿಂದ ವ್ಯಾಪಕ ವಿರೋಧ ಮತ್ತು ಆಕ್ಷೇಪಣೆಗಳು ವ್ಯಕ್ತವಾದವು. ಇದೆಲ್ಲದರ ಪರಿಣಾಮ ಸರ್ಕಾರವು ಸನ್ನದು ಮತ್ತು ಸನ್ನದು ನವೀಕರಣ ಶುಲ್ಕವನ್ನು ಶೇ 100ರ ಬದಲಿಗೆ ಶೇ 50ರಷ್ಟು ಹೆಚ್ಚಿಸಿ ಜೂನ್ 23ರಂದು ಅಂತಿಮ ಅಧಿಸೂಚನೆ ಹೊರಡಿಸಿದ್ದು, ಅದು ಜುಲೈ 1ರಿಂದ ಜಾರಿಗೆ ಬಂದಿದೆ.

'ಉದ್ಯಮ ಸ್ನೇಹಿ ವಾತಾವರಣವಿಲ್ಲ': 'ರಾಜ್ಯದಲ್ಲಿ ಮದ್ಯ ತಯಾರಿಕೆಗೆ ಉದ್ಯಮ ಸ್ನೇಹಿ ವಾತಾವರಣ ಇಲ್ಲ. ಪ್ರತಿ ಹಂತದಲ್ಲೂ ಅಡಚಣೆಗಳಿವೆ. ಮದ್ಯ ಬೆಲೆ ನಿಗದಿ ಪಡಿಸುವ ವ್ಯವಸ್ಥೆಯೂ ಸರಿಯಿಲ್ಲ. ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಬೆಲೆ ನಿಗದಿ ಆಗುತ್ತಿಲ್ಲ. ಎಥೆನಾಲ್ ಅನ್ನು ಪೆಟ್ರೋಲ್ ಮತ್ತು ಡೀಸೆಲ್‌ಗೆ ಮಿಶ್ರಣ ಮಾಡಲು ಆರಂಭಿಸಿದ ಮೇಲೆ 'ಸ್ಪಿರಿಟ್' ಬೆಲೆ ಗಗನಕ್ಕೇರಿದೆ. ಅಂತೆಯೇ ಇತರ ಕಚ್ಚಾ ಸಾಮಗ್ರಿಗಳ ಬೆಲೆಯೂ ಏರಿಕೆಯಾಗಿದೆ. ಹೀಗಾಗಿ ಮದ್ಯ ತಯಾರಿಕಾ ವೆಚ್ಚ ಸರಿದೂಗಿಸುವುದು ಕಷ್ಟವಾಗುತ್ತಿದೆ. ಅದರ ಜತೆಗೆ ಸರ್ಕಾರ ಸನ್ನದು ಶುಲ್ಕ, ಸನ್ನದು ನವೀಕರಣ ಶುಲ್ಕ, ಹೆಚ್ಚುವರಿ ಅಬಕಾರಿ ತೆರಿಗೆಗಳನ್ನು ಭಾರಿ ಪ್ರಮಾಣದಲ್ಲಿ ಏರಿಸುವ ಮೂಲಕ ನಮಗೆ ಇನ್ನಷ್ಟು ಸಂಕಷ್ಟ ಮತ್ತು ಸವಾಲುಗಳನ್ನು ತಂದೊಡ್ಡುತ್ತಿದೆ' ಎನ್ನುತ್ತಾರೆ 'ದಿ ಕರ್ನಾಟಕ ಬ್ರುವರ್ಸ್ ಆ್ಯಂಡ್ ಡಿಸ್ಟಿಲ್ಲರ್ಸ್ ಅಸೋಸಿಯೇಷನ್'ನ (ಕೆಬಿಡಿಎ) ಅಧ್ಯಕ್ಷ ಅರುಣ್ ಕುಮಾರ್ ಪಾರಸ.

ರಾಜ್ಯದಲ್ಲಿ 32 ಐಎಂಎಲ್ ತಯಾರಿಕಾ ಘಟಕಗಳು, 13 ಬ್ರುವರಿಗಳು, 23 ವೈನರಿಗಳು ಮತ್ತು 75 ಮೈಕ್ರೊಬ್ರುವರಿಗಳು ಸೇರಿ ಒಟ್ಟು 143 ಮದ್ಯ ತಯಾರಿಕಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳ ವಾರ್ಷಿಕ ವಹಿವಾಟು ಇರುವುದೇ ಅಂದಾಜು ₹ 6,000 ಕೋಟಿ. ಆದರೆ ಇವುಗಳ ಉತ್ಪನ್ನದಿಂದ ಸರ್ಕಾರ ಕಳೆದ ವರ್ಷ ₹35,530 ಕೋಟಿ ಆದಾಯ ಸಂಗ್ರಹಿಸಿತ್ತು. ಈ ವರ್ಷ ₹ 40,000 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಹೀಗೆ ಸರ್ಕಾರಕ್ಕೆ ಪ್ರತಿ ವರ್ಷ ಹೆಚ್ಚು ಆದಾಯ ನೀಡುತ್ತಿರುವ ಉದ್ಯಮಕ್ಕೆ ಉದ್ಯಮ ಸ್ನೇಹಿ ವಾತಾವರಣ, ಅನುಕೂಲಗಳನ್ನು ಮಾಡಿಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಆದರೆ ಹಾಗೆ ಆಗಿಲ್ಲ ಎಂದು ಕೆಬಿಡಿಎ ಪ್ರಧಾನ ಕಾರ್ಯದರ್ಶಿ ಶಿವಲಿಂಗಯ್ಯ ವಿಷಾದಿಸುತ್ತಾರೆ.

ತೆರಿಗೆ, ಹೆಚ್ಚುವರಿ ತೆರಿಗೆಯದ್ದೇ ಸಿಂಹಪಾಲು: ಮದ್ಯದ ಮಾರಾಟ ದರ (ಎಂಆರ್‌ಪಿ) ನಿಗದಿಪಡಿಸುವ ಅಧಿಕಾರ ಇರುವುದು ಸರ್ಕಾರದ ಬಳಿ. ಉದ್ದಿಮೆದಾರರ ಮೂಲ ಘೋಷಿತ ದರದ (ಡಿ.ಪಿ) ಮೇಲೆ ಸರ್ಕಾರ ಅಬಕಾರಿ ಸುಂಕ (ಪ್ರತಿ ಬಲ್ಕ್ ಲೀಟರ್‌ಗೆ ₹ 50), ಹೆಚ್ಚುವರಿ ಅಬಕಾರಿ ಸುಂಕ, ಮಾರಾಟಗಾರರ ಮಾರ್ಜಿನ್ (ಶೇ 10), ಕರ್ನಾಟಕ ರಾಜ್ಯ ಪಾನೀಯ ನಿಗಮದ (ಕೆಎಸ್‌ಬಿಸಿಎಲ್) ಕಮಿಷನ್ (ಶೇ 0.5) ಸೇರಿಸಿ ಎಂಆರ್‌ಪಿ ನಿಗದಿಪಡಿಸುತ್ತದೆ. ಇದರಿಂದಾಗಿ ರಾಜ್ಯದಲ್ಲಿ ಮದ್ಯವು ಗ್ರಾಹಕರ ಕೈಗೆ ಬರುವಷ್ಟರಲ್ಲಿ ತುಟ್ಟಿ ಆಗುತ್ತಿದೆ.

ರಾಜ್ಯದಲ್ಲಿ ತಿಂಗಳಿಗೆ ಸರಾಸರಿ 60 ಲಕ್ಷ ಬಾಕ್ಸ್‌ನಷ್ಟು ಮದ್ಯ ಮಾರಾಟವಾಗುತ್ತಿದೆ. ಇವುಗಳಿಗೆ, ವಿಭಿನ್ನ 16 ಸ್ಲ್ಯಾಬ್‌ಗಳ ಅಡಿಯಲ್ಲಿ ಅಬಕಾರಿ ಇಲಾಖೆ ದರದ ಮಿತಿಯನ್ನು ನಿಗದಿಪಡಿಸಿ, ಅದಕ್ಕೆ ತಕ್ಕಂತೆ ಹೆಚ್ಚುವರಿ ತೆರಿಗೆಯನ್ನು ವಿಧಿಸುತ್ತಿದೆ. ಉದ್ದಿಮೆದಾರರು ಘೋಷಿಸಿಕೊಳ್ಳುವ ಮೂಲ ದರದಲ್ಲಿ ಏರಿಳಿತವಾದರೆ, ಅವರ ಉತ್ಪನ್ನಗಳ ಸ್ಲ್ಯಾಬ್‌ಗಳಲ್ಲೂ ಏರಿಳಿತವಾಗುತ್ತದೆ.

ಈ ಪೈಕಿ 2ನೇ ಸ್ಲ್ಯಾಬ್‌ನ ವ್ಯಾಪ್ತಿಗೆ ಬರುವ ಮದ್ಯವೇ ಸುಮಾರು 35 ಲಕ್ಷ ಬಾಕ್ಸ್‌ನಷ್ಟು ಮಾರಾಟವಾಗುತ್ತಿದೆ. ಈ ಸ್ಲ್ಯಾಬ್‌ನ ದರಪಟ್ಟಿಯನ್ನು ಗಮನಿಸುವುದಾದರೆ, ಡಿಸ್ಟಿಲರಿಗಳು 90 ಎಂ.ಎಲ್ ಬಾಟಲಿಗಳ ಮದ್ಯದ ಒಂದು ಪೆಟ್ಟಿಗೆಗೆ (ಒಟ್ಟು 8.64 ಲೀಟರ್) ₹520 ದರವನ್ನು ಘೋಷಿಸಿಕೊಂಡರೆ, ಅದಕ್ಕೆ ₹432 ಅಬಕಾರಿ ಸುಂಕ (ಇ.ಡಿ), ₹3,170 ಹೆಚ್ಚುವರಿ ಅಬಕಾರಿ ಸುಂಕ (ಪ್ರತಿ ಬಲ್ಕ್ ಲೀಟರ್‌ಗೆ ₹ 367), ಕೆಎಸ್‌ಬಿಸಿಎಲ್ ಕಮಿಷನ್ ₹20.61, ಮಾರಾಟಗಾರರ ಮಾರ್ಜಿನ್ ₹414.35 ಸೇರಿ 96 ಬಾಟಲಿಗಳ ಮದ್ಯದ ಪೆಟ್ಟಿಗೆಯು ಅಂತಿಮವಾಗಿ ಗ್ರಾಹಕರ ಕೈಗೆ ಸೇರುವ ಹೊತ್ತಿಗೆ ಬೆಲೆ ₹4,799.76 ಆಗಿರುತ್ತದೆ. ಅಂದರೆ ಪ್ರತಿ 90 ಎಂ.ಎಲ್ ಬಾಟಲಿ ಮದ್ಯಕ್ಕೆ ಸುಮಾರು ₹50 ದರ ನಿಗದಿಯಾಗುತ್ತದೆ. ಇಲ್ಲಿ ಮದ್ಯದ ಉದ್ಯಮಿಗಳು ಇಡೀ ಪೆಟ್ಟಿಗೆಗೆ ಅನ್ವಯವಾಗುವಂತೆ ಮೂಲ ದರ ಘೋಷಿಸಿಕೊಂಡರೆ, ಸರ್ಕಾರ ಇ.ಡಿ ಮತ್ತು ಎ.ಇ.ಡಿಯನ್ನು ಪ್ರತಿ ಬಲ್ಕ್ ಲೀಟರ್‌ಗೆ ಅನ್ವಯವಾಗುವಂತೆ ವಿಧಿಸುತ್ತದೆ.

ಅಂದರೆ, ಇಲ್ಲಿ ಸರ್ಕಾರ ಮಾಡುವ ಖರ್ಚು ಅತ್ಯಲ್ಪ. ಆದರೆ ಅದಕ್ಕೆ ಬರುವ ಆದಾಯ ಹಿಮಾಲಯದಷ್ಟು. ಉದ್ದಿಮೆದಾರರದ್ದು ಇದಕ್ಕೆ ವ್ಯತಿರಿಕ್ತ ಪರಿಸ್ಥಿತಿ. ಘಟಕ ಸ್ಥಾಪನೆಗೆ ಬಂಡವಾಳ ಹೂಡಿ, ಜಾಗ ಖರೀದಿಸಿ ಅಥವಾ ಗುತ್ತಿಗೆಗೆ ಪಡೆದು, ಕಟ್ಟಡ ನಿರ್ಮಿಸಿ, ಮೂಲ ಸೌಕರ್ಯ ಕಲ್ಪಿಸಿ, ಕಚ್ಚಾ ಪದಾರ್ಥಗಳು, ಕಾರ್ಮಿಕರ ವೇತನ, ಸಾರಿಗೆ, ಇಂಧನ, ವಿದ್ಯುತ್ ವೆಚ್ಚ ಭರಿಸಿ, ನಿಯಮಗಳಿಗೆ ಅನ್ವಯವಾಗಿ, ಸರ್ಕಾರದ ನಿಗಾದಡಿಯೇ ಮದ್ಯ ತಯಾರಿಸಲಾಗುತ್ತದೆ. ಆದರೆ ಈ ಉದ್ದಿಮೆದಾರರಿಗೆ ಸಿಗುವುದು ಮಾತ್ರ ಅತ್ಯಲ್ಪ ಆದಾಯ ಎಂದು ಅವರು ಕಳವಳ ವ್ಯಕ್ತಪಡಿಸುತ್ತಾರೆ.

ದರಪಟ್ಟಿ ಪರಿಷ್ಕರಣೆಗೆ ಸಿಗದ ಸ್ಪಂದನೆ: 'ನಮ್ಮ ಆದಾಯದಲ್ಲಿ ಸಿಂಹಪಾಲು ಸರ್ಕಾರಕ್ಕೆ ಸಿಗುತ್ತಿದ್ದರೂ, ಅದು ಉದ್ಯಮದ ಬಗ್ಗೆ ನಿರ್ಲಕ್ಷ್ಯ ಮುಂದುವರಿಸಿದೆ. ಮದ್ಯ ತಯಾರಕರು ತಮ್ಮ ಬ್ರ್ಯಾಂಡ್‌ನ ಪಾನೀಯಗಳಿಗೆ ಘೋಷಿಸಿಕೊಳ್ಳಬಹುದಾದ ದರಕ್ಕೆ (ಡಿ.ಪಿ) ಸಂಬಂಧಿಸಿದಂತೆ ಅಬಕಾರಿ ಇಲಾಖೆಯು 16 'ಸ್ಲ್ಯಾಬ್'ಗಳನ್ನು (ದರ ಪಟ್ಟಿ) ರೂಪಿಸಿದೆ. ಪ್ರತಿ ಸ್ಲ್ಯಾಬ್‌ನ ದರಪಟ್ಟಿಯನ್ನು ಪ್ರತಿ ವರ್ಷ ಕನಿಷ್ಠ ₹100ರಷ್ಟು ಪರಿಷ್ಕರಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. 2016–17ರಿಂದ ನಿರಂತರವಾಗಿ ಈ ಬೇಡಿಕೆಯನ್ನು ಸರ್ಕಾರದ ಮುಂದಿಡುತ್ತಾ ಬಂದಿದ್ದೇವೆ, ಆದರೂ ಸ್ಪಂದನೆ ಸಿಗುತ್ತಿಲ್ಲ' ಎಂದು 'ಯುನಿಸ್ಪಿಲ್ ಆಲ್ಕೊಬ್ಲೆಂಡ್ಸ್ ಲಿಮಿಟೆಡ್'ನ ನಿರ್ದೇಶಕರೂ ಆಗಿರುವ ಅರುಣ್ ಕುಮಾರ್ ಪಾರಸ ಬೇಸರ ವ್ಯಕ್ತಪಡಿಸುತ್ತಾರೆ.

> ಅಬಕಾರಿ ಇಲಾಖೆಯಲ್ಲಿ ಡಿಜಿಟಲ್ ವ್ಯವಸ್ಥೆ ಜಾರಿಗೆ ತಂದಿದ್ದು, 5 ವರ್ಷಗಳಿಗೆ ಒಮ್ಮೆ ಆನ್‌ಲೈನ್ ಮೂಲಕ ಸನ್ನದು ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಉಳಿದಂತೆ ಆಡಳಿತ ಸುಧಾರಣಾ ಆಯೋಗ ನೀಡಿದ ಶಿಫಾರಸುಗಳನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ
>
> **ಆರ್.ಬಿ.ತಿಮ್ಮಾಪುರ,** ಅಬಕಾರಿ ಸಚಿವ

'ವರ್ಷದಿಂದ ವರ್ಷಕ್ಕೆ ಏರಿಕೆಯಾಗುವ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಪ್ರತಿ ವರ್ಷ 'ದರ ಪಟ್ಟಿ'ಯನ್ನು ಪರಿಷ್ಕರಿಸಿದರೆ, ಉದ್ದಿಮೆದಾರರು ಉಳಿದುಕೊಳ್ಳುತ್ತಾರೆ. ಈಗಾಗಲೇ ಹಲವು ಉದ್ದಿಮೆಗಳು ಸಂಕಷ್ಟಕ್ಕೆ ಸಿಲುಕಿವೆ. ಈಗಲೂ ಸರ್ಕಾರ ಕೈಹಿಡಿಯದಿದ್ದರೆ ಎರಡು– ಮೂರು ವರ್ಷಗಳಲ್ಲಿ ಕೆಲ ಉದ್ದಿಮೆಗಳು ಬಾಗಿಲು ಮುಚ್ಚುತ್ತವೆ. ಅವುಗಳನ್ನು ಅವಲಂಬಿಸಿರುವವರು ಬೀದಿಗೆ ಬೀಳುತ್ತಾರೆ' ಎಂದು ಜೆ.ಪಿ. ಡಿಸ್ಟಿಲರಿಸ್ ಕಂಪನಿಯ ಅಧ್ಯಕ್ಷರಾದ ಜೆ.ಪಿ.ಸುಧಾಕರ್ ನೋವಿನಿಂದ ಹೇಳುತ್ತಾರೆ.

ಗಗನಕ್ಕೇರುತ್ತಿರುವ ಕಚ್ಚಾ ಸಾಮಗ್ರಿ ಬೆಲೆ: '2016–17ರಲ್ಲಿ ಈ ಉದ್ಯಮದಿಂದ ಸರ್ಕಾರ ₹16,483 ಕೋಟಿ ರಾಜಸ್ವ ಸಂಗ್ರಹಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಅಂದರೆ 9 ವರ್ಷಗಳಲ್ಲಿ ಸ್ಪಿರಿಟ್ ಬೆಲೆಯಲ್ಲಿ ಗಣನೀಯ ಏರಿಕೆಯಾಗಿದೆ. ಇತರ ಕಚ್ಚಾ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಬಾಟ್ಲಿಂಗ್, ಕಾರ್ಟನ್ ಬಾಕ್ಸ್, ಟೇಪ್, ಗಮ್ ಸೇರಿದಂತೆ ಪ್ಯಾಕಿಂಗ್ ಪದಾರ್ಥಗಳು, ಕಾರ್ಮಿಕರ ವೇತನ, ವಿದ್ಯುತ್, ಇಂಧನ, ಸಾರಿಗೆ ವೆಚ್ಚ ಎಲ್ಲವೂ ಅತ್ಯಧಿಕವಾಗಿದೆ. ಅಲ್ಲದೆ ಸನ್ನದು ಶುಲ್ಕ ಸಹ ಹೆಚ್ಚಾಗಿದೆ. ಅದರಿಂದಾಗಿ ಉತ್ಪಾದನಾ ವೆಚ್ಚದಲ್ಲಿ ಗಣನೀಯ ಏರಿಕೆಯಾಗಿದೆ. ಈ 9ರಿಂದ 10 ವರ್ಷಗಳ ಅವಧಿಯಲ್ಲಿ ಸರ್ಕಾರ ತನ್ನ ಆದಾಯವನ್ನು ಎರಡು ಪಟ್ಟಿಗಿಂತಲೂ ಹೆಚ್ಚು ಮಾಡಿಕೊಂಡಿದೆ. ಆದರೆ ನಾವು ಉತ್ಪಾದನಾ ವೆಚ್ಚ ಸರಿದೂಗಿಸಲೇ ಪರದಾಡುತ್ತಿದ್ದೇವೆ' ಎಂದು ಅವರು ವಿವರಿಸುತ್ತಾರೆ.

ಉತ್ಪಾದನಾ ವೆಚ್ಚವನ್ನು ಆಧರಿಸಿ, 2016–17ರಲ್ಲಿ 8.64 ಬಲ್ಕ್ ಲೀಟರ್‌ಗಳಷ್ಟು (ಪೆಟ್ಟಿಗೆ) ಮದ್ಯ ತಯಾರಿಕೆಗೆ (ಮೊದಲ ಸ್ಲ್ಯಾಬ್) ಸರಾಸರಿ ₹407 ತಗಲುತ್ತಿತ್ತು. ಆಗ ಪ್ರಮುಖ ಕಚ್ಚಾ ಪದಾರ್ಥವಾದ ಸ್ಪಿರಿಟ್‌ನ ಬೆಲೆ ಒಂದು ಬಲ್ಕ್ ಲೀಟರ್‌ಗೆ ₹49 ಇತ್ತು, ಅದೀಗ ₹70ಕ್ಕೆ ಏರಿದೆ. ಕಾರ್ಮಿಕರ ವೇತನ ಮೂರು ಪಟ್ಟು ಏರಿಕೆಯಾಗಿದೆ. ವಿದ್ಯುತ್ ಬೆಲೆ, ಇಂಧನ, ಸಾರಿಗೆ ವೆಚ್ಚ ಮತ್ತು ಇತರ ಸೇವೆಗಳಲ್ಲಿ ಹೆಚ್ಚಳವಾಗಿದೆ. ಇದೆಲ್ಲರ ಪರಿಣಾಮ ಒಂಬತ್ತು ವರ್ಷಗಳಲ್ಲಿ, ಅಂದರೆ 2024–25ರ ವೇಳೆಗೆ ಮದ್ಯದ ತಯಾರಿಕಾ ವೆಚ್ಚ ಸರಾಸರಿ ₹524ಕ್ಕೆ ಏರಿಕೆಯಾಗಿದೆ. ಅಂದರೆ ಒಂದು ಪೆಟ್ಟಿಗೆಗೆ ₹ 116ರಷ್ಟು ಏರಿಕೆ ಆದಂತಾಗಿದೆ. ಆದರೆ ರಾಜ್ಯ ಸರ್ಕಾರ ಮಾತ್ರ ಅದಕ್ಕೆ ತಕ್ಕಂತೆ 'ದರ ಪಟ್ಟಿ'ಯ ಸ್ಲ್ಯಾಬ್ ಅನ್ನು ಪರಿಷ್ಕರಿಸುವ ಗೋಜಿಗೆ ಹೋಗಿಲ್ಲ. ಇದರ ಪರಿಣಾಮ ಪ್ರತಿ ವರ್ಷ ಉದ್ದಿಮೆಯ ಆದಾಯ ಇಳಿಕೆಯಾಗುತ್ತಿದ್ದು, ಉತ್ಪಾದನಾ ವೆಚ್ಚ ಸರಿದೂಗಿಸಲೂ ಕಷ್ಟವಾಗುತ್ತಿದೆ ಎಂದು ಅರುಣ್ ಕುಮಾರ್ ಅಂಕಿ ಅಂಶಗಳ ಸಹಿತ ಮಾಹಿತಿ ನೀಡುತ್ತಾರೆ.

'ಮೂಗಿಗೆ ತುಪ್ಪ ಸವರಿದೆ': 'ಕೆಲ ತಿಂಗಳ ಹಿಂದೆಯಷ್ಟೇ ಸರ್ಕಾರ ನಮ್ಮ ಮೂಗಿಗೆ ತುಪ್ಪ ಸವರಿದೆ. ಈ ವರ್ಷದ ಮೇ 13ರಂದು 16 ಸ್ಲ್ಯಾಬ್‌ಗಳ ಪೈಕಿ ಮೊದಲ ನಾಲ್ಕು ಸ್ಲ್ಯಾಬ್‌ಗಳ ದರಪಟ್ಟಿಯಲ್ಲಿ ಕೇವಲ ₹20 ಹೆಚ್ಚಿಸಿ, ಪರಿಷ್ಕೃತ ಪಟ್ಟಿಯನ್ನು ಪ್ರಕಟಿಸಿದೆ. ಆದರೆ ಇದು ದಿನೇ ದಿನೇ ಏರುತ್ತಿರುವ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಇಲ್ಲ. ಅಲ್ಲದೆ ಉದ್ಯಮದ ಉಳಿವಿಗಾಗಲಿ ಅಥವಾ ಬೆಳವಣಿಗೆಗಾಗಲಿ ಸಮರ್ಪಕವಾಗಿಲ್ಲ. ಇದರಿಂದ ಉದ್ಯಮ ಸಂಕಷ್ಟ ನಿವಾರಣೆ ಆಗುವುದಿಲ್ಲ. ಹೀಗಾಗಿ ಇನ್ನೂ ₹50 ಆದಾರೂ ಹೆಚ್ಚಿಸಬೇಕು' ಎಂದು ಉದ್ಯಮಿ ಸುಧಾಕರ್ ಮನವಿ ಮಾಡುತ್ತಾರೆ.

ಕಾನೂನು ಬಾಹಿರ ಮದ್ಯ ಮಾರಾಟವನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರ 'ಅಬಕಾರಿ ಭದ್ರತಾ ಚೀಟಿ' ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಆದರೆ ಈ ಚೀಟಿಗೆ ತಗಲುವ ವೆಚ್ಚವನ್ನು ಇಲಾಖೆಯು ಡಿಸ್ಟಿಲರಿಗಳ ಮೇಲೆಯೇ ಹಾಕುತ್ತಿದೆ. ಇದು ನಮ್ಮ ನಷ್ಟವನ್ನು ಹೆಚ್ಚಿಸುತ್ತಿದೆ. ಅದನ್ನು ತಪ್ಪಿಸಲು, 'ಅಬಕಾರಿ ಭದ್ರತಾ ಚೀಟಿಯ' ವೆಚ್ಚವನ್ನು ಮದ್ಯ ಪಾನೀಯಗಳ ಗರಿಷ್ಠ ಚಿಲ್ಲರೆ ಬೆಲೆಯನ್ನು ನಿಗದಿಪಡಿಸುವಾಗ ಇನ್‌ವಾಯ್ಸ್‌ನಲ್ಲಿ ಸೇರಿಸಿ ಎಂದು ಹಲವು ವರ್ಷಗಳಿಂದ ಬೇಡಿಕೆ ಸಲ್ಲಿಸುತ್ತಿದ್ದೇವೆ. ಅದಕ್ಕೂ ಸರ್ಕಾರ ಒಪ್ಪುತ್ತಿಲ್ಲ' ಎಂದು ಮದ್ಯ ಉದ್ಯಮಿಗಳು ಬೇಸರ ವ್ಯಕ್ತಪಡಿಸುತ್ತಾರೆ. ಈ ಕಾರ್ಯಕ್ಕಾಗಿಯೇ ಪ್ರಸ್ತುತ ಪ್ರತಿ ಬಾಟಲಿಗೆ ಅಂದಾಜು 40 ಪೈಸೆ ಖರ್ಚು ಆಗುತ್ತಿದ್ದು, ಪೆಟ್ಟಿಗೆಗೆ ಸರಾಸರಿ ₹35 ವೆಚ್ಚ ಆಗುತ್ತಿದೆ. ಈ ವೆಚ್ಚವನ್ನು ಘೋಷಿತ ಬೆಲೆಯಲ್ಲಿ ತೋರಿಸದೇ, ಪ್ರತ್ಯೇಕ ಕಾಂಪೊನೆಂಟ್ ಆಗಿ ಇನ್‌ವಾಯ್ಸ್‌ನಲ್ಲಿ ಸೇರಿಸಿದರೆ ಸ್ವಲ್ಪವಾದರೂ ಅನುಕೂಲವಾಗುತ್ತದೆ ಎನ್ನುತ್ತಾರೆ ಅವರು.

'ನಮ್ಮ ಹಲವು ವರ್ಷಗಳ ಈ ಬೇಡಿಕೆಗೆ ಸ್ಪಂದಿಸಿದ್ದ ಸರ್ಕಾರ 2023ರ ಮೇ 22ರಂದು ಅದಕ್ಕೆ ಪೂರಕವಾಗಿ ಆದೇಶವನ್ನೂ ಹೊರಡಿಸಿತ್ತು. ಆದರೆ ಒಂದೇ ತಿಂಗಳಲ್ಲಿ (2023ರ ಜೂನ್ 24) ಆ ಆದೇಶವನ್ನು ಹಿಂಪಡೆದು ಉಲ್ಟಾ ಹೊಡೆಯಿತು' ಎಂದು ಬೇಸರ ವ್ಯಕ್ತಪಡಿಸುವ ಅವರು, 'ಸರ್ಕಾರ ಈ ವಿಷಯವನ್ನು ಮರು ಪರಿಶೀಲಿಸಬೇಕು' ಎಂದು ಮನವಿ ಮಾಡುತ್ತಾರೆ.

'ಸರ್ಕಾರದ ಹಸ್ತಕ್ಷೇಪ ಕಡಿಮೆಯಾಗಲಿ': ಸರ್ಕಾರ ಮುಖ್ಯವಾಗಿ 'ಸ್ಪಿರಿಟ್' ದುರುಪಯೋಗ ಆಗದಂತೆ ಎಚ್ಚರವಹಿಸಬೇಕು ಹಾಗೂ ಮದ್ಯದ ಗುಣಮಟ್ಟದ ಮೇಲೆ ನಿಗಾವಹಿಸಬೇಕು. ಜತೆಗೆ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು ಎಂಬುದು ಕೆಬಿಡಿಎಯ ಪ್ರಮುಖ ಬೇಡಿಕೆಯಾಗಿದೆ.

'ಎಲ್ಲದರಲ್ಲೂ ಸರ್ಕಾರ ಮೂಗು ತೂರಿಸುತ್ತಿರುವುದರಿಂದ ಮದ್ಯ ಉದ್ಯಮ ನರಳುತ್ತಿದೆ. ಇತರ ಉದ್ಯಮಗಳಿಗೆ ಇರುವಂತೆ ಇದಕ್ಕೆ ಸ್ವಾತಂತ್ರ್ಯ, ಸ್ವಾಯತ್ತೆ ಏನೂ ನೀಡಿಲ್ಲ. ಘಟಕದಲ್ಲಿ ಸಣ್ಣ ರಿಪೇರಿ ಕೆಲಸ, ಮಾರ್ಪಾಡು, ಹೊಸ ಉಪಕರಣಗಳ ಖರೀದಿ, ಹೆಚ್ಚುವರಿ ಬಾಟ್ಲಿಂಗ್ ಮಾಡಬೇಕು ಎಂದರೂ ಸರ್ಕಾರದ ಅನುಮತಿ ಪಡೆಯಬೇಕು. ಅಷ್ಟೇ ಏಕೆ ಘಟಕದಲ್ಲಿ ಮಳೆ ನೀರು ಸೋರುತ್ತಿದ್ದರೆ ಅದನ್ನು ಸರಿಪಡಿಸುವುದಕ್ಕೂ ಮತ್ತು ಸುಣ್ಣ–ಬಣ್ಣ ಬಳಿಸುವುದಕ್ಕೂ ಇಲಾಖೆ ಒಪ್ಪಿಗೆ ಪಡೆಯಬೇಕು. ಇದಕ್ಕೆಲ್ಲ ಫೈಲ್ ಹಿಡಿದು ತಿಂಗಳುಗಟ್ಟಲೆ ಸರ್ಕಾರಿ ಕಚೇರಿಯ ಮೆಟ್ಟಿಲುಗಳನ್ನು ಹತ್ತಬೇಕು. ಈ ವೇಳೆ ಸಾಕಷ್ಟು ಖರ್ಚು ಸಹ ಆಗುತ್ತದೆ. ವ್ಯವಸ್ಥೆ ಹೀಗಿದ್ದರೆ ಅದನ್ನು ಉದ್ಯಮ ಸ್ನೇಹಿ ಎನ್ನಲು ಆಗುತ್ತದೆಯೇ' ಎಂದು ಪಾರಸ ಮತ್ತು ಸುಧಾಕರ್ ಪ್ರಶ್ನಿಸುತ್ತಾರೆ.

ಇನ್ನು ಸನ್ನದು ನವೀಕರಣ ಸೇರಿದಂತೆ ಕೆಲ ಪ್ರಕ್ರಿಯೆಗಳನ್ನು ಸರಳಗೊಳಿಸುವ ನಿಟ್ಟಿನಲ್ಲಿ ಸಣ್ಣ ಪ್ರಮಾಣದ ಸುಧಾರಣೆ ಆಗಿದೆ. ಇದರ ಜತೆಗೆ ಇನ್ನಷ್ಟು ಸುಧಾರಣೆಗಳೂ ಆಗಬೇಕಿವೆ ಎನ್ನುತ್ತಾರೆ ಅವರು.


ಅಲ್ಲದೆ ಪ್ರತಿ ಮದ್ಯ ತಯಾರಿಕಾ ಘಟಕಕ್ಕೆ ಎರಡು ಕೀಲಿ ಕೈಗಳು ಇರುತ್ತವೆ. ಅದರಲ್ಲಿ ಒಂದು ಅಬಕಾರಿ ಇಲಾಖೆಯ ನಿಯೋಜಿತ ಅಧಿಕಾರಿ ಬಳಿ ಇದ್ದರೆ, ಇನ್ನೊಂದು ಉದ್ಯಮದವರ ಬಳಿ ಇರುತ್ತದೆ. ಎಲ್ಲವೂ ಸರ್ಕಾರದ ನಿಯಂತ್ರಣ ಮತ್ತು ಕಣ್ಗಾವಲಿನಲ್ಲಿ ಪಾರದರ್ಶಕವಾಗಿ ನಡೆಯುತ್ತಿದೆ. ಆದರೂ ಸರ್ಕಾರಿ ವ್ಯವಸ್ಥೆ ಈ ಉದ್ಯಮವನ್ನು ಶಂಕೆಯಿಂದ ನೋಡುವುದನ್ನು ಬಿಟ್ಟಿಲ್ಲ ಎಂದು ಅವರು ಹೇಳುತ್ತಾರೆ.

ಉದ್ಯಮಕ್ಕೀಗ ಗುತ್ತಿಗೆಯೇ ಆಸರೆ: ಕಚ್ಚಾ ಸಾಮಗ್ರಿಗಳ ದರ ಹೆಚ್ಚಳ, ತಯಾರಿಕಾ ವೆಚ್ಚದಲ್ಲಿ ಏರಿಕೆ ಮತ್ತು ಕಾಲಕಾಲಕ್ಕೆ ದರಪಟ್ಟಿ (ಸ್ಲ್ಯಾಬ್‌ಗಳಲ್ಲಿ) ಪರಿಷ್ಕರಣೆ ಆಗದಿರುವುದರಿಂದ ರಾಜ್ಯದ ಬಹುತೇಕ ಐಎಂಎಲ್ ತಯಾರಿಕಾ ಘಟಕಗಳು ಸಂಕಷ್ಟಕ್ಕೆ ಸಿಲುಕಿವೆ. ತಿಂಗಳಿಗೆ ತಮ್ಮ ಬ್ರ್ಯಾಂಡ್‌ಗಳ ಅಂದಾಜು 3 ಲಕ್ಷ ಪೆಟ್ಟಿಗೆಯಷ್ಟು ಮದ್ಯ ತಯಾರಿಸುತ್ತಿದ್ದ ಘಟಕಗಳು ಈಗ 15,000ದಿಂದ 20,000 ಪೆಟ್ಟಿಗೆಗೆ ಇಳಿದಿವೆ. ಹೀಗಾಗಿ ಹಲವು ಘಟಕಗಳು 'ಕಾಂಟ್ರಾಕ್ಟ್ ಬಾಟ್ಲಿಂಗ್' ವ್ಯವಸ್ಥೆ ಮಾಡಿಕೊಂಡಿವೆ. ಅಂದರೆ ಈ ಉದ್ಯಮದ ಘಟಕಗಳು ಪ್ರತಿಷ್ಠಿತ ಕಂಪನಿಗಳಿಗೆ ಅವರ ಬ್ರ್ಯಾಂಡ್ ಮದ್ಯಗಳ 'ಬಾಟ್ಲಿಂಗ್' ಕಾರ್ಯ ಸೇರಿದಂತೆ ಪೂರ್ಣ ಪ್ಯಾಕೇಜ್ ಪ್ರಕ್ರಿಯೆಯನ್ನು ಮಾಡಿಕೊಡುತ್ತಿವೆ ಎಂದು ಪಾರಸ ಹೇಳುತ್ತಾರೆ.

ಪ್ರಸ್ತುತ ರಾಜ್ಯದ 32 ಐಎಂಎಲ್ ತಯಾರಿಕಾ ಘಟಕಗಳ ಪೈಕಿ 10 ಘಟಕಗಳು ಗುತ್ತಿಗೆ ಕಾರ್ಯವನ್ನೇ ಪ್ರಮುಖವಾಗಿ ಅವಲಂಬಿಸಿವೆ. ರಾಜ್ಯದ ಮದ್ಯ ತಯಾರಿಕಾ ಘಟಕಗಳಲ್ಲಿ ಸುಮಾರು 15,000 ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಈ ಉದ್ಯಮವನ್ನು ಲಕ್ಷಾಂತರ ಜನರು ಅವಲಂಬಿಸಿದ್ದಾರೆ. ಈ ಉದ್ಯಮಕ್ಕೆ ಇರುವ ಸಂಕಷ್ಟ ಪರಿಸ್ಥಿತಿ ಮುಂದುವರಿದರೆ ಅವು ಮುಚ್ಚುವ ಸ್ಥಿತಿ ಬರುತ್ತದೆ. ಅವುಗಳ ಅವಲಂಬಿತರು ಬೀದಿಗೆ ಬೀಳುವುದನ್ನು ತಪ್ಪಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ ಎನ್ನುತ್ತಾರೆ ಶಿವಲಿಂಗಯ್ಯ.

ಸನ್ನದು ಶುಲ್ಕ ಸಂಗ್ರಹದಿಂದ ಗಳಿಸಿದ ಆದಾಯ

(₹ ಕೋಟಿಗಳಲ್ಲಿ)



ವಿದೇಶಿ ಮದ್ಯದ ಹೊಡೆತ

ಬ್ರಿಟನ್ ಸೇರಿದಂತೆ ಯುರೋಪಿನಿಂದ ವಿಸ್ಕಿ, ಜಿನ್ ಭಾರತ ಪ್ರವೇಶಿಸುವುದು ಇನ್ನು ಮುಂದೆ ಸುಲಭವಾಗಲಿದೆ. ಬ್ರಿಟನ್ ಜತೆ ಭಾರತ ಮುಕ್ತ ಒಪ್ಪಂದ ಮಾಡಿಕೊಂಡಿರುವುದೇ ಇದಕ್ಕೆ ಕಾರಣ. ಇದರ ಪರಿಣಾಮ ಸ್ಕಾಟ್‌ಲ್ಯಾಂಡ್‌ನ ವಿಸ್ಕಿ, ಜಿನ್ ಅಗ್ಗವಾಗಲಿವೆ. ಭಾರತ– ಬ್ರಿಟನ್ ಜತೆಗಿನ ಮುಕ್ತ ವ್ಯಾಪಾರ ಒಪ್ಪಂದದ ಪ್ರಕಾರ, ಭಾರತವು ಬ್ರಿಟನ್ನಿನ ವಿಸ್ಕಿ ಮತ್ತು ಜಿನ್ ಮೇಲಿನ ಸುಂಕವನ್ನು ಈಗಿರುವ ಶೇ 150ರ ಬದಲು ಶೇ 75ಕ್ಕೆ ತಗ್ಗಿಸಲಿದೆ. ಒಪ್ಪಂದದ ಹತ್ತನೆಯ ವರ್ಷದಲ್ಲಿ ಈ ಸುಂಕದ ಪ್ರಮಾಣವು ಶೇ 40ಕ್ಕೆ ಇಳಿಕೆ ಆಗಲಿದೆ.

ಹೀಗಾದರೆ ಬ್ರಿಟನ್‌ನಿಂದ ಬರುವ ಭಾರತದಲ್ಲಿ ಹೆಸರುವಾಸಿಯಾದ ಜಾನಿವಾಕರ್, ಗ್ಲೆನ್ ಹೆಸರಿನಿಂದ ಆರಂಭವಾಗುವ ಸ್ಕ್ಯಾಚ್ ವಿಸ್ಕಿ, ರಮ್, ಜಿಮ್, ಬಿಯರ್ ಎಲ್ಲದರ ದರವೂ ಕ್ರಮೇಣ ಕಡಿಮೆಯಾಗಲಿದೆ. ಇದು ಸ್ವಂತ ಮನೆಯವರನ್ನು ಉಪವಾಸಕ್ಕೆ ಸಿಲುಕಿಸಿ, ಪಕ್ಕದ ಮನೆಯವರಿಗೆ ಮೃಷ್ಟಾನ್ನ ನೀಡಿದಂತೆ ಆಗುತ್ತದೆ ಎನ್ನುತ್ತಾರೆ ಅಮೃತ್ ಡಿಸ್ಟಿಲರೀಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ರಕ್ಷಿತ್ ಜಗದಾಳೆ.


'ಇದು ಭಾರತದ ಐಎಂಎಲ್ ಉದ್ಯಮಕ್ಕಂತೂ ಭಾರಿ ಹೊಡೆತ ಕೊಡಲಿದೆ. ದೇಶೀಯ ಮದ್ಯದ ಬೆಲೆಗೆ ಸಮವಾಗಿ ಅಥವಾ ಕೊಂಚ ಏರಿಳಿತದ ಬೆಲೆಯಲ್ಲಿ ವಿದೇಶಿ ಮದ್ಯ ಗ್ರಾಹಕರಿಗೆ ದೊರೆತರೆ, ಸಹಜವಾಗಿ ಅವರು ವಿದೇಶಿ ಮದ್ಯದತ್ತಲೇ ಆಕರ್ಷಿತರಾಗುತ್ತಾರೆ. ಕ್ರಮೇಣ ನಮ್ಮ ಉದ್ಯಮಗಳನ್ನು ಬಂದ್ ಮಾಡಬೇಕಾಗುತ್ತದೆ. ಹೀಗಾಗಿ ಸರ್ಕಾರ ದೇಶೀಯ ಮದ್ಯ ಉದ್ಯಮ ಕ್ಷೇತ್ರದ ಹಿತಕಾಯಲು ಅಗತ್ಯ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು' ಎನ್ನುತ್ತಾರೆ ಅವರು.

ರಾಜ್ಯದಲ್ಲಿ ಮದ್ಯ ಉದ್ಯಮದ ಉಳಿವಿಗೆ ಕೆಲ ಬೇಡಿಕೆಗಳನ್ನು ಈಡೇರಿಸುವಂತೆ ಈ ಉದ್ದಿಮೆದಾರರು ಸರ್ಕಾರವನ್ನು ಕೋರಿದ್ದಾರೆ. ಅವು ಕೆಳಕಂಡಂತಿವೆ.

- ಪ್ರಸ್ತುತ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಬಾಟ್ಲಿಂಗ್ ಆಪರೇಷನ್‌ಗೆ ಅವಕಾಶವಿದೆ. ಬೆಳಿಗ್ಗೆ 9ರಿಂದ ರಾತ್ರಿ 8ರವರೆಗೆ ಮದ್ಯವನ್ನು ಹೊರಗೆ ರವಾನಿಸಲು ಅವಕಾಶವಿದೆ. ಹೆಚ್ಚುವರಿ ಅವಧಿಯಲ್ಲಿ ಮದ್ಯ ತಯಾರಿಸಬೇಕು ಎಂದರೆ ಅಬಕಾರಿ ಇಲಾಖೆಯಿಂದ ಅನುಮತಿ ಪಡೆಯಬೇಕು. ಈ ವ್ಯವಸ್ಥೆಯ ಬದಲಿಗೆ ದಿನದ 24 ಗಂಟೆಯೂ ಘಟಕಗಳು ಕಾರ್ಯ ನಿರ್ವಹಿಸಲು ಅವಕಾಶ ದೊರೆಯಬೇಕು.
- ಪ್ರತಿ ವರ್ಷ ಬೆಲೆ ಏರಿಕೆಗೆ ತಕ್ಕಂತೆ ಮದ್ಯದ ಸ್ಲ್ಯಾಬ್‌ಗಳಲ್ಲಿನ ದರಪಟ್ಟಿಯನ್ನು ಪರಿಷ್ಕರಿಸಬೇಕು.
- ಸನ್ನದು ಮತ್ತು ಸನ್ನದು ನವೀಕರಣ ಶುಲ್ಕವನ್ನು ಇಲಾಖೆಯು ಆದಾಯದ ಮೂಲ ಎಂದು ಪರಿಗಣಿಸಬಾರದು. ಅದನ್ನು ಪದೇ ಪದೇ ಪರಿಷ್ಕರಿಸಬಾರದು.
- ಮದ್ಯವನ್ನು ಸಾಗಿಸುವಾಗ ಅಪಘಾತ ಸಂಭವಿಸಿ ಮದ್ಯ ಸೋರಿಕೆ ಅಥವಾ ನಾಶವಾದರೆ ಉದ್ದಿಮೆದಾರರಿಗೆ ಪೂರ್ಣ ನಷ್ಟವಾಗುತ್ತದೆ. ಮದ್ಯ ನಾಶವಾದ ಸಂದರ್ಭದಲ್ಲಿ ಹೆಚ್ಚುವರಿ ಅಬಕಾರಿ ಸುಂಕವನ್ನಾದರೂ ಉದ್ದಿಮೆದಾರರಿಗೆ ಹಿಂದಿರುಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು.
- ಮೈಕ್ರೊ ಬ್ರುವರಿಯಲ್ಲಿ ವಾರ್ಷಿಕ ಉತ್ಪಾದನೆಯಾಗುವ ಶೇ 50ರಷ್ಟು ಮದ್ಯಕ್ಕೆ ಮಾತ್ರ ಅಬಕಾರಿ ಮತ್ತು ಹೆಚ್ಚುವರಿ ಅಬಕಾರಿ ತೆರಿಗೆ ವಿಧಿಸಲಾಗುತ್ತಿದೆ. ಉಳಿದ ಮದ್ಯಕ್ಕೆ ತೆರಿಗೆ ವಿಧಿಸದೆ, ವಿನಾಯಿತಿ ನೀಡಲಾಗುತ್ತಿದೆ. ಆದರೆ ಅದೇ ರೀತಿಯ ವಿನಾಯಿತಿ ಐಎಂಎಲ್ ಮದ್ಯ ತಯಾರಕರಿಗೂ ವಿಸ್ತರಿಸಬೇಕು.

ಅಬಕಾರಿ ಇಲಾಖೆ ಗುರಿ– ಸಾಧನೆ

(₹ ಕೋಟಿಗಳಲ್ಲಿ)



*(ಆಗಸ್ಟ್ ಅಂತ್ಯದ ವೇಳೆಗೆ)

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 28-9-2000

- **ಬಂದ್: ರಾಜ್ಯದಾದ್ಯಂತ ವ್ಯಾಪಕ ಬಂದೋಬಸ್ತ್**

ಬೆಂಗಳೂರು, ಸೆ. 27– ವರನಟ ಡಾ. ರಾಜ್‌ಕುಮಾರ್ ಅಪಹರಣದ ಹಿನ್ನೆಲೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಾಳೆ ನೀಡಿರುವ ಕರ್ನಾಟಕ ಬಂದ್ ಸಂದರ್ಭದಲ್ಲಿ ಯಾವುದೇ ಹಿಂಸಾಚಾರಕ್ಕೆ ಅವಕಾಶ ನೀಡದೆ ಶಾಂತಿ–ಸುವ್ಯವಸ್ಥೆ ಕಾಪಾಡಲು ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಬಂದ್‌ಗೆ ಕರೆ ನೀಡಿರುವ ಚಲನಚಿತ್ರ ವಾಣಿಜ್ಯ ಮಂಡಳಿ, ಅಭಿಮಾನಿ ಸಂಘಗಳಿಗೆ ಬಂದ್ ಸಂದರ್ಭದಲ್ಲಿ ಸಾರ್ವಜನಿಕರನ್ನು ಬಲವಂತವಾಗಿ ಪಾಲ್ಗೊಳ್ಳುವಂತೆ ಮಾಡಬಾರದು ಎಂದು ಹೈಕೋರ್ಟ್ ಆದೇಶ ನೀಡಿದೆ.

75 ವರ್ಷಗಳ ಹಿಂದೆ

ಗುರುವಾರ, 28-9-1950

- **ಕಾಂಗ್ರೆಸ್ ಕಾರ್ಯಕಾರಿ ಸಮಿತಿ ರಚನೆ**

ನವದೆಹಲಿ, ಸೆ. 27– ಕಾಂಗ್ರೆಸ್ ಕಾರ್ಯಕಾರಿ ಸಮಿತಿ ರಚನೆಯ ಕುರಿತು ಮೂರು ದಿನಗಳಿಂದ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರೂ ನೇತೃತ್ವದಲ್ಲಿ ನಡೆದ ಸಭೆಯು ಇಂದು ಅಂತ್ಯಗೊಂಡಿದೆ.

ಕಾರ್ಯಕಾರಿ ಸಮಿತಿ ಗುರುವಾರ ರಚಿಸಲಾಗುವುದು ಎಂದು ಭರವಸೆ ನೀಡಿದ್ದ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮ್ ಟಂಡನ್ ಅವರು, ಸದಸ್ಯರ ಹೆಸರುಗಳನ್ನು ಬಹಿರಂಗಪಡಿಸುವ ಅಧಿಕಾರ ನನಗೆ ಇದೆಯೋ ಇಲ್ಲವೋ ಗೊತ್ತಿಲ್ಲ ಎಂದು ಸುದ್ದಿಗಾರರಿಗೆ ಬುಧವಾರ ತಿಳಿಸಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ಸೆಪ್ಟೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಷಷ್ಠಿ ಗಂ. 14-28 **ನಕ್ಷತ್ರ:** ಜ್ಯೇಷ್ಠ ಗಂ. 27-55, **ಯೋಗ:** ಆಯುಷ್ಮಾನ್ ಗಂ. 24-32 **ಕರಣ:** ತೈತಿಲ ಗಂ. 14-28 ಕನ್ಯಾ ಮಾಸದ 11 ನೇ ದಿನ. **ಮಳೆ ನಕ್ಷತ್ರ:** ಹಸ್ತಾ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 06-00. **ಸೂರ್ಯೋದಯ:** 06-23 **ಸೂರ್ಯಾಸ್ತ:** 06-19. **ಮುಸ್ಲಿಂ ದಿನಾಂಕ:** 05 ರಬಿಯುಸ್ಸಾನಿ. **ಅದೃಷ್ಟ ಸಂಖ್ಯೆ:** 2, 7

ಮೇಷ: ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರುವರು. ತಂದೆಯ ಮಾತಿನಂತೆ ನಡೆಯುವುದು ಉತ್ತಮ. ಉದ್ಯೋಗ ದೊರೆತು ಮನೆಯವರಿಗೆ ಸಮಾಧಾನವಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚಲಿದೆ.

ವೃಷಭ: ದೇವಾಲಯಕ್ಕೆ ಪ್ರಯಾಣ ಮಾಡಬೇಕಾಗುವುದು. ಕುಟುಂಬದಲ್ಲಿ ಎಲ್ಲರ ಆರೋಗ್ಯವೂ ಉತ್ತಮವಾಗಿರುವುದು. ಸಿವಿಲ್ ಎಂಜಿನಿಯರ್‌ಗಳಿಗೆ ಹೆಚ್ಚು ಲಾಭ. ವೃತ್ತಿ ಹಾಗೂ ವೈಯಕ್ತಿಕ ಜೀವನದಲ್ಲಿ ತೃಪ್ತಿಯಿರಲಿದೆ.

ಮಿಥುನ: ಪೋಷಕರ ಮಾತಿನಂತೆ ದೇವತಾ ಕಾರ್ಯಗಳನ್ನು ನಡೆಸುವ ಕುರಿತು ಯೋಜನೆಯನ್ನು ಕೈಗೊಳ್ಳುವಿರಿ. ಮೂರನೇ ವ್ಯಕ್ತಿ ಅವ್ಯವಹಾರ ಮಾಡುವುದರ ಬಗ್ಗೆ ಗಮನಹರಿಸಿ ಪಾಲುದಾರರೊಂದಿಗೆ ಮಾತುಕತೆ ನಡೆಸಿ.

ಕರ್ಕಾಟಕ: ವಿವಾಹದ ವಿಷಯದಲ್ಲಿ ನಿಮ್ಮ ಆಸೆ-ಆಕಾಂಕ್ಷೆಯನ್ನು ಕುಟುಂಬದ ಗಮನಕ್ಕೆ ತರುವುದು ಉತ್ತಮ. ಕೃಷಿ ಸಂಬಂಧಿತ ಕಾರ್ಯಗಳು ಈ ದಿನ ಬಿಡುವಿಲ್ಲದೆ ನಡೆಯಲಿದೆ. ಹಣಕಾಸಿನ ಕೊರತೆ ಇರುವುದಿಲ್ಲ.

ಸಿಂಹ: ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚು ಪ್ರಯತ್ನ ಪಡಬೇಕಾಗುವುದು. ಮನೆಯಲ್ಲಿನ ಆಂತರಿಕ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಹಲ್ಲು ನೋವು ಸಂಭವಿಸಿ ವೈದ್ಯರನ್ನು ಸಂಪರ್ಕಿಸಬೇಕಾಗಲಿದೆ.

ಕನ್ಯಾ: ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕ ಅನುಕೂಲವಾಗಲಿದೆ. ಸಾಮಾಜಿಕ ಬದುಕಿನಲ್ಲಿ ಹುರುಪು ಕಾಣಲಿದ್ದೀರಿ. ಲೇವಾದೇವಿ ವ್ಯವಹಾರಗಳು ಉತ್ತಮವಾಗಿರುವುದು. ದೇವತಾಕಾರ್ಯಗಳಿಂದ ನೆಮ್ಮದಿ ಸಿಗುತ್ತದೆ.

ತುಲಾ: ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರಿಗಳಿಗೆ ಮಾರಾಟ ಜೋರು. ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸುವಂತೆ ತಿಳಿ ಹೇಳಬೇಕಾಗುವುದು. ಆಸ್ತಿ ಕೊಳ್ಳುವ ವಿಷಯದಲ್ಲಿ ಹೆಂಡತಿಯೊಂದಿಗೆ ಮಾತುಕತೆ ನಡೆಸಿ.

ವೃಶ್ಚಿಕ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನಗಳಿಸುವಿರಿ. ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ.

ಧನು: ನಿರೀಕ್ಷಿಸಿದ್ದ ಉದ್ಯೋಗ ಸಿಕ್ಕದಿದ್ದರೂ, ಸಣ್ಣ ಮಟ್ಟದ ಉದ್ಯೋಗ ಸಿಕ್ಕಿರುವುದಕ್ಕೆ ಸಂತೋಷವಾಗಲಿದೆ. ನಿಮ್ಮ ಮೇಲೆ ನಿಮಗೆ ವಿಶ್ವಾಸವಿರಲಿ. ಅಭಿವೃದ್ಧಿ ಸಾಧಿಸಬಲ್ಲಿರಿ. ತಾಳ್ಮೆಯು ಜೀವನದ ಮೂಲಮಂತ್ರವಾಗಿರಲಿ.

ಮಕರ: ಆಡಂಬರದ ಜೀವನ ಶೈಲಿಯವರಾದ ನೀವು ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯ ಮಾಡುವಿರಿ. ಬಟ್ಟೆ ಮಾರಾಟಗಾರರಿಗೆ ಲಾಭವಿರುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ.

ಕುಂಭ: ಸ್ನೇಹಿತರ ಹಾಗೂ ಬಂಧುಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಹೆಚ್ಚು ಏರಿಕೆ ಕಾಣಲಿರುವಿರಿ. ಕುಟುಂಬದಲ್ಲಿ ಸೋದರಿಗೆ ವಿವಾಹ ನಿಶ್ಚಯವಾಗುವುದು. ಸಿದ್ಧಿವಿನಾಯಕನ ಆರಾಧನೆಯಿಂದ ಶುಭ

ಮೀನ: ಬಂಧು ಮಿತ್ರರು ಮನೆಗೆ ಬರಲಿದ್ದಾರೆ. ನಿಮ್ಮ ಕ್ರಿಯೆಯನ್ನು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಬೇರೆಯವರ ಬಗ್ಗೆ ಅನುಕಂಪ ತೋರುವ ನೀವು ನಿಮ್ಮ ಬಗ್ಗೆಯೂ ಗಮನ ಹರಿಸುವುದನ್ನು ಮರೆಯದಿರಿ.

ಪದಬಂಧ 6178


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೊಟ್ಟೆ ಹೊರೆಯುವುದು (6)
3.ಸಂಸಾರ ಬಂಧನಕ್ಕೆ ಒಳಗಾದವನು (2)
5.ರಾಜಾಧಿರಾಜ ತಿರುಗಿದ್ದಾನೆ! (4)
7.ದೇವ ಪೂಜಾತಂತ್ರವನ್ನು ತಿಳಿಸುವ ಶಾಸ್ತ್ರ (3)
9.ಮರೀಚಿಕೆ ಇಲ್ಲಿಕಾಣುತ್ತಿದೆ (5)
11.ಬಿಡದಿ ಹತ್ತಿರವಿರುವ ಪಕ್ಷಿ! (3)
12.ದೇವಾಲಯದ ಸಭಾಮಂಟಪ (4)
15.ಕರುಣೆಗೊಂದು ಪರ್ಯಾಯ ಪದ (2)
16.ಮರಗಿಡಗಳನ್ನು ಹೆಚ್ಚಾಗಿ ಬೆಳೆಸಲು ಪ್ರೋತ್ಸಾಹಿಸಲು ಏರ್ಪಡಿಸುವ ಸಮಾರಂಭ (6)

ಮೇಲಿಂದ ಕೆಳಕ್ಕೆ

1.ಹುಟ್ಟುವ ಸ್ಥಾನ ಅಥವಾ ಮೂಲಸ್ಥಾನ (3)
2.ಒಂದು ಪ್ರದೇಶದಿಂದ ಹೊರಗೆ ಕಳಿಸುವುದು (2)
4.ವಾಕ್ಯದಲ್ಲಿ ನಿಲುಗಡೆಯನ್ನು ಸೂಚಿಸುವ ಚಿಹ್ನೆ (5)
6.ಸಾಹಸವನ್ನು ಮಾಡುವವನು (3)
7.ಆಶ್ರಯಕ್ಕೊಂದು ಪರ್ಯಾಯ ಪದ (3)
8.ಪದದೊಳಗಿರುವ ಮೋಕ್ಷ (5)
9. ಅತಿಥಿಗಳ ಬಿಡಾರಕ್ಕೆಂದು ತೆರವು ಮಾಡಿದ ಮನೆ (3)
10. ದುಃಖದೊಡನೆ ಬರುವ ಜೋಡು ನುಡಿ (3)
13.ಗಡಕ್ಕನೆ ಬಂದೆರಗಿದ ದೊಡ್ಡಕೋತಿ! (3)
14. ಮನಸ್ಸು ಇಲ್ಲಿ ಚಿಕ್ಕದಾಗಿದೆ! (2)



6177ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮುಲಾಮು 4.ಗಿಟಕು
5.ಜವಾಹಿರಿ 6.ಟಕ್ಕುತನ
7.ಗಣಿತ 9.ನಸರಿ
13.ಗುಡಿಕಾರ 14.ಹಣಾಹಣಿ
15.ಸಿಂಧೂರ 16.ಪ್ರವಾಹ

ಮೇಲಿಂದ ಕೆಳಕ್ಕೆ:
1.ಇಂಗಿತಜ್ಞ 2.ಮುಕುಟಮಣಿ
3.ಮಹಿಳೆ 5.ಜನಮನ
8.ತಡಗುಣಿ 10.ಸಮರಸಿಂಹ
11.ಹಗರಣ 12.ಗುಣಾಢ್ಯ

ಸುಡೊಕು 6562

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	5			1	6		8	
	3	6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	9

6561 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ ನವವರ್ಣ

ನವಿಲು ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಭಾನುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಕೆಎಫ್‌ಸಿಎಸ್ ಸಿಬ್ಬಂದಿ, ಬೆಂಗಳೂರು


ಪ್ರೆಸಿಡೆನ್ಸಿ ಕಾಲೇಜು ಸಿಬ್ಬಂದಿ, ಕೆಂಪಾಪುರ


ಕೆಐಎಡಿಬಿ ಸಿಬ್ಬಂದಿ


ವೀಣಾ & ಗೆಳತಿಯರು, ಬೆಂಗಳೂರು


ಭಾರತಿ & ಗೆಳತಿಯರು, ಧಾರವಾಡ


ಸ್ನೇಹಾ & ತಂಡ


ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲ್,ಸುಂಕದಕಟ್ಟೆ, ಬೆಂಗಳೂರು


ಉಷಾ & ಗೆಳತಿಯರು, ಬೆಂಗಳೂರು


ಕೆಪಿಟಿಸಿಎಲ್ ಸರ್ಕಲ್ ನಾರ್ತ್ ಸಿಬ್ಬಂದಿ


ಅಶ್ವಿನಿ & ಗೆಳತಿಯರು, ಕೋರಮಂಗಲ


ವೀಣಾ & ಶೋಭ, ರಾಮನಗರ


ಸ್ಪಂಧಿ ವಿದ್ಯಾ ಸಂಸ್ಥೆ, ಬೆಂಗಳೂರು


ಕರಗದಮ್ಮ ತಂಡ, ಹೆಬ್ಬಾಳ


ಕವನ & ಗೆಳತಿಯರು, ಜೆಪಿ ನಗರ


ಪಂಚಮುಖಿ ಬಜನಾ ಮಂಡಳಿ, ಮತ್ತಿಕೆರೆ


ಅಕ್ಷತಾ, ಚನ್ನಪಟ್ಟಣ


ರೂಪ & ಮಮತಾ


ಕೆ ಆರ್ ಡಿ ಸಿ ಎಲ್ ಸಿಬ್ಬಂದಿ


ಸುಲೋಚನಾ & ಗೆಳತಿಯರು, ಬೆಂಗಳೂರು


ಏಕತಾ ಗ್ರೂಪ್, ಬೆಂಗಳೂರು


ವಾಸವಿ ಪಾಲಿಟೆಕ್ನಿಕ್ ಸಿಬ್ಬಂದಿ, ವಿಜಯನಗರ


ಶ್ವೇತಾ & ಗೆಳತಿಯರು, ಪ್ರಕಾಶ್ ನಗರ

ಇಂದಿನ ಬಣ್ಣ - ನವಿಲು ಹಸಿರು


ಸುನೀತಾ & ಗೆಳತಿಯರು, ಬೆಂಗಳೂರು


ಮಹಾಲಕ್ಷ್ಮಿ ಕಿಟ್ಟಿ ಗ್ರೂಪ್, ನಾಗರಭಾವಿ


ಸಂಗೀತಾ ಭಟ್, ನಟಿ


ಶಾಲಿನಿ, ಬೆಂಗಳೂರು


ನವರತ್ನ ಜ್ಯುವೆಲ್ಲರ್ಸ್ ಸಿಬ್ಬಂದಿ, ಎಂಜಿ ರಸ್ತೆ


ಜ್ಯೋತಿ & ಗೆಳತಿಯರು, ನಾಗರಭಾವಿ


ರತ್ನಾ & ಗೆಳತಿಯರು, MLA ಐಚಿಥಿಂಣಣ


ಇಂಡಿಯನ್ ಸ್ಕೂಲ್ ಸಿಬ್ಬಂದಿ, ಬಸವೇಶ್ವರ ನಗರ

‘ರಸ್ತೆ ಗುಂಡಿ ಉಳಿದರೆ ಆಯುಕ್ತರ ವಿರುದ್ಧ ಕ್ರಮ’

ಜಿಬಿಎ, ಐದೂ ನಗರ ಪಾಲಿಕೆಗಳ ಆಯುಕ್ತರು, ಎಂಜಿನಿಯರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಸ್ತೆಗಳಲ್ಲಿ ಗುಂಡಿ ಉಳಿದರೆ, ತ್ಯಾಜ್ಯ ವಿಲೇವಾರಿ ಆಗದಿದ್ದರೆ ಸಂಬಂಧಪಟ್ಟ ನಗರ ಪಾಲಿಕೆಗಳ ಆಯುಕ್ತರು ಹಾಗೂ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ಬೆಂಗಳೂರು ನಗರ ರಸ್ತೆಗಳ ಪರಿಸ್ಥಿತಿ ಅರಿಯಲು ಶನಿವಾರ ನಗರದ ಹಲವು ಪ್ರದೇಶಗಳಲ್ಲಿ ಸುತ್ತಾಟ ನಡೆಸಿದ ಅವರು, ‘ನಗರದಲ್ಲಿ ಯೋಗ್ಯ ರಸ್ತೆಗಳನ್ನು ನಿರ್ಮಿಸಲು 30 ದಿನಗಳ ಗಡುವು ನೀಡಲಾಗಿದೆ. ಆ ವೇಳೆಗೆ ಎಲ್ಲಿಯೂ ಗುಂಡಿ ಇರಬಾರದು. ಗುಣಮಟ್ಟದ ಕಾಮಗಾರಿ ನಡೆಸಿ ಗುಂಡಿಗಳನ್ನು ಮುಚ್ಚಬೇಕು. ಇಲ್ಲದಿದ್ದರೆ, ಕಠಿಣ ಕ್ರಮವಾಗುತ್ತದೆ’ ಎಂದು ಹೇಳಿದರು.

‘ರಸ್ತೆಗಳ ಕೆಲವೆಡೆಗಳಲ್ಲಿ ತ್ಯಾಜ್ಯವನ್ನು ನಿರ್ವಹಿಸದೇ ಹಾಗೇ ಬಿಡಲಾಗಿದೆ. ತ್ಯಾಜ್ಯವನ್ನು ತ್ವರಿತವಾಗಿ ತೆಗೆಯಬೇಕೆಂದು ಸೂಚನೆ ನೀಡಲಾಗಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಮಳೆಗಾಲದಲ್ಲಿ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಇವುಗಳನ್ನು ದುರಸ್ತಿಗೊಳಿಸಿ, ರಸ್ತೆಗಳನ್ನು ಸಂಚಾರ ಯೋಗ್ಯವಾಗಿಸಲು ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ’ ಎಂದರು.

‘ಕರ್ತವ್ಯದಲ್ಲಿ ನಿರ್ಲಕ್ಷ್ಯದ ಕಾರಣ ಹೆಣ್ಣೂರು ಬಾಗಲೂರು ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರನ್ನು ಅಮಾನತುಗೊಳಿಸಲಾಗಿದೆ. ಗುಂಡಿ ಮುಚ್ಚಲು ಕೇವಲ ಜಲ್ಲಿ ಹಾಕಿ ಟಾರ್ ಹಾಕದೇ ಹಾಗೇ ಬಿಟ್ಟಿದ್ದರಿಂದ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ’ ಎಂದರು.

‘ಹೆಣ್ಣೂರು ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ರಸ್ತೆಯ ನಿರ್ವಹಣೆಯನ್ನು ಸಂಬಂಧಪಟ್ಟ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. 5 ಕಿ.ಮೀನಲ್ಲಿ ಕಾಮಗಾರಿ ನಡೆಯುತ್ತಿದ್ದು, ಪ್ರತಿ ಕಿ.ಮೀಗೆ ₹ 13 ಕೋಟಿ ವೆಚ್ಚ ಮಾಡಲಾಗುತ್ತಿದೆ. ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಲು ಒಂದು ತಿಂಗಳ ಕಾಲಾವಕಾಶವನ್ನು ನೀಡಲಾಗಿದೆ. ರಸ್ತೆಗಳಲ್ಲಿ ಯಾವುದೇ ಗುಂಡಿಗಳಿಲ್ಲದಂತೆ ಮುಚ್ಚಬೇಕೆಂದು ಸೂಚನೆ ನೀಡಲಾಗಿದೆ’ ಎಂದರು.

‘ರಸ್ತೆ ಗುಂಡಿಗಳಿರುವುದು ನಿಜ. ಆದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ರಸ್ತೆ ಗುಂಡಿಗಳ ದುರಸ್ತಿ ನಡೆದಿದ್ದರೆ, ರಸ್ತೆಗಳು ಇಂತಹ ಪರಿಸ್ಥಿತಿಗೆ ತಲುಪುತ್ತಿರಲಿಲ್ಲ. ಹಾಗೆಂದು ಅವರ ಮೇಲೆ ಆರೋಪ ಹೊರಿಸುವುದಿಲ್ಲ. ನಾವು ಆಡಳಿತ ನಡೆಸುತ್ತಿದ್ದು, ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳುತ್ತೇವೆ. ಮಳೆಗಾಲ ಮುಗಿಯುವುದರೊಳಗೆ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದರು.


ಸಿದ್ದರಾಮಯ್ಯ ಅವರು ನಗರ ಸುತ್ತಾಟಕ್ಕೆ ಬರುವ ಸಂದರ್ಭಕ್ಕಾಗಿ ಕಾದಿದ್ದ ನಾಗರಿಕರು


ಸಿದ್ದರಾಮಯ್ಯ ಅವರು ನಗರದ ರಸ್ತೆಗಳಲ್ಲಿ ಗುಂಡಿಗಳನ್ನು ಕಂಡು ದುರಸ್ತಿಪಡಿಸಲು ಜಿಬಿಎ ಅಧಿಕಾರಿಗಳಿಗೆ ಸೂಚಿಸಿದರು

ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ

- ಬಳ್ಳಾರಿ ರಸ್ತೆಯ ವಿಂಡ್ಸರ್ ಮ್ಯಾನರ್ ಬಳಿ ಒಳಚರಂಡಿ ವ್ಯವಸ್ಥೆ ಕಲ್ಪಿಸಿ, ರಸ್ತೆಯಲ್ಲಿ ನೀರು ನಿಲ್ಲದೆ ಸರಾಗವಾಗಿ ಹರಿಯುಂತೆ ಮಾಡಿ
- ವಿಂಡ್ಸರ್ ಮ್ಯಾನರ್ ವೃತ್ತದಲ್ಲಿನ ರಸ್ತೆ ಕಾರ್ಯವನ್ನು ರಾತ್ರಿಯಲ್ಲಿ ಮುಗಿಸಬೇಕು
- ವರ್ತುಲ ರಸ್ತೆಯ ಬದಿಯಲ್ಲಿ ಕಟ್ಟಡ ತ್ಯಾಜ್ಯ ಸುರಿದವರನ್ನು ಪತ್ತೆ ಹಚ್ಚಿ, ವಾಹನ ಮುಟ್ಟುಗೋಲು ಹಾಕಿಕೊಂಡು ಪ್ರಕರಣ ದಾಖಲಿಸಿ
- ರಸ್ತೆಗೆ ತ್ಯಾಜ್ಯ ಸುರಿದಿರುವುದನ್ನು ಕಟ್ಟುನಿಟ್ಟಾಗಿ ತಪ್ಪಿಸಬೇಕು
- ಮೆಟ್ರೊ ಕಾಮಗಾರಿ ನಡೆಯುವ ಸಂದರ್ಭಗಳಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಲಕ್ಷ್ಯ ಮಾಡಬಾರದು. ರಸ್ತೆ ಬದಿ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಮಾಡಬೇಕು
- ಹಾಳಾದ ವೈಟ್ ಟಾಪಿಂಗ್ ರಸ್ತೆಯನ್ನು ದುರಸ್ತಿ ಮಾಡಬೇಕು. ಸರ್ವೀಸ್ ರಸ್ತೆಗಳ ನಿರ್ವಹಣೆ ಮಾಡಬೇಕು
- ಹೆಣ್ಣೂರು ಮೇಲ್ಸೇತುವೆ ಕೆಳಗೆ ಕಟ್ಟಡ ತ್ಯಾಜ್ಯ ಸುರಿದಿದ್ದು, ಅದರಲ್ಲಿ ಆಳೆತ್ತರದ ಗಿಡಗಳು ಬೆಳೆದಿವೆ. 24 ಗಂಟೆಯಲ್ಲಿ ತ್ಯಾಜ್ಯ ತೆರವುಗೊಳಿಸಿ ಸ್ವಚ್ಛಗೊಳಿಸಬೇಕು
- ಬಾಗಲೂರು ರಸ್ತೆಯಲ್ಲಿ ವೈಟ್ ಟಾಪಿಂಗ್ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದರ ಹೊಣೆಯನ್ನು ಗುತ್ತಿಗೆದಾರರೇ ಹೊರಬೇಕು. ವೈಟ್ ಟಾಪಿಂಗ್‌ಗೆ ರಸ್ತೆಯನ್ನು ಒಪ್ಪಿಸಿದ ಮೇಲೆ ಅದರ ಸಂಪೂರ್ಣ ನಿರ್ವಹಣೆ ಗುತ್ತಿಗೆದಾರರದ್ದೇ ಹೆಚ್ಚಿನ ಹಣ ನೀಡುವುದಿಲ್ಲ
- ವೈಟ್ ಟಾಪಿಂಗ್ ಮುಗಿಯಲು ಎರಡು ಮೂರು ವರ್ಷವಾದರೂ, ಆ ಅವಧಿಯಲ್ಲಿ ಗುತ್ತಿಗೆದಾರರೇ ರಸ್ತೆ ನಿರ್ವಹಣೆ ಮಾಡಬೇಕು
- ರಸ್ತೆ ನಿರ್ವಹಣೆ ಮಾಡದ ವೈಟ್ ಟಾಪಿಂಗ್ ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು

ಮುಖ್ಯಮಂತ್ರಿ ನಗರ ಸುತ್ತಾಟ

- ಪಣತ್ತೂರು ಕ್ರಾಸ್ ಬಳಿ ರಸ್ತೆಯುದ್ದಕ್ಕೂ ಕಟ್ಟಡ ನಿರ್ಮಾಣದ ತ್ಯಾಜ್ಯವನ್ನು ಗಮನಿಸಿದ ಮುಖ್ಯಮಂತ್ರಿಯವರು, ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಕ್ರಮ ಕೈಗೊಳ್ಳಬೇಕು. ಮಾರ್ಷಲ್‌ಗಳನ್ನು ಕರ್ತವ್ಯಕ್ಕೆ ನಿಯೋಜಿಸಿ ತ್ಯಾಜ್ಯ ಸುರಿಯು-ತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಜಿಬಿಎ ಮುಖ್ಯ ಆಯುಕ್ತರಿಗೆ ಸಿದ್ದರಾಮಯ್ಯ ಸೂಚಿಸಿದರು.
- ಹೆಣ್ಣೂರಿನ ಬಾಗಲೂರು ರಸ್ತೆಯಲ್ಲಿ ವೈಟ್ ಟಾಪಿಂಗ್ ರಸ್ತೆಗಳನ್ನು ನಿರ್ವಹಣೆ ಮಾಡದ ಗುತ್ತಿಗೆದಾರರು ಹಾಗೂ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.
- ಹೆಣ್ಣೂರು ಮೇಲ್ಸೇತುವೆ ಕೆಳಗೆ ಕಟ್ಟಡ ನಿರ್ಮಾಣ ತ್ಯಾಜ್ಯ ಸುರಿದಿರುವುದನ್ನು ಕಂಡು ಸಿಟ್ಟಾದ ಸಿದ್ದರಾಮಯ್ಯ, ‘ಇದು ತುಂಬಾ ಹಳೆ ತ್ಯಾಜ್ಯ.. ಇಷ್ಟು ವರ್ಷ ಎಷ್ಟು ಅಧಿಕಾರಿಗಳು ಇಲ್ಲಿ ಓಡಾಡಿರುತ್ತೀರಿ? ಯಾರ ಕಣ್ಣಿಗೇ ಬಿದ್ದಿಲ್ವಾ? 24 ಗಂಟೆಗಳೊಗೆ ತ್ಯಾಜ್ಯ ತೆರವುಗೊಳಿಸಬೇಕು’ ಎಂದು ಕಟ್ಟಪ್ಪಣೆ ಮಾಡಿದರು.
- ವರ್ತುಲ ರಸ್ತೆಯ ಬದಿಯಲ್ಲಿ ಕಟ್ಟಡ ತ್ಯಾಜ್ಯ ಸುರಿದಿರುವುದನ್ನು ಗಮನಿಸಿದ ಸಿದ್ದರಾಮಯ್ಯ, ಕಾರು ನಿಲ್ಲಿಸುವಂತೆ ಸೂಚಿಸಿ, ಕೆಳಗಿಳಿದು ಅಧಿಕಾರಿಗ-ಳನ್ನು ತರಾಟೆಗೆ ತೆಗೆದುಕೊಂಡರು. ‘ಅಧಿಕಾರಿಗಳೇನು ರಸ್ತೆಯಲ್ಲಿ ಕಣ್ಣು ಮುಚ್ಚಿಕೊಂಡು ಓಡಾಡುತ್ತೀರಾ? ರಸ್ತೆಗೆ ತ್ಯಾಜ್ಯ ಸುರಿದಿರುವುದನ್ನು ಗಮನಿಸೋಕೆ ಆಗೋದಿಲ್ಲವಾ’ ಎಂದು ಜಿಡಿಎ, ಬಿಡಿಎ ಮತ್ತು ಸಂಚಾರ ಪೊಲೀಸರನ್ನು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ವಾಲಿದ ಕಟ್ಟಡ ತೆರವು ಆರಂಭ

ಬೆಂಗಳೂರು: ಕೋರಮಂಗಲದಲ್ಲಿ 1ನೇ ಬ್ಲಾಕ್‌ನ ವೆಂಕಟಾಪುರದಲ್ಲಿ ನಿರ್ಮಾಣ ಹಂತದಲ್ಲಿರುವ ಐದು ಅಂತಸ್ತಿನ ಕಟ್ಟಡ ಕುಸಿದು ಒಂದು ಕಡೆ ವಾಲಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದ ಬೆನ್ನಲ್ಲೇ ಕಟ್ಟಡ ತೆರವು ಕಾರ್ಯಾಚರಣೆ ಆರಂಭಗೊಂಡಿದೆ.

ಬಿಟಿಎಂ ಲೇಔಟ್‌ನಲ್ಲಿ ಅಂದಾಜು 15 ಅಡಿX15 ಅಡಿ ವಿಸ್ತೀರ್ಣದ ಜಾಗದಲ್ಲಿ ನಿರ್ಮಾಣವಾಗಿರುವ ಕಟ್ಟಡದ ಅಡಿಪಾಯ ಮತ್ತು ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಕಟ್ಟಡದ ಒಂದು ಕಡೆಯ ಬುನಾದಿ ಕುಸಿದಿತ್ತು. ಅಕ್ಕಪಕ್ಕದ ಕಟ್ಟಡಗಳ ಮೇಲೆ ಬೀಳದಂತೆ ಮುಂಜಾಗ್ರತಾ ಕ್ರಮವಾಗಿ ಕಟ್ಟಡಕ್ಕೆ ಕಬ್ಬಿಣದ ರಾಡ್‌ಗಳನ್ನು ಅಡ್ಡಲಾಗಿ ನಿಲ್ಲಿಸಲಾಗಿತ್ತು.

ಆಸ್ತಿ ಸಂಖ್ಯೆ 17/ಬಿ ನಲ್ಲಿ ನಿರ್ಮಿಸುತ್ತಿರುವ ಕಟ್ಟಡ ಶಾಂತಮ್ಮ ಎಂಬುವರಿಗೆ ಸೇರಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅಧಿಕಾರಿಗಳು ನೋಟಿಸ್ ನೀಡಿದ್ದರು. ಕಟ್ಟಡ ವಾಲಿದ್ದರಿಂದ ಮಾಲೀಕರು ತಾವೇ ನೆಲಸಮಗೊಳಿಸಲು ಮುಂದಾಗಿದ್ದಾರೆ.

‘ಅಕ್ಕಪಕ್ಕದ ನಿವಾಸಿಗಳಿಗೆ, ಸಾರ್ವಜನಿಕರಿಗೆ ಕಟ್ಟಡ ತೆರವು ಕಾರ್ಯಾಚರಣೆಯಿಂದ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಮಾಲೀಕರಿಗೆ ಸೂಚನೆ ನೀಡಲಾಗಿದೆ. ಈ ಕಟ್ಟಡವನ್ನು ನೆಲಸಮಗೊಳಿಸುವವರೆಗೂ ನಿಗಾ ವಹಿಸಲಾಗುವುದು. ತೆರವು ಕಾರ್ಯಾಚರಣೆ ವಿಳಂಬ ಮಾಡಿದರೆ ಪಾಲಿಕೆಯಿಂದ ಕಟ್ಟಡ ನೆಲಸಮಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು’ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.



ಬೆಂಗಳೂರು–ಮುಂಬೈಗೆ ಸೂಪರ್‌ಫಾಸ್ಟ್ ರೈಲು

ಬೆಂಗಳೂರು: ಬೆಂಗಳೂರು–ಮುಂಬೈ ನಡುವೆ ಹೊಸ ಸೂಪರ್‌ಫಾಸ್ಟ್ ರೈಲಿಗೆ ಕೇಂದ್ರ ರೈಲ್ವೆ ಸಚಿವಾಲಯವು ಅನುಮೋದನೆ ನೀಡಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಈ ಬಗ್ಗೆ ‘ಎಕ್ಸ್’ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ತೇಜಸ್ವಿ ಸೂರ್ಯ, ‘30 ವರ್ಷಗಳ ಬೇಡಿಕೆ ಈಡೇರಿದೆ. ಹಲವು ವರ್ಷಗಳಿಂದ ಸೂಪರ್‌ಫಾಸ್ಟ್ ರೈಲಿಗಾಗಿ ನಾನು ನಿರಂತರವಾಗಿ ಪ್ರಯತ್ನಿಸುತ್ತಿದ್ದೆ’ ಎಂದು ಹೇಳಿದ್ದಾರೆ.

‘ಬೆಂಗಳೂರು ಮತ್ತು ಮುಂಬೈ ನಡುವೆ ನಾವು ಶೀಘ್ರದಲ್ಲೇ ಸೂಪರ್‌ಫಾಸ್ಟ್ ರೈಲನ್ನು ಪ್ರಾರಂಭಿಸಲಿದ್ದೇವೆ. ಎರಡೂ ನಗರಗಳು ಪ್ರಮುಖ ಆರ್ಥಿಕ ಕೇಂದ್ರಗಳಾಗಿದ್ದು ಅವುಗಳ ನಿಲ್ದಾಣಗಳಲ್ಲಿನ ಸಾಮರ್ಥ್ಯದ ವಿಸ್ತರಣೆಯಿಂದಾಗಿ ಇದು ಈಗ ಸಾಧ್ಯವಾಗಿದೆ’ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ತೇಜಸ್ವಿ ಸೂರ್ಯ ಅವರೊಂದಿಗೆ ನಡೆಸಿದ ವಿಡಿಯೊ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಬೆಂಗಳೂರು, ಮುಂಬೈ ಭಾರತದ ಪ್ರಮುಖ ಆರ್ಥಿಕ ಕೇಂದ್ರಗಳಾಗಿದ್ದರೂ, ಈ ಎರಡೂ ನಗರಗಳ ನಡುವೆ ‘ಉದ್ಯಾನ್ ಎಕ್ಸ್‌ಪ್ರೆಸ್’ ರೈಲು ಮಾತ್ರ ಸಂಚರಿಸುತ್ತಿತ್ತು. ಇದು 24 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಿತ್ತು. ಸೂಪರ್‌ಫಾಸ್ಟ್ ರೈಲಿನಿಂದ ಲಕ್ಷಾಂತರ ನಾಗರಿಕರಿಗೆ ಪ್ರಯಾಣವನ್ನು ಹೆಚ್ಚು ಕೈಗೆಟುಕುವ ದರದಲ್ಲಿ ಅನುಕೂಲವಾಗಿಸಲಿದೆ. ಕಳೆದ ಒಂದೇ ವರ್ಷದಲ್ಲಿ 26 ಲಕ್ಷ ಜನರು ಈ ಎರಡು ನಗರಗಳ ನಡುವೆ ವಿಮಾನದಲ್ಲಿ ಪ್ರಯಾಣಿಸಿದ್ದಾರೆ’ ಎಂದು ಸೂರ್ಯ ಹೇಳಿದ್ದಾರೆ.

ಅಂಶಿಗೆ ‘ಕೃಷಿ ಮಾಧ್ಯಮ’ ಪ್ರಶಸ್ತಿ

ಬೆಂಗಳೂರು: ಕೃಷಿ ಪತ್ರಿಕೋದ್ಯಮ ಉತ್ತೇಜಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘ ನೀಡುವ 2025ರ ‘ಹೊಂಬಾಳೆ ಸಂಹಿತ ಹರಿಣಿಕುಮಾರ್ ಅಲುಮ್ನಿ ಕೃಷಿ ಮಾಧ್ಯಮ’ ಪ್ರಶಸ್ತಿಗೆ ‘ಕನ್ನಡ ಪ್ರಭ’ ಪತ್ರಿಕೆಯ ಪತ್ರಕರ್ತ ಮೈಸೂರಿನ ಅಂಶಿ ಪ್ರಸನ್ನಕುಮಾರ್ ಆಯ್ಕೆಯಾಗಿದ್ದಾರೆ.


ಅಂಶಿ ಪ್ರಸನ್ನ ಕುಮಾರ್

ಪ್ರಶಸ್ತಿಯು ಸ್ಮರಣಿಕೆ, ₹10 ಸಾವಿರ ನಗದು ಒಳಗೊಂಡಿದೆ. ಬೆಂಗಳೂರು ಕೃಷಿ ವಿವಿ ಹಳೆಯ ವಿದ್ಯಾರ್ಥಿಗಳ ಸಂಘವು ಹೆಬ್ಬಾಳದ ಬೆಂಗಳೂರು ಪಶು ವೈದ್ಯಕೀಯ ಕಾಲೇಜಿನಲ್ಲಿ ಅ.11ರಂದು ಆಯೋಜಿಸುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕಾರ್ಯಕಾರಿ ಸಮಿತಿ ಸದಸ್ಯ ಕೆ. ಶಿವರಾಮು ತಿಳಿಸಿದ್ದಾರೆ.

‘ಗುಂಡಿಮುಕ್ತ ರಸ್ತೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 51 ರಸ್ತೆಗಳಲ್ಲಿ 48.90 ಕಿ.ಮೀ. ವ್ಯಾಪ್ತಿಯಲ್ಲಿ 701 ಗುಂಡಿಗಳು, 31,783 ಚದರ ಮೀ. ವಿಸ್ತೀರ್ಣದ ಪ್ಯಾಚ್ ವರ್ಕ್ ಮಾಡಲಾಗಿದೆ. ಗುಂಡಿಮುಕ್ತ ರಸ್ತೆಗಳನ್ನಾಗಿ ಮಾಡಲಾಗುವುದು ಎಂದು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹೇಳಿದರು.

ಕೇಂದ್ರ ನಗರಪಾಲಿಕೆ ವ್ಯಾಪ್ತಿ ವಾರ್ಡ್ ವಾರು ರಸ್ತೆಗಳ ಪಟ್ಟಿ ಮಾಡಿಕೊಂಡು ಗುಂಡಿ ಬಿದ್ದ, ಹಾಳಾದ ರಸ್ತೆಗಳನ್ನು ಗುರುತಿಸಿ, ಡಾಂಬರೀಕರಣ, ಪ್ಯಾಚ್ ವರ್ಕ್, ಗುಂಡಿಗಳನ್ನು ಮುಚ್ಚುವ ಕುರಿತಂತೆ ನಿರಂತರವಾಗಿ ಸಭೆಗಳನ್ನು ನಡೆಸಿ, ಸ್ಥಳ ತಪಾಸಣೆ ಮಾಡಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ ಹಾಳಾದ ರಸ್ತೆಗಳ ದುರಸ್ತಿ ಕಾಮಗಾರಿ ಚುರುಕಿನಿಂದ ಸಾಗಿದೆ ಎಂದರು.

ಸಿ.ವಿ. ರಾಮನ್ ನಗರ ವಿಭಾಗದ ಸುರಂಜನ್ ದಾಸ್ ರಸ್ತೆ, ಬಿಇಎಂಎಲ್ ಮುಖ್ಯ ರಸ್ತೆ, ಓಲ್ಡ್ ಮದ್ರಾಸ್, ರಿಚ್ಮಂಡ್ ರಸ್ತೆ, ಕಾಮರಾಜ್ ರಸ್ತೆ, ಹೊಸೂರು ರಸ್ತೆ, ಮಡಿವಾಳ, ವಿಕ್ಟೋರಿಯಾ ರಸ್ತೆ, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ, ಎಂ.ಜಿ. ರಸ್ತೆ, ಚಿಕ್ಕಬಜಾರ್ ರಸ್ತೆ, ವಸಂತನಗರದ ಅರಮನೆ ರಸ್ತೆ, ಬಂಜಾರಾ ಭವನ ರಸ್ತೆ, ಕುಮಾರ ಪಾರ್ಕ್ ಪೂರ್ವ ರಸ್ತೆ, ಮೈಸೂರು ರಸ್ತೆ ಮೇಲ್ಸೇತುವೆಯಲ್ಲಿ ಗುಂಡಿ ಮುಚ್ಚುವ, ಮೇಲ್ಮೈ ರಸ್ತೆ ಡಾಂಬರೀಕರಣ ಕಾಮಗಾರಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.



ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ನಡೆಯಿತು

ಗಣವೇಷದಲ್ಲಿ ಜೆಡಿಎಸ್‌ನ ಎ.ಮಂಜು

ರಾಮನಗರ: ಮಾಗಡಿಯ ಮಾಜಿ ಶಾಸಕ, ಜೆಡಿಎಸ್ ಜಿಲ್ಲಾಧ್ಯಕ್ಷ ಎ. ಮಂಜುನಾಥ್ ಆರ್‌ಎಸ್‌ಎಸ್‌ನ ಗಣವೇಷದಲ್ಲಿರುವ ವಿಡಿಯೊ, ಫೋಟೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು, ಚರ್ಚೆಗೆ ಎಡೆ ಮಾಡಿಕೊಟ್ಟಿವೆ.

ಸಂಘದ ಶತಮಾನೋತ್ಸವದ ಪ್ರಯುಕ್ತ ವಿಜಯದಶಮಿ ಅಂಗವಾಗಿ ಅ. 2ರಂದು ಆರ್‌ಎಸ್‌ಎಸ್ ತನ್ನ ಶಾಖೆಗಳಲ್ಲಿ ವಿಜಯದಶಮಿ ಉತ್ಸವ ಹಮ್ಮಿಕೊಂಡಿದೆ. ಬಿಡದಿಯ ಬಿಜಿಎಸ್ ವೃತ್ತದಲ್ಲಿ ನಡೆಯಲಿರುವ ಉತ್ಸವದ ಅಧ್ಯಕ್ಷತೆ ವಹಿಸಲಿರುವ ಮಂಜುನಾಥ್ ಗಣವೇಷ ಧರಿಸಿ ವಿಡಿಯೊ ಹರಿಬಿಟ್ಟಿದ್ದಾರೆ.

ನಗರದಲ್ಲಿ ಇಂದು

ನವರಾತ್ರಿ ವಿಶೇಷ



ದಸರಾ ಮಹೋತ್ಸವ: ಕಾತ್ಯಾಯಿನಿ ದುರ್ಗಾ ಹೋಮ, ಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ರಜಪೂತ್ ಸಭಾ, ಸ್ಥಳ: ರಜಪೂತ ಭವನ, ವಸಂತನಗರ, ಬೆಳಿಗ್ಗೆ 9 ಹಾಗೂ ಸಂಜೆ 7

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ದಸರಾ ಉತ್ಸವ: ಜಾನಪದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು, ಭರತನಾಟ್ಯ ಪ್ರದರ್ಶನ: ಶಂಕರಿ–ನೃತ್ಯೋಮಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಪಂಜು ಪ್ರದರ್ಶನ, ‘ಸೀತಾಪಹರಣ’ ಯಕ್ಷಗಾನ ಪ್ರದರ್ಶನ: ಕೆರೆಮನೆ ಶಿವಾನಂದ ಹೆಗ್ಡೆ ಮತ್ತು ತಂಡ, ಆಯೋಜನೆ: ಕೃಷ್ಣಬೈರೇಗೌಡ ತಂಡ, ಸ್ಥಳ: ಸಹಕಾರನಗರ ಮೈದಾನ, ಸಂಜೆ 4ರಿಂದ

ವಚನ ದಸರಾ: ವಚನ ಗಾಯನ: ಸುಲೋಚನ ಮತ್ತು ತಂಡ, ಅತಿಥಿಗಳು: ಎಂ. ಶಿಲ್ಪಾ, ಕಲ್ಪನಾ ಮುದ್ದಯ್ಯ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ನಂ. 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ದ್ರುಪದ ಉತ್ಸವ, ಹಿಂದೂಸ್ತಾನಿ ಗಾಯನ: ಗುಂಡೇಚಾ ಸಹೋದರರು, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಹಣ್ಣಿನ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ. ನಗರ 3ನೇ ಹಂತ, ಸಂಜೆ 6

ದೇವಿಗೆ ರುದ್ರಾಕ್ಷಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ದಾಳಂಬರಿ ಅಲಂಕಾರ: ಭಜನೆ: ವಿಜಯ ರಾಜಣ್ಣ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ನವರಾತ್ರಿ ಉತ್ಸವ: ವಿದ್ವಾಂಸರಿಂದ ಉಪನ್ಯಾಸ: ‘ಶ್ರೀನಿವಾಸ ಕಲ್ಯಾಣದಲ್ಲಿ ತತ್ವ ನೀತಿ ಸಂದೇಶ’ ವಿಷಯದ ಬಗ್ಗೆ: ಭೀಮಸೇನಾಚಾರ್ಯ ಆತನೂರ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿ ಮಠ, ರಾಜರಾಜೇಶ್ವರಿ ನಗರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಕೊಬ್ಬರಿ ಅಲಂಕಾರ: ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಚಾಮುಂಡೇಶ್ವರಿ ಅಲಂಕಾರ: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಮಹಾ ಗಣಪತಿ ಉತ್ಸವ: ವೀರಗಾಸೆ, ಡೊಳ್ಳು ಕುಣಿತ, ತಮಟೆ ವಾದ್ಯಗಳೊಂದಿಗೆ ಮೆರವಣಿಗೆ, ಸ್ಥಳ: ಕಮಲಮ್ಮನ ಗುಂಡಿ ಆಟದ ಮೈದಾನ, ಮಹಾಲಕ್ಷ್ಮಿ ಬಡಾವಣೆ, ಸಂಜೆ 6.30

ದೇವಿಗೆ ಮುತ್ತಿನ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಕಾವೇರಿ ಬೀಟ್ಸ್, ವಾಕ್, ರನ್, ಸೈಕಲ್: ಅತಿಥಿಗಳು: ಎ.ಎಂ. ಯೋಗೀಶ್, ಎಂ. ನಾರಾಯಣ, ಸಿ. ಮಲ್ಲಿಕಾರ್ಜುನ, ಉಪಸ್ಥಿತಿ: ಡಾ.ಎಸ್. ವಿಜಯಭಾಸ್ಕರನ್, ಆಯೋಜನೆ: ಕಾವೇರಿ ಆಸ್ಪತ್ರೆ, ಸ್ಥಳ: ವಿಪ್ರೊ ಅವೆನ್ಯೂ, ಎಲೆಕ್ಟ್ರಾನಿಕ್ ಸಿಟಿ, ಪೇಸ್–2, ಬೆಳಿಗ್ಗೆ 6

‘ಪಿ.ಬಿ. ಶ್ರೀನಿವಾಸ್ ಭಾವಕುಸುಮ’ ಗೀತಗಾಯನ: ಉದ್ಘಾಟನೆ: ಉಪಾಸನಾ ಮೋಹನ್, ಅತಿಥಿ: ಪಿ. ಸೀತಾರಾಮನ್, ಆಯೋಜನೆ: ಡಾ.ಪಿ.ಬಿ. ಶ್ರೀನಿವಾಸ್ ಮಧುರಗಾನ, ಡಾ.ಪಿ.ಬಿ. ಶ್ರೀನಿವಾಸ್ ಫೌಂಡೇಷನ್, ಸ್ಥಳ: ಅಬಲಾಶ್ರಮ, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಳಿಗ್ಗೆ 8ರಿಂದ

ಪ್ರತಿಭಾ ಪುರಸ್ಕಾರ ಸಮಾರಂಭ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ಉದ್ಘಾಟನೆ: ಕೃಷ್ಣಶ್ರೀಪಾದ ದೀಕ್ಷಿತ್, ಅತಿಥಿಗಳು: ಕೆ. ನಾರಾಯಣ್, ಉಮಾಶ್ರೀ, ಎಂ.ಡಿ. ಲಕ್ಷ್ಮೀನಾರಾಯಣ, ಪಿ. ಪ್ರಸನ್ನ ಕುಮಾರ್, ಅಧ್ಯಕ್ಷತೆ: ನಾಗೇಶ್ ಕುಮಾರ್ ಡಿ., ಆಯೋಜನೆ: ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಭಗವಾನ್ ವಿಶ್ವಕರ್ಮ ಪೂಜಾ ಸಮಾರಂಭ: ಆಯೋಜನೆ: ರಾಜರಾಜೇಶ್ವರಿನಗರ ವಿಶ್ವಕರ್ಮ ಕಮ್ಯುನಿಟಿ, ಸ್ಥಳ: ಬಾಲಕೃಷ್ಣ ಬಯಲು ರಂಗಮಂದಿರ, ಬಿಇಎಂಎಲ್ ಬಡಾವಣೆ ಮೂರನೇ ಹಂತ, ಬೆಳಿಗ್ಗೆ 10


ಕರಾವಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಅಕಾಡೆಮಿ ಉದ್ಘಾಟನೆ: ಶಿವರಾಜ ತಂಗಡಗಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಉಪಸ್ಥಿತಿ: ಲಕ್ಷ್ಮಿ ಹೆಬ್ಬಾಳ್ಕರ್, ಅತಿಥಿಗಳು: ಅಶೋಕ್ ಕುಮಾರ್ ರೈ, ಹರೀಶ್ ಕುಮಾರ್, ಕೆ. ಪ್ರಕಾಶ್ ಶೆಟ್ಟಿ, ಸೌಂದರ್ಯ ಮಂಜಪ್ಪ, ಆಯೋಜನೆ: ಕರಾವಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಸ್ನೇಹ ಸಮ್ಮಿಲನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಶಿವಶಂಕರಪ್ಪ ಎಸ್. ಸಾಹುಕಾರ್, ಕೃಷ್ಣಮೂರ್ತಿ ಬಿ. ಕುಲಕರ್ಣಿ, ಅಧ್ಯಕ್ಷತೆ: ಚಂದ್ರಕಾಂತ ಭಂಡಾರೆ, ಆಯೋಜನೆ: ಕಲ್ಯಾಣ ಕರ್ನಾಟಕ ನಿವಾಸಿಗಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಘ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಕೆ.ಎನ್. ಗಣೇಶಯ್ಯ ಅವರ ‘ಶಾಕ್ಯಶಕ್ತ ಶಿಲ್ಪ’, ‘ವಲಯ ಕಲಹ’, ‘ಮನೋಗಮ’ ಪುಸ್ತಕಗಳ ಬಿಡುಗಡೆ: ಅತಿಥಿಗಳು: ಆಂಡ್ರಿಯಾಸ್ ಬ್ಯುರ್ಕರ್ಟ್, ಮಲ್ಲೇಪುರಂ ಜಿ. ವೆಂಕಟೇಶ, ದೇವು ಪತ್ತಾರ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

‘ಮಹಾತ್ಮೆ’, ‘ನಿರೂಪ’ ಪುಸ್ತಕಗಳ ಬಿಡುಗಡೆ: ಪುಸ್ತಕಗಳ ಕುರಿತು: ಕೋಟಿಗಾನಹಳ್ಳಿ ರಾಮಯ್ಯ, ಬಿ.ಆರ್. ಶ್ರುತಿ, ಆಯೋಜನೆ ಮತ್ತು ಸ್ಥಳ: ಪೂರ್ಣಚಂದ್ರ ಕನ್ನಡ ಅಧ್ಯಯನ ಕೇಂದ್ರ, ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಕುವೆಂಪು ವಿಚಾರಸಂಕಿರಣ, ವಿಶ್ವಚೇತನ ಪ್ರಶಸ್ತಿ, ಕನ್ನಡ ಪ್ರತಿಭಾ ಪುರಸ್ಕಾರ, ಗೀತಗಾಯನ ಸಮಾರಂಭ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ವಿಚಾರಸಂಕಿರಣ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಪ್ರಶಸ್ತಿ ಸ್ವೀಕರಿಸುವವರು: ಡಿ. ದೇವರಾಜ, ಬಿ. ನಾರಾಯಣಸ್ವಾಮಿ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11


ಹಂ.ಪ. ನಾಗರಾಜಯ್ಯ

‘ಕೃಷ್ಣಸಂಧಾನ’ ಯಕ್ಷಗಾನ ತಾಳಮದ್ದಳೆ: ಸಾರಥ್ಯ: ಪ್ರಕಾಶ ಬೆಳವಾಡಿ, ಸ್ಥಳ: ಸುಚಿತ್ರಾ, ನಂ. 36, ಕಾರಂತ ರಸ್ತೆ, ಬನಶಂಕರಿ 2ನೇ ಹಂತ, ಮಧ್ಯಾಹ್ನ 3

‘ಶರಣೋತ್ಸವ’ ವಚನ ಗಾಯನ, ಉಪನ್ಯಾಸ, ಪ್ರಶಸ್ತಿ ಪ್ರದಾನ: ಅತಿಥಿಗಳು: ಎಚ್. ರವಿಕುಮಾರ್, ಸಿ. ಸೋಮಶೇಖರ್, ಗಾಯನ: ಅನುರಾಧ ಭಟ್, ಆಯೋಜನೆ: ಗೀತ ಸಂಗೀತ ಅಕಾಡೆಮಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3


ಅನುರಾಧ ಭಟ್

ಜನಭಾವ ನವಗಾನ–7 ಕಾ.ವೆಂ. ಶ್ರೀನಿವಾಸಮೂರ್ತಿ ಅವರು ರಚಿಸಿದ ಗೀತೆಗಳ ಗಾಯನ: ಆಯೋಜನೆ: ಮಂದಾರ ಗಾಯನ ಚೇತನ ಟ್ರಸ್ಟ್, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಅನಾಮೋರ್ಫಿಕ್ ಆರ್ಟ್ ಮ್ಯೂಸಿಯಂ ಉದ್ಘಾಟನೆ: ಚಿರಂಜೀವಿ ಸಿಂಘ್, ದರ್ಶನ ಕುಮಾರ್ ಯು.ವಿ., ಆರ್.ಎಚ್. ಕುಲಕರ್ಣಿ, ಸ್ಥಳ: ಮಿಲ್ಲರ್ ಮ್ಯೂಸಿಯಂ ಆಫ್ ಅನಾಮೋರ್ಫಿಕ್ ಆರ್ಟ್, ಕುಕ್‌ಟೌನ್, ಸಂಜೆ 4.40

ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ ‘ಮೌನದಿಬ್ಬನಿ’ ಪುಸ್ತಕ ಬಿಡುಗಡೆ: ಮನು ಬಳಿಗಾರ್, ಪುಸ್ತಕ ಪರಿಚಯ: ಶೈಲಸುತೆ ರಂಜಿತಾ, ಅತಿಥಿಗಳು: ಎಸ್. ಷಡಕ್ಷರಿ, ಬಿ.ಎಸ್. ಪ್ರಭಾಕರ್, ಅಧ್ಯಕ್ಷತೆ: ಪದ್ಮಾ ನಾಗರಾಜು, ಆಯೋಜನೆ: ಋತುಗಾನ, ಧನ್ವಂತರಿ ಸೇವಾ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ವಿಷ್ಣು ಶಾಸ್ತ್ರಿ, ಪಿಟೀಲು: ಸಾರಂಗ್ ಭಾಗವತ್, ಮೃದಂಗ: ಸಾಕೇತ್ ರಾಮ್, ಆಯೋಜನೆ: ವೆಂಕಟೇಶ ಸಂಗೀತ ಸಭಾ ಟ್ರಸ್ಟ್, ಸ್ಥಳ: ನಂ–48, ಒಂದನೇ ಮಹಡಿ, ಆರನೇ ಮುಖ್ಯರಸ್ತೆ, ಕಾವೇರಿ ರಸ್ತೆ, ಕೆಎಸ್‌ಆರ್‌ಟಿಸಿ ಲೇಔಟ್, ಚಿಕ್ಕಲಸಂದ್ರ, ಸಂಜೆ 5.30

ಶಿಕ್ಷಕರ, ಎಂಜಿನಿಯರ್ ದಿನಾಚರಣೆ: ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಶಿವನಗೌಡ ಜಿ. ಪಾಟೀಲ್, ಆಯೋಜನೆ: ನಾಗರಬಾವಿ ಬಸವ ಬಳಗ, ಸ್ಥಳ: ಸೇಂಟ್ ಸೋಫಿಯಾ ಸ್ಕೂಲ್, ನಾಗರಬಾವಿ, ಸಂಜೆ 6.30

ಕಪ್ಪಣ್ಣ ಅಂಗಳ ದಶಮಾನೋತ್ಸವ: ಭರತನಾಟ್ಯ ಪ್ರದರ್ಶನ: ಮಹತಿ ಕಣ್ಣನ್, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಭರತನಾಟ್ಯ ರಂಗಪ್ರವೇಶ: ಪ್ರಿಯಾಂಕಾ ಶ್ರೀನಿವಾಸ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6


ಪ್ರಿಯಾಂಕಾ ಶ್ರೀನಿವಾಸ್

ಸಂಗೀತ ಕಛೇರಿ: ಗಾಯನ: ವಸುಂಧರಾ ಕುಕ್ಕಿಲ, ಪಿಟೀಲು: ವಾಸುಕಿ ಪರಿಮಣ, ಮೃದಂಗ: ಉದಯ ಕೃಷ್ಣ ಜಿ., ಆಯೋಜನೆ ಮತ್ತು ಸ್ಥಳ: ಚಾಮುಂಡೇಶ್ವರಿ ದೇವಾಲಯ, ರಾಚೇನಹಳ್ಳಿ, ಥಣಿಸಂದ್ರ, ಸಂಜೆ 7

‘ಹುತ್ತದಲ್ಲಿ ಹುತ್ತ’ ನಾಟಕ ಪ್ರದರ್ಶನ: ಆಯೋಜನೆ: ಅಂತರಂಗ ತಂಡ, ಸ್ಥಳ: ಡಾ.ಸಿ. ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 7.15

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಪ್ರಜಾವಾಣಿ

ನವವರ್ಣ

ನವಿಲು ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಭಾನುವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಚಂದನಾ & ಗೆಳತಿಯರು, ಜಯನಗರ


ಅರ್ಚನಾ & ಗೆಳತಿಯರು, ಬೆಂಗಳೂರು


ಕಣ್ಣು ರೋಗನಿರ್ಣಯ ತಂಡ, ನಾಗರಭಾವಿ


ವೀಣಾ & ಸಾಚಿ, ಉಳ್ಳಾಲ


BWSSB ಸಿಬ್ಬಂದಿ, RPC ಲೇಔಟ್


ರೂಪ & ಗೆಳತಿಯರು, ರಾಜಾಜಿನಗರ


SMES ಶಾಲಾ ತಂಡ, ಮಾಗಡಿ ರಸ್ತೆ


ಸುಕನ್ಯಾ & ಗೆಳತಿಯರು, ಬೆಂಗಳೂರು


ಶಾಂತಿನಿಕೇತನ ವಿದ್ಯಾಪೀಠದ ಸಿಬ್ಬಂದಿ, ತುಮಕೂರು


RPES ಪಬ್ಲಿಕ್ ಸ್ಕೂಲ್, ರಾಜಾಜಿನಗರ


ಸೌಂದರ್ಯ ಸೆಂಟ್ರಲ್ ಸ್ಕೂಲ್ ಸಿಬ್ಬಂದಿ, ಬೆಂಗಳೂರು


ಕವಿತಾ & ಗೆಳತಿಯರು, ಅಬಕಾರಿ ಲೇಔಟ್


ಕಲ್ಪನಾ & ಕುಟುಂಬ, ತುಮಕೂರು


ವೇದ, ಬೆಂಗಳೂರು


ಉಮಾ & ಗೆಳತಿಯರು, ಹೊಸಕೋಟೆ


ರಾಧಾ & ಗೆಳತಿಯರು, ಬೆಂಗಳೂರು


ನರ್ಮದಾ & ಗೆಳತಿಯರು, ಕುಣಿಗಲ್

ಇಂದಿನ ಬಣ್ಣ - ನವಿಲು ಹಸಿರು


ವಂದನಾ & ಗೆಳತಿಯರು, ಬೆಂಗಳೂರು


ವಿಜಯಾ ಕಾಲೇಜು ಸಿಬ್ಬಂದಿ, ತುಮಕೂರು


ಶೇಷಾದ್ರಿಪುರಂ ಕಾಲೇಜು ಸಿಬ್ಬಂದಿ, ತುಮಕೂರು


ನಿವೇದಿತಾ & ಗೆಳತಿಯರು, ಬೆಂಗಳೂರು


ವಿದ್ಯಾಭಾರತಿ ಶಾಲೆ ಗೆಳತಿಯರು, ರಾಜಾಜಿನಗರ


ಸುನಂದಾ & ಗೆಳತಿಯರು, ಬೆಂಗಳೂರು


ಪ್ರೇಮಾ & ಗೆಳತಿಯರು, ಬೆಂಗಳೂರು

ಕಲ್ಯಾಣ–ಉತ್ತರ ಕರ್ನಾಟಕದ ಸಂಪರ್ಕ ಕಡಿತ

ಭೀಮಾ ನದಿ ಪ್ರವಾಹದಿಂದಾಗಿ ಜೇವರ್ಗಿ ಸೇತುವೆ ಬಂದ್: 61 ಗ್ರಾಮಕ್ಕೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಮಹಾ ನೆರೆ'ಗೆ ಜಿಲ್ಲೆಯ ಜನ ತತ್ತರಿಸಿದ್ದಾರೆ. ಭೀಮಾ ನದಿಯ ಪ್ರವಾಹದಿಂದಾಗಿ ಜೇವರ್ಗಿ ಬಳಿ ಹುಮನಾಬಾದ್-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ಕಲ್ಯಾಣ ಮತ್ತು ಉತ್ತರ ಕರ್ನಾಟಕದ ನಡುವೆ ಮುಖ್ಯ ಸಂಪರ್ಕ ಕೊಂಡಿ ಕಡಿತಗೊಂಡಿದೆ.

ನೆರೆಯ ಮಹಾರಾಷ್ಟ್ರದ ಸೀನಾ, ವೀರ್ ಹಾಗೂ ಉಜನಿ ಜಲಾಶಯದಿಂದ ಭೀಮಾ ನದಿಗೆ ಹರಿದು ಬರುತ್ತಿರುವ ಅಪಾರ ಪ್ರಮಾಣದ ನೀರು ಕಲಬುರಗಿ ಜಿಲ್ಲೆಯ ಜನರ ಕಣ್ಣೀರಿಗೆ ಕಾರಣವಾಗಿದೆ.

ಜೇವರ್ಗಿ ತಾಲ್ಲೂಕಿನ ಕಟ್ಟಿಸಂಗಾವಿ ಬಳಿ ಹೆದ್ದಾರಿ ಸೇತುವೆಗೆ ಸಮನಾಗಿ ನದಿ ನೀರು ಹರಿಯುತ್ತಿದೆ. ಮುಂಜಾಗ್ರತೆಯಾಗಿ ಜಿಲ್ಲಾಡಳಿತ ಭಾರಿ ವಾಹನಗಳ ಸಂಚಾರವನ್ನು ಶನಿವಾರ ಸ್ಥಗಿತಗೊಳಿಸಿತ್ತು. ರಾತ್ರಿಯ ವೇಳೆ ಸೇತುವೆ ಮೇಲೆಯೇ ನೀರು ಹರಿದಿದ್ದರಿಂದ ಎಲ್ಲ ಬಗೆಯ ವಾಹನಗಳ ಸಂಚಾರವೂ ಸ್ಥಗಿತಗೊಂಡಿತು. ಇದರ ಬಿಸಿ ಆಂಬುಲೆನ್ಸ್, ಪತ್ರಿಕಾ ಸರಬರಾಜು ವಾಹನಗಳಿಗೂ ತಟ್ಟಿತು.

ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ವಿಜಯಪುರದ ಕಡೆಯಿಂದ ಬಂದ ಪ್ರಯಾಣಿಕರು ಸೇತುವೆ ಆಚೆಯೇ ಸಿಲುಕಿಕೊಂಡಿದ್ದರು. ಅವರನ್ನು ಕಲಬುರಗಿಗೆ ಕರೆತರುವ ಬಸ್‌ಗಳ ವ್ಯವಸ್ಥೆಯೂ ಆಗಿರಲಿಲ್ಲ. ಹೀಗಾಗಿ ನಡೆದುಕೊಂಡೇ ಸೇತುವೆಯ ಮತ್ತೊಂದು ಬದಿಗೆ ಬಂದರು. ಲಾರಿಗಳು ಸಾಲುಗಟ್ಟಿ ನಿಂತಿದ್ದವು.

ಕಾಗಿಣಾ ನದಿ ಮತ್ತು ನಾಗಾವಿ ಹಳ್ಳದ ಪ್ರವಾಹದಿಂದ ಮುಡಬೂಳ ಗ್ರಾಮವು ತಾಲ್ಲೂಕು ಕೇಂದ್ರ ಚಿತ್ತಾಪುರದೊಂದಿಗೆ ಸಂಪರ್ಕ ಕಡಿದುಕೊಂಡಿದೆ. ದಂಡೋತಿ ಸೇತುವೆ ಮುಳಗಡೆಯಾಗಿದೆ. ಸಾರಿಗೆ ಸಂಚಾರ ಬಂದ್ ಆಗಿದೆ. ಚಿಂಚೋಳಿ ತಾಲ್ಲೂಕಿನ ಜಟ್ಟೂರು ಗ್ರಾಮದಲ್ಲಿ ಕಾಗಿಣಾ ನದಿಯ ಪ್ರವಾಹದ ನೀರು ಗ್ರಾಮದಲ್ಲಿ 60ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. 200 ಜನರನ್ನು ರಕ್ಷಿಸಲಾಗಿದೆ. ಸೇಡಂ ತಾಲ್ಲೂಕಿನ ಸಟಪಟನಳ್ಳಿ ಗ್ರಾಮದ ಬಳಿ ಕಾಗಿಣಾ ನದಿ ಸೇತುವೆ ಜಲಾವೃತವಾಗಿದೆ.

ವೃಂದಾವನ ಜಲಾವೃತ

ಕಾಗಿಣಾ ನದಿ ಪ್ರವಾಹದಿಂದಾಗಿ ಕಲಬುರಗಿ ಜಿಲ್ಲೆಯ ಮಳಖೇಡದ ಉತ್ತರಾದಿ ಮಠದ ಜಯತೀರ್ಥರ ಮೂಲ ವೃಂದಾವನ ಮುಳುಗಿದೆ. ಮಠದ ಗೋವುಗಳನ್ನು ಮಹಡಿಗೆ ಸ್ಥಳಾಂತರಿಸಲಾಗಿದೆ ಎಂದು ಮಠದ ಪ್ರಧಾನ ಅರ್ಚಕ ಯಂಕಣ್ಣಾಚಾರ್ ಹೇಳಿದ್ದಾರೆ.

ಸೇಡಂ–ಚಿಂಚೋಳಿ ತಾಲ್ಲೂಕು, ಚಿತ್ತಾಪುರ–ಕಾಳಗಿ ತಾಲ್ಲೂಕು ಸಂಪರ್ಕ ಕಡಿತವಾಗಿದೆ. ಆಳಂದದಲ್ಲಿ ನೆರೆಹಾವಳಿಯಿದೆ.

ಭೀಮಾ ನದಿಗೆ 3.50 ಲಕ್ಷ ಕ್ಯೂಸೆಕ್ ನೀರು ಬರುತ್ತಿದೆ. ಅಫಜಲಪುರ ತಾಲ್ಲೂಕಿನ ಸೊನ್ನ ಭೀಮಾ ಬ್ಯಾರೇಜಿನಿಂದ ಎಲ್ಲ ಗೇಟ್‌ಗಳಿಂದ ನೀರು ಹರಿಸಲಾಗುತ್ತಿದೆ. 61 ಗ್ರಾಮಗಳಿಗೆ ಪ್ರವಾಹ ಭೀತಿ ಇದ್ದು, ಶನಿವಾರ ಸಂಜೆವರೆಗೆ ಜಿಲ್ಲೆಯಾದ್ಯಂತ 4,715 ನೆರೆ ಸಂತ್ರಸ್ತರನ್ನು ಸುರಕ್ಷಿತ ತಾಣಕ್ಕೆ ಕಳುಹಿಸಿದೆ. 41 ಕಾಳಜಿ ಕೇಂದ್ರ ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುವ ಕೆಲಸವನ್ನು ರಾಜ್ಯ ವಿಪತ್ತು ನಿರ್ವಹಣಾ ತಂಡ ಚುರುಕುಗೊಳಿಸಿದೆ. 2019ರ ಬಳಿಕ ಜಿಲ್ಲೆಯು ಭಾರಿ ಪ್ರಮಾಣದ ನೆರೆ ಹಾವಳಿಗೆ ತುತ್ತಾಗಿದೆ.

ಬೀದರ್ ಜಿಲ್ಲೆಯಲ್ಲಿ ಮಳೆ ಹಾಗೂ ಮಹಾರಾಷ್ಟ್ರದ ಧನೆಗಾಂವ್ ಜಲಾಶದಿಂದ ಹೆಚ್ಚು ನೀರು ಹರಿಸುತ್ತಿರುವುದರಿಂದ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಜಿಲ್ಲೆಯ ಕಮಲನಗರ, ಔರಾದ್, ಭಾಲ್ಕಿ, ಹುಲಸೂರ ಹಾಗೂ ಬೀದರ್ ತಾಲ್ಲೂಕಿನ ಹಲವೆಡೆ ಸಂಪರ್ಕ ಕಡಿತಗೊಂಡಿದೆ.

ಭಾಲ್ಕಿ ತಾಲ್ಲೂಕಿನ ಇಂಚೂರ್ ಸೇತುವೆ ಮುಳುಗಿ, ಮಹಾರಾಷ್ಟ್ರದೊಂದಿಗಿನ ಸಂಪರ್ಕ ಕಡಿತವಾಗಿದೆ. ಭಾಲ್ಕಿ–ಹುಲಸೂರ, ಕಮಲನಗರ–ಬಾಲೂರ (ಕೆ), ಕಮಲನಗರ–ಔರಾದ್, ಕಮಲನಗರ–ಸೋನಾಳ ನಡುವೆ ಸಂಚಾರ ಸ್ಥಗಿತವಾಗಿದೆ. ಹುಲಸೂರ ತಾಲ್ಲೂಕಿನಲ್ಲಿ ಮೂರು ಮನೆಗಳಿಗೆ ಹಾನಿಯಾಗಿದೆ.

ಬಸವಕಲ್ಯಾಣದ ಧನ್ನೂರ, ಖೇರ್ಡಾ ಸೇತುವೆ ಬಹುತೇಕ ಮುಳುಗಿದ್ದು, ಖಾನಾಪೂರ ರಸ್ತೆಯಲ್ಲಿ ಸಂಚಾರ ಬಂದ್ ಆಗಿದೆ. ಚಿಮಕೋಡ್–ಚಿಲ್ಲರ್ಗಿ ನಡುವೆ ಪ್ರವಾಹದಲ್ಲಿ ಅಡುಗೆ ಅನಿಲ ಸಿಲಿಂಡರ್ ಸಾಗಣೆ ವಾಹನ ಸಿಲುಕಿಕೊಂಡಿತ್ತು.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಹಲವೆಡೆ ವಿದ್ಯುತ್ ಸಂಪರ್ಕ ಸ್ಥಗಿತವಾಗಿದ್ದು, ಕುಡಿಯುವ ನೀರು, ತುರ್ತು ಸೇವೆಯೂ ಇಲ್ಲದೆ 250ಕ್ಕೂ ಮನೆಗಳ ನಿವಾಸಿಗಳು ಪರದಾಡುತ್ತಿದ್ದಾರೆ. ಹುರಸಗುಂಡಗಿಯಲ್ಲಿ 50ಕ್ಕೂ ಹೆಚ್ಚು ಮನೆಗಳಿಗೆ ಪ್ರವಾಹದ ನೀರು, ನಾಯ್ಕಲ್ ಗ್ರಾಮದ 10ಕ್ಕೂ ಹೆಚ್ಚು ಮನೆಗಳಿಗೆ ಪ್ರವಾಹದ ಹಿನ್ನೀರು ಆವರಿಸಿದೆ.

ವಡಗೇರಾ ತಾಲ್ಲೂಕಿನ ಗೂಡೂರು ಸಮೀಪದ ಬ್ರಿಡ್ಜ್ ಕಂ ಬ್ಯಾರೇಜ್ ಮುಳುಗಡೆಯಾಗಿ ಬೆಂಡೆಬೆಂಬಳಿ, ಜೋಳದಡಗಿ, ಬಿಳ್ಹಾರ ರಸ್ತೆ ಬಂದ್ ಆಗಿದೆ. ಹುಣಸಗಿ ತಾಲ್ಲೂಕಿನಲ್ಲಿ 22 ಜಾನುವಾರು ಮೃತಪಟ್ಟಿವೆ.

ರಾಯಚೂರು ಜಿಲ್ಲೆ ಮಸ್ಕಿಯಲ್ಲಿ 15 ಮನೆ ಕುಸಿದಿವೆ. ಭೀಮಾನದಿ ನೀರು ಸೇರಿ ಕೃಷ್ಣಾನದಿಯಲ್ಲಿ ಹರಿವು ಹೆಚ್ಚಿದೆ. ಮುನ್ನೆಚ್ಚರಿಕೆಯಾಗಿ ಆಂಧ್ರದ ಜುರಾಲಾ ಜಲಾಶಯದ ಗೇಟ್‌ಗಳನ್ನು ತೆರೆಯಲಾಗಿದೆ.



ಕಲಬುರಗಿ ಜಿಲ್ಲೆಯ ಜೇವರ್ಗಿ ಪಟ್ಟಣ ಸಮೀಪದ ಕಟ್ಟಿಸಂಗಾವಿ ಬಳಿ ರಾಷ್ಟ್ರೀಯ ಹೆದ್ದಾರಿ–50ರ ಭೀಮಾ ನದಿಯ ಸೇತುವೆ ಮೇಲೆ ಶನಿವಾರ ಬೆಳಿಗ್ಗೆಯಿಂದ ಭಾರಿ ಗಾತ್ರದ ವಾಹನಗಳ ಸಂಚಾರ ನಿಷೇಧಿಸಿದ್ದರಿಂದ ಪ್ರಯಾಣಿಕರು ನಡೆದುಕೊಂಡೇ ಸೇತುವೆಯ ಇನ್ನೊಂದು ಭಾಗಕ್ಕೆ ಬಂದರು ಪ್ರಜಾವಾಣಿ ಚಿತ್ರ



ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡದ ಕೆಳ ಸೇತುವೆ ಮೇಲೆ ನಿಂತಿದ್ದ ಎರಡು ಲಾರಿಗಳು ಕಾಗಿಣಾ ನದಿ ಪ್ರವಾಹದಿಂದ ಜಲಾವೃತವಾಗಿದ್ದವು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.40	5,977	6,404
ಹಾರಂಗಿ	2,859	2,856.98	1,941	1,600
ಕಬಿನಿ	2,284.00	2,281.87	1,371	1,392
ಹೇಮಾವತಿ	2,922	2,918.52	3,913	6,335
ಲಿಂಗನಮಕ್ಕಿ	1,819	1,815.90	3,838	7,467
ಸೂಪಾ (ಮೀ)	564	559.57	2,836.91	3,299.20
ಮಾಣಿ	595	594.04	1,577	663
ತುಂಗಭದ್ರಾ	1,633	1,626.06	11,882	11,780
ಮಲಪ್ರಭಾ	2,079.5	2,079.50	2,194	2,494
ಘಟಪ್ರಭಾ	2175	2,174.96	2,834	1,374
ಭದ್ರಾ *	186	184.8	2,244	4,350
ಆಲಮಟ್ಟಿ (ಮೀ)	519.6	519.57	35,598	37,635
ನಾರಾಯಣಪುರ (ಮೀ)	492.25	492.07	60,000	83,020

* ನೆಲಮಟ್ಟದಿಂದ

ಮಳೆ, ಪ್ರವಾಹ; ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಯಲ್ಲಿ ಭಾರಿ ಮಳೆಯಾಗಿದ್ದು, ಹಲವೆಡೆ ಮನೆಗಳು ಕುಸಿದಿವೆ. ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದಲ್ಲಿ ಗೋಡೆ ಕುಸಿದು ಬಾಲಕ ದರ್ಶನ ನಾಗಪ್ಪ ಲಾತೂರ (12) ಮೃತಪಟ್ಟಿದ್ದು, ಶ್ರೀಶೈಲ (8) ಎಂಬವನಿಗೆ ಪೆಟ್ಟಾಗಿದೆ.

ವಿಜಯಪುರ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ. ಆಲಮೇಲ ತಾಲ್ಲೂಕಿನ ಶಂಬೇವಾಡದಲ್ಲಿ ಭೀಮಾ ನದಿಯ ಪ್ರವಾಹದಲ್ಲಿ ಸಿಲುಕಿದ್ದ ಮೂವರು ಗರ್ಭಿಣಿಯರು, ಮಕ್ಕಳು ಸೇರಿ ಹತ್ತಕ್ಕೂ ಹೆಚ್ಚು ಜನರನ್ನು ಅಗ್ನಿ ಶಾಮಕ ಸಿಬ್ಬಂದಿ ಬೋಟ್ ಮೂಲಕ ರಕ್ಷಿಸಿ, ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.

654 ಜನರಿಗೆ ಆಶ್ರಯ: ನದಿ ಪ್ರವಾಹ ಮತ್ತು ಅತಿವೃಷ್ಟಿಯಿಂದ ಇಂಡಿ ಮತ್ತು ಆಲಮೇಲ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. 14 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. 140 ಕುಟುಂಬಗಳ 152 ಮಕ್ಕಳು ಸೇರಿ ಒಟ್ಟು 654 ಜನರಿಗೆ ಆಶ್ರಯ ಕಲ್ಪಿಸಲಾಗಿದೆ.

47 ಮನೆಗಳಿಗೆ ಹಾನಿ: ಬಸವನ ಬಾಗೇವಾಡಿ, ಬಬಲೇಶ್ವರ, ನಿಡಗುಂದಿ, ತಿಕೋಟಾ, ತಾಳಿಕೋಟೆ, ವಿಜಯಪುರ, ಚಡಚಣ, ಸಿಂದಗಿ ಮುದ್ದೇಬಿಹಾಳ, ಕೊಲ್ಹಾರ, ದೇವರ ಹಿಪ್ಪರಗಿ ಸೇರಿ ವಿವಿಧೆಡೆ 47ಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ. ಇಂಡಿಯಲ್ಲಿ ಶಾಂತುಧನಶೆಟ್ಟಿಗೆ ಸೇರಿದ ಗೋದಾಮಿನಲ್ಲಿದ್ದ ₹1 ಕೋಟಿ ಮೊತ್ತದ ರಸಾಯನಿಕ ಗೊಬ್ಬರ, ಔಷಧ ಹಾನಿಯಾಗಿದೆ.

ವಿಜಯಪುರ ಜಿಲ್ಲೆಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯಲ್ಲಿ ಸೀನಾ, ಭೀಮಾ ಬೋರಿ, ಕೊಳೆಗಾಂವ್ ನದಿಗಳು ಉಕ್ಕಿ ಹರಿಯುತ್ತಿವೆ. ಜಿಲ್ಲೆಯ 431 ಶಾಲೆಗಳು ಜಲಾವೃತಗೊಂಡಿವೆ.

ಬಳ್ಳಾರಿ ಜಿಲ್ಲೆಯಲ್ಲಿ 38 ಮನೆಗಳಿಗೆ ಹಾನಿಯಾಗಿದೆ. ಸಿರುಗುಪ್ಪ ತಾಲ್ಲೂಕಿನಲ್ಲಿ 36 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಬಳ್ಳಾರಿ, ಕಂಪ್ಲಿ ತಾಲ್ಲೂಕುಗಳಲ್ಲಿ ತಲಾ ಒಂದೊಂದು ಮನೆಗೆ ಹಾನಿಯಾಗಿದೆ.

ಬೆಳಗಾವಿ ನಗರ ಮತ್ತು ಜಿಲ್ಲೆಯ ಬಹುತೇಕ ಕಡೆ ಧಾರಾಕಾರ ಮಳೆ ಸುರಿದಿದೆ. ಜಲಾನಯನ ಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗಿದ್ದು, ಕೃಷ್ಣಾ, ಮಲಪ್ರಭಾ, ಘಟಪ್ರಭಾ ಹಾಗೂ ಮಾರ್ಕಂಡೇಯ ನದಿಗಳ ನೀರಿನ ಹರಿವು ಏರಿಕೆಯಾಗಿದೆ.

ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಗ್ರಾಮದ ಏಳು ಮನೆಗಳಿಗೆ ನೀರು ನುಗ್ಗಿದೆ. ಕೆಲವು ಮನೆಗಳು ಕುಸಿಯುವ ಭೀತಿ ಎದುರಾಗಿದೆ. ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಚುಳಕಿ, ಬೆಟಸೂರು ಗ್ರಾಮಗಳಲ್ಲಿ ನಾಲ್ಕು ಮನೆಗಳು ಧರೆಗುರುಳಿವೆ.

ಚಿಕ್ಕೋಡಿ ಹಾಗೂ ಯರಗಟ್ಟಿ ತಾಲ್ಲೂಕಿನಲ್ಲೂ ನಿರಂತರ ಮಳೆಯ ಕಾರಣ ಮೆಕ್ಕೆಜೋಳ ಹಾಗೂ ಕಬ್ಬು ಬೆಳೆಗಳು ನೀರಿನಲ್ಲಿ ನಿಂತಿವೆ. ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟೆಯಿಂದ ಶನಿವಾರ 20,764 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಮೂಡಲಗಿ ಸುತ್ತಮುತ್ತಲಿನಲ್ಲಿ ಅತಿವೃಷ್ಟಿಯ ಕಾರಣ ಈರುಳ್ಳಿ, ಸೋಯಾಬಿನ್ ಮತ್ತು ಗೋವಿನಜೋಳ ಸೇರಿ 300 ಎಕರೆಗೂ ಹೆಚ್ಚು ಬೆಳೆ ನಷ್ಟವಾಗಿದೆ.

ಮಡಿಕೇರಿಯಲ್ಲಿ ಬಿರುಸಿನ ಮಳೆ

ಮಡಿಕೇರಿ: ನಗರದಲ್ಲಿ ಶನಿವಾರ ಬಿರುಸಿನ ಮಳೆ ಸುರಿಯಿತು. ಇದರಿಂದ ಯುವದಸರೆ ಪ್ರಯುಕ್ತ ಏರ್ಪಡಿಸಿದ್ದ ಬೈಕ್ ಜಾಥಾಕ್ಕೆ ಅಡ್ಡಿಯಾಯಿತು. ದಿನವಿಡೀ ಮೋಡ ಕವಿದ ವಾತಾವರಣ ಮತ್ತು ಜಿಟಿಜಿಟಿ ಮಳೆ ಹನಿಯುತ್ತಿತ್ತು. ದಸರಾ ದಶಮಂಟಪಗಳ ತಯಾರಿಗೂ ಇದರಿಂದ ಸಮಸ್ಯೆಯಾಗಿದೆ.



ವಿಜಯಪುರ ಜಿಲ್ಲೆ ಶಂಬೇವಾಡದಲ್ಲಿ ಪ್ರವಾಹದಲ್ಲಿ ಸಿಲುಕಿದ್ದ ಮಗುವನ್ನು ಅಗ್ನಿ ಶಾಮಕದಳದ ಸಿಬ್ಬಂದಿ ರಕ್ಷಿಸಿದರು

ಅತಿವೃಷ್ಟಿ ಪ್ರದೇಶಗಳ ವೀಕ್ಷಣೆಗೆ ಬಿಜೆಪಿ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿವೃಷ್ಟಿ-ನೆರೆಯಿಂದ ಹಾನಿಗೆ ಒಳಗಾದ ಪ್ರದೇಶಗಳಿಗೆ ಭೇಟಿ ನೀಡಿ, ಸರ್ಕಾರವನ್ನು ಎಚ್ಚರಿಸಲು ಶನಿವಾರ ನಡೆದ ಬಿಜೆಪಿ ಪ್ರಮುಖರ ಸಮಿತಿ ಸಭೆ ನಿರ್ಧರಿಸಿದೆ.

ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ಕರ್ನಾಟಕದ 16 ಜಿಲ್ಲೆಗಳು ಅತಿವೃಷ್ಟಿಗೆ ಸಿಲುಕಿವೆ. ರೈತರ ನೆರವಿಗೆ ಸರ್ಕಾರ ಧಾವಿಸಿಲ್ಲ. ಪುಡಿಗಾಸನ್ನೂ ಬಿಡುಗಡೆ ಮಾಡಿಲ್ಲ. ಹಿಂದೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯನ್ನು ನಂಬಿಕೊಳ್ಳದೆ, ರಾಜ್ಯ ಬಜೆಟ್‌ನಿಂದ ಹಣ ನೀಡಿ ರೈತರ ನೆರವಿಗೆ ಧಾವಿಸಿತ್ತು. ಈಗಿನ ಸರ್ಕಾರ ಜನರ ಕಷ್ಟಗಳನ್ನು ನಿರ್ಲಕ್ಷಿಸುತ್ತಿದೆ. ಈ ಕುರಿತು ವಾಸ್ತವ ಸ್ಥಿತಿಯ ಮಾಹಿತಿ ಪಡೆದು, ಸರ್ಕಾರಕ್ಕೆ ಮಾಹಿತಿ ನೀಡಲು ಬಿಜೆಪಿ ಪ್ರಮುಖ ನಾಯಕರ ನೇತೃತ್ವದಲ್ಲಿ ತಂಡಗಳನ್ನು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದರು.

ಸೆ.28ರಿಂದ ಬೆಂಗಳೂರು ನಗರದ ಗುಂಡಿಗಳನ್ನು ಮುಚ್ಚುವ ಅಭಿಯಾನ ಆರಂಭಿಸಲು, ಸ್ಮಾರ್ಟ್ ಮೀಟರ್ ಹಗರಣದ ವಿರುದ್ಧ ಹೋರಾಟ ದೊಡ್ಡ ಹೋರಾಟ ರೂಪಿಸಲು, ಜಾತಿ ಸಮೀಕ್ಷೆಯ ಲೋಪಗಳ ವಿರುದ್ಧ ಧ್ವನಿ ಎತ್ತಲು ನಿರ್ಧರಿಸಲಾಯಿತು ಎಂದು ವಿವರ ನೀಡಿದರು.

ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾಗವಹಿಸಿದ್ದರು.



ಬೆಳಗಾವಿ ಜಿಲ್ಲೆಯ ಯಾದವಾಡದಲ್ಲಿ ಮಳೆಯಿಂದ ಈರುಳ್ಳಿ ಬೆಳೆ ಹಾನಿ ಆಗಿದ್ದನ್ನು ರೈತ ಜಗದೀಶ ರಡರಟ್ಟಿ ತೋರಿಸಿದರು

ರಾಜ್ಯದ ಕೆಲವೆಡೆ ಇಂದು ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹಾಗೂ ಉತ್ತರ ಒಳನಾಡಿನ ಜಿಲ್ಲೆಗಳ ಕೆಲವೆಡೆ ಭಾನುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಂಭವವಿದೆ. ಕಲಬುರಗಿ, ಯಾದಗಿರಿ, ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಗಾಳಿಯೊಂದಿಗೆ, ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೀದರ್, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು ಜಿಲ್ಲೆಯ ಹಲವೆಡೆ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ರಾಗಿಣಿ ನೃತ್ಯ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ನವರಾತ್ರಿ ಉತ್ಸವದ ಅಂಗವಾಗಿ ಕಲಬುರಗಿಯ ಜಸ್ಟ್ ಕ್ಲಬ್‌ನಲ್ಲಿ ಶನಿವಾರ ದಾಂಡಿಯಾ ನೃತ್ಯ ಕಾರ್ಯಕ್ರಮದಲ್ಲಿ ನಟಿ ರಾಗಿಣಿ ದ್ವಿವೇದಿ ಪಾಲ್ಗೊಂಡಿದ್ದರು

'ಎನ್‌ಆರ್‌ಐಗಳಿಗೆ ಅವಕಾಶ ನಿರಾಕರಣೆ ಅಸಾಧ್ಯ'

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): 'ರಾಜ್ಯದ ವೈದ್ಯಕೀಯ ಕಾಲೇಜುಗಳಿಗೆ ವಿಶೇಷ ಅನುದಾನ ಸಿಗಬೇಕಾದರೆ ಶೇ 15ರಷ್ಟು ಮೆಡಿಕಲ್ ಸೀಟುಗಳನ್ನು ಎನ್‌ಆರ್‌ಐಗಳಿಗೆ ಕೊಡಬೇಕಾಗುತ್ತದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಶನಿವಾರ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅನಿವಾಸಿ ಭಾರತೀಯರಿಗೆ ಮೆಡಿಕಲ್ ಮತ್ತು ಇತರೆ ಕೋರ್ಸ್‌ಗಳ ಪ್ರವೇಶ ನಿರಾಕರಿಸಲಾಗದು. ಎಲ್ಲ ರಾಜ್ಯಗಳಲ್ಲೂ ಅವಕಾಶ ಕೊಡಲಾಗಿದೆ' ಎಂದರು.



ಶರಣಪ್ರಕಾಶ ಪಾಟೀಲ

'ಖಾಸಗಿ ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸರ್ಕಾರ ಕೊಡುವ ಸ್ಟೈಫಂಡ್‌ನಲ್ಲಿ ಕಡಿತ ಮಾಡಲಾಗುತ್ತಿದೆ' ಎಂಬ ಆರೋಪ ಕುರಿತು, 'ಈ ಕುರಿತ ದೂರುಗಳ ಹಿನ್ನೆಲೆಯಲ್ಲಿ ಎಲ್ಲ ಕಾಲೇಜುಗಳಿಗೆ ಸುತ್ತೋಲೆ ಕಳುಹಿಸಿ ಎಚ್ಚರಿಕೆ ನೀಡಲಾಗಿದೆ' ಎಂದರು.

'ಸ್ಟೈಫಂಡ್ ಹಣ ದುರುಪಯೋಗ ಪ್ರಕರಣದಲ್ಲಿ ಅಂಥ ಕಾಲೇಜುಗಳಿಗೆ ಅನುದಾನ ರದ್ದುಪಡಿಸುವಂತೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ ಶಿಫಾರಸು ಮಾಡಲಾಗುವುದು' ಎಂದು ತಿಳಿಸಿದರು.

ಡಿಎನ್‌ಎ ಪರೀಕ್ಷೆಯಲ್ಲಿ ಮಗುವಿನ ತಂದೆ ಗುರುತು ಪತ್ತೆ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಸಹಪಾಠಿ ಜೊತೆ ಲೈಂಗಿಕ ಸಂಪರ್ಕ ಬೆಳೆಸಿ, ಆಕೆ ಮಗುವಿನ ತಾಯಿಯಾದ ಬಳಿಕ ಮದುವೆಯಾಗಲು ಒಪ್ಪದೇ ವಂಚಿಸಿದ ಪ್ರಕರಣದಲ್ಲಿ ಯುವತಿಗೆ ಜನಿಸಿದ ಮಗುವಿನ ತಂದೆಯು ಆರೋಪಿ ಕೃಷ್ಣ ಜೆ. ರಾವ್ (21) ಎಂಬುದು ಡಿಎನ್‌ಎ ಪರೀಕ್ಷೆಯಲ್ಲಿ ಖಚಿತವಾಗಿದೆ.

'ಈ ಪ್ರಕರಣದ ಸಂತ್ರಸ್ತೆಗೆ ಜನಿಸಿದ ಮಗುವಿನ ತಂದೆ ಆರೋಪಿ ಕೃಷ್ಣ ಜೆ. ರಾವ್ ಎಂಬುದು ಡಿಎನ್‌ಎ ಪರೀಕ್ಷೆಯಲ್ಲಿ ಸಾಬೀತಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಕರಣ ಸಂಬಂಧ ಪುತ್ತೂರಿನ ಮಹಿಳಾ ಠಾಣೆಯ ಪೊಲೀಸರು ಆರೋಪಿ ಕೃಷ್ಣ ಜೆ. ರಾವ್ (21) ಹಾಗೂ ಆತನ ತಂದೆ ಜಗನ್ನಿವಾಸ ರಾವ್ (ಬಿಜೆಪಿ ಮುಖಂಡ) ಅವರನ್ನು ಈ ಹಿಂದೆ ಬಂಧಿಸಿದ್ದರು. ಅವರಿಬ್ಬರೂ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ.

'ಸಂತ್ರಸ್ತೆಯನ್ನು ಆರೋಪಿ ಮದುವೆ ಆಗಬೇಕು ಎಂಬುದು ಆಕೆಯ ಕುಟುಂಬದ ಒತ್ತಾಯ. ಈ ವಿಚಾರದಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಲಾಗದು. ಈಗಾಗಲೇ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದರು.

ಮನೆ ತುಂಬಿಸಿಕೊಳ್ಳಿ: 'ಕೋರ್ಟ್‌ಗೆ ಸಲ್ಲಿಸಿರುವ ಡಿಎನ್‌ಎ ವರದಿಯಲ್ಲೂ ಮಗುವಿನ ತಂದೆ ಯಾರೆಂದು ಸ್ಪಷ್ಟವಾಗಿದೆ. ಯುವಕನ ತಂದೆ ಜಗನ್ನಿವಾಸ್ ರಾವ್, ತನ್ನ ಮಗನ ಭವಿಷ್ಯದ ಜೊತೆಗೆ, ಪುಟ್ಟ ಮಗುವಿನ ಭವಿಷ್ಯದ ಬಗ್ಗೆಯೂ ಆಲೋಚಿಸಬೇಕು. ಅವರಿಬ್ಬರಿಗೂ ಮದುವೆ ಮಾಡಿಸಿ ಮನೆ ತುಂಬಿಸಿಕೊಳ್ಳಬೇಕು' ಎಂದು ವಿಶ್ವಕರ್ಮ ಮಹಾಮಂಡಲದ ರಾಜ್ಯ ಘಟಕದ ಅಧ್ಯಕ್ಷ ಕೆ.ಪಿ. ನಂಜುಂಡಿ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, 'ಸಮಾಜದ ಹೆಣ್ಣು ಮಗಳ ಮೇಲೆ ಅನ್ಯಾಯ ನಡೆದಿದೆ. ಹಿಂದುತ್ವವಾದಿ ಸಂಘಟನೆಗಳಾದ ಆರ್‌ಎಸ್‌ಎಸ್, ಬಜರಂಗದಳ, ಶ್ರೀರಾಮ ಸೇನೆಗಳು ಹಾಗೂ ಮುಖಂಡರಾದ ಕಲ್ಲಡ್ಕ ಪ್ರಭಾಕರ ಭಟ್, ನಳಿನ್ ಕುಮಾರ್ ಕಟೀಲ್, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಮತ್ತಿತರರು ಸೇರಿ ಸಂತ್ರಸ್ತೆಗೆ ನ್ಯಾಯ ಒದಗಿಸಿಕೊಡಬೇಕು' ಎಂದರು.

ಸಂತ್ರಸ್ತೆಯ ತಾಯಿ, 'ಮಗುವಿನ ಡಿಎನ್‌ಎ ಪರೀಕ್ಷೆ ನಡೆಯಲು ಯುವಕನ ಕಡೆಯವರೇ ಕಾರಣ. ಆತನೇ ಮಗುವಿನ ತಂದೆ ಎಂಬುದು ಸಾಬೀತಾಗಿದ್ದು, ಅವರಿಬ್ಬರಿಗೆ ಮದುವೆ ಮಾಡಿಸಲಿ' ಎಂದರು.



ಹೈಕೋರ್ಟ್ ನ್ಯಾಯಮೂರ್ತಿ ಆರ್‌.ನಟರಾಜ್ ಅವರು ವಿಜಯನಗರ ಜಿಲ್ಲೆಯ ನೂತನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವನ್ನು ಶನಿವಾರ ಹೊಸಪೇಟೆಯಲ್ಲಿ ಉದ್ಘಾಟಿಸಿದರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕೆ.ಪ್ರಹ್ಲಾದ್, ನ್ಯಾಯಮೂರ್ತಿ ಅವರ ಪತ್ನಿ ಅರ್ಚನಾ, ಬಳ್ಳಾರಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಕೆ.ಜಿ.ಶಾಂತಿ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಇದ್ದರು –ಪ್ರಜಾವಾಣಿ ಚಿತ್ರ

ಓಂಕಾರೇಶ್ವರ ದೇಗುಲ: ಇರೋದು 22 ಗ್ರಾಂ ಚಿನ್ನ ಮಾತ್ರ!

ಪ್ರಜಾವಾಣಿ ವಾರ್ತೆ

ಮಡಿಕೇರಿ: 1820ರಲ್ಲಿ ಕೊಡಗಿನ ರಾಜ 2ನೇ ಲಿಂಗರಾಜ ಒಡೆಯ ಅವರು ಇಲ್ಲಿ ನಿರ್ಮಿಸಿದ್ದ ಓಂಕಾರೇಶ್ವರ ದೇವಾಲಯದಲ್ಲಿ ಸದ್ಯ ಇರುವುದು ಕೇವಲ 22 ಗ್ರಾಂ 100 ಮಿಲಿ ಚಿನ್ನ ಮಾತ್ರ!



ಹಿಂದೂ ಧಾರ್ಮಿಕ ಸಂಸ್ಥೆಗಳು, ಧರ್ಮಾದಾಯ ದತ್ತಿಗಳ ಇಲಾಖೆಗೆ ಸೇರಿದ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚುಮ್ಮಿದೇವಯ್ಯ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದರು.

'2012ರಲ್ಲಿ ಮೌಲ್ಯಮಾಪನ ಮಾಡಿರುವ ಕುರಿತ ದಾಖಲೆ ಇದ್ದರೂ ಸಮರ್ಪಕವಾಗಿಲ್ಲ. ಆದರೆ, ಈಗ ಖಚಿತವಾಗಿ ಸಿಕ್ಕಿದ ಚಿನ್ನಾಭರಣಗಳ ಪಟ್ಟಿ ಬಹಿರಂಗಪಡಿಸಿದ್ದೇವೆ' ಎಂದರು.

'ಮೌಲ್ಯಮಾಪಕರ ಮೇಲುಸ್ತುವಾರಿಯಲ್ಲಿ ಪರಿಶೀಲಿಸಿದಾಗ ಚಿನ್ನದೊಂದಿಗೆ 83 ಕೆ.ಜಿ ಬೆಳ್ಳಿ, 40 ಕೆ.ಜಿ. ಹಿತ್ತಾಳೆ, 3 ಕೆ.ಜಿ ಕಂಚು ಪತ್ತೆಯಾಯಿತು. ಸಮೀಪದ ಆಂಜನೇಯ ದೇವಾಲಯದಲ್ಲಿ 1 ಗ್ರಾಂ ಚಿನ್ನ, 19 ಕೆ.ಜಿ ಬೆಳ್ಳಿ, ಕೋಟೆ ಗಣಪತಿ ದೇವಾಲಯದಲ್ಲಿ 120 ಗ್ರಾಂ ಚಿನ್ನ, 10 ಕೆ.ಜಿ ಬೆಳ್ಳಿ ಸಿಕ್ಕಿದೆ' ಎಂದರು.

ಸಮಿತಿ ಸದಸ್ಯ, ವಕೀಲ ನಿರಂಜನ್, 'ದೇಗುಲದ ಭೂಮಿ ಸ್ವಾಧೀನಕ್ಕೆ ಲಭ್ಯವಾಗಿಲ್ಲ. ಬಹುತೇಕ ಒತ್ತುವರಿ ಆಗಿದೆ. ಈ ಬಗ್ಗೆ ಕಾನೂನು ಹೋರಾಟ ರೂಪಿಸಲಾಗುವುದು' ಎಂದರು.

'ಸಿ.ಎಂಗೆ ಹಿಂದೂ ವಿರೋಧಿ ಪಟ್ಟಕ್ಕೆ ಬಿಜೆಪಿ ಷಡ್ಯಂತ್ರ'

ಕುಷ್ಟಗಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಬಿಜೆಪಿ ಪದೇ ಪದೇ ಷಡ್ಯಂತ್ರ ನಡೆಸುತ್ತಿದೆ' ಎಂದು ಸಚಿವ ದಿನೇಶ ಗುಂಡೂರಾವ್ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕುರಿತು ಅದೇ ರೀತಿ ವರ್ತಿಸುತ್ತಿದೆ. ಲಿಂಗಾಯತ ಅಥವಾ ಯಾವುದೇ ಸಮುದಾಯಗಳ ತಾತ್ವಿಕ ಭಿನ್ನಾಭಿಪ್ರಾಯಕ್ಕೂ ಸರ್ಕಾರದ ನಿರ್ಧಾರಕ್ಕೂ ಸಂಬಂಧವೇ ಇಲ್ಲ' ಎಂದರು.

'ಲಿಂಗಾಯತ ಸಮುದಾಯದಲ್ಲಿ ಧರ್ಮ, ಜಾತಿ ಉಪ ಪಂಗಡಗಳ ವಿಚಾರದಲ್ಲಿ ವ್ಯತ್ಯಾಸ ಆಗಿದ್ದರೂ ಅದೇನೂ ಅಂಥ ಸಮಸ್ಯೆ ಅಲ್ಲ. ಆದರೆ, ಅದೇ ವಿಷಯಕ್ಕೆ ಹೆಚ್ಚು ಪ್ರಚಾರ ಸಿಗುತ್ತಿದೆ' ಎಂದರು.

'ಸಮೀಕ್ಷೆಯು ಕಾಂಗ್ರೆಸ್ ಪಕ್ಷ ಹಾಗೂ ರಾಹುಲ್ ಗಾಂಧಿ ಅವರ ಚಿಂತನೆಯಾಗಿದ್ದು, ಸರ್ಕಾರಕ್ಕೆ ಪ್ರತಿಷ್ಠೆಯ ಪ್ರಶ್ನೆಯೂ ಅಲ್ಲ. ಜನರ ಜಾತಿ, ಸಂಖ್ಯೆ ಧರ್ಮ, ಸ್ಥಿತಿಗತಿ ವಿವರಗಳನ್ನು ವೈಜ್ಞಾನಿಕ ತಳಹದಿಯಲ್ಲಿ ಮಾಹಿತಿ ಸಂಗ್ರಹಿಸಿದರೆ ಜನಕಲ್ಯಾಣ ಯೋಜನೆಗಳನ್ನು ರೂಪಿಸಲು ಸಾಧ್ಯ' ಎಂದರು.

'ಶಿಕ್ಷಕರಿಗೆ ಹೊರೆ ಆಗಬಾರದು ಎಂದು ರಜೆ ಅವಧಿಯನ್ನು ಸಮೀಕ್ಷೆಗೆ ಬಳಸಲಾಗುತ್ತಿದೆ. ಈ ಕುರಿತು ತರಾತುರಿ ಇಲ' ಎಂದು ಹೇಳಿದರು.

ಡೆಂಗಿ: ಐದು ಸಾವಿರ ದಾಟಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಪ್ರಕಾರ ರಾಜ್ಯದಲ್ಲಿ ಕಳೆದೊಂದು ತಿಂಗಳ ಅವಧಿಯಲ್ಲಿ 982 ಡೆಂಗಿ ಪ್ರಕರಣಗಳು ವರದಿಯಾಗಿದ್ದು, ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ ಐದು ಸಾವಿರದ ಗಡಿ (5,093) ದಾಟಿದೆ.

ಕಳೆದ ತಿಂಗಳು ಈ ವೇಳೆ 4,111 ಪ್ರಕರಣಗಳು ದೃಢಪಟ್ಟಿದ್ದವು. ಹಗಲಿನಲ್ಲಿ ಕಚ್ಚುವ ಈಡೀಸ್ ಈಜಿಪ್ಟಿ ಸೊಳ್ಳೆಗಳಿಂದ ಡೆಂಗಿ ಜ್ವರ ಹರಡುತ್ತದೆ. ಈ ವರ್ಷ 1.60 ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಈವರೆಗೆ ಗುರುತಿಸಲಾಗಿದ್ದು, ಅವರಲ್ಲಿ 70 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ದೃಢ ಪ್ರಕರಣಗಳಲ್ಲಿ ಜಿಬಿಎ ವ್ಯಾಪ್ತಿಯಲ್ಲಿಯೇ 2,478 ಪ್ರಕರಣಗಳು ಖಚಿತಪಟ್ಟಿವೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಕಲಬುರಗಿ (303), ತುಮಕೂರು (178), ದಕ್ಷಿಣ ಕನ್ನಡ (149), ವಿಜಯಪುರ (138), ಬೆಂಗಳೂರು ನಗರ (132), ಉಡುಪಿ (122), ಧಾರವಾಡ (117), ಮಂಡ್ಯ (117), ಚಿತ್ರದುರ್ಗ (116), ಶಿವಮೊಗ್ಗ (111) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಕಳೆದ ವರ್ಷ ರಾಜ್ಯದಲ್ಲಿ 32 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣಗಳು ವರದಿಯಾಗಿದ್ದವು. ಈ ಪ್ರಕರಣಗಳಲ್ಲಿ ಅರ್ಧದಷ್ಟು (15,282) ಹಿಂದಿನ ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ವರದಿಯಾಗಿತ್ತು. ಡೆಂಗಿ ಜ್ವರದ ತೀವ್ರತೆಗೆ ಮೂವರು ಮೃತಪಟ್ಟಿದ್ದರು. ಈ ವರ್ಷ ಈವರೆಗೆ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ರಾಜ್ಯದಲ್ಲಿ ಈ ವರ್ಷ 853 ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿವೆ. 36 ಸಾವಿರ ಚಿಕೂನ್‌ಗುನ್ಯಾ ಶಂಕಿತರಲ್ಲಿ 17 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. 27 ಜಿಲ್ಲೆಗಳಲ್ಲಿ ಪ್ರಕರಣಗಳು ದೃಢಪಟ್ಟಿವೆ.

ಲಲಿತ ಪಂಚಮಿ: ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಸಂಭ್ರಮದ ವಾತಾವರಣ

'ಅಮ್ಮನ ಸೀರೆ' ಪ್ರಸಾದ: ಧನ್ಯರಾದ ಭಕ್ತರು

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): ದಸರೆಯ ಸಂಭ್ರಮದಲ್ಲಿರುವ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಭಕ್ತ ಮಹಿಳೆಯರು ಪ್ರಸಾದ ರೂಪದಲ್ಲಿ 'ಅಮ್ಮ'ನ ಸೀರೆ ಪಡೆದು ಧನ್ಯರಾದರು.

'ಅಮ್ಮ'ನ ಸೀರೆ ಪ್ರಸಾದಕ್ಕಾಗಿ ಮಹಿಳೆಯರು ಮಧ್ಯಾಹ್ನ 3 ಗಂಟೆಗೇ ಸರತಿ ಸಾಲಿನಲ್ಲಿ ನಿಂತಿದ್ದರು. ತಡರಾತ್ರಿಯ ವರೆಗೂ ಸೀರೆಗಳನ್ನು ವಿತರಿಸಲಾಯಿತು.

ಪ್ರತಿ ವರ್ಷ ದಸರೆ ಸಂದರ್ಭದಲ್ಲಿ ಲಲಿತ ಪಂಚಮಿಯ ದಿನ ಸೀರೆಗಳ ವಿತರಣೆ ನಡೆಯುತ್ತದೆ. ಇದಕ್ಕಾಗಿ ನಾನಾ ಕಡೆಗಳಿಂದ ಭಕ್ತರು ಬರುತ್ತಾರೆ. ಈ ಬಾರಿಯೂ ಭಕ್ತರ ಪ್ರವಾಹ ಹರಿದು ಬಂತು.

ಮೊದಲು ಅನ್ನಪ್ರಸಾದ ನೀಡಿ, ಅದನ್ನು ಸ್ವೀಕರಿಸಿ ಹೋಗುವಾಗ ಸೀರೆಗಳನ್ನು ವಿತರಿಸಲಾಯಿತು. ನೂಕುನುಗ್ಗಲು ಆಗದಂತೆ ದೇವಸ್ಥಾನದ ಮುಂಭಾಗದಲ್ಲಿ ಅಟ್ಟಳಿಗೆ ಅಳವಡಿಸಲಾಗಿತ್ತು. ಅದರ ಮೂಲಕ ಭಕ್ತರು ನೇರವಾಗಿ ಅನ್ನದಾನದ ಛತ್ರದತ್ತ ತೆರಳಿದರು.


'ಹಿಂದೆ, ಹರಕೆ ರೂಪದಲ್ಲಿ ಬಂದ ಸೀರೆಗಳನ್ನು ಕೊಡಲಾಗುತ್ತಿತ್ತು. ಈಗ ಸಮಾನತೆ ಇರಬೇಕು ಎಂದು ಹೊಸದಾಗಿ ಖರೀದಿಸಿ ವಿತರಿಸಲಾಗುತ್ತಿದೆ. ಈ ಬಾರಿ 25 ಸಾವಿರ ಸೀರೆ ಖರೀದಿಸಲಾಗಿದೆ. ಸೀರೆಯನ್ನು ಎರಡು ಭಾಗ ಮಾಡಿ ರವಿಕೆ ಕಣ ಎಂದು ಕೊಡುವ ಪದ್ಧತಿ ಈಗ ಕೈಬಿಡಲಾಗಿದೆ' ಎಂದು ದೇವಸ್ಥಾನದ ಆನುವಂಶಿಕ ಪ್ರಧಾನ ಅರ್ಚಕ ಹರಿನಾರಾಯಣ ಅಸ್ರಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.



ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಲಲಿತ ಪಂಚಮಿ ಅಂಗವಾಗಿ ಪ್ರಸಾದ ರೂಪದಲ್ಲಿ ವಿತರಿಸಿದ ಸೀರೆ ಪಡೆಯಲು ಸಾಲಾಗಿ ಬಂದ ಭಕ್ತರು ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಚಿಟಿಕೆ ಸುದ್ದಿ

‘ಪ್ರಾರ್ಥನೆ ದೇಶ–ದೇವರ ಕಡೆಗಿನ ಸಾಮೂಹಿಕ ಸಂಕಲ್ಪ’



ಮೋಹನ್ ಭಾಗವತ್

ನಾಗ್ಪುರ (ಪಿಟಿಐ): ‘ಸಂಘದ ಪ್ರಾರ್ಥನೆಯು ದೇಶ ಹಾಗೂ ದೇವರ ಕಡೆಗೆ ಸ್ವಯಂಸೇವಕರ ಸಾಮೂಹಿಕ ಸಂಕಲ್ಪವಾಗಿದೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದ್ದಾರೆ.

ನಾಗ್ಪುರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಗಾಯಕ ಶಂಕರ್ ಮಹದೇವನ್ ಅವರು ಹಾಡಿರುವ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆಯ ಹಿಂದಿ ಆವೃತ್ತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಆ ಹಾಡಿನ ಅರ್ಥ ವಿವರಣೆಯನ್ನು ಹಿಂದಿಯಲ್ಲಿ ಹರೀಶ್ ಭಿಮಾನಿ ಹಾಗೂ ಮರಾಠಿಯಲ್ಲಿ ನಟ ಸಚಿನ್ ಖೇಡೇಕರ್ ನೀಡಿದ್ದಾರೆ.

‘ಪ್ರಾರ್ಥನೆಯು ಭಾರತ ಮಾತೆಗೆ ಸಲ್ಲಿಸುವ ಭಕ್ತಿ, ಪ್ರೀತಿ ಹಾಗೂ ತ್ಯಾಗದ ಸಂಕೇತವಾಗಿದೆ. ನಾವು ದೇಶಕ್ಕಾಗಿ ಏನು ನೀಡುತ್ತೇವೆಯೋ, ದೇಶಕ್ಕಾಗಿ ಸೇವೆ ಸಲ್ಲಿಸಲು ದೇವರು ಕೂಡ ನಮಗೆ ನೆರವಾಗುತ್ತಾನೆ’ ಎಂದು ತಿಳಿಸಿದರು.

‘ಆಡಿಯೊ ಬಿಡುಗಡೆಯ ಮೂಲಕ ಈ ಪ್ರಾರ್ಥನೆಯೂ ಗರಿಷ್ಠ ಮಂದಿಯನ್ನು ತಲುಪಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಐಸಿಸ್ ನಂಟು: ಇಬ್ಬರು ದೋಷಿಗಳು

ಕೊಚ್ಚಿ (ಪಿಟಿಐ): ಭಯೋತ್ಪಾದಕ ಸಂಘಟನೆ ಐಸಿಸ್ ಸಿದ್ಧಾಂತವನ್ನು ಪ್ರಚಾರ ಮಾಡುತ್ತಿದ್ದ ಕೊಯಮತ್ತೂರಿನ ಇಬ್ಬರನ್ನು ದೋಷಿಗಳು ಎಂದು ಎನ್‌ಐಎ ನ್ಯಾಯಾಲಯ ಶನಿವಾರ ಆದೇಶ ನೀಡಿದೆ.

ಕೊಯಮತ್ತೂರಿನ ಉಕ್ಕಡಂನ ಅನ್ಬು ನಗರದ ಮಹಮ್ಮದ್ ಅಜರುದ್ದೀನ್ (27) ಹಾಗೂ ದಕ್ಷಿಣ ಉಕ್ಕಡಂನ ಶೇಕ್ ಹಿದಾಯತುಲ್ಲಾ ಅಲಿಯಾಸ್ ಫಿರೋಜ್ ಖಾನ್ (35) ಶಿಕ್ಷೆಗೊಳಗಾದವರು.

ತಮಿಳುನಾಡಿನ ಕೊಯಮತ್ತೂರಿನಲ್ಲಿ ಈ ಇಬ್ಬರೂ ಐಸಿಸ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು.

ವಿಚಾರಣೆ ಸಮಯದಲ್ಲಿ ಅಪರಾಧಿಗಳಿಬ್ಬರೂ ತಮ್ಮ ಕುಟುಂಬದ ಪರಿಸ್ಥಿತಿಯನ್ನು ಉಲ್ಲೇಖಿಸಿ, ಶಿಕ್ಷೆ ಕಡಿಮೆ ಮಾಡುವಂತೆ ನ್ಯಾಯಾಲಯಕ್ಕೆ ವಿನಂತಿಸಿದ್ದಾರೆ.

ಶಿಕ್ಷೆಯ ಪ್ರಮಾಣವನ್ನು ಸೋಮವಾರ ಪ್ರಕಟಿಸಲಿದ್ದು, ಆರೋಪಿಗಳಿಬ್ಬರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಕೊಚ್ಚಿಯ ಎನ್‌ಐಎ ನ್ಯಾಯಾಲಯದ ನ್ಯಾಯಾಧೀಶ ಎನ್. ಶೇಷಾದ್ರಿನಾಥನ್ ಪೊಲೀಸರಿಗೆ ಸೂಚಿಸಿದ್ದಾರೆ.

ದಲಿತ ಮಕ್ಕಳಿಗೆ ದಾರಿ ಬಳಸಲು ನಿರ್ಬಂಧ

ತಂಜಾವೂರು (ಪಿಟಿಐ): ದಲಿತ ಸಮುದಾಯದ ವಿದ್ಯಾರ್ಥಿಗಳ ಗುಂಪಿಗೆ ಇಲ್ಲಿನ ದಾರಿಯೊಂದರಲ್ಲಿ ಸಾಗಲು ಬಿಡದೆ ನಿರ್ಬಂಧಿಸಿರುವ ಘಟನೆ ತಾಲ್ಲೂಕಿನ ಕೊಲ್ಲಂಗರೈ ಗ್ರಾಮದಲ್ಲಿ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ ವೃದ್ಧೆ ಹಾಗೂ ಅವರ ಕುಟುಂಬ ಸದಸ್ಯರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಶಾಲಾ ಸಮವಸ್ತ್ರದಲ್ಲಿದ್ದ ಮಕ್ಕಳು ಇಲ್ಲಿನ ದಾರಿಯಲ್ಲಿ ಹಾದುಹೋಗಲು ಮುಂದಾಗುತ್ತಾರೆ. ಆಗ ವೃದ್ಧೆಯೊಬ್ಬರು ಕೈಯಲ್ಲಿ ಕೋಲು ಹಿಡಿದು ಕೆಲವು ಮಕ್ಕಳನ್ನು ಮಾತ್ರ ತಡೆಯುತ್ತಾರೆ. ಆ ದಾರಿಯಲ್ಲಿ ಹಾದು ಹೋಗಕೂಡದು ಎಂದು ಕೂಗಾಡುತ್ತಾರೆ. ಈ ದೃಶ್ಯ ವಿಡಿಯೊದಲ್ಲಿದೆ.

ಪ್ರಕರಣದಲ್ಲಿ ಈವರೆಗೆ ಯಾರನ್ನೂ ಬಂಧಿಸಿಲ್ಲ. ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

‘ಇಲ್ಲಿನ ಹಾದಿಯನ್ನು ಬಳಸಲು ನಮಗೆ ಅವಕಾಶ ನೀಡುತ್ತಿಲ್ಲ. ಬದಲಿ ಮಾರ್ಗದಲ್ಲಿ ಹೋಗುವಂತೆ ಒತ್ತಾಯಿಸುತ್ತಾರೆ. ಆ ಮಾರ್ಗದಲ್ಲಿ ಹೋದರೆ 1.5 ಕಿ.ಮೀನಷ್ಟು ಹೆಚ್ಚು ದೂರ ಕ್ರಮಿಸಬೇಕಾಗುತ್ತದೆ’ ಎಂದು ಗ್ರಾಮಸ್ಥರು ದೂರಿದ್ದಾರೆ.

ನಕ್ಸಲ್ ಮುಖಂಡನ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ಜಾರ್ಖಂಡ್‌ನಲ್ಲಿ 2024ರಲ್ಲಿ ಭದ್ರತಾ ಪಡೆಗಳ ಮೇಲೆ ನಡೆದ ನಕ್ಸಲ್ ದಾಳಿಗೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ವಿರುದ್ಧ ಎನ್‌ಐಎ ಆರೋಪ ಪಟ್ಟಿ ಸಲ್ಲಿಸಿದೆ.

ಬಿಹಾರ್‌ನ ಅಭಿಜಿತ್ ಕೊಡಾ ಅಲಿಯಾಸ್ ಸುನಿಲ್ ಕೊಡಾ ಪ್ರಮುಖ ಆರೋಪಿ. ಸಿಪಿಐನ ಶಸಸ್ತ್ರ ಪಡೆಯ ಸದಸ್ಯನಾಗಿದ್ದ ಅಭಿಜಿತ್ ಕೊಡಾ, ಹಲವು ದಾಳಿಗಳ ಹಿಂದಿನ ಪ್ರಮುಖ ಸೂತ್ರಧಾರನಾಗಿದ್ದ. ನಕ್ಸಲ್ ಮುಖಂಡರ ನಡುವೆ ಸಂಪರ್ಕ ಸೇತುವಾಗಿದ್ದುಕೊಂಡು, ಸಂಘಟನೆ ಬಲಪಡಿಸುವುದರಲ್ಲಿ ಸಕ್ರಿಯನಾಗಿದ್ದ’ ಎಂದು ಎನ್‌ಐಎ ಹೇಳಿದೆ.

ಜಾರ್ಖಂಡ್‌ನ ಬೊಕಾರೊ ಜಿಲ್ಲೆಯ ಸುಂದರಿ ಪಹರಿ ಅರಣ್ಯ ಪ್ರದೇಶದಲ್ಲಿ ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸುವಾಗ ನಕ್ಸಲರು ದಾಳಿ ನಡೆಸಿದ್ದರು.

‘ಡಿಎಂಕೆಗೆ ಮತ –ಬಿಜೆಪಿಗೆ ಹಾಕಿದಂತೆ’

ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಧ್ಯಕ್ಷ, ನಟ ವಿಜಯ್ ಹೇಳಿಕೆ

ನಾಮಕ್ಕಲ್ (ಪಿಟಿಐ): ‘ಮುಂದಿನ ವರ್ಷ ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಡಿಎಂಕೆಗೆ ಮತ ಹಾಕಿದರೆ ಬಿಜೆಪಿಗೆ ಮತ ಹಾಕಿದಂತೆ’ ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಅಧ್ಯಕ್ಷ ಹಾಗೂ ನಟ ವಿಜಯ್ ಶನಿವಾರ ಇಲ್ಲಿ ಹೇಳಿದರು.

ರಾಜ್ಯದ ಪಶ್ಚಿಮ ಭಾಗದಲ್ಲಿರುವ ಕೊಂಗು ಪ್ರದೇಶದಲ್ಲಿ ಮೊದಲ ಬಾರಿಗೆ ತಮ್ಮ ಪಕ್ಷದ ಪರ ಪ್ರಚಾರ ಆರಂಭಿಸಿದ ಅವರು, ಆಡಳಿತಾರೂಢ ಡಿಎಂಕೆ ಹಾಗೂ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ವಿರುದ್ಧವೂ ವಾಗ್ದಾಳಿ ನಡೆಸಿದರು. ಬಿಜೆಪಿ–ಎಐಎಡಿಎಂಕೆ ನಡುವಿನ ಮೈತ್ರಿಯನ್ನು ‘ಅವಕಾಶವಾದಿತನ’ ಎಂದು ಟೀಕಿಸಿದರು.

‘ಡಿಎಂಕೆಯ ಕುಟುಂಬವು ಬಿಜೆಪಿಯೊಂದಿಗೆ ನಂಟು ಹೊಂದಿದೆ. ಆದ್ದರಿಂದ ಡಿಎಂಕೆಗೆ ಮತ ಹಾಕಿದರೆ, ಅದು ಬಿಜೆಪಿಗೆ ಹಾಕಿದಂತೆ’ ಎಂದು ಪುನರುಚ್ಚರಿಸಿದ ವಿಜಯ್, ‘ತಮಿಳಗ ವೆಟ್ರಿ ಕಳಗಂ ಪಕ್ಷವು ಎಂದಿಗೂ ಸರ್ವಾಧಿಕಾರಿ ಮನೋಭಾವ ಹೊಂದಿರುವ ಕೇಸರಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ’ ಎಂದರು.

‘ಈ ಹಿಂದಿನ ಚುನಾವಣೆ ಸಂದರ್ಭ ಮತದಾರರಿಗೆ ನೀಡಿದ್ದ ಭರವಸೆಗಳನ್ನು ಡಿಎಂಕೆ ನೇತೃತ್ವದ ಹಾಲಿ ಸರ್ಕಾರವು ಈಡೇರಿಸಿದೆಯೇ’ ಎಂದು ಪ್ರಶ್ನಿಸಿದ ಟಿವಿಕೆ ವರಿಷ್ಠ, ‘ಸರ್ಕಾರಿ ನೌಕರರಿಗೆ ಇಂದಿಗೂ ಹಳೆಯ ಪಿಂಚಣಿ ಯೋಜನೆಯನ್ನು ಮರುಜಾರಿಗೊಳಿಸಿಲ್ಲ’ ಎಂದು ಟೀಕಿಸಿದರು.

> **ಮುಂಬರುವ ವಿಧಾನಸಭಾ ಚುನಾವಣೆ ಟಿವಿಕೆ–ಡಿಎಂಕೆ ನಡುವಿನ ಹಣಾಹಣಿ ಆಗಿರಲಿದೆ. ಡಿಎಂಕೆ ತಮಿಳುನಾಡನ್ನು ಲೂಟಿ ಮಾಡುತ್ತಿದ್ದರೆ, ಟಿವಿಕೆ ಜನಸಾಮಾನ್ಯರ ಧ್ವನಿಯಾಗಿದೆ**
> **ವಿಜಯ್,** ಟಿಎಂಕೆ ಅಧ್ಯಕ್ಷ

‘ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಆದರ್ಶ, ಆಶಯ ಮರೆತಿರುವ ಎಐಎಡಿಎಂಕೆ, ವೋಟಿಗಾಗಿ ಆಗಾಗ್ಗೆ ‘ಅಮ್ಮನ’ ಹೆಸರು ಜಪಿಸುತ್ತಿದ್ದು, ರಾಜ್ಯಕ್ಕೆ ಸೂಕ್ತವಲ್ಲದ ಮೈತ್ರಿಕೂಟದಲ್ಲಿದೆ’ ಎಂದು ವಾಗ್ದಾಳಿ ನಡೆಸಿದರು.

‘ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿಯು ತಮಿಳುನಾಡಿಗೆ ಏನು ಕೊಡುಗೆ ನೀಡಿದೆ? ನೀಟ್ ವ್ಯಾಪ್ತಿಯಿಂದ ವಿನಾಯಿತಿ ನೀಡಿದೆಯಾ?’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಡಿಎಂಕೆ ಕುಟುಂಬದ ಎಟಿಎಂ’ (ಕರೂರು): ‘ಮಾಜಿ ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಡಿಎಂಕೆಯ ವರಿಷ್ಠರ ಕುಟುಂಬದ ಪಾಲಿಗೆ ಎಟಿಎಂ ಆಗಿದ್ದಾರೆ’ ಎಂದು ವಿಜಯ್ ಇಲ್ಲಿ ದೂರಿದರು.

‘ಕರೂರಿನಲ್ಲಿ ‘10 ರೂಪಾಯಿ’ ಸಚಿವರ ಬಗ್ಗೆ ಮಾತನಾಡದಿದ್ದರೆ ಹೇಗೆ? ಅದು ನ್ಯಾಯವೇ? ಅವರು ಈಗಲೂ ಸಚಿವರಂತೆ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಆರೋಪಿಸಿದರು.



ಕಾಲ್ತುಳಿತದಲ್ಲಿ ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ಸಾಗಿಸಲಾಯಿತು ಪಿಟಿಐ ಚಿತ್ರ



ಗಾಯಾಳು ಮಹಿಳೆಯೊಬ್ಬರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು –ಪಿಟಿಐ ಚಿತ್ರ

ಕರೂರು ಕಾಲ್ತುಳಿತ

ಒಂದನೇ ಪುಟದಿಂದ...

‘ವಿಜಯ್ ಅವರನ್ನು ಹತ್ತಿರದಿಂದ ನೋಡಲು, ಅವರಿದ್ದ ಬಸ್‌ನ ಹತ್ತಿರಕ್ಕೆ ನುಗ್ಗಲು ಜನ ಯತ್ನಿಸಿದರು. ಇದರಿಂದಾಗಿ ಕಾಲ್ತುಳಿತ ಉಂಟಾಯಿತು. ನೂಕುನುಗ್ಗಲು ಹೆಚ್ಚಾಗಿದ್ದರಿಂದ ಕೆಲವರಿಗೆ ಉಸಿರುಗಟ್ಟಿತು. ದಟ್ಟಣೆ ಮಧ್ಯೆ ಘಟನಾ ಸ್ಥಳಕ್ಕೆ ಆಂಬುಲೆನ್ಸ್ ತಲುಪುದೂ ಕಷ್ಟವಾಯಿತು. ಇದೇ ವೇಳೆ ಪುಟ್ಟ ಮಗುವೊಂದು ಕಾಣೆಯಾಗಿದೆ’ ಎಂದು ವರದಿಯಾಗಿದೆ. ವೇದಿಕೆ ಮೇಲೆ ಇರುವಂತೆಯೇ, ಮಗುವನ್ನು ಹುಡುಕಿಕೊಡಲು ವಿಜಯ್ ಅವರು ಪೊಲೀಸರಲ್ಲಿ ಮನವಿ ಮಾಡಿದರು.

ಪ್ರಜ್ಞೆ ತಪ್ಪಿದವರನ್ನು ಕರೂರು ವೈದ್ಯಕೀಯ ಆಸ್ಪತ್ರೆ ಹಾಗೂ ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಎರಡೂ ಆಸ್ಪತ್ರೆಗಳಲ್ಲಿ ಮೃತರ ಹಾಗೂ ಪ್ರಜ್ಞೆತಪ್ಪಿದವರ ಕುಟುಂಬಸ್ಥರು ಅಳು ಮುಗಿಲು ಮುಟ್ಟಿತ್ತು. ತಮ್ಮವರಿಗಾಗಿ ಹುಡುಕಾಟ ನಡೆಸುತ್ತಿದ್ದ ದೃಶ್ಯಗಳು ಮನ ಕಲಕುವಂತಿದ್ದವು. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಭಾನುವಾರ ಕರೂರಿಗೆ ಭೇಟಿ ನೀಡುವ ಸಾಧ್ಯತೆ ಇದೆ. ಘಟನೆ ಕುರಿತು ವರದಿ ನೀಡುವಂತೆ ತಮಿಳುನಾಡು ಸರ್ಕಾರವನ್ನು ಕೇಂದ್ರ ಗೃಹ ಸಚಿವಾಲಯ ಕೇಳಿದೆ.

2024–2025ರಲ್ಲಿ ನಡೆದ ಪ್ರಮುಖ ಕಾಲ್ತುಳಿತ ಪ್ರಕರಣಗಳು

- **ಜೂನ್ 4, 2025:** ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟು, ಅನೇಕರು ಗಾಯಗೊಂಡಿದ್ದರು.
- **ಮೇ 3, 2025:** ಉತ್ತರ ಗೋವಾದ ಶಿರ್ಗೋ ಗ್ರಾಮದ ದೇವಸ್ಥಾನದ ಉತ್ಸವದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 6 ಜನರು ಮೃತಪಟ್ಟು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
- **ಫೆಬ್ರುವರಿ 15, 2025:** ಪ್ರಯಾಗ ರಾಜ್ ಕುಂಭಮೇಳಕ್ಕೆ ಹೋಗಲು ದೆಹಲಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಅಪಾರ ಸಂಖ್ಯೆಯಲ್ಲಿ ಸೇರಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ 18 ಮಂದಿ ಮೃತಪಟ್ಟಿದ್ದರು
- **ಜನವರಿ 29, 2025:** ಮಹಾ ಕುಂಭಮೇಳದಲ್ಲಿ ‘ಅಮೃತ ಸ್ನಾನ’ದ ವೇಳೆ ಉಂಟಾದ ಕಾಲ್ತುಳಿತದಲ್ಲಿ 30 ಜನರು ಮೃತಪಟ್ಟು, 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
- **ಜನವರಿ 8, 2025:** ತಿರುಮಲ ಬೆಟ್ಟದ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಉಂಟಾದ ಕಾಲ್ತುಳಿತದಲ್ಲಿ 6 ಮಂದಿ ಮೃತಪಟ್ಟು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು
- **ಜುಲೈ 2, 2024:** ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಭೋಲೆ ಬಾಬಾ ಆಯೋಜಿಸಿದ್ದ ಸತ್ಸಂಗದಲ್ಲಿ ಕಾಲ್ತುಳಿತದಿಂದ 100ರಿಂದ 120 ಮಂದಿ ಮೃತಪಟ್ಟಿದ್ದರು

ವಾಂಗ್ಚುಕ್‌ಗೆ ಪಾಕ್ ನಂಟು: ತನಿಖೆ

ಪ್ರಜಾವಾಣಿ ವಾರ್ತೆ/ ಪಿಟಿಐ



ಲೇಹ್: ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರಿಗೆ ಪಾಕಿಸ್ತಾನದೊಂದಿಗೆ ನಂಟು ಇತ್ತು ಎಂಬ ಆರೋಪದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಲಡಾಖ್ ಪೊಲೀಸ್ ಮಹಾ ನಿರ್ದೇಶಕ ಎಸ್‌.ಡಿ.ಸಿಂಗ್ ಜಾಮ್‌ವಾಲ್ ಶನಿವಾರ ತಿಳಿಸಿದರು.

ಪಾಕಿಸ್ತಾನಕ್ಕೆ ಗುಪ್ತಚರ ಮಾಹಿತಿ ನೀಡುತ್ತಿದ್ದ ವ್ಯಕ್ತಿಯನ್ನು ಕಳೆದ ತಿಂಗಳು ಬಂಧಿಸಲಾಗಿದ್ದು, ಆತ ವಾಂಗ್ಚುಕ್ ಅವರ ಪ್ರತಿಭಟನೆಯ ವಿಡಿಯೊ ಹಂಚಿಕೊಂಡಿದ್ದ. ಹೀಗಾಗಿ ಈ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದರು.

ವಾಂಗ್ಚುಕ್ ಅವರ ಭಾಷಣಗಳು ಗಲಭೆಗೆ ಪ್ರಚೋದನೆ ನೀಡಿವೆ ಎಂದು ಅವರು ಆರೋಪಿಸಿದರು.

ವಾಂಗ್ಚುಕ್ ಅವರ ವಿದೇಶ ಭೇಟಿಗಳು ಅನುಮಾನಾಸ್ಪದವಾಗಿದ್ದು, ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಅವರು ಪಾಕಿಸ್ತಾನದ ಡಾನ್‌ನಲ್ಲಿ ನಡೆದ ಕಾರ್ಯಕ್ರಮಕ್ಕೆ ಮತ್ತು ಬಾಂಗ್ಲಾದೇಶಕ್ಕೆ ಭೇಟಿ ನೀಡಿದ್ದರು ಎಂದು ಹೇಳಿದರು. ಬಂಧಿತ ವಾಂಗ್ಚುಕ್ ಅವರನ್ನು ರಾಜಸ್ಥಾನದ ಜೋಧಪುರ ಕಾರಾಗೃಹದಲ್ಲಿ ಇರಿಸಲಾಗಿದೆ.

ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಮತ್ತು ಅರೆಸೇನಾ ಪಡೆಯು ಗಸ್ತು ತೀವ್ರಗೊಳಿಸಿವೆ. ತಲೆಮರೆಸಿಕೊಂಡಿರುವ ಗಲಭೆಕೋರರ ಬಂಧನಕ್ಕಾಗಿ ಶೋಧ ನಡೆಸಲಾಗುತ್ತಿದೆ. ಲೆಫ್ಟಿನೆಂಟ್ ಗವರ್ನರ್ ಕವೀಂದರ್ ಗುಪ್ತಾ ನೇತೃತ್ವದ ಉನ್ನತ ಮಟ್ಟದ ಸಭೆಯಲ್ಲಿ ಕೇಂದ್ರಾಡಳಿತ ಪ್ರದೇಶದ ಕಾನೂನು ಸುವ್ಯವಸ್ಥೆಯ ಕುರಿತು ಚರ್ಚಿಸಲಾಯಿತು.

ಕರ್ಫ್ಯೂ ಸಡಿಲಿಕೆ

ಶ್ರೀನಗರ: ಲಡಾಖ್‌ಗೆ ರಾಜ್ಯದ ಸ್ಥಾನಮಾನ ನೀಡುವಂತೆ ಆಗ್ರಹಿಸಿ ಲೇಹ್‌ನಲ್ಲಿ ನಡೆದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿದ ಬೆನ್ನಲ್ಲೇ ನಗರದಲ್ಲಿ ಜಾರಿಗೊಳಿಸಿದ್ದ ಕರ್ಫ್ಯೂವನ್ನು ಮೂರು ದಿನಗಳ ಬಳಿಕ ಶನಿವಾರ ಸಡಿಲಿಸಲಾಗಿದೆ. ಹಂತಹಂತವಾಗಿ ಕರ್ಫ್ಯೂ ಸಡಿಲಿಸಲಾಗುತ್ತದೆ. ಹಳೆಯ ನಗರದಲ್ಲಿ ಮಧ್ಯಾಹ್ನ 1ರಿಂದ 3ಗಂಟೆವರೆಗೆ, ಹೊಸ ಪ್ರದೇಶದಲ್ಲಿ ಮಧ್ಯಾಹ್ನ 3.30ರಿಂದ 5.30ರವರೆಗೆ ನಿರ್ಬಂಧವನ್ನು ಸಡಿಲಿಸಲಾಗುತ್ತದೆ. ಮುಂದಿನ ಹಂತದ ಕರ್ಫ್ಯೂ ಸಡಿಲಿಕೆಗೂ ಮುನ್ನ ಪರಿಸ್ಥಿತಿಯನ್ನು ಅವಲೋಕಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾಂಗ್ಚುಕ್ ಬಂಧನದ ಸಮರ್ಥನೆ

ಲೆಫ್ಟಿನೆಂಟ್ ಗವರ್ನರ್ ನೇತೃತ್ವದ ಆಡಳಿತವು ಶುಕ್ರವಾರ ತಡರಾತ್ರಿ ಹೇಳಿಕೆ ಬಿಡುಗಡೆ ಮಾಡಿ, ವಾಂಗ್ಚುಕ್ ಅವರ ಬಂಧನವನ್ನು ಸಮರ್ಥಿಸಿಕೊಂಡಿದೆ. ವಾಂಗ್ಚುಕ್ ಅವರ ನಿರಂತರ ಪ್ರಚೋದನಕಾರಿ ಭಾಷಣಗಳು, ನೇಪಾಳ ಚಳವಳಿಯ ಉಲ್ಲೇಖದಿಂದಲೇ ಬುಧವಾರ ನಗರದಲ್ಲಿ ಹಿಂಸಾಚಾರ ನಡೆದು ನಾಲ್ವರು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ ಎಂದು ಅದು ಹೇಳಿದೆ.

ಲೇಹ್‌ನಲ್ಲಿ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತರಲು ವಾಂಗ್ಚುಕ್ ಅವರ ಬಂಧನ ಅವಶ್ಯಕವಾಗಿತ್ತು ಎಂದು ತಿಳಿಸಿದೆ.

48 ಗಂಟೆ ಇಂಟರ್ನೆಟ್ ಸಂಪರ್ಕ ಸ್ಥಗಿತ; ಜಾಲತಾಣಗಳ ಮೇಲೆ ನಿಗಾ

ಬರೇಲಿ ಹಿಂಸಾಚಾರ: 8 ಮಂದಿ ಸೆರೆ

ಲಖನೌ (ಪಿಟಿಐ): ಬರೇಲಿಯಲ್ಲಿ ಶುಕ್ರವಾರ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ‘ಐ ಲವ್ ಮಹಮದ್’ ಪ್ರದರ್ಶನ ಜಾಥಾ ಆಯೋಜಿಸಿದ್ದ ಸ್ಥಳೀಯ ಧರ್ಮಗುರು ಮೌಲಾನಾ ತೌಕೀರ್ ರಜಾ ಖಾನ್ ಸೇರಿ 8 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ನ್ಯಾಯಾಲಯ ಆರೋಪಿಗಳನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿದೆ.

ಸಿ.ಸಿ.ಟಿ.ವಿ. ದೃಶ್ಯ ಆಧರಿಸಿ ಹಿಂಸಾಚಾರದಲ್ಲಿ ಭಾಗಿಯಾದ 39 ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಜಾಲತಾಣಗಳ ಮೂಲಕ ಕೋಮು ಸಂಘರ್ಷದ ಕಿಡಿ ವ್ಯಾಪಿಸುವುದನ್ನು ತಡೆಯಲು ಬರೇಲಿ ಮತ್ತು ಸುತ್ತಲಿನ ಜಿಲ್ಲೆಗಳಲ್ಲಿ 48 ಗಂಟೆ ಇಂಟರ್ನೆಟ್ ಸಂಪರ್ಕ ಸ್ಥಗಿತಗೊಳಿಸಲಾಗಿದೆ. ಪೊಲೀಸರು ಅರೆಸೇನಾ ಪಡೆ ಸೇರಿ 8 ಸಾವಿರ ಸಿಬ್ಬಂದಿ ಭದ್ರತೆಗೆ ನಿಯೋಜನೆಗೊಂಡಿದ್ದಾರೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇದುವರೆಗೆ ವಿವಿಧ ಠಾಣೆಗಳಲ್ಲಿ ಒಟ್ಟು 10 ಪ್ರಕರಣಗಳು ದಾಖಲಾಗಿವೆ. ಘಟನೆಯಲ್ಲಿ 22 ಪೊಲೀಸರು ಗಾಯಗೊಂಡಿದ್ದಾರೆ. ಇಲ್ಲಿನ ಇಸ್ಲಾಮಿಯಾ ಕ್ಯಾಂಪಸ್‌ನಿಂದ ಜೀವಂತ ಕಾಟ್ರಿಜ್‌ಗಳು, ದೇಸಿ ನಿರ್ಮಿತ ಪಿಸ್ತೂಲ್ ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ರಾಜಕೀಯವಾಗಿ ಸಕ್ರಿಯ

ಇತ್ತೇಹಾದ್-ಎ-ಮಿಲತ್ ಕೌನ್ಸಿಲ್ ಕಳೆದ ಎರಡು ದಶಕಗಳಿಂದ ರಾಜಕೀಯವಾಗಿ ಸಕ್ರಿಯವಾಗಿದೆ. ಬರೇಲಿ ಮತ್ತು ಸಮೀಪದ ಜಿಲ್ಲೆಗಳಲ್ಲಿ ಪ್ರಭಾವ ಹೊಂದಿದೆ. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ವಿರೋಧಿಸಿ 2019–20ರಲ್ಲಿ ನಡೆದ ಪ್ರತಿಭಟನೆಯಲ್ಲೂ ರಜಾ ಖಾನ್ ಪ್ರಚೋದನಕಾರಿ ಭಾಷಣದ ಮೂಲಕ ಕೋಮು ಅಶಾಂತಿ ಸೃಷ್ಟಿಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಬರೇಲಿಯಲ್ಲಿ ಬಿಗಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

‘ಯಾರ ಆಡಳಿತ ಎಂದು ಮರೆತಿದ್ದಾನೆ’

ಬರೇಲಿಯಲ್ಲಿ ಶುಕ್ರವಾರ ನಡೆದ ಹಿಂಸಾಚಾರವನ್ನು ಖಂಡಿಸಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ‘ಬೀದಿಗಿಳಿದು ಪ್ರತಿಭಟನೆ ನಡೆಸುವ ಮೂಲಕ ಯಾರೂ ವ್ಯವಸ್ಥೆಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದು ಎಚ್ಚರಿಕೆ ನೀಡಿದ್ದಾರೆ.

‘ಕಾನೂನು ಸುವ್ಯವಸ್ಥೆಗೆ ಅಡ್ಡಿಪಡಿಸುವುದನ್ನು ಸರ್ಕಾರ ಸಹಿಸುವುದಿಲ್ಲ. ಪ್ರತಿಭಟನೆ ಹೆಸರಿನಲ್ಲಿ ಹಿಂಸಾಚಾರಕ್ಕೆ ಇಳಿಯುವ ಮುನ್ನ ಭವಿಷ್ಯದ ತಲೆಮಾರು ಎರಡು ಬಾರಿ ಯೋಚಿಸಬೇಕು’ ಎಂದು ಅವರು ಹೇಳಿದ್ದಾರೆ.

ಎಂಜಲಿಂದ ಪುಟ ತಿರುಗಿಸಲು ಕೋರ್ಟ್ ಆಕ್ಷೇಪ



ಲಖನೌ (ಪಿಟಿಐ): ನ್ಯಾಯಾಲಯದ ಕಡತಗಳ ಪುಟಗಳನ್ನು ತಿರುಗಿಸಲು ಕೆಲ ಸಿಬ್ಬಂದಿ ಎಂಜಲು ಅಥವಾ ಲಾಲಾರಸವನ್ನು ಬಳಸುವ ‘ಅತ್ಯಂತ ಅನೈರ್ಮಲ್ಯ’ ಅಭ್ಯಾಸದಲ್ಲಿ ತೊಡಗಿದ್ದಾರೆ. ಅದರಲ್ಲೂ ಪಾನ್ ಮಸಾಲಾ ಅಥವಾ ಎಲೆ–ಅಡಿಕೆ ಅಗಿಯುವವರು ಹೀಗೆ ಮಾಡಿದರೆ ಹಾಳೆಯ ಮೇಲೆ ಕೆಂಪು ಕಲೆಗಳಾಗುತ್ತವೆ. ಇದು ಸೋಂಕಿನ ಅಪಾಯ ಒಡ್ಡುತ್ತದೆ ಎಂದು ಅಲಹಾಬಾದ್ ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಅರ್ಜಿಯೊಂದರ ವಿಚಾರಣೆ ನಡೆಸಲು ಕಡತಗಳನ್ನು ಕೈಗೆತ್ತಿಕೊಂಡ ಪೀಠವು, ಹಾಳೆಗಳಲ್ಲಿ ಕೆಂಪು ಗುರುತುಗಳು ಇರುವುದು ಹಾಗೂ ಪ್ರತಿನಿತ್ಯವೂ ಇದು ಚಾಳಿಯಂತಾಗಿರುವುದನ್ನು ಗಮನಿಸಿತು.

‘ಎಂಜಲಿನ ಕೆಂಪು ಗುರುತುಗಳಿರುವ ಕಡತಗಳನ್ನು ಸ್ವೀಕರಿಸದಂತೆ ನ್ಯಾಯಾಲಯದ ನೋಂದಣಿ ಹಾಗೂ ಸರ್ಕಾರಿ ಕಾನೂನು ಕಚೇರಿಗಳಿಗೆ ನ್ಯಾಯಮೂರ್ತಿ ಶ್ರೀ ಪ್ರಕಾಶ್ ಸಿಂಗ್ ಅವರಿದ್ದ ಪೀಠವು ಸೆ.22ರಂದು ನಿರ್ದೇಶನ ನೀಡಿತು.

‘ಎಂಜಲು ಬಳಸಿ ಪುಟ ತಿರುಗಿಸುವ ಈ ಅಸಹ್ಯಕರ ಮತ್ತು ಖಂಡನೀಯ ಅಭ್ಯಾಸವು ವಕೀಲರ ಸಹಾಯಕರು, ನೋಂದಣಿ ಅಧಿಕಾರಿಗಳು ಅಥವಾ ಸರ್ಕಾರಿ ವಕೀಲರ ಕಚೇರಿ ಮತ್ತು ಮುಖ್ಯ ವಕೀಲರ ಕಚೇರಿಗಳಲ್ಲಿ ಕಡತಗಳನ್ನು ಸಿದ್ಧಪಡಿಸುವಾಗ ನಡೆಯುತ್ತಿದೆ’ ಎಂದು ಪೀಠವು ತಿಳಿಸಿತು.

‘ಈ ಕೊಳಕು ಅಭ್ಯಾಸವನ್ನು ನಿಲ್ಲಿಸದಿದ್ದರೆ, ಇಂಥ ಕಡತಗಳನ್ನು ಮುಟ್ಟುವವರಿಗೆ ಸೋಂಕು ಹರಡಬಹುದು. ನ್ಯಾಯಾಲಯದ ಒಳಬರುವ ಎಲ್ಲಾ ಕಡತಗಳು, ಪುಸ್ತಕಗಳು ಹಾಗೂ ಅರ್ಜಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು’ ಎಂದು ಹಿರಿಯ ನೋಂದಣಿ ಅಧಿಕಾರಿಗಳಿಗೆ ನಿರ್ದೇಶಿಸಿತು.

ಅ.4, 5ರಂದು ಬಿಹಾರಕ್ಕೆ ಇಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ ವಿಧಾನಸಭಾ ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಲು ಚುನಾವಣಾ ಆಯೋಗವು (ಇಸಿ) ಮುಂದಿನ ವಾರಾಂತ್ಯಕ್ಕೆ ಭೇಟಿ ನೀಡಲಿದೆ. ಇದು ಚುನಾವಣಾ ವೇಳಾಪಟ್ಟಿಯ ಅಧಿಕೃತ ಘೋಷಣೆಗೆ ಕ್ಷಣಗಣನೆ ಆರಂಭವಾಗಿರುವುದನ್ನು ಸೂಚಿಸುತ್ತದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಅ.4 ಮತ್ತು 5ರಂದು ಪಟ್ನಾದಲ್ಲಿ ಇರಲಿದ್ದು, ರಾಜ್ಯ ಮುಖ್ಯ ಚುನಾವಣಾಧಿಕಾರಿ ಮತ್ತು ಇತರ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ನ.22ರ ಮೊದಲು ಚುನಾವಣಾ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ಪೂರ್ಣಗೊಳಿಸಬೇಕು. ಅ.5ರ ನಂತರ ಯಾವುದೇ ಸಮಯದಲ್ಲಿ ಬಿಹಾರ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸುವ ಸಾಧ್ಯತೆಯಿದೆ.

ಅತಿಥಿ ಉಪನ್ಯಾಸಕರ ನೇಮಕ: ತಜ್ಞರ ಜತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರಿಗೆ ಯುಜಿಸಿ ಅರ್ಹತೆ ಪಡೆಯಲು ಮೂರು ವರ್ಷಗಳ ಕಾಲಮಿತಿ ನಿಗದಿ ಮಾಡಿ, 2025–26ನೇ ಸಾಲಿಗೆ ಮುಂದುವರಿಸುವ ಕುರಿತು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಶನಿವಾರ ಕಾನೂನು ತಜ್ಞರ ಜತೆ ಚರ್ಚೆ ನಡೆಸಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಇಲ್ಲವೇ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್‌.ಡಿ ಪಡೆದಿರಬೇಕು ಎಂದು ಕೆಲ ವರ್ಷಗಳ ಹಿಂದೆಯೇ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಮ ರೂಪಿಸಿತ್ತು. ಪ್ರಥಮ ದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರನ್ನೇ ನೇಮಿಸಿಕೊಳ್ಳಲು ಸೂಚಿಸಿತ್ತು.

‘ರಾಜ್ಯದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡಿಮೆ ಗೌರವಧನ ಪಡೆದು ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ಯುಜಿಸಿ ಅರ್ಹತೆ ಪಡೆಯದ ಅತಿಥಿ ಉಪನ್ಯಾಸಕರನ್ನು ಮಾನವೀಯ ನೆಲೆಗಟ್ಟಿನಲ್ಲಿ ಮುಂದುವರಿಸುವ ಹಾಗೂ ಹೈಕೋರ್ಟ್ ತೀರ್ಪಿನ ಅನ್ವಯ ಕಾನೂನು ತೊಡಕು ಎದುರಾಗದಂತೆ ಪರಿಹಾರ ಕಂಡುಕೊಳ್ಳುವ ಕುರಿತು ಚರ್ಚೆ ನಡೆಸಲಾಗಿದೆ. ಆದರೆ, ಅಂತಿಮ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಮುಖ್ಯಮಂತ್ರಿ ಜತೆ ಚರ್ಚೆ ನಡೆಸಿ, ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬೆಂಗಳೂರು ಸೇರಿ 12 ಕಡೆ ಸಿಬಿಐ ಶೋಧ

ನವದೆಹಲಿ (ಪಿಟಿಐ): ಮನೆ ಮಾರಾಟ, ಗೃಹಸಾಲ ಯೋಜನೆಗಳ ಹೆಸರಿನಲ್ಲಿ ಜನರನ್ನು ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು, ಕೋಲ್ಕತ್ತ, ಮುಂಬೈ ಸೇರಿದಂತೆ 12 ಪ್ರದೇಶಗಳಲ್ಲಿ ಸಿಬಿಐ ಶನಿವಾರ ಶೋಧ ಕಾರ್ಯಾಚರಣೆ ನಡೆಸಿದೆ.

ಜತೆಗೆ ಕೆಲವು ಬಿಲ್ಡರ್‌ಗಳು ಹಾಗೂ ಹಣಕಾಸು ಸಂಸ್ಥೆಗಳ ವಿರುದ್ಧ 6 ಪ್ರಕರಣಗಳನ್ನೂ ದಾಖಲಿಸಿರುವುದಾಗಿ ತಿಳಿಸಿದೆ.

ದೆಹಲಿ ಎನ್‌ಸಿಆರ್ ಪ್ರದೇಶದಲ್ಲೂ ತನಿಖೆ ನಡೆಸಿ, 22 ಪ್ರಕರಣ ದಾಖಲಿಸಲಾಗಿದೆ ಎಂದೂ ಸಿಬಿಐ ತಿಳಿಸಿದೆ.

ಧರ್ಮಸ್ಥಳ ಪ್ರಕರಣ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ

‘ವಾಸ್ತವ ತಿಳಿಸುವುದು ಸರ್ಕಾರದ ಉದ್ದೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ಪ್ರಕರಣದಲ್ಲಿ ಜನರಿಗೆ ವಾಸ್ತವಾಂಶ ತಿಳಿಸುವುದಷ್ಟೇ ರಾಜ್ಯ ಸರ್ಕಾರದ ಉದ್ದೇಶ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

‘ಎಸ್‌ಐಟಿ ರಚನೆಯಿಂದ ನನ್ನ ಮೇಲಿದ್ದ ಕಳಂಕ ಕಳೆಯುತ್ತಿದೆ’ ಎಂಬ ವೀರೇಂದ್ರ ಹೆಗ್ಗಡೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಹೆಗ್ಗಡೆಯವರ ಹೇಳಿಕೆಯನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ತನಿಖಾ ವರದಿ ಬರುವ ಮೊದಲೇ ಈ ಕುರಿತು ಪ್ರತಿಕ್ರಿಯೆ ನೀಡುವುದರಲ್ಲಿ ಅರ್ಥವಿಲ್ಲ’ ಎಂದರು.

‘ಎಸ್‌ಐಟಿ ವರದಿ ಬಂದ ನಂತರ ಮುಖ್ಯಮಂತ್ರಿ ಅಥವಾ ಗೃಹ ಸಚಿವರು ಅಧಿಕೃತ ಹೇಳಿಕೆ ನೀಡಬೇಕು. ನಂತರ ನಾನು ಮಾತನಾಡುತ್ತೇನೆ’ ಎಂದರು.

‘ರಾಜಕೀಯವಾಗಿ ಯಾರು ಏನು ಬೇಕಾದರೂ ಮಾತನಾಡಬಹುದು. ನಾನು ಸರ್ಕಾರದ ಪ್ರತಿನಿಧಿ. ಹೀಗಾಗಿ ಬೇರೆಯವರಂತೆ ಮಾತನಾಡಲು ಬರುವುದಿಲ್ಲ’ ಎಂದೂ ಹೇಳಿದರು.

‘ಸುಪ್ರೀಂ ಕೋರ್ಟಿನಲ್ಲಿ ಪಿಐಎಲ್ ವಜಾ ಆಗಿದ್ದರೂ ಸರ್ಕಾರದ ದಾರಿತಪ್ಪಿಸುವ ಕೆಲಸ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುತ್ತೀರಾ’ ಎಂಬ ಪ್ರಶ್ನೆಗೆ, ‘ಈಗ ಆ ವಿಚಾರ ಚರ್ಚೆ ಬೇಡ. ಸುಪ್ರೀಂ ಕೋರ್ಟಿನಲ್ಲಿ ಹಾಕಿದ್ದ ಅರ್ಜಿ ವಜಾಗೊಂಡಿರುವುದು, ಪಿಐಎಲ್ ಹಾಕಿದವರಿಗೆ ಸ್ಥಳೀಯವಾಗಿ ತನಿಖೆ ಮಾಡಲಿ ಎಂದು ಕೋರ್ಟ್ ಬೈದು ಕಳುಹಿಸಿರುವುದು ಎಲ್ಲವೂ ಗೊತ್ತಿದೆ. ದೆಹಲಿಗೆ ಬುರುಡೆ ತೆಗೆದುಕೊಂಡು ಹೋಗಿದ್ದರ ಮಾಹಿತಿ ಇದೆ. ಆದರೆ, ತನಿಖಾ ತಂಡದಿಂದ ನಮಗೆ ವರದಿ ಬರಲಿ’ ಎಂದರು.

ಸಾಕ್ಷಿ ದೂರುದಾರನ ಹೇಳಿಕೆ ದಾಖಲಿಸುವಿಕೆ ಪೂರ್ಣ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಅಪರಾಧ ನಡೆದಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿ ದೂರುದಾರನ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಶನಿವಾರ ಪೂರ್ಣಗೊಂಡಿತು.

‘ಸಾಕ್ಷಿ ದೂರುದಾರನು ನ್ಯಾಯಾಧೀಶರ ಸಮ್ಮುಖದಲ್ಲಿ ಹೇಳಿಕೆ ನೀಡಿದ್ದಾನೆ’ ಎಂದು ಎಸ್‌ಐಟಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಶಿವಮೊಗ್ಗ ಜೈಲಿನಲ್ಲಿದ್ದ ಸಾಕ್ಷಿ ದೂರುದಾರನನ್ನು ಪೊಲೀಸರು ಕೋರ್ಟ್‌ಗೆ ಬೆಳಿಗ್ಗೆ ಹಾಜರು ಪಡಿಸಿದರು. ಸಂಜೆ 4.30ರ ಬಳಿಕ ಬಿಗಿ ಭದ್ರತೆಯಲ್ಲಿ ಶಿವಮೊಗ್ಗ ಜೈಲಿಗೆ ಕರೆದೊಯ್ಯಲಾಯಿತು. ಈ ಪ್ರಕರಣ ಸಂಬಂಧ ಸಾಕ್ಷಿ ದೂರುದಾರ ಸೆ.23, ಸೆ.25 ಹಾಗೂ ಶನಿವಾರ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದಾನೆಎಂದು ಮೂಲಗಳು ತಿಳಿಸಿವೆ.

ಗಡಿಪಾರು ವಿರುದ್ಧ ಪ್ರತಿಭಟನೆಗೆ ಅನುಮತಿ ನಿರಾಕರಣೆ

ಉಜಿರೆ (ದಕ್ಷಿಣ ಕನ್ನಡ): ಮಹೇಶ್ ಶೆಟ್ಟಿ ತಿಮರೋಡಿ ಅವರ ಗಡಿಪಾರು ಆದೇಶದ ವಿರುದ್ಧ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯು ಬೆಳ್ತಂಗಡಿಯಲ್ಲಿ ಇದೇ 29ರಂದು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಗೆ ಬೆಳ್ತಂಗಡಿ ತಹಶೀಲ್ದಾರ್ ಪೃಥ್ವಿ ಸಾನಿಕಂ ಅನುಮತಿ ನಿರಾಕರಿಸಿದ್ದಾರೆ.

ತಿಮರೋಡಿ ಅವರನ್ನು ರಾಯಚೂರು ಜಿಲ್ಲೆಗೆ ವರ್ಷದ ಮಟ್ಟಿಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗಿಸ್ ಈಚೆಗೆ ಆದೇಶಿಸಿದ್ದರು.

‘ಪ್ರತಿಭಟನೆ ಅನುಮತಿ ನೀಡಿದರೆ, ಸಾರ್ವಜನಿಕ ಶಾಂತಿಗೆ ಭಂಗ ಆಗುವ ಸಾಧ್ಯತೆ ಇದೆ ಎಂದು ಪೊಲೀಸರು ವರದಿ ನೀಡಿದ್ದಾರೆ. ಹಾಗಾಗಿ ಅನುಮತಿ ನೀಡಲಾಗದು’ ಎಂದು ತಹಶೀಲ್ದಾರ್ ಹಿಂಬರಹ ನೀಡಿದ್ದಾರೆ.

ವಿಚಾರಣೆ ಮುಂದೂಡಿಕೆ: ಮನೆಯಲ್ಲಿ ಶಸ್ತ್ರಾಸ್ತ್ರ ಪತ್ತೆ ಪ್ರಕರಣದಲ್ಲಿ ತಿಮರೋಡಿ ಅವರಿಗೆ ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿ ವಿಚಾರಣೆಯನ್ನು ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಇದೇ 30ಕ್ಕೆ ಮುಂದೂಡಿದೆ.

ಅಂಡಮಾನ್‌ನಲ್ಲಿ ತೈಲ ನಿಕ್ಷೇಪ ಪತ್ತೆ

ನವದೆಹಲಿ (ಪಿಟಿಐ): ಅಂಡಮಾನ್ ದ್ವೀಪದ ಬಳಿ ತೈಲ ನಿಕ್ಷೇಪ ಪತ್ತೆ ಆಗಿದೆ ಎಂದು ಸರ್ಕಾರಿ ಸ್ವಾಮ್ಯದ ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್) ತಿಳಿಸಿದೆ. ಆದರೆ, ಪತ್ತೆಯಾದ ನಿಕ್ಷೇಪದ ಅಂದಾಜನ್ನು ತಿಳಿಸಿಲ್ಲ.

ಅಂಡಮಾನ್ ಸಮುದ್ರ ಪ್ರದೇಶದ ವಿಜಯಪುರಂ–2ರ ಎರಡನೇ ಬಾವಿಯಲ್ಲಿ ನಿಕ್ಷೇಪ ಪತ್ತೆಯಾಗಿದೆ.

ಆಯಿಲ್ ಇಂಡಿಯಾ ಲಿಮಿಟೆಡ್ ಮತ್ತು ತೈಲ ಮತ್ತು ನೈಸರ್ಗಿಕ ಅನಿಲ ನಿಗಮವು (ಒಎನ್‌ಜಿಸಿ) ಅಂಡಮಾನ್ ಸಮುದ್ರದಲ್ಲಿ ಹೈಡ್ರೋಕಾರ್ಬನ್ ನಿಕ್ಷೇಪದ ಪತ್ತೆಗಾಗಿ ಸಂಶೋಧನೆ ನಡೆಸುತ್ತಿವೆ.

ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಒಎನ್‌ಜಿಸಿ ಅಂಡಮಾನ್ ಸಮುದ್ರದಲ್ಲಿ ತೈಲ ನಿಕ್ಷೇಪ ಪತ್ತೆ ಹಚ್ಚಲು ಪ್ರಯತ್ನಿಸಿತ್ತು. ಆದರೆ, ಪ್ರಯತ್ನಕ್ಕೆ ಫಲ ದೊರೆತಿದೆಯೇ ಎಂಬುದು ತಿಳಿದುಬಂದಿಲ್ಲ.

ಅಂಡಮಾನ್ ದ್ವೀಪದ ಪೂರ್ವ ಕರಾವಳಿಯಿಂದ 9.20 ನಾಟಿಕಲ್ ಮೈಲು (17 ಕಿ.ಮೀ) ದೂರದಲ್ಲಿನ ಬಾವಿಯಲ್ಲಿ ತೈಲ ನಿಕ್ಷೇಪ ಪತ್ತೆ ಆಗಿದೆ ಎಂದು ಕೇಂದ್ರ ತೈಲ ಸಚಿವ ಹರದೀಪ್ ಸಿಂಗ್ ಪುರಿ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಬಿಪಿಎಸ್‌ಎಲ್ ಪುನರುಜ್ಜೀವನಕ್ಕೆ ಅಸ್ತು

ಎನ್‌ಸಿಎಲ್‌ಎಟಿ ಕ್ರಮ ಎತ್ತಿಹಿಡಿದು ಸುಪ್ರೀಂ ಕೋರ್ಟ್‌ನಿಂದ ಮಹತ್ವದ ತೀರ್ಪು, ಎಂಟು ವರ್ಷಗಳ ಕಾನೂನು ಸಮರ ಅಂತ್ಯ

ನವದೆಹಲಿ (ಪಿಟಿಐ): ಸಾಲದ ಸುಳಿಯಲ್ಲಿದ್ದ ಭೂಷಣ್ ಪವರ್ ಆ್ಯಂಡ್ ಸ್ಟೀಲ್ ಲಿಮಿಟೆಡ್ (ಬಿಪಿಎಸ್‌ಎಲ್) ಕಂಪನಿಯ ಪುನರುಜ್ಜೀವನಕ್ಕೆ ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಸಲ್ಲಿಸಿದ್ದ ₹19,700 ಕೋಟಿಯ ಯೋಜನೆಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಈ ಮೂಲಕ ಸರಿಸುಮಾರು ಎಂಟು ವರ್ಷಗಳ ಕಾನೂನು ಸಮರವೊಂದು ಕೊನೆಗೊಂಡಂತೆ ಆಗಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮ ಹಾಗೂ ಕೆ. ವಿನೋದ್ ಚಂದ್ರನ್ ಅವರು ಇದ್ದ ತ್ರಿಸದಸ್ಯ ಪೀಠವು, ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) 2020ರ ಫೆಬ್ರುವರಿ 17ರಂದು ನೀಡಿದ್ದ ಆದೇಶವನ್ನು ಎತ್ತಿಹಿಡಿದಿದೆ.



₹19,700 ಕೋಟಿಗೆ ಬಿಪಿಎಸ್‌ಎಲ್ ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳಲು ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಗೆ ಎನ್‌ಸಿಎಲ್‌ಎಟಿ ಅಸ್ತು ಎಂದಿತ್ತು.

ಇದಕ್ಕೂ ಮೊದಲು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವೊಂದು, ಬಿಪಿಎಸ್‌ಎಲ್ ಕಂಪನಿಯ ಪುನರುಜ್ಜೀವನಕ್ಕೆ ಜೆಎಸ್‌ಡಬ್ಲ್ಯು ಸ್ಟೀಲ್ ಸಲ್ಲಿಸಿದ್ದ ಯೋಜನೆಯನ್ನು ತಿರಸ್ಕರಿಸಿತ್ತು. ಈ ಯೋಜನೆಯು ಕಾನೂನುಬಾಹಿರ ಹಾಗೂ ದಿವಾಳಿ ಸಂಹಿತೆಯ (ಐಬಿಸಿ) ಉಲ್ಲಂಘನೆ ಎಂದು ಕೂಡ ಹೇಳಿತ್ತು.

ಬಿಪಿಎಸ್‌ಎಲ್ ಕಂಪನಿಯ ಪುನರುಜ್ಜೀವನಕ್ಕೆ ನಡೆಸಿದ ಪ್ರಕ್ರಿಯೆಯಲ್ಲಿ ಎಲ್ಲ ಪ್ರಮುಖ ಪಾಲುದಾರರ ನಡೆಯ ಬಗ್ಗೆ ದ್ವಿಸದಸ್ಯ ಪೀಠವು ಆಕ್ಷೇಪ ದಾಖಲಿಸಿತ್ತು. ದ್ವಿಸದಸ್ಯ ಪೀಠದ ತೀರ್ಪನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಶೀಲಿಸಲು, ಅವುಗಳ ವಿಚಾರಣೆ ನಡೆಸಲು ಸಿಜೆಐ ನೇತೃತ್ವದ ಪೀಠವು ಒಪ್ಪಿತ್ತು.

ಜೆಎಸ್‌ಡಬ್ಲ್ಯು ಸ್ಟೀಲ್ ಸಲ್ಲಿಸಿದ್ದ ಯೋಜನೆಯನ್ನು ತಿರಸ್ಕರಿಸಿ, ಬಿಪಿಎಸ್‌ಎಲ್ ಕಂಪನಿಯ ಪರಿಸಮಾಪ್ತಿಗೆ ದ್ವಿಸದಸ್ಯ ಪೀಠವು ಮೇ 2ರಂದು ಸೂಚಿಸಿತ್ತು. ಈ ಸೂಚನೆಯನ್ನು ಸಿಜೆಐ ನೇತೃತ್ವದ ಪೀಠವು ಜುಲೈ 31ರಂದು ಹಿಂಪಡೆದಿತ್ತು.

'ದೀರ್ಘಕಾಲದ ವಿಳಂಬದ ನಂತರದಲ್ಲಿ ಪುನರುಜ್ಜೀವನ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. ಗಣನೀಯ ಪ್ರಮಾಣದಲ್ಲಿ ನಷ್ಟ ಅನುಭವಿಸುತ್ತಿದ್ದ ಸಾಲಗಾರ ಸಂಸ್ಥೆಯು (ಬಿಪಿಎಸ್‌ಎಲ್) ಈಗ ಲಾಭ ಗಳಿಸುತ್ತಿದೆ' ಎಂದು ಸಿಜೆಐ ಪೀಠದ ತೀರ್ಪಿನಲ್ಲಿ ಹೇಳಲಾಗಿದೆ. ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ಬಿಪಿಎಸ್‌ಎಲ್‌ಗಾಗಿ ದೊಡ್ಡ ಮೊತ್ತದ ಹೂಡಿಕೆ ಮಾಡಿದೆ ಎಂದು ಉಲ್ಲೇಖಿಸಲಾಗಿದೆ.

'ಇಷ್ಟೇ ಅಲ್ಲ, ಜೆಎಸ್‌ಡಬ್ಲ್ಯು ಸಿದ್ಧಪಡಿಸಿದ ಯೋಜನೆಯ ಅನುಷ್ಠಾನದಿಂದಾಗಿ ಬಿಪಿಎಸ್‌ಎಲ್ ಕಂಪನಿಯು ಲಾಭ ಗಳಿಸಿ, ಸಹಸ್ರಾರು ನೌಕರರು ಜೀವನೋಪಾಯ ಕಂಡುಕೊಂಡಿದ್ದಾರೆ. ಹೀಗಾಗಿ, ದಿವಾಳಿ ಸಂಹಿತೆಯನ್ನು ರೂಪಿಸಿದ ಉದ್ದೇಶ ಈಡೇರಿರುವುದು ಮಾತ್ರವಲ್ಲದೆ, ಬಿಪಿಎಸ್‌ಎಲ್ ಕಂಪನಿಯಲ್ಲಿಯೂ ಪರಿವರ್ತನೆ ಆಗಿದೆ' ಎಂದು ತೀರ್ಪು ಹೇಳಿದೆ.

ಬಿಪಿಎಸ್‌ಎಲ್ ಕಂಪನಿಯು ಅತಿಹೆಚ್ಚಿನ ಮೊತ್ತದ ಸಾಲವನ್ನು ಉಳಿಸಿಕೊಂಡ 12 ಕಾರ್ಪೊರೇಟ್ ಕಂಪನಿಗಳ ಪೈಕಿ ಒಂದಾಗಿತ್ತು.

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹560
12 ಕ್ಕೆ	₹75
ಮೈಸೂರು: 100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹355-666
ದ್ವಿತಳಿ (ಬಿ.ವಿ)	₹444-800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹165


ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈಂಡ್)	₹1330 (1325)
ಸೋಯಾ (ರಿಫೈಂಡ್)	₹1275 (1275)
ಸೂರ್ಯಕಾಂತಿ (ರಿಫೈಂಡ್)	₹1425 (1415)
ಪಾಮೋಲಿನ್	₹1280 (1275)

ಆರಂಭವಾಗದ ಖರೀದಿ ಕೇಂದ್ರಗಳು

ಹೆಸರುಕಾಳು, ಸೂರ್ಯಕಾಂತಿ ಬೆಲೆ ಕುಸಿತ • ಕಡಿಮೆ ಬೆಲೆಗೆ ಮಾರಬೇಕಾದ ಸ್ಥಿತಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಮಾರುಕಟ್ಟೆಯಲ್ಲಿ ಹೆಸರುಕಾಳು, ಸೂರ್ಯಕಾಂತಿ ಬೆಲೆ ಕುಸಿದಿದೆ. ಬೆಂಬಲ ಬೆಲೆಯಡಿ ಮಾರಾಟ ಮಾಡಲು ಜಿಲ್ಲೆಯಲ್ಲಿ ಇನ್ನೂ ಖರೀದಿ ಕೇಂದ್ರಗಳು ಆರಂಭವಾಗಿಲ್ಲ. ಅನಿವಾರ್ಯವಾಗಿ ಕಡಿಮೆ ಬೆಲೆಗೆ ಮಾರಬೇಕಾದ ಸ್ಥಿತಿಯಲ್ಲಿ ರೈತರಿದ್ದಾರೆ.



ಹೆಸರುಕಾಳು ಪ್ರತಿ ಕ್ವಿಂಟಲ್‌ಗೆ ₹8,768 ಮತ್ತು ಸೂರ್ಯಕಾಂತಿಗೆ ₹7,721 ಬೆಂಬಲ ಬೆಲೆ ಘೋಷಿಸಲಾಗಿದೆ. ಮಾರುಕಟ್ಟೆಯಲ್ಲಿ ಇದಕ್ಕಿಂತ ಕಡಿಮೆ ಬೆಲೆ ಇದೆ. ಕೂಡಲೇ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು ಎಂಬುದು ರೈತರ ಆಗ್ರಹ.

ಹೆಸರುಕಾಳು ಆರಂಭದಲ್ಲಿ ಪ್ರತಿ ಕ್ವಿಂಟಲ್‌ಗೆ ₹10,500ರಂತೆ ಮಾರಾಟವಾಗಿತ್ತು. ದಿನ ಕಳೆದಂತೆ ಬೆಲೆ ಇಳಿಮುಖವಾಗುತ್ತಿದೆ. ಈಗ ಪ್ರತಿ ಕ್ವಿಂಟಲ್‌ಗೆ ಸರಾಸರಿ ₹4,250ಕ್ಕೆ ಮಾರಾಟವಾಗುತ್ತಿದೆ. ಸತತ ಮಳೆಯಿಂದ ಹೆಸರು ಬುಡ್ಡಿ ಬಿಡಿಸಲು ಸಾಧ್ಯವಾಗಿಲ್ಲ. ಹೊಲದಲ್ಲೇ ಬೆಳೆ ಕೊಳೆಯಲು ಶುರುವಾಗಿದೆ. ಅದರಲ್ಲೂ ಒಂದಷ್ಟು ಹೆಸರುಕಾಳು ಬಂದಿದ್ದು, ಗುಣಮಟ್ಟ ಸರಿ ಇಲ್ಲವೆಂದು ಕಡಿಮೆ ಬೆಲೆಗೆ ಖರೀದಿಸಲಾಗುತ್ತಿದೆ' ಎಂದು ರೈತ ಮಲ್ಲಿಕಾರ್ಜುನ ಪಾಟೀಲ ದೂರಿದರು.

'ಹೆಸರುಕಾಳು ಮಾರುಕಟ್ಟೆಗೆ ಬರಲು ಆರಂಭಿಸಿ ತಿಂಗಳ ಮೇಲಾಗಿದೆ. ಹೆಚ್ಚು ದಿನ ಇಟ್ಟರೆ, ಹುಳುಗಳಿಂದ ಕಾಳು ಹಾಳಾಗುತ್ತದೆ. ಖರೀದಿ ಕೇಂದ್ರ ಇನ್ನೂ ಆರಂಭಿಸಿಲ್ಲ. ಕೇಂದ್ರ ಆರಂಭಿಸಿದ ಬಳಿಕ ಮತ್ತೆ ಹತ್ತಾರು ದಿನ ಹೆಸರು ನೋಂದಣಿಗೆ ಹೋಗುತ್ತದೆ' ಎಂದರು.

'ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಪ್ರತಿ ಕ್ವಿಂಟಲ್‌ಗೆ ₹5,809ಕ್ಕೆ ಮಾರಾಟವಾಗುತ್ತಿದೆ. ಬೆಂಬಲ ಬೆಲೆಗಿಂತ ಕ್ವಿಂಟಲ್‌ಗೆ ₹1,900 ಕಡಿಮೆ ಇದೆ. ಸೂರ್ಯಕಾಂತಿಯ ಕಟಾವು ಆರಂಭವಾಗಿದೆ. ಎರಡು ದಿನಗಳಿಂದ ಮಳೆ ಆಗುತ್ತಿದೆ. ಮಳೆಯಿಂದ ಸೂರ್ಯಕಾಂತಿ ತೆನೆಯಲ್ಲೇ ಕಾಳು ಕೊಳೆಯುತ್ತಿದೆ. ಏನು ಮಾಡಬೇಕು ಎಂದು ತೋಚುತ್ತಿಲ್ಲ' ಎಂದು ರೈತರು ತಿಳಿಸಿದರು.

> ಸೆಪ್ಟೆಂಬರ್ 29ರಂದು ಕಾರ್ಯಪಡೆ ಸಮಿತಿ ಸಭೆ ಕರೆಯಲಾಗಿದೆ. ಶೀಘ್ರದಲ್ಲಿಯೇ ಖರೀದಿ ಕೇಂದ್ರ ಆರಂಭಿಸಲಾಗುವುದು
> **ವಿ.ಡಿ. ಪಾಟೀಲ,** ಕಾರ್ಯದರ್ಶಿ, ಎಪಿಎಂಸಿ, ಬಾಗಲಕೋಟೆ

'ಒಳನುಸುಳುಕೋರರ ಮತದಾನದ ಹಕ್ಕು ರಕ್ಷಣೆಗೆ ರಾಹುಲ್ ಯತ್ನ'


ಪಟ್ನಾ/ಅರರಿಯ (ಪಿಟಿಐ): 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಒಳನುಸುಳುಕೋರರ ಮತದಾನದ ಹಕ್ಕನ್ನು ರಕ್ಷಿಸಲು ಯತ್ನಿಸುತ್ತಿದ್ದಾರೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದರು.

ಅರರಿಯ ಜಿಲ್ಲೆಯಲ್ಲಿ ಶನಿವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಬಿಹಾರದಲ್ಲಿ ಶೀಘ್ರದಲ್ಲಿಯೇ ವಿಧಾನಸಭೆ ಚುನಾವಣೆ ಘೋಷಣೆಯಾಗಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಎರಡು ದಿನಗಳಿಂದ ಸಭೆಗಳನ್ನು ನಡೆಸಿದ್ದರು. ಮುಸ್ಲಿಂ ಜನಸಂಖ್ಯೆ ಅಧಿಕವಿರುವ ರಾಜ್ಯದ ಸೀಮಾಂಚಲ ಪ್ರದೇಶದ ಕಾರ್ಯಕ್ರತರೇ ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು.

'ಮತದಾರರ ಪಟ್ಟಿಯಿಂದ ಒಳನುಸುಳುಕೋರರ ಹೆಸರನ್ನು ತೆಗೆದು ಹಾಕಲು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಚುನಾವಣಾ ಆಯೋಗ ಕೈಗೊಂಡಿತ್ತು. ಇದನ್ನೇ ವಿರೋಧಿಸಿ ರಾಹುಲ್ ಅವರು ಇತ್ತೀಚೆಗೆ ಇಲ್ಲಿ ಯಾತ್ರೆ ನಡೆಸಿದ್ದರು' ಎಂದರು.

'ಒಳನುಸುಳುಕೋರರ ಮತದಾನದ ಹಕ್ಕನ್ನು ರಕ್ಷಿಸಿಕೊಳ್ಳಲು ರಾಹುಲ್, ಲಾಲು ಮತ್ತವರ ಕೂಟ ಯತ್ನಿಸುತ್ತಿದೆ. ಸೀಮಾಂಚಲ ಪ್ರದೇಶದ ನಿಮ್ಮನ್ನು ಕೇಳುತ್ತಿದ್ದೇನೆ. ನೀವು ಇದಕ್ಕೆ ಅನುವು ಮಾಡಿಕೊಡುತ್ತೀರೇ?' ಎಂದು ಶಾ ಅವರು ಕಾರ್ಯಕರ್ತರನ್ನು ಕೇಳಿದರು. ಇದಕ್ಕೆ 'ಇಲ್ಲ' ಎಂದು ದೊಡ್ಡ ಸ್ವರದಲ್ಲಿ ಕಾರ್ಯಕರ್ತರು ಉತ್ತರಿಸಿದರು.



> 160 ಸ್ಥಾನಗಳೊಂದಿಗೆ ಎನ್‌ಡಿಎ ಮೈತ್ರಿಕೂಟವು ಬಿಹಾರವನ್ನು ಗೆದ್ದುಕೊಂಡರೆ, ಪ್ರತಿಯೊಬ್ಬ ಒಳನುಸುಳುಕೋರನನ್ನು ರಾಜ್ಯದಿಂದ ಹೊರ ಹಾಕಲಾಗುವುದು ಎಂದು ಭರವಸೆ ನೀಡುತ್ತೇವೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಅಮೆರಿಕ ಸುಂಕ: ದೇಶದ ಜಿಡಿಪಿ ಮೇಲೆ ಪರಿಣಾಮ?

ಕೋಲ್ಕತ್ತ (ಪಿಟಿಐ): ಭಾರತದ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಅಧಿಕ ಸುಂಕವು ದೇಶದ ಜಿಡಿಪಿ ಬೆಳವಣಿಗೆ ಮೇಲೆ ಪರಿಣಾಮ ಬೀರಬಹುದು ಎಂದು ಕ್ರಿಸಿಲ್ ಇಂಟೆಲಿಜೆನ್ಸ್ ತನ್ನ ಸೆಪ್ಟೆಂಬರ್ ತಿಂಗಳ ವರದಿಯಲ್ಲಿ ಹೇಳಿದೆ.

ಈ ಸುಂಕವು ದೇಶದ ಸರಕು ರಫ್ತು ಮತ್ತು ಹೂಡಿಕೆ ಮೇಲೆ ಪರಿಣಾಮ ಬೀರಲಿದೆ. ಆದರೂ, ದೇಶದಲ್ಲಿ ಹಣದುಬ್ಬರ ಇಳಿಕೆ ಮತ್ತು ರೆಪೊ ದರ ಕಡಿತವು ಬೆಳವಣಿಗೆಗೆ ನೆರವಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.8ರಷ್ಟಾಗಿತ್ತು. ಇದು 15 ತಿಂಗಳ ಗರಿಷ್ಠ ಮಟ್ಟ. ಇದೇ ಅವಧಿಯಲ್ಲಿ ನಾಮಿನಲ್ ಜಿಡಿಪಿ ಶೇ 10.8ರಿಂದ ಶೇ 8.8ಕ್ಕೆ ಇಳಿದಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ ಶೇ 3.5ಕ್ಕೆ ಇಳಿಯುವ ನಿರೀಕ್ಷೆ ಇದೆ. ಇದು ಕಳೆದ ಆರ್ಥಿಕ ವರ್ಷದಲ್ಲಿ ಶೇ 4.6ರಷ್ಟಿತ್ತು.

ಉತ್ತಮ ಕೃಷಿ ಚಟುವಟಿಕೆಯಿಂದ ಆಹಾರ ಪದಾರ್ಥಗಳ ಹಣದುಬ್ಬರವು ನಿಯಂತ್ರಣದಲ್ಲಿ ಇರುವ ಸಾಧ್ಯತೆ ಇದೆ. ಕಚ್ಚಾ ತೈಲ ಮತ್ತು ಸರಕುಗಳ ಬೆಲೆ ನಿಯಂತ್ರಣದಲ್ಲಿ ಇದೆ. ಇದು ಆಹಾರೇತರ ವಸ್ತುಗಳ ಹಣದುಬ್ಬರ ಪ್ರಮಾಣವನ್ನು ತಗ್ಗಿಸುವ ನಿರೀಕ್ಷೆ ಇದೆ. ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತೊಮ್ಮೆ ರೆಪೊ ದರ ಕಡಿತ ಮಾಡುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.



ದೇಶದ ಮೊದಲ ಬುಲೆಟ್ ರೈಲಿಗೆ 2027ಕ್ಕೆ ಚಾಲನೆ

ದೆಹಲಿ: ಗುಜರಾತ್‌ನ ಸೂರತ್ ಮತ್ತು ಬಿಲಿಮೊರಾ ನಡುವಿನ 50 ಕಿ.ಮೀ. ಉದ್ದದ ಬುಲೆಟ್ ರೈಲು ಯೋಜನೆ 2027ರಲ್ಲಿ ಪೂರ್ಣಗೊಳ್ಳಲಿದ್ದು, ಈ ಮೂಲಕ ದೇಶದ ಮೊದಲ ಬುಲೆಟ್ ರೈಲು ಸಂಚಾರಕ್ಕೆ ಚಾಲನೆ ಸಿಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಶನಿವಾರ ಹೇಳಿದರು.

ಮುಂಬೈ ಮತ್ತು ಅಹಮದಾಬಾದ್ ನಡುವಿನ ಬುಲೆಟ್ ರೈಲು ಯೋಜನೆಯ ಮೊದಲ ಹಂತ ಇದಾಗಿದೆ.

'ಬುಲೆಟ್ ರೈಲು ಯೋಜನೆಯ ಕಾಮಗಾರಿಯು ಭರದಿಂದ ಸಾಗುತ್ತಿದೆ. ಠಾಣೆ–ಅಹಮದಾಬಾದ್ ನಡುವೆ 2028ರಲ್ಲಿ ಬುಲೆಟ್ ರೈಲು ಸಂಚಾರ ಆರಂಭಗೊಳ್ಳಲಿದೆ. ಮುಂಬೈ ಮತ್ತು ಅಹಮದಾಬಾದ್ ನಡುವೆ 2029ರಲ್ಲಿ ಬುಲೆಟ್ ರೈಲು ಸಂಚರಿಸಲಿದೆ ಎಂದು ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಯೋಜನೆಯು ಪೂರ್ಣಗೊಂಡ ಬಳಿಕ ಮುಂಬೈ ಮತ್ತು ಅಹಮದಾಬಾದ್ ನಡುವಿನ ಪ್ರಯಾಣದ ಅವಧಿ ಕೇವಲ 2 ಗಂಟೆ 7 ನಿಮಿಷ ಇರಲಿದೆ.

ಮುಂಬೈ ಮತ್ತು ಅಹಮದಾಬಾದ್ ನಡುವಿನ ಬುಲೆಟ್ ರೈಲು ಯೋಜನೆಗೆ 2017ರಲ್ಲಿ ಚಾಲನೆ ನೀಡಲಾಗಿತ್ತು. 2023ರಲ್ಲಿ ಈ ಯೋಜನೆ ಪೂರ್ಣಗೊಳಿಸಲು ಯೋಜಿಸಲಾಗಿತ್ತು, ಆದರೆ ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಕಾಮಗಾರಿ ವಿಳಂಬಗೊಂಡಿದೆ.

ದಕ್ಷಿಣ ಅಮೆರಿಕ: ನಾಲ್ಕು ದೇಶಗಳ ಭೇಟಿಗೆ ತೆರಳಿದ ರಾಹುಲ್

ನವದೆಹಲಿ (ಪಿಟಿಐ): 'ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬ್ರೆಜಿಲ್, ಕೊಲಂಬಿಯಾ ಸೇರಿ ದಕ್ಷಿಣ ಅಮೆರಿಕದ ನಾಲ್ಕು ದೇಶಗಳಿಗೆ ಭೇಟಿ ನೀಡಲು ತೆರಳಿದರು' ಎಂದು ಕಾಂಗ್ರೆಸ್ ಶನಿವಾರ ಹೇಳಿದೆ. ಆದರೆ, ರಾಹುಲ್ ಅವರು ಎಷ್ಟು ದಿನಗಳವರೆಗೆ ಈ ದೇಶಗಳಲ್ಲಿ ಇರಲಿದ್ದಾರೆ ಎಂಬ ಮಾಹಿತಿ ಹಂಚಿಕೊಂಡಿಲ್ಲ.



ರಾಹುಲ್ ಗಾಂಧಿ

ಈ ಬಗ್ಗೆ ಪಕ್ಷದ ಮಾಧ್ಯಮ ಮತ್ತು ಪ್ರಸಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ಬ್ರೆಜಿಲ್ ಮತ್ತು ಕೊಲಂಬಿಯಾದಲ್ಲಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೊಂದಿಗೆ ರಾಹುಲ್ ಮಾತುಕತೆ ನಡೆಸಲಿದ್ದಾರೆ. ಜೊತೆಗೆ, ನಾಲ್ಕು ದೇಶಗಳಲ್ಲಿ ಆಯಾ ದೇಶಗಳ ರಾಜಕೀಯ ನಾಯಕರೊಂದಿಗೂ ಚರ್ಚೆ ನಡೆಸಲಿದ್ದಾರೆ. ಈ ಮೂಲಕ ಭಾರತದೊಂದಿಗಿನ ಆಯಾ ದೇಶಗಳ ಪ್ರಜಾಪ್ರಭುತ್ವ ಮತ್ತು ರಾಜತಾಂತ್ರಿಕ ಸಂಬಂಧವನ್ನು ಗಟ್ಟಿಗೊಳಿಸಲಿದ್ದಾರೆ' ಎಂದು ಖೇರಾ ಹೇಳಿದ್ದಾರೆ.

'ಅಮೆರಿಕವು ಭಾರತದ ಮೇಲೆ ಸುಂಕ ಹೇರಿದ ಕಾರಣದಿಂದ ದೇಶವು ತನ್ನ ವ್ಯಾಪಾರ ಸಂಬಂಧಕ್ಕಾಗಿ ಇತರ ದೇಶಗಳ ಹುಡುಕಾಟದಲ್ಲಿ ಇರುವ ಈ ಹೊತ್ತಿನಲ್ಲಿ ರಾಹುಲ್ ಅವರು ದಕ್ಷಿಣ ಅಮೆರಿಕದ ಈ ನಾಲ್ಕು ದೇಶಗಳ ಉದ್ಯಮಿಗಳೊಂದಿಗೆ ಮಾತನಾಡಲಿದ್ದಾರೆ' ಎಂದೂ ತಿಳಿಸಿದ್ದಾರೆ.

ಮೇರಿ ಕೋಮ್ ಮನೆಯಲ್ಲಿ ಕಳವು

ಶಿಲ್ಲಾಂಗ್ (ಪಿಟಿಐ): ಆರು ಬಾರಿ ವಿಶ್ವ ಚಾಂಪಿಯನ್ ಆಗಿದ್ದ ಬಾಕ್ಸಿಂಗ್ ಪಟು ಮೇರಿ ಕೋಮ್ ಅವರ ದೆಹಲಿ ನಿವಾಸದಲ್ಲಿ ಕಳ್ಳತನ ನಡೆದಿದೆ. ಈ ವೇಳೆ ಅವರು ಮನೆಯಲ್ಲಿ ಇರಲಿಲ್ಲ. ಶನಿವಾರ ಮೇಘಾಲಯದ ಸೊಹ್ರಾದಲ್ಲಿ ಏರ್ಪಡಿಸಿದ್ದ ಮ್ಯಾರಥಾನ್ ಓಟದಲ್ಲಿ ಅವರು ಪಾಲ್ಗೊಂಡಿದ್ದರು. ದೆಹಲಿಯಲ್ಲಿರುವ ತಮ್ಮ ಮನೆಯ ಬಾಗಿಲು ಮುರಿದು ಕಳ್ಳತನ ಮಾಡಿರುವ ಮಾಹಿತಿ ಬಂದಿರುವುದಾಗಿ ಮ್ಯಾರಥಾನ್ ಆಯೋಜಕರಿಗೆ ಮೇರಿ ಕೋಮ್ ತಿಳಿಸಿದ್ದಾರೆ.

'ನಮೋ ಯುವ ಸಮಾವೇಶ'ದಲ್ಲಿ ಪ್ರಧಾನಿ ನರೇಂದ್ರ ಮೋದಿ ಆರೋಪ

'ಜನರನ್ನು ಲೂಟಿ ಮಾಡುವ ಕಾಂಗ್ರೆಸ್'

ಜಾರ್ಸುಗಡ (ಒಡಿಶಾ) (ಪಿಟಿಐ): 'ದೇಶದ ಜನರನ್ನು ಲೂಟಿ ಮಾಡುವ ಯಾವ ಅವಕಾಶವನ್ನೂ ಕಾಂಗ್ರೆಸ್ ಬಿಟ್ಟಿಲ್ಲ. ಅದು ಕಡಿಮೆ ಆದಾಯದ ವರ್ಗದ ಜನರ ಮೇಲೂ ತೆರಿಗೆ ಹೇರಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಒಡಿಶಾದ ಜಾರ್ಸುಗಡದಲ್ಲಿ ಶನಿವಾರ ನಡೆದ 'ನಮೋ ಯುವ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ಸುಲಿಗೆ ಮಾಡುವ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಬಗ್ಗೆ ಜನರು ಜಾಗೃತರಾಗಿರಬೇಕು' ಎಂದು ಕರೆ ನೀಡಿದರು.

'ಎಷ್ಟರ ಮಟ್ಟಿಗೆ ಕಾಂಗ್ರೆಸ್ ಜನರನ್ನು ದೋಚಿದೆ ಎಂದರೆ, ಅದು ವಾರ್ಷಿಕ ₹2 ಲಕ್ಷ ಆದಾಯ ಹೊಂದಿರುವ ಜನರ ಮೇಲೂ ತೆರಿಗೆ ವಿಧಿಸಿತ್ತು. ಆದರೆ ಬಿಜೆಪಿ ಸರ್ಕಾರವು ತೆರಿಗೆ ವ್ಯಾಪ್ತಿಗೆ ಬರುವ ಆದಾಯದ ಮಿತಿಯನ್ನು ₹12 ಲಕ್ಷಕ್ಕೆ ಹೆಚ್ಚಿಸಿದೆ' ಎಂದು ಅವರು ವಿವರಿಸಿದರು.

'ಕೇಂದ್ರ ಸರ್ಕಾರವು ಜಿಎಸ್‌ಟಿ ಸುಧಾರಣೆ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟಿರುವುದನ್ನು ಸಹಿಸದ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಆರೋಪದಲ್ಲಿ ತೊಡಗಿದೆ' ಎಂದು ಅವರು ದೂರಿದರು.

'ನಮ್ಮ ಸರ್ಕಾರ ಸಿಮೆಂಟ್ ಮೇಲಿನ ಬೆಲೆ ಕಡಿಮೆಗೊಳಿಸಿದಾಗ, ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರ್ಕಾರವು ತನ್ನದೇ ಆದ ಪ್ರತ್ಯೇಕ ತೆರಿಗೆಯನ್ನು ಅದರ ಮೇಲೆ ಹೇರಿತು. ನಾವು ಜಿಎಸ್‌ಟಿ ದರವನ್ನು ಕಡಿತಗೊಳಿಸಿದ ಬಳಿಕ ದೇಶದಾದ್ಯಂತ ಬೆಲೆಗಳಲ್ಲಿ ಇಳಿಕೆಯಾಗಿದೆ. ಆದರೆ ಇದರ ಲಾಭವನ್ನು ಸಾಮಾನ್ಯ ಜನರಿಗೆ ನೀಡಲು ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳು ಬಯಸುತ್ತಿಲ್ಲ' ಎಂದು ಅವರು ಕಿಡಿಕಾರಿದರು.

'ಆತ್ಮನಿರ್ಭರ ಭಾರತ'ದ ಅಗತ್ಯವನ್ನು ಒತ್ತಿ ಹೇಳಿದ ಮೋದಿ, 'ಚಿಪ್ ಇಂದ ಶಿಪ್ ತನಕ ಎಲ್ಲವನ್ನೂ ನಾವೇ ತಯಾರಿಸಬೇಕು. ಭಾರತ ಎಲ್ಲ ಕ್ಷೇತ್ರಗಳಲ್ಲೂ ಸ್ವಾವಲಂಬನೆ ಸಾಧಿಸಬೇಕಾದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಒಡಿಶಾದಲ್ಲಿ ಎರಡು ಸೆಮಿಕಂಡಕ್ಟರ್ ಘಟಕಗಳ ಸ್ಥಾಪನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಅವರು ಇದೇ ವೇಳೆ ಮಾಹಿತಿ ನೀಡಿದರು.

2024ರಲ್ಲಿ ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಮೋದಿ ಅವರು ರಾಜ್ಯಕ್ಕೆ ನೀಡಿದ ಆರನೇ ಭೇಟಿ ಇದಾಗಿದೆ.



ಒಡಿಶಾದ ಜಾರ್ಸುಗಡದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಒಡಿಶಾದ ರಾಜ್ಯಪಾಲ ಹರಿಬಾಬು ಕಂಭಂಪತಿ, ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಸೇರಿದಂತೆ ಹಲವು ಭಾಗಿಯಾಗಿದ್ದರು —ಪಿಟಿಐ ಚಿತ್ರ

₹50,000 ಕೋಟಿ ವೆಚ್ಚದ ಯೋಜನೆಗಳಿಗೆ ಚಾಲನೆ

ದೂರಸಂಪರ್ಕ, ರೈಲ್ವೆ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ₹50,000 ಕೋಟಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿ ಶನಿವಾರ ಚಾಲನೆ ನೀಡಿದರು.

ದೂರಸಂಪರ್ಕ ಮೂಲಸೌಕರ್ಯಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಬಿಎಸ್‌ಎನ್‌ಎಲ್‌ನ 'ಸ್ವದೇಶಿ' 4ಜಿ ಸೇವೆಗೆ ಇದೇ ವೇಳೆ ಚಾಲನೆ ನೀಡಿದರು. 97,500 4ಜಿ ಮೊಬೈಲ್ ಟವರ್‌ಗಳನ್ನು 'ಸ್ವದೇಶಿ' ತಂತ್ರಜ್ಞಾನದಡಿ ₹37,000 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಈ ಮೂಲಕ ಭಾರತವು ಟೆಲಿಕಾಂ ಉಪಕರಣಗಳನ್ನು ದೇಶೀಯವಾಗಿ ತಯಾರಿಸುವ ರಾಷ್ಟ್ರಗಳ ಸಾಲಿಗೆ ಸೇರಿದಂತಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಎಂಟು ಐಐಟಿಗಳಿಗೆ ಶಂಕುಸ್ಥಾಪನೆ: ತಿರುಪತಿ, ಪಾಲಕ್ಕಾಡ್, ಭಿಲಾಯಿ, ಜಮ್ಮು, ಧಾರವಾಡ, ಜೋಧಪುರ, ಪಟ್ನಾ, ಇಂದೋರ್ ಐಐಟಿಗಳಲ್ಲಿ ₹11,000 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ವಿಸ್ತರಣಾ ಯೋಜನೆಗಳಿಗೆ ಪ್ರಧಾನಿ ಶಂಕುಸ್ಥಾಪನೆ ನೆರವೇರಿಸಿದರು. ಇದರಿಂದ ಮುಂದಿನ ನಾಲ್ಕು ವರ್ಷಗಳಲ್ಲಿ 12,000 ಸೀಟುಗಳನ್ನು ಹೆಚ್ಚುವರಿ ಸೀಟುಗಳು ಲಭ್ಯವಾಗಲಿವೆ. ಗುಜರಾತ್‌ನ ಸೂರತ್ ಜಿಲ್ಲೆಯ ಉಧ್ನಾದಿಂದ ಒಡಿಶಾದ ಬೆಹರಾಂಪುರ ನಡುವೆ ಸಂಚರಿಸುವ 'ಅಮೃತ ಭಾರತ ಎಕ್ಸ್‌ಪ್ರೆಸ್'ಗೆ ಪ್ರಧಾನಿ ಹಸಿರು ನಿಶಾನೆ ತೋರಿದರು. ₹1,400 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ವಿವಿಧ ರೈಲ್ವೆ ದ್ವಿಪಥ ಮಾರ್ಗಗಳಿಗೂ ಅವರು ಚಾಲನೆ ನೀಡಿದರು.

ಎಫ್‌ಕೆಸಿಸಿಐಗೆ ಮಹಿಳಾ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) 2025–26ನೇ ಸಾಲಿನ ಅಧ್ಯಕ್ಷೆಯಾಗಿ ಉಮಾ ರೆಡ್ಡಿ ಅವರು ಶನಿವಾರ ಅಧಿಕಾರ ವಹಿಸಿಕೊಂಡರು. ಈ ಸಂಸ್ಥೆಯ 108 ವರ್ಷಗಳ ಇತಿಹಾಸದಲ್ಲಿ ಮಹಿಳೆಯೊಬ್ಬರು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವುದು ಇದೇ ಮೊದಲು.



ಉಮಾ ರೆಡ್ಡಿ

ಎಂಜಿನಿಯರಿಂಗ್ ಪದವೀಧರೆ ಆಗಿರುವ ಉಮಾ ಅವರು ಮೊದಲ ತಲೆಮಾರಿನ ಉದ್ಯಮಿ. ಅವರು ಹೈಟೆಕ್ ಮ್ಯಾಗ್ನೆಟಿಕ್ಸ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಪ್ರೈ. ಲಿ. ಕಂಪನಿಯನ್ನು ಮುನ್ನಡೆಸುತ್ತಿದ್ದಾರೆ ಎಂದು ಎಫ್‌ಕೆಸಿಸಿಐ ತಿಳಿಸಿದೆ.



ಟಿ. ಸಾಯಿರಾಮ್ ಪ್ರಸಾದ್



ಬಿ.ಪಿ. ಶಶಿಧರ್

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳ ಪರವಾಗಿ ಹಲವು ಬಾರಿ ಅವರು ಧ್ವನಿ ಎತ್ತಿದ್ದಾರೆ. ಎಫ್‌ಕೆಸಿಸಿಐ ಅಡಿಯಲ್ಲಿ ಕೆಲಸ ಮಾಡುವ ಹಲವು ಸಮಿತಿಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಅಲ್ಲದೆ, ಎಫ್‌ಕೆಸಿಸಿಐ ಉಪಾಧ್ಯಕ್ಷೆ ಹಾಗೂ ಹಿರಿಯ ಉಪಾಧ್ಯಕ್ಷೆ ಆಗಿಯೂ ಹೊಣೆ ನಿರ್ವಹಿಸಿದ್ದಾರೆ.

ಎಫ್‌ಕೆಸಿಸಿಐ ಹಿರಿಯ ಉಪಾಧ್ಯಕ್ಷರಾಗಿ ಟಿ. ಸಾಯಿರಾಮ್ ಪ್ರಸಾದ್ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಬಿ.ಪಿ. ಶಶಿಧರ್ ಅವರು ಆಯ್ಕೆ ಆಗಿದ್ದಾರೆ.

ಪ್ರವಾಹ

ಪಿಟಿಐ



ಹೈದರಾಬಾದ್‌ನ ಮೂಸಿ ನದಿಯಲ್ಲಿ ಉಂಟಾದ ಪ್ರವಾಹದಿಂದಾಗಿ ಬಸ್ಸುಗಳು ನೀರಿನಲ್ಲಿ ಅರ್ಧ ಮುಳುಗಿದ್ದವು

ಗಾಯಕ ಜುಬೀನ್ ಸಾವು: ಲುಕ್‌ಔಟ್ ನೋಟಿಸ್

ಗುವಾಹಟಿ (ಪಿಟಿಐ): ಗಾಯಕ ಜುಬೀನ್ ಗರ್ಗ್ ಸಾವಿನ ಪ್ರಕರಣದಲ್ಲಿ 'ನಾರ್ತ್ ಈಸ್ಟ್ ಇಂಡಿಯಾ ಫೆಸ್ಟಿವಲ್' ಸಂಘಟಕ ಶ್ಯಾಮಕಾನು ಮಹಂತ ಹಾಗೂ ಗರ್ಗ್ ಅವರ ವ್ಯವಸ್ಥಾಪಕ ಸಿದ್ಧಾರ್ಥ ಶರ್ಮ ವಿರುದ್ಧ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಶನಿವಾರ ತಿಳಿಸಿದ್ದಾರೆ.



ಜುಬೀನ್ ಗರ್ಗ್

'ಈ ಇಬ್ಬರೂ ಅ. 6ರಂದು ಗುವಾಹಟಿಗೆ ಬಂದು ತಮ್ಮ ಹೇಳಿಕೆಗಳನ್ನು ನೀಡಬೇಕು. ಇಲ್ಲದಿದ್ದರೆ, ಪೊಲೀಸರು ಅವರಿಗಾಗಿ ಶೋಧ ನಡೆಸಲಿದ್ದಾರೆ' ಎಂದು ಫೇಸ್‌ಬುಕ್ ಲೈವ್‌ನಲ್ಲಿ ಹೇಳಿದ್ದಾರೆ.

'ಮಹಂತ ಅವರ ಬ್ಯಾಂಕ್ ಖಾತೆಗಳು ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಸ್ಥಗಿತಗೊಳಿಸಲಾಗಿದೆ. ಆದ್ದರಿಂದ ಅವರು ಹೆಚ್ಚು ಕಾಲ ಹೊರಗೆ ಉಳಿಯಲು ಸಾಧ್ಯವಿಲ್ಲ' ಎಂದರು. 'ತನಿಖೆಯಲ್ಲಿನ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ಆಯೋಗ ರಚಿಸುವಂತೆ ಗುವಾಹಟಿ ಹೈಕೋರ್ಟ್ ನ್ಯಾಯಮೂರ್ತಿಗೆ ಶುಕ್ರವಾರ ಪತ್ರ ಬರೆಯಲಾಗಿದೆ' ಎಂದು ಅವರು ಹೇಳಿದರು.

ಮುಂಬೈ ಧಾರಣೆ (ಶೇಂಗಾ) 27-09-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಪಾಮ್ ವಾರದ ಡೆಲಿವರಿ	1278 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,13,050 (1,13,050)
ಬೆಳ್ಳಿ ಕೆ.ಜಿಗೆ	1,42,000 (1,39,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಶಸ್ತ್ರಾಸ್ತ್ರ ತ್ಯಜಿಸುವ ನಿರ್ಧಾರ ಬೆಂಬಲಿಸಿದ ವೇಣುಗೋಪಾಲ್'

ಹೈದರಾಬಾದ್ (ಪಿಟಿಐ): 'ಛತ್ತೀಸಗಢದಲ್ಲಿ ಮಾವೋವಾದಿ ನಕ್ಸಲರ ವಿರುದ್ಧ ಪೊಲೀಸ್ ಕಾರ್ಯಾಚರಣೆ ತೀವ್ರಗೊಂಡಿರುವ ಬೆನ್ನಲ್ಲೇ, ಸಂಘಟನೆಯ ಕೆಲವು ಮುಖಂಡರು ಶಸ್ತ್ರಾಸ್ತ್ರ ತ್ಯಜಿಸಲು ಒಲವು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವರು ಮುಂದುವರಿಸಲು ಆಸಕ್ತಿ ಹೊಂದಿದ್ದಾರೆ' ಎಂದು ತೆಲಂಗಾಣದ ಗುಪ್ತಚರ ಮೂಲಗಳು ತಿಳಿಸಿವೆ.

ತೆಲಂಗಾಣದ ಸಿಪಿಐ (ಮಾವೋವಾದಿ) ಮುಖಂಡ ಮಲ್ಲೋಜುಲಾ ವೇಣುಗೋಪಾಲ್ ಅವರು ತಾತ್ಕಾಲಿಕವಾಗಿ ಶಸ್ತ್ರಾಸ್ತ್ರ ತ್ಯಜಿಸುವ ನಿರ್ಧಾರವನ್ನು ಬೆಂಬಲಿಸಿದ್ದಾರೆ. ಈ ಸಂಬಂಧ ಕಳೆದು ತಿಂಗಳು ಅವರೇ ಬಿಡುಗಡೆಗೊಳಿಸಿದ ಪತ್ರವು ಸಂಘಟನೆಯಲ್ಲಿ ಆಂತರಿಕ ಸಂಘರ್ಷ ಸೃಷ್ಟಿಸಿದೆ.

ಈ ವಾದವನ್ನು ತಳ್ಳಿ ಹಾಕಿರುವ ಸಿಪಿಐ (ಮಾವೋವಾದಿ) ಕೇಂದ್ರೀಯ ಸಮಿತಿಯು, ಪತ್ರದಲ್ಲಿ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವು ವೈಯಕ್ತಿಕವಾದದ್ದು ಎಂದು ತಿಳಿಸಿತ್ತು.

'ಪ್ರಧಾನಿಯಿಂದ ಮತಗಳ್ಳತನ, ಮತಕ್ಕೆ ಗಾಳ'

ನವದೆಹಲಿ (ಪಿಟಿಐ): ಬಿಹಾರದ 75 ಲಕ್ಷ ಮಹಿಳೆಯರಿಗೆ ತಲಾ ₹10 ಸಾವಿರದಂತೆ ನೆರವು ಒದಗಿಸುವ ಯೋಜನೆಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಕಿಡಿಕಾರಿದೆ.

'ಪ್ರಧಾನಿ ಅವರು ಮತಗಳ್ಳತನದ ಜೊತೆಗೆ ಮತಕ್ಕೆ ಗಾಳ ಹಾಕಲು ಆರಂಭಿಸಿದ್ದಾರೆ' ಎಂದು ಆರೋಪಿಸಿದೆ. 'ಕರ್ನಾಟಕದ ಕಾಂಗ್ರೆಸ್ ಸರ್ಕಾರವು 1.3 ಕೋಟಿ ಮಹಿಳೆಯರಿಗೆ ಪ್ರತಿ ತಿಂಗಳು ₹2 ಸಾವಿರ ನೀಡುವ 'ಗೃಹಲಕ್ಷ್ಮೀ' ಯೋಜನೆ ಆರಂಭಿಸಿದಾಗ ಪ್ರಧಾನಿ ಟೀಕಿಸಿದ್ದರು. ಈಗ ಬಿಹಾರ ವಿಧಾನಸಭಾ ಚುನಾವಣೆಯ ಅಧಿಸೂಚನೆಗೆ ಬಾಕಿ ಉಳಿದಿರುವ ಕೆಲವೇ ದಿನಗಳಿಗೂ ಮುನ್ನಾ ಅವರು ಒಂದು ಸಲದ ಪಾವತಿಯಾಗಿ ಮಹಿಳೆಯರಿಗೆ ₹10 ಸಾವಿರ ವರ್ಗಾಯಿಸಿದ್ದಾರೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಎಕ್ಸ್'ನಲ್ಲಿ ತಿಳಿಸಿದ್ದಾರೆ.





‘ಪಾಕ್ ಸೇನೆ ಅಂಗಲಾಚಿತ್ತು’

ವಿಶ್ವಸಂಸ್ಥೆ: ಪ್ರಧಾನಿ ಶಹಬಾಜ್ ಷರೀಫ್ ಹೇಳಿಕೆಗೆ ಪೆಟಲ್ ಗೆಹಲೋತ್ ತಿರುಗೇಟು

ವಿಶ್ವಸಂಸ್ಥೆ (ಪಿಟಿಐ): ‘ಆಪರೇಷನ್ ಸಿಂಧೂರ’ ಸಂದರ್ಭದಲ್ಲಿ ಯುದ್ಧ ನಿಲ್ಲಿಸುವಂತೆ ಪಾಕಿಸ್ತಾನದ ಸೇನೆ ಅಂಗಲಾಚಿತ್ತು ಎಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತ ಹೇಳಿದೆ.


‘ಇತ್ತೀಚೆಗೆ ಭಾರತದೊಂದಿಗೆ ನಡೆದ ಯುದ್ಧದಲ್ಲಿ ಪಾಕಿಸ್ತಾನ ಗೆದ್ದಿದೆ. ಪಾಕ್ ಸೇನೆಯು ಭಾರತದ ದಾಳಿಯನ್ನು ಹಿಮ್ಮೆಟ್ಟಿಸಿತು ಮತ್ತು ಈ ವೇಳೆ ಭಾರತದ ಏಳು ಯುದ್ಧವಿಮಾನಗಳು ಗುಜರಿಗೆ ಹೋಗಿವೆ’ ಎಂದ ಪಾಕ್ ಪ್ರಧಾನಿ ಶಹಬಾಜ್ ಷರೀಫ್ ಅವರ ಹೇಳಿಕೆಗೆ ಪ್ರತಿಯಾಗಿ ಭಾರತ ಈ ರೀತಿ ಪ್ರತ್ಯುತ್ತರ ನೀಡಿದೆ.

ಭಾರತ-ಪಾಕಿಸ್ತಾನದ ನಡುವಣ ವಿವಾದದ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಮೂರನೆಯವರ ಮಧ್ಯಸ್ಥಿಕೆಗೆ ಅವಕಾಶ ಇಲ್ಲ ಎಂದೂ ಅದು ಸ್ಪಷ್ಟಪಡಿಸಿದೆ.

‘ಪಾಕಿಸ್ತಾನದ ಪ್ರಧಾನಿ ಮತ್ತೊಮ್ಮೆ ಭಯೋತ್ಪಾದನೆಯನ್ನು ವೈಭವೀಕರಿಸಿದ ಅಸಂಬದ್ಧ ಕ್ಷಣಕ್ಕೆ ಸಾಮಾನ್ಯಸಭೆಯು ಸಾಕ್ಷಿಯಾಗಿದೆ. ಭಯೋತ್ಪಾದನೆಯು ಆ ದೇಶದ ವಿದೇಶಾಂಗ ನೀತಿಯ ಕೇಂದ್ರಬಿಂದು’ ಎಂದು ವಿಶ್ವಸಂಸ್ಥೆಯ ಸಾಮಾನ್ಯಸಭೆಯ ಭಾರತದ ಶಾಶ್ವತ ನಿಯೋಗದ ಮೊದಲ ಕಾರ್ಯದರ್ಶಿ ಪೆಟಲ್ ಗೆಹಲೋತ್ ಶುಕ್ರವಾರ ವಾಗ್ದಾಳಿ ನಡೆಸಿದರು.

ಪಾಕಿಸ್ತಾನವು ಮೇ 9ರವರೆಗೆ ಭಾರತದ ಮೇಲೆ ದಾಳಿ ಮುಂದುವರಿಸುವ ಬೆದರಿಕೆ ಹಾಕುತ್ತಿತ್ತು. ಆದರೆ ಮೇ 10ರಂದು, ಪಾಕಿಸ್ತಾನದ ಸೇನೆಯು ಕದನ ವಿರಾಮ ಘೋಷಿಸುವಂತೆ ಅಂಗಲಾಚಿತು. ಅಷ್ಟರೊಳಗೆ ಭಾರತ ಸೇನೆಯು ಪಾಕಿಸ್ತಾನದ ಅನೇಕ ಸೇನಾ ನೆಲೆಗಳನ್ನು ಧ್ವಂಸಗೊಳಿಸಿತ್ತು. ಹಾನಿ ಕುರಿತ ಫೋಟೊಗಳು ಸಾರ್ವಜನಿಕರಿಗೆ ಲಭ್ಯವಿವೆ ಎಂದು ಅವರು ಒತ್ತಿ ಹೇಳಿದರು.

‘ನಿರ್ನಾಮಗೊಂಡ ರನ್‌ವೇಗಳು ಮತ್ತು ಭಗ್ನಾವಶೇಷಗೊಂಡ ಹ್ಯಾಂಗರ್‌ಗಳು (ವಿಮಾನ ನಿಲ್ಲುವ ಸ್ಥಳ) ವಿಜಯದ ಸಂಕೇತದಂತೆ ಕಾಣುತ್ತವೆಯೇ’ ಎಂದು ಅವರು ವ್ಯಂಗ್ಯವಾಡಿದರು.



ಭಾರತ-ಪಾಕ್ ವಿವಾದವನ್ನು ದ್ವಿಪಕ್ಷೀಯವಾಗಿ ಪರಿಹರಿಸಿಕೊಳ್ಳಲು ಬಹಳ ಹಿಂದಿನಿಂದಲೂ ಉಭಯ ದೇಶಗಳು ಒಪ್ಪಿಕೊಂಡಿವೆ. ಇಲ್ಲಿ ಮೂರನೆಯವರಿಗೆ ಅವಕಾಶ ಇಲ್ಲ

ಪೆಟಲ್ ಗೆಹಲೋತ್, ಭಾರತದ ಶಾಶ್ವತ ನಿಯೋಗ ಮೊದಲ ಕಾರ್ಯದರ್ಶಿ

ಪಾಕಿಸ್ತಾನ ಸೇನೆಯ ಹಿರಿಯ ಅಧಿಕಾರಿಗಳು ಭಯೋತ್ಪಾದನೆಯನ್ನು ಸಾರ್ವಜನಿಕವಾಗಿ ವೈಭವೀಕರಿಸುವುದಲ್ಲದೆ, ಹತರಾದ ಉಗ್ರರಿಗೆ ಅಂತಿಮ ನಮನ ಸಲ್ಲಿಸುತ್ತಾರೆ. ಭಯೋತ್ಪಾದನೆಗೆ ಇಡೀ ಆಡಳಿತ ವ್ಯವಸ್ಥೆ ಕುಮ್ಮಕ್ಕು ನೀಡುತ್ತಿದೆ ಎಂದು ಹೇಳಲು ಇದಕ್ಕಿಂತ ಪುರಾವೆ ಬೇಕೇ ಎಂದು ಅವರು ಹೇಳಿದರು.

ಭಯೋತ್ಪಾದನೆ ಮತ್ತು ಅದರ ಪ್ರಾಯೋಜನೆಯ ನಡುವೆ ಯಾವುದೇ ವ್ಯತ್ಯಾಸ ಇಲ್ಲ. ಪರಮಾಣು ಬೆದರಿಕೆಯಡಿಯಲ್ಲಿ ಭಯೋತ್ಪಾದನೆಗೆ ಭಾರತ ಅವಕಾಶ ನೀಡುವುದಿಲ್ಲ. ಇಂಥ ಗೊಡ್ಡು ಬೆದರಿಕೆಗಳಿಗೆ ಭಾರತ ಹೆದರುವುದಿಲ್ಲ. ಜಗತ್ತಿಗೆ ಭಾರತದ ಸಂದೇಶ ಸ್ಪಷ್ಟವಾಗಿದೆ. ಭಯೋತ್ಪಾದನೆ ವಿರುದ್ಧ ಭಾರತ ಶೂನ್ಯ ಸಹಿಷ್ಣುತೆ ಹೊಂದಿದೆ ಎಂದರು.

ಟ್ರಂಪ್ ಹೊಗಳಿದ ಷರೀಫ್

ದಿಟ್ಟ ಮತ್ತು ದೂರದರ್ಶಿ ನಾಯಕತ್ವದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಸ್ಥಿಕೆಯಲ್ಲಿ ಭಾರತ-ಪಾಕಿಸ್ತಾನ ಮಧ್ಯೆ ಕದನವಿರಾಮ ಘೋಷಣೆಯಾಯಿತು. ಈ ನಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸಿದ ಅಮೆರಿಕ ಅಧ್ಯಕ್ಷರು ಮತ್ತು ಅವರ ತಂಡಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದು ಪಾಕ್ ಪ್ರಧಾನಿ ಶಹಬಾಜ್ ಷರೀಫ್ ವಿಶ್ವಸಂಸ್ಥೆಯಲ್ಲಿ ಹೇಳಿದರು.

ವಿಶ್ವಸಂಸ್ಥೆ ಭದ್ರತಾ ಮಂಡಳಿ ತಿರಸ್ಕಾರ

ವಿಶ್ವಸಂಸ್ಥೆ (ಎಪಿ): ಇರಾನ್ ಮೇಲೆ ನಿರ್ಬಂಧ ವಿಧಿಸುವ ನಿರ್ಧಾರವನ್ನು ವಿಳಂಬಗೊಳಿಸುವ ರಷ್ಯಾ ಹಾಗೂ ಚೀನಾದ ಕೊನೆಯ ಹಂತದ ಪ್ರಯತ್ನವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ತಿರಸ್ಕರಿಸಿದೆ. ಕಳೆದೊಂದು ವಾರದಿಂದ ನಡೆದ ಸಭೆಯು ನಿರ್ದಿಷ್ಟ ಒಪ್ಪಂದಕ್ಕೆ ಬರಲು ವಿಫಲವಾಗಿದೆ ಎಂದು ಐರೋಪ್ಯ ದೇಶಗಳು ತಿಳಿಸಿವೆ.

ಇರಾನ್ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿ ನಿರ್ಬಂಧ ವಿಳಂಬಗೊಳಿಸುವ ನಿರ್ಣಯವನ್ನು ರಷ್ಯಾ, ಚೀನಾ ಮಂಡಿಸಿದ್ದವು. ನಿರ್ಣಯ ತಡೆಹಿಡಿಯಲು ಭದ್ರತಾ ಮಂಡಳಿಯ 9 ಸದಸ್ಯರ ಬೆಂಬಲ ಅಗತ್ಯವಿತ್ತು. ಶುಕ್ರವಾರ ಮಂಡಿಸಿದ ನಿರ್ಣಯಕ್ಕೆ ಯಾವುದೇ ಬೆಂಬಲ ಗಳಿಸಲು ಉಭಯ ರಾಷ್ಟ್ರಗಳು ವಿಫಲವಾದವು. ಶನಿವಾರದಿಂದಲೇ ಇರಾನ್ ಮೇಲೆ ನಿರ್ಬಂಧಗಳು ಅನ್ವಯವಾಗಲಿವೆ.

‘ರಾಜತಾಂತ್ರಿಕತೆ ಹಾಗೂ ಮಾತುಕತೆಯ ಮೂಲಕ ಸಮಸ್ಯೆ ಬಗೆಹರಿಸುವ ಕುರಿತು ಐರೋಪ್ಯ ಒಕ್ಕೂಟದ ಸದಸ್ಯರು ಹಾಗೂ ಅಮೆರಿಕವು ಎರಡನೇ ಬಾರಿ ಚಿಂತನೆ ನಡೆಸಲಿದೆ ಎಂದು ಭಾವಿಸಿದ್ದೆವು. ಬೆದರಿಕೆಯಿಂದ ಆ ಪ್ರಾಂತ್ಯದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ’ ಎಂದು ವಿಶ್ವಸಂಸ್ಥೆಯ ರಷ್ಯಾ ಉಪ ರಾಯಭಾರಿ ಡಿಮಿಟ್ರಿ ಪಾಲಿಅನಸ್ಕಿವ್ ತಿಳಿಸಿದ್ದಾರೆ.

ಇರಾನ್ ಮೇಲೆ ಪುನಃ ನಿರ್ಬಂಧ ವಿಧಿಸುವ ಪ್ರಯತ್ನಕ್ಕೆ ಬ್ರಿಟನ್, ಫ್ರಾನ್ಸ್ ಹಾಗೂ ಜರ್ಮನಿಯು ಹೆಚ್ಚಿನ ಒತ್ತಡ ಹೇರಿದ್ದವು. ಇದರಿಂದ, ವಿದೇಶಗಳಲ್ಲಿರುವ ಇರಾನ್‌ನ ಆಸ್ತಿಗಳ ಮುಟ್ಟುಗೋಲು, ಇರಾನ್‌ನ ಖಂಡಾಂತರ ಕ್ಷಿಪಣಿ ಅಭಿವೃದ್ಧಿ ಮೇಲೆ ದಂಡ ಸೇರಿದಂತೆ ಹಲವು ನಿರ್ಬಂಧಗಳು ಅನ್ವಯವಾಗಲಿದೆ. ಇದರಿಂದ ಈಗಾಗಲೇ ತತ್ತರಿಸಿರುವ ಇರಾನ್‌ನ ಆರ್ಥಿಕತೆಯ ಮೇಲೆ ಇನ್ನಷ್ಟು ಹೊಡೆತ ಬೀಳಲಿದೆ.

ಗಾಜಾ ಮೇಲೆ ಇಸ್ರೇಲ್ ದಾಳಿ: ಭಾರತ, ಆಫ್ರಿಕಾ ಖಂಡನೆ

ವಿಶ್ವಸಂಸ್ಥೆ/ನ್ಯೂಯಾರ್ಕ್ (ಪಿಟಿಐ): ಭಾರತ, ಬ್ರೆಜಿಲ್ ಹಾಗೂ ದಕ್ಷಿಣ ಆಫ್ರಿಕಾ ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು ತೀವ್ರವಾಗಿ ಖಂಡಿಸಿದವು. ಅಲ್ಲದೇ ಇಸ್ರೇಲ್ ಆಕ್ರಮಿತ ಪ್ಯಾಲೆಸ್ಟೀನ್ ಪರಿಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿದವು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಸಂದರ್ಭದಲ್ಲಿ ತ್ರಿಪಕ್ಷೀಯ ಸಭೆಯು ಶುಕ್ರವಾರ (ಭಾರತ, ಬ್ರೆಜಿಲ್ ಹಾಗೂ ದಕ್ಷಿಣ ಆಫ್ರಿಕಾ) ನಡೆಯಿತು. ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಭಾರತವನ್ನು ಪ್ರತಿನಿಧಿಸಿದ್ದರು.

ಸುಂಕ ಹೇರಿಕೆ: ‘ಬ್ರಿಕ್ಸ್’ ಕಳವಳ

‘ವಿವೇಚನಾರಹಿತ’ ರೂಪದಲ್ಲಿ ಸುಂಕಗಳನ್ನು ಏರಿಕೆ ಮಾಡುವುದು ಹಾಗೂ ವ್ಯಾಪಾರದ ಮೇಲೆ ನಿರ್ಬಂಧ ಹೇರುವಂತ ಕ್ರಮಗಳ ಕುರಿತು ‘ಬ್ರಿಕ್ಸ್’ ರಾಷ್ಟ್ರಗಳು ಕಳವಳ ವ್ಯಕ್ತಪಡಿಸಿವೆ. ಅದರಲ್ಲೂ ಸುಂಕವನ್ನು ಬಲವಂತದ ಸಾಧನವನ್ನಾಗಿ ಬಳಸುವ ಕ್ರಮಗಳು ದಕ್ಷಿಣ ರಾಷ್ಟ್ರಗಳನ್ನು ಹಿಂದೆ ಸರಿಸುವ ಅಪಾಯವನ್ನುಂಟು ಮಾಡುತ್ತವೆ. ಜಾಗತಿಕ ವ್ಯಾಪಾರವನ್ನು ಹಾಳು ಮಾಡುತ್ತವೆ ಎಂದು ಎಚ್ಚರಿಸಿವೆ.

ಪ್ಯಾರಾ ವಿಶ್ವ ಆರ್ಚರಿ: ಕೈಗಳಿಲ್ಲದೇ ಚಿನ್ನ ಗೆದ್ದ ಮೊದಲ ಮಹಿಳೆ

ಶೀತಲ್ ದೇವಿ ಚಾರಿತ್ರಿಕ ಸಾಧನೆ

ಗ್ವಾಂಗ್‌ಜು (ದಕ್ಷಿಣ ಕೊರಿಯಾ), (ಪಿಟಿಐ): ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಕೈಗಳ ಸಹಾಯವಿಲ್ಲದೇ ಚಿನ್ನ ಗೆದ್ದ ವಿಶ್ವದ ಮೊದಲ ಮಹಿಳಾ ಸ್ಪರ್ಧಿ ಎಂಬ ಹೆಗ್ಗಳಿಕೆ ಭಾರತದ ಶೀತಲ್ ದೇವಿ ಅವರದಾಯಿತು. ಇಲ್ಲಿ ನಡೆಯುತ್ತಿರುವ ಪ್ಯಾರಾ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಕಾಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ತೊಮನ್ ಕುಮಾರ್ ಅವರೂ ಚಿನ್ನ ಗೆದ್ದರು.

ಶನಿವಾರ ಕಾಂಪೌಂಡ್ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ 18 ವರ್ಷ ವಯಸ್ಸಿನ ಶೀತಲ್, ಟರ್ಕಿಯ ಅಗ್ರಕ್ರಮಾಂಕದ ಸ್ಪರ್ಧಿ ಒಝ್ನೂರ್ ಕ್ಯುರ್ ಗಿರ್ದಿ ಅವರನ್ನು 146-143 ರಿಂದ ಸೋಲಿಸಿದರು. ಕೈಗಳನ್ನು ಕಳೆದುಕೊಂಡ ಜಮ್ಮು-ಕಾಶ್ಮೀರದ ಬಾಲೆ ಶೀತಲ್ ಕಾಲಿನಿಂದಲೇ ಬಾಣ ಪ್ರಯೋಗಿಸಿ ಹೆಸರು ಮಾಡಿದ್ದಾರೆ.

ಕಾಂಪೌಂಡ್ ವಿಭಾಗದ ಸ್ಪರ್ಧಿಗಳು ಬಳಸುವ ಬಿಲ್ಲು ಕೇಬಲ್ ಮತ್ತು ಪುಟ್ಟ ರಾಟೆಗಳನ್ನು ಹೊಂದಿರುತ್ತದೆ. ರೀಕರ್ವ್ ವಿಭಾಗದ ಬಿಲ್ಲು ಸಾಂಪ್ರದಾಯಿಕ ರೀತಿಯಲ್ಲಿರುತ್ತದೆ.

ಶೀತಲ್ ಅವರು ಈ ಟೂರ್ನಿಯಲ್ಲಿ ಕೈಗಳಿಲ್ಲದೇ ಭಾಗವಹಿಸಿರುವ ಏಕೈಕ ಸ್ಪರ್ಧಿ ಎನಿಸಿದ್ದಾರೆ. ಅವರು ಗಲ್ಲದ ನೆರವು ಪಡೆದು ಕಾಲಿನಿಂದ ಬಾಣ ಪ್ರಯೋಗಿಸುತ್ತಾರೆ. ಈ ಹಿಂದೆ ಪುರುಷರ ವಿಭಾಗದಲ್ಲಿ ಕೈಗಳಿಲ್ಲದೇ ಬಾಣ ಪ್ರಯೋಗಿಸಿ ಚಿನ್ನ ಗೆದ್ದ ಏಕೈಕ ದಾಖಲೆ ಇರುವುದು ಅಮೆರಿಕದ ಮ್ಯಾಟ್ ಸ್ಟುಟ್ಜ್‌ಮನ್ ಹೆಸರಿನಲ್ಲಿ. ಅವರು ದುಬೈ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರು.



ಭಾರತದ ತೊಮನ್ ಕುಮಾರ್, ಶೀತಲ್ ದೇವಿ

ತೊಮನ್‌ಗೆ ಚಿನ್ನ: ಇದಕ್ಕೆ ಮೊದಲು ಶೀತಲ್ ಅವರು ತೊಮನ್ ಕುಮಾರ್ ಜೊತೆಗೂಡಿ ಕಾಂಪೌಂಡ್ ಮಿಶ್ರ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು. ಪ್ಲೇಆಫ್‌ನಲ್ಲಿ ಬ್ರಿಟನ್‌ನ ಜೋಡೀ ಗ್ರಿನ್ಹಮ್- ನಥಾನ್ ಮೆಕ್‌ಕ್ವೀನ್ ಜೋಡಿಯನ್ನು 152-149 ರಿಂದ ಸೋಲಿಸಿದ್ದರು.

ನಂತರ ನಡೆದ ಪುರುಷರ ವಿಭಾಗದ ಕಾಂಪೌಂಡ್ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ತೊಮನ್ ಅವರು ಸ್ವದೇಶದ ರಾಕೇಶ್ ಕುಮಾರ್ ಅವರನ್ನು 40-20 ರಿಂದ ಸೋಲಿಸಿದರು. ರಾಕೇಶ್ ಅವರು ತಾಂತ್ರಿಕ ತೊಂದರೆಯ ಕಾರಣ ಅರ್ಧದಲ್ಲೇ ಹಿಂದೆ ಸರಿದರು. ರಾಕೇಶ್, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು. ಇಲ್ಲಿ ಅವರ ಬಾಣ ಪ್ರಯೋಗಿಸುವ ವೇಳೆ ತಾಂತ್ರಿಕ ತೊಂದರೆ ಕಾಣಿಸಿತು.

ಕಾಂಪೌಂಡ್ ಪುರುಷರ ಓಪನ್ ವಿಭಾಗದಲ್ಲಿ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ ಶ್ಯಾಮ್ ಸುಂದರ್ ಸ್ವಾಮಿ 141-148 ರಲ್ಲಿ ಬ್ರಿಟನ್‌ನ ನಥಾನ್ ಮೆಕ್‌ಕ್ವೀನ್ ಅವರಿಗೆ ಸೋತರು. ಸ್ವಾಮಿ ಸೆಮಿಫೈನಲ್‌ನಲ್ಲಿ ತೊಮನ್ ಅವರನ್ನು ಸೋಲಿಸಿದ್ದರು.



ಪ್ರಶಸ್ತಿಯೊಂದಿಗೆ ಸಿದ್ಧಾಂತ್, ಮಿಹಿಕಾ

ಟಿ.ಟಿ: ಮಿಹಿಕಾ, ಸಿದ್ಧಾಂತ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ಧಾಂತ್ ಎಂ. ಮತ್ತು ಮಿಹಿಕಾ ಉಡುಪ ಅವರು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಜೆಟಿಟಿಎ ಆಶ್ರಯದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಸಿದ್ಧಾಂತ್ 11-7, 2-11, 11-6, 11-7 ರಿಂದ ಆರ್ಣವ್ ಮಿಥುನ್ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಆರ್ಣವ್ 11-8, 4-11, 11-7, 12-10 ರಿಂದ ಸಾತ್ವಿಕ್ ಎಂ. ವಿರುದ್ಧ, ಸಿದ್ಧಾಂತ್ ಎಂ. 11-4, 11-5, 12-10 ರಿಂದ ಸುಚೇತ್ ಸಿ. ಧರೆಣ್ಣವರ ವಿರುದ್ಧ ಜಯಗಳಿಸಿದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಮಿಹಿಕಾ 14-12 8-11, 11-4, 11-6 ರಿಂದ ಆಧ್ಯಾ ಎಂ. ವಿರುದ್ಧ ಜಯಗಳಿಸಿದರು.

ಚೆಸ್: ಕರ್ನಾಟಕದ ಮೂವರ ಗೆಲುವಿನ ಓಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ಥಳೀಯ ಆಟಗಾರ, ‘ಅರೆನಾ ಇಂಟರ್‌ನ್ಯಾಷನಲ್ ಮಾಸ್ಟರ್’ ಪಂಕಜ್ ಭಟ್ ಸೇರಿದಂತೆ ಕರ್ನಾಟಕದ ಮೂವರು ಇಲ್ಲಿ ನಡೆಯುತ್ತಿರುವ ಗ್ರ್ಯಾಂಡ್ ಆರ್‌ಸಿಸಿ ಫಿಡೆ ರೇಟೆಡ್ ಅಂತರರಾಷ್ಟ್ರೀಯ ಚೆಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ರಾವ್ಸ್ ಚೆಸ್ ಕಾರ್ನರ್, ನಗರದ ಶಾರದಾ ಕಾಲೇಜು ಆವರಣದಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಶನಿವಾರ ಐದು ಸುತ್ತುಗಳ ಮುಕ್ತಾಯಕ್ಕೆ ಪಂಕಜ್ ಐದು ಅಂಕಗಳೊಂದಿಗೆ ಐವರ ಜೊತೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಕರ್ನಾಟಕದ ಅದ್ವೈತ್ ರತ್ನಾಕರ್ ವಿಭೂತೆ, ಪ್ರಣವ್ ಎ.ಜೆ, ಕೇರಳದ ನಿತಿನ್ ಬಾಬು, ಮಣಿಪುರದ ವಿಕ್ರಮಜೀತ್ ಸಿಂಗ್ ಮತ್ತು ಇಂಟರ್‌ನ್ಯಾಷನಲ್ ಮಾಸ್ಟರ್ ಮುರಳಿಕೃಷ್ಣ ಬಿ.ಟಿ (ತಮಿಳುನಾಡು) ಅವರು 5 ಪಾಯಿಂಟ್ ಗಳಿಸಿರುವ ಇತರರು.



ಪಂಕಜ್ ಭಟ್

ಆರು ಆಟಗಾರರು ತಲಾ 4.5 ಪಾಯಿಂಟ್‌ಗಳನ್ನು ಗಳಿಸಿದ್ದಾರೆ. ಇಂಟರ್‌ನ್ಯಾಷನಲ್ ಮಾಸ್ಟರ್ ಸರವಣ ಕೃಷ್ಣನ್ ಮತ್ತು ಎರಡನೇ ಶ್ರೇಯಾಂಕದ ಲಾಡ್ ಮಂದಾರ್ ಪ್ರದೀಪ್ (ತಲಾ 4 ಅಂಕ) ಅವರು ಮೂರನೇ ಸ್ಥಾನದಲ್ಲಿದ್ದಾರೆ.

ನಾಲ್ಕನೇ ಸುತ್ತಿನಲ್ಲಿ ಸರವಣ ಕೃಷ್ಣನ್ ಅವರಿಗೆ ಆಘಾತ ನೀಡಿದ್ದ ತಮಿಳುನಾಡಿನ ಆದಿತ್ಯ ಎಸ್. ಐದನೇ ಸುತ್ತಿನಲ್ಲಿ ನಿತಿನ್ ಬಾಬುಗೆ ಸೋಲುಣಿಸಿದರು.

ಕೇರಳದ ಸಂದೀಪ್ ಸಂತೋಷ್ ವಿರುದ್ಧ ವಿಕ್ರಮಜೀತ್ ಸಿಂಗ್, ತಮಿಳುನಾಡಿನ ಕಿಶೋರ್ ವಿ. ವಿರುದ್ಧ ಪಂಕಜ್ ಭಟ್, ಕರ್ನಾಟಕದ ನಂದಕುಮಾರ್ ವೀರೇಶ್ ಎಸ್. ವಿರುದ್ಧ ಮುರಳಿಕೃಷ್ಣ ಬಿ.ಟಿ, ರೈಲ್ವೆಯ ಅರ್ಜುನ್ ತಿವಾರಿ ವಿರುದ್ಧ ಕರ್ನಾಟಕದ ಪ್ರಣವ್, ತಮಿಳುನಾಡಿನ ನಿಖಿಲ್ ಟಿ.ಎಲ್ ವಿರುದ್ಧ ಕರ್ನಾಟಕದ ಅದ್ವೈತ್ ರತ್ನಾಕರ್ ಜಯ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಬಿಸಿಸಿಐ ಎಜಿಎಂ ಇಂದು

ಮುಂಬೈ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಸರ್ವಸದಸ್ಯರ ಸಭೆಯು (ಎಜಿಎಂ) ಭಾನುವಾರ ನಡೆಯಲಿದೆ.

ಈ ಸಭೆಯಲ್ಲಿ ಬಿಸಿಸಿಐಗೆ ನೂತನ ಪದಾಧಿಕಾರಿಗಳ ಆಯ್ಕೆ ಹಾಗೂ ಆಡಳಿತ ಸಮಿತಿಯ ಅವಿರೋಧ ಆಯ್ಕೆ ನಡೆಯುವುದು ಬಹುತೇಕ ಖಚಿತವಾಗಿದೆ. ನೂತನ ಅಧ್ಯಕ್ಷರಾಗಿ ಮಿಥುನ್ ಮನ್ಹಾಸ್, ಖಜಾಂಚಿಯಾಗಿ ರಘುರಾಮ್ ಭಟ್ ಅವರನ್ನು ನೇಮಕ ಮಾಡಲಾಗುವುದು. ಕಾರ್ಯದರ್ಶಿಯಾಗಿ ದೇವ್‌ಜೀತ್ ಸೈಕಿಯಾ ಮುಂದುವರಿಯುವರು ಎಂದು ಮೂಲಗಳು ತಿಳಿಸಿವೆ.

ಫುಟ್‌ಬಾಲ್: ಭಾರತಕ್ಕೆ ಕಿರೀಟ

ಕೊಲಂಬೊ (ಪಿಟಿಐ): ಭಾರತ ತಂಡವು ಶನಿವಾರ ಪೆನಾಲ್ಟಿ ಶೂಟೌಟ್‌ನಲ್ಲಿ 4-1ರಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿ, ಏಳನೇ ಬಾರಿಗೆ ಸ್ಯಾಫ್ 17 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪ್ರಶಸ್ತಿ ಗೆದ್ದುಕೊಂಡಿತು.

ತೀವ್ರ ಪೈಪೋಟಿಯಿಂದ ಕೂಡಿದ್ದ ಫೈನಲ್ ಪಂದ್ಯದಲ್ಲಿ ಉಭಯ ತಂಡಗಳು ನಿಗದಿತ ಅವಧಿಯಲ್ಲಿ 2-2 ಸಮಬಲ ಸಾಧಿಸಿದ್ದವು.

ಮುಂಬೈ ಇಂಡಿಯನ್ಸ್ ಮಹಿಳಾ ತಂಡಕ್ಕೆ ಲಿಸಾ ಕೈಟ್ಲಿ ಕೋಚ್

ಮುಂಬೈ (ಪಿಟಿಐ): ಆಸ್ಟ್ರೇಲಿಯಾ ತಂಡದ ಮಾಜಿ ಆಟಗಾರ್ತಿ ಮತ್ತು ಎರಡು ಬಾರಿಯ ವಿಶ್ವಕಪ್ ವಿಜೇತೆ ಲಿಸಾ ಕೈಟ್ಲಿ ಅವರನ್ನು ಮುಂಬೈ ಇಂಡಿಯನ್ಸ್ ಮಹಿಳಾ ತಂಡದ ಮುಖ್ಯ ಕೋಚ್ ಆಗಿ ಗುರುವಾರ ನೇಮಕ ಮಾಡಲಾಗಿದೆ.

ಅವರು 1997 ಮತ್ತು 2005ರಲ್ಲಿ ಮಹಿಳೆಯರ ಏಕದಿನ ವಿಶ್ವಕಪ್ ಗೆದ್ದ ಆಸ್ಟ್ರೇಲಿಯಾ ತಂಡದ ಭಾಗವಾಗಿದ್ದಾರೆ.

54 ವರ್ಷ ವಯಸ್ಸಿನ ಕೈಟ್ಲಿ 9 ಟೆಸ್ಟ್, 82 ಏಕದಿನ ಮತ್ತು ಒಂದು ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡಿದ್ದಾರೆ.

‘ಬಹುಪಕ್ಷೀಯ ವ್ಯವಸ್ಥೆ ‘ಬ್ರಿಕ್ಸ್’ ರಕ್ಷಿಸಲಿ’

ನ್ಯೂಯಾರ್ಕ್ (ಪಿಟಿಐ): ಹೆಚ್ಚುತ್ತಿರುವ ರಕ್ಷಣಾ ನೀತಿ, ಸುಂಕದ ಏರಿಳಿತ ಹಾಗೂ ಇತರ ಅಡೆತಡೆಗಳು ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರುವುದರಿಂದ ಜಾಗತಿಕ ವ್ಯಾಪಾರ ಸಂಬಂಧವನ್ನು ರಕ್ಷಿಸುವಂತೆ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ‘ಬ್ರಿಕ್ಸ್’ಗೆ ಕರೆ ನೀಡಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 80ನೇ ಉನ್ನತ ಮಟ್ಟದ ಸಭೆಯ (ಯುಎನ್‌ಜಿಎ) ಸಂದರ್ಭದಲ್ಲಿ ‘ಬ್ರಿಕ್ಸ್’ ದೇಶಗಳ ವಿದೇಶಾಂಗ ಸಚಿವರ ಸಭೆಯು ಭಾರತದ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಿತು.

‘ಬಹುಪಕ್ಷೀಯತೆಯು ಒತ್ತಡದಲ್ಲಿದ್ದಾಗ, ರಚನಾತ್ಮಕ ಬದಲಾವಣೆಯ ಗಟ್ಟಿ ದನಿಯಾಗಿ ‘ಬ್ರಿಕ್ಸ್’ ನಿಂತಿದೆ. ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಶಾಂತಿ ಸ್ಥಾಪನೆ, ಮಾತುಕತೆ, ರಾಜತಾಂತ್ರಿಕತೆ ಹಾಗೂ ಅಂತರರಾಷ್ಟ್ರೀಯ ಕಾನೂನಿನ ಪಾಲನೆಯನ್ನು, ‘ಬ್ರಿಕ್ಸ್’ ಬಲಪಡಿಸಬೇಕು’ ಎಂದು ಜೈಶಂಕರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

2026ರಲ್ಲಿ ಭಾರತವು ‘ಬ್ರಿಕ್ಸ್’ ಅಧ್ಯಕ್ಷತೆ ವಹಿಸಿಕೊಳ್ಳುತ್ತಿರುವ ಕುರಿತು ಮಾತನಾಡಿದ ಅವರು, ‘ಡಿಜಟಲೀಕರಣ, ಸ್ಟಾರ್ಟ್‌ಅಪ್‌ಗಳು, ನಾವೀನ್ಯತೆ ಮತ್ತು ಅಭಿವೃದ್ಧಿ ಪಾಲುದಾರಿಕೆಗಳ ಮೂಲಕ ಆಹಾರ, ಇಂಧನ, ಹವಾಮಾನ ಹಾಗೂ ಸುಸ್ಥಿರ ಅಭಿವೃದ್ಧಿಯ ಮೇಲೆ ದೇಶವು ಕೇಂದ್ರೀಕರಿಸಲಿದೆ’ ಎಂದರು.

‘ಚಂದ್ರಬಾಬು ನಾಯ್ಡು ಆರ್‌ಎಸ್‌ಎಸ್ ಪ್ರಚಾರಕ’

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನಕ್ಕೆ ಸೇರಿದ ಹಣವನ್ನು ಬಳಸಿಕೊಂಡು ಆಂಧ್ರ ಪ್ರದೇಶದ ದಲಿತರ ಕಾಲೊನಿಗಳಲ್ಲಿ 5 ಸಾವಿರ ವೆಂಕಟೇಶ್ವರ ದೇವಾಲಯಗಳನ್ನು ನಿರ್ಮಾಣ ಮಾಡುವುದಾಗಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಘೋಷಿಸಿದ್ದನ್ನು ಆಂಧ್ರ ಪ್ರದೇಶ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಟೀಕಿಸಿದ್ದಾರೆ.

‘ಪ್ರಮುಖ ವಿಚಾರಗಳಿಂದ ಜನರನ್ನು ಬೇರೆಡೆಗೆ ಸೆಳೆಯುವ ಪ್ರಯತ್ನ ಇದಾಗಿದ್ದು, ಕೂಡಲೇ ಈ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಆರ್‌ಎಸ್‌ಎಸ್ ಸಿದ್ಧಾಂತ ಮುಂದಿಟ್ಟುಕೊಂಡು ದೇವಾಲಯಗಳನ್ನು ನಿರ್ಮಿಸುವುದು ಸರಿಯಲ್ಲ’ ಎಂದು ವಿಜಯವಾಡದಲ್ಲಿ ತಿಳಿಸಿದರು.

ಚಿಟಿಕೆ ಸುದ್ದಿ

ಭಯೋತ್ಪಾದಕ ಪಿಂಡಿ ಭಾರತಕ್ಕೆ ಹಸ್ತಾಂತರ

ಚಂಡೀಗಢ (ಪಿಟಿಐ): ಬಬ್ಬರ್ ಖಾಲ್ಸಾದ ಅಂತರರಾಷ್ಟ್ರೀಯ ಭಯೋತ್ಪಾದಕ ಪರ್ಮಿಂದರ್ ಸಿಂಗ್ ಅಲಿಯಾಸ್ ಪಿಂಡಿ ಅನ್ನು ಯುಎಇಯಿಂದ ಗಡಿಪಾರು ಮಾಡಲಾಗಿದ್ದು, ಭಾರತಕ್ಕೆ ಕರೆತರಲಾಗಿದೆ ಎಂದು ಪಂಜಾಬ್‌ನ ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಶನಿವಾರ ತಿಳಿಸಿದರು.

ಈತ ಗುರುದಾಸ್‌ಪುರದ ಬಟಾಲಾದಲ್ಲಿ ಪೆಟ್ರೋಲ್ ಬಾಂಬ್ ದಾಳಿಗಳು, ಹಿಂಸಾತ್ಮಕ ಹಲ್ಲೆಗಳು, ಸುಲಿಗೆ ಸೇರಿದಂತೆ ಅನೇಕ ಘೋರ ಅಪರಾಧಗಳಲ್ಲಿ ಭಾಗಿಯಾಗಿದ್ದಾನೆ ಎಂದು ಯಾದವ್ ಹೇಳಿದರು.

ವಿದೇಶ ಮೂಲದ ಭಯೋತ್ಪಾದಕರಾದ ಹರ್ವಿಂದರ್ ಸಿಂಗ್ ಅಲಿಯಾಸ್ ರಿಂಡಾ ಮತ್ತು ಹ್ಯಾಪಿ ಪಾಸಿಯಾಗೆ ಪಿಂಡಿ ಆಪ್ತ. ಸಿಬಿಐ ಸೇರಿದಂತೆ ಕೇಂದ್ರ ಸಂಸ್ಥೆಗಳ ನಿಕಟ ಸಮನ್ವಯದೊಂದಿಗೆ ಆತನನ್ನು ಯುಎಇಯ ಅಬುಧಾಬಿಯಿಂದ ಕರೆತರಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಚೀನಾದಲ್ಲಿ ಭೂಕಂಪ: 11 ಜನರಿಗೆ ಗಾಯ

ಬೀಜಿಂಗ್ (ಪಿಟಿಐ) : ಚೀನಾದ ಗನ್ಸು ಪ್ರಾಂತ್ಯದಲ್ಲಿ ಶನಿವಾರ 5.6 ತೀವ್ರತೆಯ ಭೂಕಂಪ ಸಂಭವಿಸಿದ್ದು, 11 ಜನರಿಗೆ ಗಾಯಗಳಾಗಿವೆ ಎಂದು ಸರ್ಕಾರಿ ಮಾಧ್ಯಮ ತಿಳಿಸಿದೆ.

ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರು ಚೇತರಿಸಿಕೊಂಡಿದ್ದಾರೆ. ಭೂಕಂಪನದಿಂದ 17 ಮನೆಗಳು ಸಂಪೂರ್ಣ ನಾಶಗೊಂಡಿದ್ದು, 3,500ಕ್ಕೂ ಹೆಚ್ಚು ವಸತಿಗಳಿಗೆ ಭಾಗಶಃ ಹಾನಿಯಾಗಿದೆ. ತೀವ್ರ ಹಾನಿಗೊಳಗಾದ ಸ್ಥಳಗಳಿಂದ 7,800 ಜನರನ್ನು ಸ್ಥಳಾಂತರ ಮಾಡಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಸಿ.ಸಿ.ಟಿವಿ ವರದಿ ಮಾಡಿದೆ.

ಆಕಸ್ಮಿಕವಾಗಿ ಗಡಿ ದಾಟಿದ್ದ ಪಾಕ್ ಪ್ರಜೆ ವಾಪಸ್

ಜಮ್ಮು (ಪಿಟಿಐ): ಆಕಸ್ಮಿಕವಾಗಿ ಗಡಿ ಪ್ರವೇಶಿಸಿದ್ದ ಪಾಕಿಸ್ತಾನದ ಪ್ರಜೆಯೊಬ್ಬರನ್ನು ಗಡಿ ಭದ್ರತಾ ಪಡೆಯು ಮರಳಿ ಪಾಕಿಸ್ತಾನಕ್ಕೆ ಶುಕ್ರವಾರ ಕಳುಹಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗಡಿ ಪ್ರವೇಶಿಸಿದ್ದ ಮೊಹಮ್ಮದ್ ಅಕ್ರಂ ಅವರನ್ನು ಜಮ್ಮುವಿನ ಆರ್.ಎಸ್. ಪುರ ಹೊರವಲಯದಲ್ಲಿ ಸೆಪ್ಟೆಂಬರ್ 25ರಂದು ವಶಕ್ಕೆ ಪಡೆಯಲಾಗಿತ್ತು.

ಯಾವುದೇ ಅನುಮಾನಾಸ್ಪದ ವಸ್ತುಗಳು ಅವರ ಬಳಿ ಇರಲಿಲ್ಲ. ಆಕಸ್ಮಿಕವಾಗಿ ಗಡಿ ಪ್ರವೇಶಿಸಿರುವುದು ತನಿಖೆಯಿಂದ ಖಚಿತವಾದ ಬಳಿಕ ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕ ಪ್ರವೀಣ ಸಿಹಿಕಹಿ ಚಂದ್ರು ಅವರಿಂದ

ಹಬ್ಬದ ರುಚಿಕರ ಭಕ್ಷ್ಯಗಳು

ಈ ಹಬ್ಬದ ಋತುವಿನಲ್ಲಿ ನಿಮ್ಮ ಮನಸ್ಸನ್ನು ತಲುಪಲು ಬರುತ್ತಿರುವ ‘ಕರುನಾಡ ಸವಿಯೂಟ ಆವೃತ್ತಿ-4'ರ ಪಾಕಪದ್ಧತಿಯನ್ನು ಫ್ರೀಡಂ ಹೆಲ್ತಿ ಅಡುಗೆ ಎಣ್ಣೆ ಪ್ರಸ್ತುತಪಡಿಸುತ್ತಿದೆ. ಬಾಯಲ್ಲಿ ನೀರೂರಿಸುವ ವಿಶೇಷ ಭಕ್ಷ್ಯಗಳ ಪ್ರದರ್ಶನವು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಸಹಯೋಗದಲ್ಲಿ ಮೂಡಿಬರಲಿದೆ. ಪಾಕ ಪ್ರವೀಣ ಸಿಹಿ ಕಹಿ ಚಂದ್ರು ಅವರು ತಯಾರಿಸಿರಲಿರುವ ಎರಡು ತಿನಿಸುಗಳಿಂದ ಈ ಆವೃತ್ತಿ ಆರಂಭವಾಗಲಿದೆ.

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 4



ಹಲಸಿನ ಮುಲ್ಕ

ಬೇಕಾದ ಪದಾರ್ಥಗಳು: ಹಲಸಿನ ಹಣ್ಣಿನ ತೊಳೆಗಳು 8, ತೆಂಗಿನಕಾಯಿ ತುರಿ 1 ಕಪ್, ನೆನೆಸಿದ ಅಕ್ಕಿ 1 ಕಪ್, ತುರಿದ ಬೆಲ್ಲ 1 ಕಪ್, ಏಲಕ್ಕಿ 5, ಅಡುಗೆ ಸೋಡ ಅರ್ಧ ಚಮಕ, 1 ಚಿಟಿಕೆ ಉಪ್ಪು ಮತ್ತು ಕರಿಯಲು ಬೇಕಾದಷ್ಟು ಅಡುಗೆ ಎಣ್ಣೆ.

ಮಾಡುವ ವಿಧಾನ: ಅಕ್ಕಿಯನ್ನು ಐದು ಗಂಟೆ ನೆನೆಸಿಡಿ. ಹಲಸಿನ ತೊಳೆಗಳನ್ನು ಚೆನ್ನಾಗಿ ರುಬ್ಬಿ ಪೇಸ್ಟ್ ಮಾಡಿಕೊಳ್ಳಿ. ಅದಕ್ಕೆ ತೆಂಗಿನತುರಿ, ಬೆಲ್ಲ, ಏಲಕ್ಕಿ ಪುಡಿ, ನೆನೆಸಿದ ಅಕ್ಕಿ, ಅಡುಗೆ ಸೋಡ ಸೇರಿಸಿ ಮಿಕ್ಸಿಗಾಕಿ ಮತ್ತೊಮ್ಮೆ ನುಣ್ಣಗೆ ರುಬ್ಬಿಕೊಂಡು ಪಕ್ಕಕ್ಕಿಡಿ. ಕಡಾಯಿಗೆ ಎಣ್ಣೆ ಹಾಕಿ ಬಿಸಿಯಾದ ನಂತರ ರುಬ್ಬಿಟ್ಟ ಹಿಟ್ಟನ್ನು ಮೂರು ಬೆರಳುಗಳಿಂದ ಬರುವಷ್ಟು ತೆಗೆದುಕೊಂಡು ಬಿಸಿ ಎಣ್ಣೆಯಲ್ಲಿ ಬಿಡಿ. ಗೋಲ್ಡನ್ ಬ್ರೌನ್ ಬಣ್ಣಕ್ಕೆ ತಿರುಗುವವರೆಗೆ ಹುರಿಯಿರಿ. ನಂತರ ತುಪ್ಪದೊಂದಿಗೆ ಬಿಸಿ ಬಿಸಿಯಾಗಿ ಬಡಿಸಿ.

ಹುರಿಗಡಲೆ ನಿಪ್ಪಟ್ಟು


ಬೇಕಾದ ಪದಾರ್ಥಗಳು: ಹುರಿದ ಶೇಂಗಾ ಬೀಜ 2 ಚಮಚ, ಹುರಿದ ಕಡಲೆಬೇಳೆ ಮುಕ್ಕಾಲು ಕಪ್, ಕಡಲೆಹಿಟ್ಟು (ಬೇಸನ್) 2 ಚಮಚ, ಅಕ್ಕಿ ಹಿಟ್ಟು 1 ಕಪ್, ಬಿಳಿ ಎಳ್ಳು 1 ಚಮಚ, ಕತ್ತರಿಸಿದ ಕರಿಬೇವು ಎಲೆ 10, ಕೆಂಪು ಮೆಣಸಿನಪುಡಿ 1 ಚಮಚ, ಬಿಸಿಎಣ್ಣೆ 2 ಚಮಚ, ಉಪ್ಪು ರುಚಿಗೆ ತಕ್ಕಷ್ಟು ಹಾಗೂ ಕರಿಯಲು ಬೇಕಾದ ಎಣ್ಣೆ.

ಮಾಡುವ ವಿಧಾನ: ಅರ್ಧ ಕಪ್ ಕಡಲೆಬೇಳೆಯನ್ನು ಹುರಿದು, ಮಿಕ್ಸಿಗಾಕಿ ನುಣ್ಣಗೆ ಪುಡಿ ಮಾಡಿಟ್ಟುಕೊಳ್ಳಿ. ಶೇಂಗಾ ಬೀಜಗಳನ್ನು ಹುರಿದು ಕುಟ್ಟಾಣಿಯಲ್ಲಿ ಕುಟ್ಟಿ ಒರಟು ಒರಟಾದ ಪುಡಿ ಮಾಡಿಕೊಂಡು ಪಕ್ಕಕ್ಕಿಡಿ. ನಂತರ ಮಿಕ್ಸಿಂಗ್ ಬೌಲ್‌ನಲ್ಲಿ ಅಕ್ಕಿಹಿಟ್ಟು, ಕಡಲೆಬೇಳೆ ಪುಡಿ ಹಾಗೂ ಕಡಲೆಹಿಟ್ಟನ್ನು ಹಾಕಿ ಬೆರೆಸಿ. ಅದಕ್ಕೆ 2 ಚಮಚ ಕಾದ ಎಣ್ಣೆ ಕಲೆಸಿ. ಕಲೆಸಿದ ಹಿಟ್ಟಿನ ಒಂದು ಭಾಗ ತೆಗೆದುಕೊಂಡು ಅಂಗೈನಲ್ಲಿ ಒಂದು ಆಕಾರ ಬರುತ್ತದೆಯೇ ಎಂಬುದನ್ನು ನೋಡಿಕೊಳ್ಳಿ. ಆಕಾರ ಬರುತ್ತಿದ್ದರೆ ಎಣ್ಣೆ ಸರಿಯಾಗಿದೆ ಎಂದರ್ಥ. ಇದಕ್ಕೆ ಪುಡಿ ಮಾಡಿಟ್ಟ ಶೇಂಗಾ ಹಾಗೂ ಉಳಿದಿರುವ ಹುರಿದ ಕಡಲೆಬೇಳೆ, ಬಿಳಿ ಎಳ್ಳು, ಕರಿಬೇವು, ಕೆಂಪು ಮೆಣಸಿನ ಪುಡಿ ಹಾಗೂ ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ಅಗತ್ಯವಿರುವಷ್ಟು ನೀರು ಬೆರೆಸಿ ಮೃದುವಾದ ಹಿಟ್ಟನ್ನಾಗಿ ಮಾಡಿಕೊಳ್ಳಿ.

ಹಿಟ್ಟನ್ನು ಸಣ್ಣ ಸಣ್ಣ ಗಾತ್ರದ ಉಂಡೆಗಳನ್ನಾಗಿ ಮಾಡಿಕೊಂಡು, ಸಣ್ಣ ಪ್ಲಾಸ್ಟಿಕ್ ಹಾಳೆ ತೆಗೆದುಕೊಂಡು, ಅದರ ಮೇಲೆ ಎಣ್ಣೆ ಸವರಿ, ಒಂದೊಂದು ಉಂಡೆಯನ್ನು ಮತ್ತೊಂದು ಸಣ್ಣ ಪ್ಲಾಸ್ಟಿಕ್ ಹಾಳೆಯಿಂದ ಚಿಕ್ಕ ಚಪಾತಿ ಆಕಾರದಲ್ಲಿ ಬರುವಂತೆ ಒತ್ತಿಕೊಳ್ಳಿ. ಸ್ಟೌವ್ ಮೇಲೆ ಬಾಂಡ್ಲಿ ಇಟ್ಟು ಕರಿಯಲು ಬೇಕಾಗುವಷ್ಟು ಎಣ್ಣೆ ಸುರಿದು, ಬಿಸಿಯಾದ ನಂತರ ತಟ್ಟಿರುವ ಹಿಟ್ಟಿನ ಚಪಾತಿಗಳನ್ನು ಎಣ್ಣೆಗೆ ಬಿಡಿ. ಗೋಲ್ಡನ್ ಬ್ರೌನ್ ಬರುವವರೆಗೆ ಹುರಿಯಿರಿ. ಗರಿಗರಿ ಹುರಿಗಡಲೆ ನಿಪ್ಪಟ್ಟು ಆಗುವವರೆಗೆ ನೋಡಿಕೊಳ್ಳಿ. ಎಣ್ಣೆಯಿಂದ ತೆಗೆದ ನಿಪ್ಪಟ್ಟನ್ನು ಆಯಿಲ್ ಹೀರಿಕೊಳ್ಳುವ ಪೇಪರ್ ಮೇಲೆ ಹಾಕಿ. ತಣ್ಣಗಾಗುವರೆಗೆ ಬಿಡಿ. ಏರ್‌ಟೈಟ್ ಕಂಟೈನರ್‌ಗಳಲ್ಲಿ ಹಾಕಿ ಸಂಗ್ರಹಿಸಿಡಿ. ಬಿಸಿ ಕಾಫಿ ಜತೆ ಸವಿಯಲು ನೀಡಿ.





ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

LPG Partner: Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal

ಪ್ರಶಸ್ತಿ ಮೇಲೆ ಕಣ್ಣು, ಪ್ರತಿಷ್ಠೆಯೂ ಪಣಕ್ಕೆ


ಏಷ್ಯಾ ಕಪ್: ಭಾರತ- ಪಾಕಿಸ್ತಾನ ಫೈನಲ್ ಇಂದು: ಮುಂದುವರಿಯುವುದೇ ಅಭಿಷೇಕ್ ಶರ್ಮಾ ಅಬ್ಬರ?

• ಆರ್. ಕೌಶಿಕ್

ದುಬೈ: ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಆರಂಭವಾಗಿ ನಲ್ವತ್ತೊಂದು ವರ್ಷಗಳು ಮತ್ತು ಹದಿನೇಳನೇ ಆವೃತ್ತಿ...

ಆದರೆ ಇದೇ ಮೊದಲ ಬಾರಿ ಭಾರತ ಮತ್ತು ಪಾಕಿಸ್ತಾನ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ. ಈ ಟೂರ್ನಿಯು ಒಂದು ರೀತಿಯಲ್ಲಿ ಉಭಯ ತಂಡಗಳ ನಡುವಣ 'ಮೂರು ಪಂದ್ಯಗಳ ದ್ವಿಪಕ್ಷೀಯ ಸರಣಿ'ಯಂತೆ ಬಿಂಬಿತವಾಗಿದೆ. ಏಷ್ಯಾ ಖಂಡದ ಈ 'ಬದ್ಧ ಪ್ರತಿಸ್ಪರ್ಧಿ' ತಂಡಗಳು ಸತತ ಮೂರನೇ ಭಾನುವಾರ ಹಣಾಹಣಿ ನಡೆಸಲಿವೆ.

ಏನೇ ಆಗಲಿ, ಈ ಬಾರಿಯ ಏಷ್ಯಾ ಕಪ್ ಟಿ20 ಟೂರ್ನಿಯು ನೆನಪಿನಲ್ಲಿ ಉಳಿಯುವಂತಿದೆ. ಏಪ್ರಿಲ್ 22ರ ಘಟನೆಯು


ಶಾಹೀನ್ ಶಾ ಆಫ್ರಿದಿ

ಕೇಂದ್ರಬಿಂದುವಾದ ಟೂರ್ನಿ ಇದು. ಕಳೆದೆರಡೂ ಪಂದ್ಯಗಳಲ್ಲಿ ಭಾರತದ ಆಟಗಾರರು ಪಾಕಿಸ್ತಾನ ತಂಡದವರ ಹಸ್ತಲಾಘವ ಮಾಡಲಿಲ್ಲ ಮತ್ತು ಪರಸ್ಪರ ಅಭಿನಂದಿಸಲೂ ಇಲ್ಲ. ಪಾಕ್ ಆಟಗಾರರೂ ಬಿರುನುಡಿಗಳನ್ನು ಪ್ರಯೋಗಿಸಿದರು. ಪ್ರಚೋದನಾಕಾರಿ ಸಂಜ್ಞೆಗಳನ್ನು ಪ್ರದರ್ಶಿಸಿದರು. ಅಲ್ಲದೇ ಒಂದು ಹಂತದಲ್ಲಿ ಪಂದ್ಯ ಬಹಿಷ್ಕರಿಸುವ ಬೆದರಿಕೆಯನ್ನೂ ಒಡ್ಡಿದ್ದರು.

ಪಂದ್ಯ ರೆಫರಿ (ಆ್ಯಂಡಿ ಪೈಕ್ರಾಫ್ಟ್) ಅವರ ಕಾರ್ಯವೈಖರಿಯ ಕುರಿತು ವಿಚಾರಣೆ, ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಪಾಕಿಸ್ತಾನ ತಂಡದ ಸಾಹಿಬ್‌ಝಾದಾ ಫರ್ಹಾನ್ ಮತ್ತು ಶಾಹೀನ್ ಶಾ ಆಫ್ರಿದಿ ಅವರು ಕೂಡ ಕೆಲವು ನಿಯಮ ಉಲ್ಲಂಘನೆಗಳ ಕಾರಣ ಅಧಿಕಾರಿಗಳ ಮುಂದೆ ಹಾಜರಾದರು. ಕ್ರಿಕೆಟ್ ಹಿನ್ನೆಲೆಗೆ ಸರಿಯಿತು. ಚರ್ಚಾಸ್ಪದ ಸಂಗತಿಗಳು ಮುನ್ನೆಲೆಗೆ ಬಂದವು. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೂರ್ಯಕುಮಾರ್ ಯಾದವ್ ಮತ್ತು ಸಲ್ಮಾನ್ ಆಘಾ ಅವರು ಭಾನುವಾರ ಟಾಸ್ ಮಾಡಲು ಬಂದಾಗ ಕೋಟ್ಯಂತರ ಕಣ್ಣುಗಳ ಕೌತುಕದ ನೋಟಗಳು ಇರುವುದು ಖಚಿತ.

ಟೂರ್ನಿಯುದ್ದಕ್ಕೂ ಎಲ್ಲ ಪಂದ್ಯಗಳನ್ನು ಗೆದ್ದಿರುವ ಭಾರತ ತಂಡವು 6-0 ಗೆಲುವಿನ ಮುನ್ನಡೆ ಹೊಂದಿದೆ. ಅಭಿಷೇಕ್ ಸ್ಫೋಟಕ ಶೈಲಿ ಬ್ಯಾಟಿಂಗ್‌ನಿಂದಾಗಿ ತಂಡವು ಪವರ್ ಪ್ಲೇ ಹಂತಗಳಲ್ಲಿ ರನ್ ಸೂರೆ ಮಾಡಿದೆ. ಎಡಗೈ ಬ್ಯಾಟರ್ ಅಭಿಷೇಕ್ ಒಟ್ಟು 309 ರನ್ ಗಳಿಸಿದ್ದಾರೆ. ಅದರಲ್ಲಿ ಮೂರು ಭರ್ಜರಿ ಅರ್ಧ ಶತಕಗಳು ಸೇರಿವೆ. ಅವರ ಆರಂಭಿಕ ಜೊತೆಗಾರ ಮತ್ತು ಉಪನಾಯಕ ಶುಭಮನ್ ಗಿಲ್ ಹಾಗೂ ನಾಯಕ ಸೂರ್ಯ ಅವರೂ ಲಯಕ್ಕೆ ಮರಳಬೇಕಿದೆ.

ಈ ಟೂರ್ನಿಯಲ್ಲಿ ಇದುವರೆಗೆ ಅಭಿಷೇಕ್ ಮತ್ತು ಶಾಹೀನ್ ಶಾ ಆಫ್ರಿದಿ ಅವರ ಜಿದ್ದಾಜಿದ್ದಿಯು ಬಹಳಷ್ಟು ಗಮನ ಸೆಳೆದಿದೆ. ಅಭಿಷೇಕ್ ಅವರು ಆಫ್ರಿದಿಯನ್ನು ಎದುರಿಸುವ ರೀತಿಯು ಭಾರತದ ಇನಿಂಗ್ಸ್‌ಗೆ ಮುನ್ನುಡಿ ಬರೆಯುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ಪಂದ್ಯದಲ್ಲಿಯೂ ಅವರಿಬ್ಬರ ಮುಖಾಮುಖಿ ಕುತೂಹಲ ಕೆರಳಿಸಿದೆ.

ಈ ಎಲ್ಲ ಬೆಳವಣಿಗೆಗಳಾಚೆ ಪಾಕಿಸ್ತಾನ ತಂಡದ ಮುಂದೆ ಸುವರ್ಣಾವಕಾಶವೂ ಇದೆ. ಕಳೆದೆರಡು ವಾರಗಳಲ್ಲಿ ಅನುಭವಿಸಿದ ಹತಾಶೆಗಳಿಗೆ ಮುಯ್ಯಿ ತೀರಿಸಿಕೊಳ್ಳುವ ಅವಕಾಶ ಫೈನಲ್‌ನಲ್ಲಿದೆ. ಟೂರ್ನಿಯ ಕಳೆದೆರಡೂ ಹಣಾಹಣಿಗಳಲ್ಲಿ ಭಾರತವು ಪಾಕ್ ವಿರುದ್ಧ ಮೇಲುಗೈ ಸಾಧಿಸಿದೆ. ಇದೀಗ 'ಹ್ಯಾಟ್ರಿಕ್' ಜಯದೊಂದಿಗೆ ಟ್ರೋಫಿಗೆ ಮುತ್ತಿಡಲು ಕಾತರಿಸಿದೆ.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್


ಭಾರತದ ಅಭಿಷೇಕ್ ಶರ್ಮಾ

ಬಲಾಬಲ (ಟಿ20)	
ಪಂದ್ಯ	15
ಭಾರತ ಜಯ	12
ಪಾಕ್ ಜಯ	3

ಅಭಿಷೇಕ್ ಶರ್ಮಾ (ಪ್ರಸಕ್ತ ಟೂರ್ನಿ)	
ಪಂದ್ಯ	6
ರನ್	309
ಶ್ರೇಷ್ಠ	75
ಬೌಂಡರಿ	31
ಸಿಕ್ಸರ್	19
ಅರ್ಧಶತಕ	3
ಸ್ಟ್ರೈಕ್‌ರೇಟ್	204.64
ಕುಲದೀಪ್ ಯಾದವ್	
ಪಂದ್ಯ	6
ವಿಕೆಟ್	13
ಶ್ರೇಷ್ಠ	7ಕ್ಕೆ4
ಶಾಹೀನ್ ಆಫ್ರಿದಿ (ಪಾಕ್)	
ಪಂದ್ಯ	6
ವಿಕೆಟ್	9
ಶ್ರೇಷ್ಠ	17ಕ್ಕೆ3

> **ನಾನು 2007ರಿಂದ ಕ್ರಿಕೆಟ್ ಆಡುತ್ತಿದ್ದೇನೆ. ಆಗಲೂ ಭಾರತ–ಪಾಕ್ ನಡುವಣ ಸಂಬಂಧ ಚೆನ್ನಾಗಿರಲಿಲ್ಲ. ಆದರೆ ಯಾವತ್ತೂ ಉಭಯ ತಂಡಗಳ ಆಟಗಾರರು ಪರಸ್ಪರ ಹಸ್ತಲಾಘವ ಮಾಡದಿರುವುದನ್ನು ನೋಡಿರಲಿಲ್ಲ**
> **ಸಲ್ಮಾನ್ ಆಘಾ,** ಪಾಕಿಸ್ತಾನ ತಂಡದ ನಾಯಕ

ಶುಕ್ರವಾರ ತಡರಾತ್ರಿ ಸೂಪರ್ ಫೋರ್ ಪಂದ್ಯದಲ್ಲಿ ಶ್ರೀಲಂಕಾ ಎದುರು 'ಸೂಪರ್ ಓವರ್'ನಲ್ಲಿ ಜಯಿಸಿತ್ತು. ಲಂಕಾದ ಪಥುಮ್ ನಿಸಾಂಕಾ ಮತ್ತು ಕುಸಾಲ ಪೆರೇರಾ ಅವರು ಭಾರತದ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದರು. ಈ ಪಂದ್ಯದಲ್ಲಿ ಆಡಿದ್ದ ವೇಗದ ಜೋಡಿ ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ಅವರು ಜೊತೆಗೂಡಿ 100 ರನ್ (8 ಓವರ್‌ಗಳಲ್ಲಿ) ಬಿಟ್ಟುಕೊಟ್ಟಿದ್ದರು. ಲಂಕಾ ಬೆನ್ನಟ್ಟಿದ್ದ 202 ರನ್‌ಗಳ ಗುರಿಯ ಅರ್ಧದಷ್ಟು ರನ್‌ಗಳು ಈ ಓವರ್‌ಗಳಲ್ಲಿಯೇ ಲಭಿಸಿದ್ದವು. ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಅವರು ಅಷ್ಟೇನೂ ಉದಾರಿಯಾಗಿರಲಿಲ್ಲ. ಆದರೆ ಮೊದಲ ಓವರ್ ಬೌಲಿಂಗ್ ಮಾಡಿದ ನಂತರ ಹಾರ್ದಿಕ್ ಅವರು ಮೈದಾನದಿಂದ ಹೊರನಡೆದಿದ್ದರು. ಅಭಿಷೇಕ್ ಶರ್ಮಾ ಕೂಡ ಹತ್ತನೇ ಓವರ್ ಸಂದರ್ಭದಲ್ಲಿ ಮೈದಾನ ತೊರೆದಿದ್ದರು. ಆದ್ದರಿಂದ ಅವರ ಫಿಟ್‌ನೆಸ್ ಕುರಿತ ಆತಂಕವನ್ನು ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ದೂರ ಮಾಡಿದ್ದಾರೆ. ಅವರಿಬ್ಬರೂ ಸ್ನಾಯು ಸೆಳೆತದಿಂದ ಚೇತರಿಸಿಕೊಂಡಿದ್ದಾರೆ.

ಈಚೆಗೆ ಬಾಂಗ್ಲಾದೇಶ ಎದುರಿನ ಪಂದ್ಯವು ಪಾಕ್ ತಂಡಕ್ಕೆ ಸೆಮಿಫೈನಲ್ ಆಗಿತ್ತು. ಅದರ 11ನೇ ಓವರ್‌ನಲ್ಲಿ 49 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ಪಾಕ್ ನಂತರ ಪುಟಿದೆದ್ದು ಜಯಿಸಿತ್ತು. ಆದರೆ ಜೇಕರ್ ಅಲಿ ನಾಯಕತ್ವದ ಬಾಂಗ್ಲಾ ಬಳಗವು ತೋರಿದ ಔದಾರ್ಯವನ್ನು ಪಾಕ್ ತಂಡವು ಫೈನಲ್‌ನಲ್ಲಿ ಭಾರತದಿಂದ ನಿರೀಕ್ಷಿಸುವಂತಿಲ್ಲ.

ಭಾರತ ತಂಡ ಈ ಟೂರ್ನಿಯಲ್ಲಿ


ಭಾರತದ ಕುಲದೀಪ್ ಯಾದವ್ ಮತ್ತು ಸೂರ್ಯಕುಮಾರ್ ಯಾದವ್

ಏಷ್ಯಾ ಕಪ್ 2025

ಜೂನಿಯರ್ ಶೂಟಿಂಗ್: ಭಾರತ ಪ್ರಾಬಲ್ಯ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನ ಮೂರನೇ ದಿನವಾದ ಶನಿವಾರವೂ ಪ್ರಾಬಲ್ಯ ಮುಂದುವರಿಸಿದರು. ರಶ್ಮಿಕಾ ಸೆಹಗಲ್– ಕಪಿಲ್ ಜೋಡಿಯು 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಸ್ವರ್ಣಕ್ಕೆ ಗುರಿ ಇಟ್ಟರೆ, ವಂಶಿಕಾ ಚೌಧರಿ ಹಾಗೂ ಆ್ಯಂಟನಿ ಜೊನಾಥನ್ ಗ್ಯಾವಿನ್ ಅವರು ಬೆಳ್ಳಿ ಪದಕ ಜಯಿಸಿದರು. ರೈಝಾ ಧಿಲ್ಲಾನ್ ಸ್ಕೀಟ್‌ನಲ್ಲಿ ಬೆಳ್ಳಿ ಗೆದ್ದುಕೊಂಡರು.

ಶುಕ್ರವಾರ ನಡೆದ ಜೂನಿಯರ್ ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿದ್ದ ರಶ್ಮಿಕಾ ಅವರು ಕಪಿಲ್ ಜೊತೆಗೆ ಮಿಶ್ರ ತಂಡ ಸ್ಪರ್ಧೆಯಲ್ಲಿ ಸ್ವರ್ಣ ಜಯಿಸಿದರು. ಚಿನ್ನದ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಈ ಜೋಡಿ 16–10ರಿಂದ ಸ್ವದೇಶದ ವಂಶಿಕಾ–ಆ್ಯಂಟನಿ ಜೋಡಿಯನ್ನು ಮಣಿಸಿತು.


ಭಾರತದ ರಶ್ಮಿಕಾ ಸೆಹಗಲ್, ಕಪಿಲ್

ಒಲಿಂಪಿಯನ್ ರೈಝಾ (51 ಅಂಕ) ಅವರು ಜೂನಿಯರ್ ಮಹಿಳೆಯರ ಸ್ಕೀಟ್ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಮಾನಸಿ ರಘುವಂಶಿ (41) ಕಂಚಿನ ಪದಕ ಗೆದ್ದರೆ, ಇಟಲಿಯ ಅರಿಯಾನ (53) ಸ್ವರ್ಣಕ್ಕೆ ಮುತ್ತಿಕ್ಕಿದರು.

ಟೂರ್ನಿಯಲ್ಲಿ 11 ಪದಕಗಳನ್ನು (ಮೂರು ಚಿನ್ನ, ಐದು ಬೆಳ್ಳಿ ಹಾಗೂ 3 ಕಂಚಿನ ಪದಕ) ಗೆದ್ದಿರುವ ಭಾರತವು ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಎರಡು ಚಿನ್ನ ಹಾಗೂ ಒಂದು ಬೆಳ್ಳಿ ಗೆದ್ದಿರುವ ಇಟಲಿ ಎರಡನೇ ಸ್ಥಾನದಲ್ಲಿದೆ.

ಈಜು: ಭಾರತಕ್ಕೆ ಪದಕ ಭರವಸೆ

ಅಹಮದಾಬಾದ್ (ಪಿಟಿಐ): ಎರಡು ಬಾರಿಯ ಒಲಿಂಪಿಯನ್ನರಾದ ಸಜನ್ ಪ್ರಕಾಶ್ ಮತ್ತು ಶ್ರೀಹರಿ ನಟರಾಜ್ ಅವರು ಭಾನುವಾರ ಇಲ್ಲಿ ಆರಂಭವಾಗುವ 11ನೇ ಏಷ್ಯನ್ ಅಕ್ವೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ನರನ್‌ಪುರದಲ್ಲಿ ಅತ್ಯಾಧುನಿಕವಾಗಿ ನಿರ್ಮಾಣವಾಗಿರುವ ವೀರ್ ಸಾವರ್ಕರ್ ಕ್ರೀಡಾ ಸಂಕೀರ್ಣದಲ್ಲಿ ನಡೆಯಲಿರುವ ಈ ಕೂಟದಲ್ಲಿ ಭಾರತದ 40 ಮಂದಿ ಈಜು ಸ್ಪರ್ಧಿಗಳು ಕಣಕ್ಕೆ ಇಳಿಯಲಿದ್ದಾರೆ. 20 ಮಂದಿ ಪುರುಷರ ಮತ್ತು 20 ಮಂದಿ ಮಹಿಳೆಯರ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

29 ದೇಶಗಳ 1100 ಸ್ಪರ್ಧಿಗಳು, ತರಬೇತುದಾರರು, ತಾಂತ್ರಿಕ ಸಿಬ್ಬಂದಿ ಸ್ಪರ್ಧಿಸಲಿದ್ದಾರೆ. ಇದು ಜಪಾನ್‌ನ ನಗೊಯಾದಲ್ಲಿ ಮುಂದಿನ ವರ್ಷ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಅರ್ಹತಾ ಟೂರ್ನಿಯಾಗಿದೆ.

ಸಜನ್, ನಟರಾಜ್, ಧಿನಿಧಿ ದೆಸಿಂಘು ಜೊತೆ ಭವ್ಯಾ ಸಚದೇವ ಅವರೂ ಪದಕದ ಭರವಸೆಯಾಗಿದ್ದಾರೆ.

'ಈ ಕೂಟಕ್ಕೆ ಉತ್ತಮವಾಗಿ ಸಜ್ಜಾಗಿದ್ದೇವೆ. ಇಲ್ಲಿನ ವ್ಯವಸ್ಥೆ ಅತ್ಯುತ್ತಮವಾಗಿದ್ದು, ಈಜುಪಟುಗಳು ಇಲ್ಲಿ ಉತ್ತಮ ಸಾಧನೆ ತೋರುವ ನಿರೀಕ್ಷೆಯಿದೆ. ಪ್ರಕಾಶ್, ನಟರಾಜ್ ಮತ್ತು ರೋಹಿತ್ ಬಿ.ಬೆನೆಡಿಕ್ಷನ್ ಸಹ ತಮ್ಮ ಸ್ಪರ್ಧೆಗಳಲ್ಲಿ ಪದಕ ಗೆಲ್ಲಬಹುದು' ಎಂದು ಭಾರತ ತಂಡದ ಹೆಡ್ ಕೋಚ್ ನಿಹಾರ್ ಅಮೀನ್ ತಿಳಿಸಿದರು.

200 ಮೀ. ಬಟರ್‌ಫ್ಲೈನಲ್ಲಿ ಸಜನ್, 100 ಮೀ. ಮತ್ತು 200 ಮೀ. ಬ್ಯಾಕ್ ಸಸ್ಟ್ರೋಕ್‌ನಲ್ಲಿ ಶ್ರೀಹರಿ, 200 ಮೀ. ಫ್ರೀಸ್ಟೈಲ್‌ನಲ್ಲಿ ರೋಹಿತ್ ಅವರಿಂದ ಪದಕ ನಿರೀಕ್ಷೆಯಿದೆ ಎಂದು ಅಮೀನ್ ಹೇಳಿದರು.

ಶೈಲೇಶ್‌ಗೆ ಹೈಜಂಪ್ ಚಿನ್ನ

ನವದೆಹಲಿ (ಪಿಟಿಐ): ಭಾರತದ ಶೈಲೇಶ್ ಕುಮಾರ್ ಮತ್ತು ವರುಣ್ ಸಿಂಗ್ ಭಾಟಿ ಅವರು ಶನಿವಾರ ಆರಂಭವಾದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಹೈಜಂಪ್ ಟಿ63 ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಮೊದಲ ದಿನವೇ ಆತಿಥೇಯರು ಪದಕ ಖಾತೆ ತೆರೆದರು. 25 ವರ್ಷ ವಯಸ್ಸಿನ ಶೈಲೇಶ್ 1.91 ಮೀ. ಜಿಗಿದು ವೈಯಕ್ತಿಕ ಶ್ರೇಷ್ಠ ಸಾಧನೆ ದಾಖಲಿಸಿದರು. ಆ ಹಾದಿಯಲ್ಲಿ ಏಷ್ಯನ್ ಮತ್ತು ಚಾಂಪಿಯನ್‌ಷಿಪ್ ದಾಖಲೆ ಸುಧಾರಿಸಿದರು.

ಹಾಲಿ ಪ್ಯಾರಾಲಿಂಪಿಕ್ ಚಾಂಪಿಯನ್, ಅಮೆರಿಕದ ಎಝ್ರಾ ಫ್ರೆಚ್ ಬೆಳ್ಳಿ ಗೆದ್ದರೆ, ವರುಣ್ ಕಂಚಿನ ಪದಕ ಗೆದ್ದರು. ಇಬ್ಬರೂ 1.85 ಮೀ. ಜಿಗಿದರೂ, ಕೌಂಟ್ ಬ್ಯಾಂಕ್ ಆಧಾರದಲ್ಲಿ ಅಮೆರಿಕದ ಸ್ಪರ್ಧಿ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು. ಮೊಣಕಾಲಿನ ಮೇಲಿನವರೆಗೆ ಒಂದು ಕಾಲು ಕಳೆದುಕೊಂಡವರು ಈ ವಿಭಾಗದಲ್ಲಿ (ಟಿ63) ಸ್ಪರ್ಧಿಸುತ್ತಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಚಿನ್ನ ಗೆದ್ದ ಶೈಲೇಶ್ ಅವರಿಗೆ ₹75 ಲಕ್ಷ ಬಹುಮಾನ ನೀಡುವುದಾಗಿ 'ಎಕ್ಸ್'ನಲ್ಲಿ ಘೋಷಿಸಿದ್ದಾರೆ.

ತಿಮ್ಮಪ್ಪಯ್ಯ ಟ್ರೋಫಿ: ನಿಕಿನ್ ಜೋಸ್ ಆಸರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕನಿಗೆ ತಕ್ಕ ಆಟವಾಡಿದ ಆಟವಾಡಿದ ನಿಕಿನ್ ಜೋಸ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಕಾರ್ಯದರ್ಶಿ ಇಲೆವನ್ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಚೇತರಿಸಿಕೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಮಧ್ಯಪ್ರದೇಶ ತಂಡವು 101.2 ಓವರ್‌ಗಳಲ್ಲಿ 338 ರನ್ ಗಳಿಸಿತು. ಅದಕ್ಕುತ್ತರವಾಗಿ ಕೆಎಸ್‌ಸಿಎ ತಂಡವು ಶನಿವಾರ ದಿನದಾಟದ ಮುಕ್ತಾಯಕ್ಕೆ 58 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 163 ರನ್ ಗಳಿಸಿದೆ. ನಿಕಿನ್ (ಬ್ಯಾಟಿಂಗ್ 58; 133ಎಸೆತ) ಮತ್ತು ಪಿ ಧ್ರುವ (ಬ್ಯಾಟಿಂಗ್ 28) ಅವರು ತಂಡದ ಕುಸಿತ ತಡೆದರು.

ಕುಮಾರ್ ಕಾರ್ತಿಕೇಯ (35ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದಾಗಿ ಕರ್ನಾಟಕ ತಂಡವು ಇನಿಂಗ್ಸ್ ಆರಂಭದಲ್ಲಿ ಆಘಾತ ಅನುಭವಿಸಿತು. 74 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಆರಂಭಿಕ ಬ್ಯಾಟರ್ ಲೋಚನ್ ಎಸ್ ಗೌಡ (20; 55ಎ), ತುಷಾರ್ ಸಿಂಗ್ (35; 72ಎ), ಫೈಜಾನ್ ಖಾನ್ (1; 3ಎ) ಅವರು ಬೇಗನೆ ನಿರ್ಗಮಿಸಿದರು.


ಐದು ವಿಕೆಟ್‌ಗಳನ್ನು ಪಡೆದ ಎಂ. ವೆಂಕಟೇಶ್
ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಆದರೆ ಇನ್ನೊಂದು ಬದಿಯಲ್ಲಿ ತಾಳ್ಮೆಯಿಂದ ಆಡುತ್ತಿದ್ದ ನಿಕಿನ್ ಇನಿಂಗ್ಸ್‌ಗೆ ಬಲ ತುಂಬಿದರು. ಅವರೊಂದಿಗೆ ಒಂದಿಷ್ಟು ಹೊತ್ತು ಕ್ರೀಸ್‌ನಲ್ಲಿದ್ದ ಸಮಿತ್ ದ್ರಾವಿಡ್ 25 ಎಸೆತಗಳಲ್ಲಿ 9 ರನ್ ಗಳಿಸಿದರು. ಆರ್ಯನ್ ಪಾಂಡೆ ಬೌಲಿಂಗ್‌ನಲ್ಲಿ ಹಿಮಾಂಶು ಮಂತ್ರಿ ಪಡೆದ ಕ್ಯಾಚ್‌ಗೆ ಸಮಿತ್ ಔಟಾದರು. ನಿಕಿನ್ ಜೊತೆಗೂಡಿದ ಧ್ರುವ ಅವರು ತಾಳ್ಮೆಯ ಆಟವಾಡಿದರು. ಇದರೊಂದಿಗೆ ವಿಕೆಟ್ ಪತನಕ್ಕೆ ತಡೆಯೊಡ್ಡಿದರು.

ಪಂದ್ಯದಲ್ಲಿ ಇನ್ನೆರಡು ದಿನಗಳು ಬಾಕಿ ಇವೆ. ಮೊದಲ ಇನಿಂಗ್ಸ್ ಮುನ್ನಡೆ ಪಡೆಯುವ ತಂಡಕ್ಕೆ ಪ್ರಶಸ್ತಿ ಗೆಲುವಿನ ಅವಕಾಶ ಹೆಚ್ಚು.

ಇದಕ್ಕೂ ಮುನ್ನ ಮಧ್ಯಪ್ರದೇಶ ತಂಡದ ವೆಂಕಟೇಶ್ ಅಯ್ಯರ್ (48 ರನ್) ಕೇವಲ ಎರಡು ರನ್‌ಗಳ ಅಂತರದಲ್ಲಿ ಅರ್ಧಶತಕ ತಪ್ಪಿಸಿಕೊಂಡರು. ಕರ್ನಾಟಕದ ವೇಗಿ ಎಂ. ವೆಂಕಟೇಶ್ ಅವರು (75ಕ್ಕೆ5) ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: 101.2 ಓವರ್‌ಗಳಲ್ಲಿ 338 (ವೆಂಕಟೇಶ್ ಅಯ್ಯರ್ 48, ಎಂ. ವೆಂಕಟೇಶ್ 75ಕ್ಕೆ5, ಮಾಧವ್ ಪಿ ಬಜಾಜ್ 105ಕ್ಕೆ3) ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 58 ಓವರ್‌ಗಳಲ್ಲಿ 4ಕ್ಕೆ163 (ಎಸ್.ಜೆ. ನಿಕಿನ್ ಜೋಸ್ ಔಟಾಗದೇ 58, ತುಷಾರ್ ಸಿಂಗ್ 35, ಪಿ. ಧ್ರುವ ಔಟಾಗದೇ 28, ಕುಮಾರ ಕಾರ್ತಿಕೇಯ 35ಕ್ಕೆ2)

ದೇವಾಂಕ್ ಮಿಂಚು: ಬೆಂಗಾಲ್‌ಗೆ ಜಯ

ಜೈಪುರ (ಪಿಟಿಐ): ಅತ್ಯುತ್ತಮ ಲಯದಲ್ಲಿರುವ ದೇವಾಂಕ್ ದಲಾಲ್ ಅವರ 22 ಅಂಕಗಳ ನೆರವಿನಿಂದ ಬೆಂಗಾಲ್ ವಾರಿಯರ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶನಿವಾರ 48–42 ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು.

ಇದು ದಲಾಲ್ ಅವರಿಗೆ ಸತತ ಎಂಟನೇ ಸೂಪರ್ ಟೆನ್ ಆಗಿದೆ. ಮೊದಲಾರ್ಧದಲ್ಲೇ ಅವರು 15 ಅಂಕ ಕಲೆಹಾಕಿದ್ದರು.

PRO KABADDI

ಆದರೆ ಪಂದ್ಯ ಉತ್ತಮ ಉತ್ತಮ ಹೋರಾಟದಿಂದ ಕೂಡಿತ್ತು. ಪೈರೇಟ್ಸ್ ಪರ ರೇಡರ್‌ಗಳಾದ ಮಣೀಂದರ್ ಸಿಂಗ್ (12) ಮತ್ತು ಅಯನ್ (15) ಪ್ರತಿಹೋರಾಟದಿಂದ ಗಮನ ಸೆಳೆದರು. ಇಬ್ಬರೂ ಸೂಪರ್ ಟೆನ್ ಸಾಧನೆಗೆ ಪಾತ್ರರಾದರು. ವಿರಾಮದ ವೇಳೆಗೆ ವಾರಿಯರ್ಸ್ 26–25 ರಲ್ಲಿ ಒಂದು ಅಂಕ ಮುನ್ನಡೆ ಪಡೆದಿತ್ತು. ದಲಾಲ್ ಜೊತೆಗೆ ವಾರಿಯರ್ಸ್ ಪರ ಹಿಮಾಂಶು ನರ್ವಾಲ್ ಮತ್ತು ಆಶಿಶ್ ತಲಾ ಐದು ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡ 37–28 ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ನಿರಾಯಾಸವಾಗಿ ಸೋಲಿಸಿತು. ತಲೈವಾಸ್ ಪರ ಅರ್ಜುನ್ ದೇಶ್ವಾಲ್ 13 ಅಂಕ ಗಳಿಸಿದರು.

ವಾಲ್‌ಪರೈ ಹಾದಿಯಲ್ಲಿ...
ಬೈಕ್ ಸವಾರಿಗೆ ಹೇಳಿಮಾಡಿಸಿದಂತಿದೆ ಅಥಿರಪಳ್ಳಿ–ವಾಲ್‌ಪರೈ ನಡುವಿನ ಪ್ರಯಾಣ. ಈ ಪಯಣ ವಿಸ್ಮಯಲೋಕವೊಂದಕ್ಕೆ ಹೋದಂತಹ ಅನುಭವ ನೀಡುತ್ತದೆ.
4





ರಜನಿಕಾಂತ್ ತಮ್ಮ ತರಹೇವಾರಿ ಸ್ಟೈಲ್‌ಗಳ ಮೂಲಕವೇ ಚಿತ್ರರಸಿಕರ ಮನಗೆದ್ದಿದ್ದಾರೆ. ತಮಿಳು ಚಿತ್ರರಂಗದಲ್ಲಿ ಸೂಪರ್‌ಸ್ಟಾರ್ ಪಟ್ಟವನ್ನು ಗಳಿಸಿಕೊಂಡು ಅದನ್ನು ಬಹುಕಾಲದಿಂದ ಉಳಿಸಿಕೊಂಡಿದ್ದಾರೆ. ಈಗಲೂ ಭಾರತೀಯ ಚಿತ್ರೋದ್ಯಮದಲ್ಲಿ ಬಾಕ್ಸ್‌ಆಫೀಸ್ ಸುಲ್ತಾನನೇ ಸರಿ.

ಬೆಂಗಳೂರಿನ ಊರ್ವಶಿ ಚಿತ್ರಮಂದಿರದ ಎದುರು ರಜನಿಕಾಂತ್ ಕಟೌಟ್ ಹಾಕಿ ಅಭಿಮಾನಿಗಳ ಸಂಭ್ರಮ

ರಂಜನೆಗೆ 50 ರಜನಿಗೆ 75



• ಗಂಗಾಧರ ಮೊದಲಿಯಾರ್

ಬೆಂಗಳೂರಿನ 'ಹನುಮಂತ ನಗರ ಟು ಶಿವಾಜಿ ನಗರ' ಸಿಟಿ ಬಸ್‌ನಲ್ಲಿ ಕಂಡಕ್ಟರ್ ಆಗಿದ್ದ ಶಿವಾಜಿರಾವ್ ಗಾಯಕವಾಡ್ ಎಂಬ ಸಿನಿಮಾ ಹುಚ್ಚು ಹಿಡಿದ ಯುವಕ 'ರಜನಿಕಾಂತ್' ಎಂಬ ಹೆಸರಿನಲ್ಲಿ ರೂಪಾಂತರವಾಗಿ 'ಸೂಪರ್ ಸ್ಟಾರ್' ಆಗಿ ಬೆಳೆದಿರುವುದು ರೋಚಕ ಇತಿಹಾಸ.

ಎಂಜಿಆರ್ ನಂತರ ತಮಿಳು ಚಿತ್ರರಸಿಕರ ಮನಸ್ಸಿನಲ್ಲಿ 'ತಲೈವಾ' ಆಗಿ ಕುಳಿತಿರುವ ರಜನಿಕಾಂತ್ ಚಿತ್ರರಂಗ ಪ್ರವೇಶಿಸಿ ಐವತ್ತು ವರ್ಷ ಆಗಿದೆ. 75 ವರ್ಷ ವಯಸ್ಸಿನ ಈ ಸೂಪರ್ ಸ್ಟಾರ್ ನಾಯಕನಾಗಿಯೇ ಅಭಿನಯಿಸುತ್ತಾ ಬಾಕ್ಸ್ ಆಫೀಸನ್ನು ಚಿಂದಿ ಮಾಡುತ್ತಿರುವುದೂ ವಿಶೇಷವೇ. ರಜನಿಕಾಂತ್ ಸಿನಿಮಾ ಜಗತ್ತು ಪ್ರವೇಶದ ಐವತ್ತನೇ ವರ್ಷಾಚರಣೆಯನ್ನು ತಮಿಳುನಾಡಿನಲ್ಲಿ ಅಭಿಮಾನಿಗಳು ನಾಡಹಬ್ಬದಂತೆ ಆಚರಿಸುತ್ತಿದ್ದಾರೆ.

ರಾಜ್‌ಕುಮಾರ್, ಎಂಜಿಆರ್, ಶಿವಾಜಿ ಗಣೇಶನ್, ಎನ್.ಟಿ. ರಾಮರಾವ್ ಮೊದಲಾದವರ ಕಾಲ ಮುಗಿದ ಮೇಲೆ, ಸುದೀರ್ಘ ಸಮಯ ನಾಯಕನಾಗಿ ಅಭಿನಯಿಸುತ್ತಲೇ ಇರುವ ನಾಯಕನಟ-ರಿನ್ನೆಲ್ಲಿ ಸಿಗುತ್ತಾರೆ ಎಂಬ ಮಾತಿತ್ತು. ನಟನೊಬ್ಬ ಒಂದಿಪ್ಪತ್ತು ವರ್ಷ



ಬೆಂಗಳೂರಿನಲ್ಲಿದೆ ಹತ್ತಾರು ರಜನಿಕಾಂತ್ ಫ್ಯಾನ್ಸ್ ಸಂಘ

ನಾಯಕನಾಗಿಯೇ ಉಳಿಯುತ್ತಾನೆ ಎನ್ನುವ ಗ್ಯಾರಂಟಿ ಯಾರಿಗೂ ಇರುತ್ತಿರಲಿಲ್ಲ. ಈಗ ಜನಪ್ರಿಯ ನಾಯಕ ನಟರ ಸಿನಿಮಾ ನಿರ್ಮಾಣವಾ-ಗುತ್ತಿರುವ ಮಂದಗತಿಯ ಪರಿಯನ್ನು ನೋಡಿದರೆ ಹತ್ತೇ ವರ್ಷಕ್ಕೆ ಅವರ ಕಾಲ ಮುಗಿಯುತ್ತದೆ ಎನ್ನುವ ಅಭಿಪ್ರಾಯ ಮೂಡುತ್ತದೆ. ಇಂತಹ ಕಾಲದಲ್ಲಿ ರಜನಿಕಾಂತ್ 'ಕಬಾಲಿ', 'ಜೈಲರ್', 'ದರ್ಬಾರ್', 'ವೇಟ್ಟೈಯಾನ್', 'ಕೂಲಿ' ಮೊದಲಾದ ಚಿತ್ರಗಳ ನಾಯಕನಾಗಿ ಯಶಸ್ವಿಯಾಗುತ್ತಿದ್ದಾರೆ.

ವಿಜಯ್, ಸೂರ್ಯ, ಧನುಷ್, ಯಶ್, ಜೂನಿಯರ್ ಎನ್‌ಟಿಆರ್, ಅಲ್ಲು ಅರ್ಜುನ್ ಮೊದಲಾದ ನಾಯಕನಟರಿಗೆ ಯುವಪೀಳಿಗೆ ಮಾರು ಹೋಗಿದೆ. ಹೊಸದು ಬಂದು ಹಳತು ದೂರ ಸರಿದಿದೆ ಎಂದು ಹೇಳುವುದು ಲೋಕಾರೂಢಿ. ಆದರೆ ರಜನಿಕಾಂತ್ ಎನ್ನುವ ಸಮ್ಮೋಹಿನಿಗೆ ಕಾಲವೇ ಇಲ್ಲ. ಈಗಲೂ ಅವರು ಬಾಕ್ಸಾಫಿಸಿಗೆ ಸುಲ್ತಾನ. ಭಾರತೀಯ ಚಿತ್ರರಂಗದಲ್ಲಿ ಅವರದು ವಿಶಿಷ್ಟ ವ್ಯಕ್ತಿತ್ವ. ನಾಯಕನಾದವನು ಶ್ರೀರಾಮನಂತಿರಬೇಕು, ಆದರ್ಶ ಪುರುಷನ ತರಹ ಇರಬೇಕು, ಸುಂದರವಾಗಿರಬೇಕು, ಮೊದಲಾದ ಎಲ್ಲ ನಂಬಿಕೆಗಳಿಗೆ ವಿರುದ್ಧ ದಿಕ್ಕಿನಲ್ಲಿ ಬೆಳೆದವರು.

ಮೊದಲ ಸಿನಿಮಾ 'ಅಪೂರ್ವ ರಾಗಂಗಳ್'

ಕೆ.ಬಾಲಚಂದರ್ ನಿರ್ದೇಶನದ 'ಅಪೂರ್ವ ರಾಗಂಗಳ್' (1975) ರಜನಿಕಾಂತ್ ಅಭಿನಯದ ಮೊದಲ ಚಿತ್ರ. ಈ ಚಿತ್ರದಲ್ಲಿ ಪತ್ನಿ ಪೀಡಕ ಗಂಡನ ಪಾತ್ರದಲ್ಲಿ ಗಮನ ಸೆಳೆದರು. ನಾಯಕನಟನಾಗಿ ಬೆಳೆಯುವ ಕನಸು ಕಾಣುವ ಯುವಕರು ಹೀಗೆ ನೆಗೆಟಿವ್ ಪಾತ್ರಗಳ ಮೂಲಕ ಬೆಳ್ಳಿತೆರೆ ಪ್ರವೇಶ ಮಾಡುವುದಕ್ಕೆ ಒಪ್ಪುವುದಿಲ್ಲ. ಆದರೆ ರಜನಿಕಾಂತ್ ಕಂಡಕ್ಟರ್ ಕೆಲಸಕ್ಕೆ ನಮಸ್ಕಾರ ಹಾಕಿ, ಬೆಂಗಳೂರಿನ ಗಾಂಧಿನಗರದಲ್ಲಿ ಪಾತ್ರಕ್ಕಾಗಿ ಅಲೆಯುತ್ತಿದ್ದರು. ಇವರ ಅವತಾರ ಕಂಡು ಯಾವೊಬ್ಬ ನಿರ್ದೇಶಕ, ನಿರ್ಮಾಪಕನೂ ಬಾಗಿಲ ಬಳಿಯೂ ಬಿಟ್ಟು-ಕೊಳ್ಳಲಿಲ್ಲ. ಅಂತಹ ಸಮಯದಲ್ಲಿ ಕೆ.ಬಾಲಚಂದರ್ ಕರೆದು 'ರಜನಿಕಾಂತ್' ಎಂದು ನಾಮಕರಣ ಮಾಡಿ, 'ಅಪೂರ್ವ ರಾಗಂಗಳ್' ಸಿನಿಮಾದಲ್ಲಿ ಅವಕಾಶ ನೀಡಿದರು. 1975ರಲ್ಲೇ ಪುಟ್ಟಣ್ಣ ಕಣಗಾಲ್ ಅವರು ಮೂರು ಕಥೆಗಳ 'ಕಥಾ ಸಂಗಮ' ಚಿತ್ರವನ್ನು ನಿರ್ದೇಶಿಸಿದ್ದರು. ಅದರಲ್ಲಿ 'ಮುನಿತಾಯಿ' ಚಿತ್ರದಲ್ಲಿ ಪೋಕರಿ ಯುವಕನ ಪಾತ್ರಕ್ಕೆ ರಜನಿಕಾಂತ್‌ರನ್ನು ಆಯ್ಕೆ ಮಾಡಿದ್ದರು. ಈ ಚಿತ್ರ ಹಾಗೂ ಅದರಲ್ಲಿ ರಜನಿಕಾಂತ್ ಪಾತ್ರ ಮೆಚ್ಚುಗೆಗೆ ಪಾತ್ರವಾದರೂ 'ಮುನಿತಾಯಿ' 1976 ರಲ್ಲಿ ಬಿಡುಗಡೆಯಾಯಿತು. ಅದಕ್ಕಿಂತ ಮುಂಚೆ ಅವರು 'ಒಂದು ಪ್ರೇಮದ ಕಥೆ' ಚಿತ್ರದಲ್ಲೂ ಅಭಿನಯಿಸಿದ್ದರು. ಬಾಲಚಂದರ್ ಅವರ 'ಅಪೂರ್ವ ರಾಗಂಗಳ್' ಮೊದಲು ಬಿಡುಗಡೆಯಾದ ಚಿತ್ರವಾದ್ದರಿಂದ ರಜನಿಕಾಂತ್ ಪ್ರಥಮ ಚಿತ್ರ ತಮಿಳಿನದ್ದಾಯಿತು.

2ನೇ ಪುಟಕ್ಕೆ...


ರಾಜಕೀಯ ಕನಸು ಭಗ್ನ

ರಜನಿಕಾಂತ್ ಮರಾಠಿಗರಾದರೂ, ಬೆಂಗಳೂರಿನಲ್ಲಿದ್ದ ಕಾರಣ ಕನ್ನಡಿಗ ಎಂದೇ ಪರಿಗಣಿಸುತ್ತೇವೆ. ತಮಿಳು ಸಿನಿಮಾರಂಗದ ಜಾಯಮಾನವೆಂದರೆ ಅವರು ಕಲೆಯನ್ನು ಗೌರವಿಸುತ್ತಾರೆ. ರಜನಿಕಾಂತ್ ಅವರನ್ನು ಸೂಪರ್ ಸ್ಟಾರ್ ಮಾಡಿದ್ದಾರೆ. ಕೇರಳದ ಎಂಜಿಆರ್ ಅವರನ್ನು ಇಂದಿಗೂ ಪೂಜಿಸುತ್ತಾರೆ. ಜಯಲಲಿತಾ ಅವರನ್ನು ಬೆಂಬಲಿಸಿ ಮುಖ್ಯಮಂತ್ರಿ ಮಾಡಿದ್ದರು. ಹೀಗೆ ಕಲೆಗೇ ಅಲ್ಲಿ ಗೌರವ. ಆದರೆ ಕಾವೇರಿ ಪ್ರಶ್ನೆ ಬಂದಾಗಲೆಲ್ಲಾ ರಜನಿಕಾಂತ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಲು ಚಿತ್ರರಂಗದ ಅವರ ವಿರೋಧಿಗಳೇ ಯತ್ನಿಸುತ್ತಾರೆ. ಹಲವಾರು ಬಾರಿ ರಜನಿ ಇಂತಹ ಮುಜುಗರವನ್ನು ಅನುಭವಿಸಿದ್ದಾರೆ. ಅವರು 'ರಾಜಕೀಯ ಪ್ರವೇಶಿಸುತ್ತಾರೆಯೇ' ಎನ್ನುವುದು ದೀರ್ಘಕಾಲದಿಂದ ಎಲ್ಲರೂ ಕೇಳುತ್ತಿದ್ದ ಪ್ರಶ್ನೆ. ಈ ಪ್ರಯತ್ನ ದುರಂತ ಅಂತ್ಯ ಕಂಡಿತು. ಬಹುಶಃ ರಜನಿಕಾಂತ್ ಸೋಲು ಕಂಡದ್ದು ಇದೊಂದರಲ್ಲೇ ಅನಿಸುತ್ತದೆ.

ಸಿನಿಮಾದಲ್ಲಿ ಸ್ಟೈಲ್ ಕಿಂಗ್ ಆಗಿದ್ದರೂ ರಾಜಕೀಯ ವಿಷಯಗಳಲ್ಲಿ ಅವರಿಗೆ ಪ್ರಬುದ್ಧತೆ ಇರಲಿಲ್ಲ. ಆದರೂ ಒಂದು ಕೈ ನೋಡೇ ಬಿಡೋಣ ಎನ್ನುವ ಹಂತಕ್ಕೆ ಬಂದು ಪಕ್ಷ ಸ್ಥಾಪಿಸಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದರು. ರಜನಿಕಾಂತ್ ಬಿಜೆಪಿ ಪರ ಒಲವುಳ್ಳವರು ಎಂಬ ಅಭಿಪ್ರಾಯ ತಮಿಳುನಾಡಿ-ನಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಕೆಲ ವರ್ಷಗಳ ಹಿಂದೆ ಚೆನ್ನೈನಲ್ಲಿ ಅವರ ಮನೆಗೆ ಭೇಟಿ ಕೊಟ್ಟದ್ದೂ ಇದೇ ಕಾರಣದಿಂದ ಎನ್ನಲಾಗಿದೆ. ರಾಜಕೀಯ ಪಕ್ಷವನ್ನು ಸ್ಥಾಪಿಸಿದ ನಂತರ ಒತ್ತಡಕ್ಕೆ ಒಳಗಾಗಿ 'ನಾನು ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ' ಎಂದು ಘೋಷಿಸಿದರು. ಇದರಿಂದ ಅಭಿಮಾನಿಗಳಿಗೆ ತೀವ್ರ ನಿರಾಶೆಯಾಯಿತು. ಪಕ್ಷ ರಚನೆ ಘೋಷಣೆಯ ನಂತರ ಅಲ್ಲಲ್ಲಿ ಮಾಧ್ಯಮದವರು ಕೇಳುವ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸುವ ಬದಲು ರೇಗುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ರಾಜಕೀಯವಾಗಿ ಪಕ್ಷ ಸಂಘಟನೆ ಮಾಡಲು ತಮಿಳುನಾಡಿನ ಕ್ಷೇತ್ರಗಳ ಅಧ್ಯಯನದ ಕೊರತೆಯೂ ಅವರಲ್ಲಿತ್ತು. ಅಲ್ಲದೆ ಪಾದರಸದಂತೆ ಓಡಾಡುವ ವಯಸ್ಸೂ ಇರಲಿಲ್ಲ. ಆಸೆಯಿದ್ದರೂ ರಾಜಕೀಯಕ್ಕೆ ತಡವಾಗಿ ಪ್ರವೇಶ ಮಾಡಿದ್ದರು. ಆರೋಗ್ಯವೂ ಆಗಾಗ ಕೈಕೊಡುತ್ತಿತ್ತು. ಹೀಗಾಗಿ ಅವರು ತಾವೇ ರಚಿಸಿದ್ದ ಪಕ್ಷವನ್ನು ವಿಸರ್ಜಿಸಿದರು. ಅವರ ರಾಜಕೀಯ ಪ್ರವೇಶದ ಕನಸು ಭಗ್ನವಾಯಿತು.

ರಾಜಕೀಯಕ್ಕೆ ನಮಸ್ಕಾರ ಹಾಕಿದ ನಂತರ ಸಿನಿಮಾದಲ್ಲಿ ಮುಂದುವರೆಯುವ ನಿರ್ಧಾರದಂತೆ ಪ್ರತಿವರ್ಷ ಅವರ ಒಂದೊಂದು ಚಿತ್ರ ಬಿಡುಗಡೆಯಾಗುತ್ತಿದೆ. ವಯಸ್ಸಾದರೂ ಯುವಕನಂತೆ ಕಾಣುವ ಚಮತ್ಕಾರ ಮಾಡುವ ತಂತ್ರಜ್ಞಾನ ಅವರ ನೆರವಿಗಿದೆ. 'ಕೂಲಿ' ಚಿತ್ರದಲ್ಲಿ ರಜನಿಕಾಂತ್ ದನಿಯನ್ನೂ, ಕೆಲ ದೃಶ್ಯಗಳನ್ನೂ ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸಲಾಗಿದೆ ಎನ್ನುವುದನ್ನು ಗಮನಿಸಿ. ರಜನಿಕಾಂತ್ ಅವರಿಗೆ ನೂರು ವರ್ಷವಾದರೂ ಹೀಗೇ ಇರುತ್ತಾರೆ ಎನ್ನುವುದರಲ್ಲಿ ಯಾವುದೇ ಅನುಮಾನ ಬೇಡ!

ರಾಯಚೂರು ರೈಲು ನಿಲ್ದಾಣ ಗಾಂಧಿ ಚಿತ್ರಶಾಲೆ


ರೈಲು ನಿಲ್ದಾಣದ ಗೋಡೆಯಲ್ಲಿ ಮೂಡಿಬಂದ ಗಾಂಧೀಜಿ ಹೆಜ್ಜೆಗಳು...

• ಆರ್.ಬಿ.ಗುರುಬಸವರಾಜ

'ಗಾಂಧಿ ಯಾರು?' ಎಂದು ಈಗಿನ ಮಕ್ಕಳನ್ನು ಕೇಳಿದರೆ ಅವರೊಬ್ಬ ಸ್ವಾತಂತ್ರ್ಯ ಹೋರಾಟಗಾರ ಎಂದಷ್ಟೇ ಹೇಳುತ್ತಾರೆ. ಗಾಂಧಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ನಿಜ. ಆದರೆ ಅವರು ಅದಕ್ಕಿಂತಲೂ ಮಿಗಿಲಾದ ಶಕ್ತಿ. ಗಾಂಧಿ ಎಂದರೆ ಅದೊಂದು ಧ್ಯಾನ, ಅದೊಂದು ಧರ್ಮ. ಅದೊಂದು ಜೀವನಮಾರ್ಗ. ಅದೊಂದು ಬಹು ಆಯಾಮದ ಪರಿಕಲ್ಪನೆ. ಅವರೊಂದು ಜೀವಂತ ದಂತಕಥೆ– ಹೀಗೆ ಹಲವು ವಿಧದಲ್ಲಿ ಗಾಂಧಿಯನ್ನು ಅರ್ಥೈಸಿಕೊಳ್ಳಬಹುದು. ಪೋರಬಂದರಿನ ಕುಟುಂಬವೊಂದರಲ್ಲಿ ಜನಿಸಿದ ಈ ಪೋರ ಇಡೀ ಪ್ರಪಂಚಕ್ಕೆ ಮಾದರಿ ವ್ಯಕ್ತಿಯಾಗಿ ನಿಲ್ಲುವ ಹಂತಕ್ಕೆ ಬೆಳೆದುದು ಅವರ ಶ್ರಮ ಮತ್ತು ಸಾಮರ್ಥ್ಯದ ದ್ಯೋತಕ.

ಮಕ್ಕಳಿಂದ ಹಿಡಿದು ಮುಪ್ಪಾನು ಮುದುಕರವರೆಗೂ ಗಾಂಧಿ ಬಗ್ಗೆ ತಮ್ಮದೇ ಆದ ಕಲ್ಪನೆ, ವಿಚಾರ, ದೃಷ್ಟಿಕೋನಗಳಿವೆ ಗಾಂಧಿಯನ್ನು ನಮಗೆ ತಿಳಿದಂತೆ ಅರ್ಥೈಸಿ ಕೊಂಡು ಕಲ್ಪಿಸಿಕೊಂಡಿದ್ದೇವೆ. ಗಾಂಧೀಜಿ ಕುರಿತ ಸಾವಿರಾರು ಪುಸ್ತಕ ಬಂದಿವೆ. ಎಲ್ಲೆಡೆ ಅವರ ಪುತ್ಥಳಿಗಳನ್ನೂ ನೋಡುತ್ತೇವೆ. ಆದರೆ ಗಾಂಧೀಜಿಯ ಜೀವನದ ಕುರಿತ ಸಚಿತ್ರ ಚರಿತ್ರೆಯನ್ನು ತಿಳಿಯಲು ರಾಯಚೂರಿನ ರೈಲು ನಿಲ್ದಾಣಕ್ಕೆ ಭೇಟಿ ಕೊಡಬೇಕು.

ಅಲ್ಲಿನ ರೈಲು ನಿಲ್ದಾಣದಲ್ಲಿನ ಗಾಂಧೀಜಿ ವರ್ಣಚಿತ್ರಗಳು ನನ್ನನ್ನು ಬಹುವಾಗಿ ಕಾಡಿದವು. ಅಲ್ಲಿನ ಹೊರಗೋಡೆಗಳಲ್ಲಿ ಗಾಂಧೀಜಿಯ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳನ್ನು ತಿಳಿಸುವ ಬಹುವರ್ಣದ ತೈಲಚಿತ್ರಗಳನ್ನು ರಚಿಸಲಾಗಿದೆ. ಇಲ್ಲಿಗೆ ಭೇಟಿ ನೀಡುವ ಪ್ರಯಾಣಿಕರಿಗೆ ಗಾಂಧಿ ಜೀವನ ಚರಿತ್ರೆಯನ್ನು ಇವು ತಿಳಿಸುತ್ತವೆ. ಒಂದೊಂದು ಚಿತ್ರವೂ ಗಾಂಧೀಜಿಯ ಒಂದೊಂದು ರೂಪಕವಾಗಿ ಕಾಣುತ್ತದೆ.

ಗಾಂಧೀಜಿ ಜೈಲಿಗೆ ಹೋಗಿದ್ದು, ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಭಾರತ ಬಿಟ್ಟು ತೊಲಗಿ ಚಳವಳಿಗೆ ಕರೆ ನೀಡಿದ್ದು, ಸ್ವದೇಶಿ ಉತ್ಪನ್ನ ಬಳಕೆಗೆ ಪ್ರೋತ್ಸಾಹ ನೀಡಿದ್ದು, ತಾವೇ ಚರಕ ಬಳಸಿ ನೂಲು ತೆಗೆದದ್ದು, ಬಿಡುವಾದಾಗಲೆಲ್ಲ ಅಧ್ಯಯನದಲ್ಲಿ ನಿರತರಾದದ್ದು– ಹೀಗೆ ಹಲವಾರು ಚಿತ್ರಗಳು ನೋಡುಗರನ್ನು ಆಕರ್ಷಿಸುತ್ತವೆ.

ಸೂಟುಬೂಟಿನ ಗಾಂಧಿಯಿಂದ ಬರಿಮೈ ಫಕೀರನವರೆಗಿನ ಚಿತ್ರಣ ಇಲ್ಲಿದೆ. ಒಮ್ಮೆ ಅಲ್ಲಿನ ಚಿತ್ರಗಳನ್ನು ನೋಡಿದರೆ ಸಾಕು, ನಾವು ಕಂಡ ನಮ್ಮೊಳಗಿನ ಭಾವಪೂರಿತ ಗಾಂಧೀಜಿಯ ಚಿತ್ರಣ ಕಣ್ಮುಂದೆ ಹಾದು ಹೋಗುತ್ತದೆ.

ಗಾಂಧೀಜಿ ರಾಯಚೂರಿಗೆ ಬಂದದ್ದು ಅಪರೂಪವೇ ಸರಿ. 1917ರಲ್ಲಿ ಬಾಂಬೆಯಿಂದ ಮದ್ರಾಸ್‌ಗೆ ತೆರಳುವಾಗ ರೈಲು ಸ್ವಲ್ಪಹೊತ್ತು ಇಲ್ಲಿನ ರೈಲು ನಿಲ್ದಾಣದಲ್ಲಿ ನಿಂತಿತು. ಆಗ ಗಾಂಧೀಜಿ ರೈಲು ಹೊರಡುವವರೆಗೂ ಇಲ್ಲಿನ ನಿಲ್ದಾಣದಲ್ಲಿ ವಿಶ್ರಾಂತಿ ಪಡೆದಿದ್ದರು. ಈ ಬಗ್ಗೆ ಗಾಂಧೀಜಿ ತಮ್ಮ ಆತ್ಮಚರಿತ್ರೆಯಲ್ಲಿ ಬರೆದುಕೊಂ-ಡಿದ್ದಾರೆ. ಅದರ ಸವಿನೆನಪಿಗಾಗಿ ದಕ್ಷಿಣ ಮಧ್ಯೆ ರೈಲು ವಲಯ 2018ರಲ್ಲಿ ರಾಯಚೂರು ರೈಲು ನಿಲ್ದಾಣಕ್ಕೆ ವಿಶೇಷ ಅನುದಾನ ನೀಡಿ ನಿಲ್ದಾಣದ ಗೋಡೆಗಳಲ್ಲಿ ಗಾಂಧೀಜಿ ಜೀವನದ ಪ್ರಮುಖ ಘಟ್ಟಗಳನ್ನು ಚಿತ್ರಗಳ ಮೂಲಕ ಪ್ರಯಾಣಿಕರಿಗೆ ತಿಳಿಸುವ ಪ್ರಯತ್ನ ಮಾಡಿತು. ಇಲ್ಲಿನ ಸ್ಥಳೀಯ ಚಿತ್ರ ಕಲಾವಿದರು ಗಾಂಧೀಜಿ ಎಂಬ ಪರ್ವತಕ್ಕೆ ಭಾವಪೂರ್ಣ ಚಿತ್ರಸ್ಪರ್ಶ ನೀಡಿದ್ದಾರೆ. ಆ ಮೂಲಕ ಪ್ರತಿ ಚಿತ್ರವೂ ಗಾಂಧೀಜಿ ಜೀವಂತಿಕೆಯನ್ನು ತಿಳಿಸುತ್ತದೆ.

ಗಾಂಧೀಜಿ ಅಮರರಾದಾಗ ಡಿ.ಎಸ್. ಕರ್ಕಿಯವರು 'ತಿಳಿನೀಲದಲ್ಲಿ ತಾ ಲೀನವಾಗಿ ಅವ ಹೋದ ದೂರ ದೂರ ಅವ ಬಿಟ್ಟ ಬೆಳಕು ಇನ್ನೊಮ್ಮೆ ಏಕೆ ಬಾರ?' ಎಂದು ತಮ್ಮ ದುಃಖವನ್ನು ಹಂಚಿಕೊಳ್ಳುತ್ತಾರೆ. ಆದರೆ ರಾಯಚೂರು ರೈಲು ನಿಲ್ದಾಣದಲ್ಲಿನ ಗಾಂಧಿ ವರ್ಣಚಿತ್ರಗಳನ್ನು ನೋಡಿದರೆ, ಅವರು ನಮ್ಮಿಂದ ಮರೆಯಾಗಿಲ್ಲ, ನಿತ್ಯವೂ ನಮ್ಮ ಕಣ್ಣೆದುರಿಗೆ ಇದ್ದಾರೆ ಎಂಬ ಭಾವವನ್ನು ಈ ಚಿತ್ರಗಳು ನೀಡುತ್ತವೆ.

ಈ ರೈಲು ನಿಲ್ದಾಣದ ಮೂಲಕ ಪ್ರಯಾಣಿಸುವ ಪ್ರಯಾಣಿಕರಿಗೆಲ್ಲ ಈ ಚಿತ್ರಗಳ ದರ್ಶನ ಲಭ್ಯವಾಗುತ್ತದೆ. ಇಂತಹ ಅಭೂತಪೂರ್ವ ಅವಕಾಶವನ್ನು ಪ್ರಯಾಣಿಕರಿಗೆ ಒದಗಿಸುವ ಮೂಲಕ ಗಾಂಧೀಜಿಯನ್ನು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವಂತೆ ಮಾಡಿದ ರೈಲ್ವೆ ಇಲಾಖೆ ಅಭಿನಂದನೆಗೆ ಅರ್ಹವಾಗಿದೆ. ಬಸ್ ನಿಲ್ದಾಣ ಸೇರಿದಂತೆ ಇನ್ನಿತರೆ ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ಮಹಾನ್ ವ್ಯಕ್ತಿಗಳ ಚಿತ್ರಗಳನ್ನು ಬಿಡಿಸಿದರೆ ನಿತ್ಯವೂ ಅವುಗಳನ್ನು ನೋಡುವ ಮೂಲಕ ಅವರ ಮೌಲ್ಯಗಳು ಮನದಾಳಕ್ಕೆ ಇಳಿಸಿಕೊಳ್ಳಬಹುದು ಅಲ್ಲವೇ? ❖


ಬಣ್ಣಗಳಲ್ಲಿ ಅರಳಿದ ಗಾಂಧೀಜಿ

ಕರ್ನಾಟಕ ಕರಾವಳಿ ಸರ್ಫಿಂಗ್ ಪ್ರಭಾವಳಿ

ಪೂರ್ವ ಕರಾವಳಿಯಲ್ಲಿ ಪ್ರಭಾವ ಬೀರಿದ್ದ ಸರ್ಫಿಂಗ್ ಕ್ರೀಡೆ ಈಗ ಪಶ್ಚಿಮ ಕರಾವಳಿಯಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಛಾಪು ಮೂಡಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ಸಮೀಪದ ಸಸಿಹಿತ್ಲು ಕಡಲ ತೀರ ಇತ್ತೀಚಿನ ವರ್ಷಗಳಲ್ಲಿ ಸರ್ಫಿಂಗ್ ಚಟುವಟಿಕೆಯ ಪ್ರಮುಖ ತಾಣವಾಗಿ ರೂಪುಗೊಂಡಿದೆ. ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಪ್ರವಾಸೋದ್ಯಮ ಇಲಾಖೆಯೂ ಮುಂದಾಗಿರುವುದರಿಂದ ಕರ್ನಾಟಕದ ಕರಾವಳಿಯಲ್ಲಿ ಭರವಸೆಯ ಹೊಸ ಅಲೆ ಎದ್ದಿದೆ.

• ವಿಕ್ರಂ ಕಾಂತಿಕೆರೆ

ಬಾಗಲಕೋಟೆ ಜಿಲ್ಲೆಯ ಬಾದಾಮಿಯಿಂದ ದಶಕದ ಹಿಂದೆ ಮಂಗಳೂರಿಗೆ ವಲಸೆ ಬಂದವರು ಪರಶುರಾಮ ಪೂಜಾರ–ಮಹಾದೇವಿ ಮತ್ತು ಸುರೇಶ ಪೂಜಾರ–ಶ್ರೀದೇವಿ ದಂಪತಿ. ಕೂಲಿ ಕೆಲಸ ಹುಡುಕುತ್ತಿದ್ದ ಇವರಿಗೆ ಇಬ್ಬಿಬ್ಬರು ಮಕ್ಕಳೂ ಇದ್ದರು. ಸುರೇಶ್ ಪೂಜಾರ ಮತ್ತು ಅಕ್ಕ–ತಂಗಿಯರಾದ ಮಹಾದೇವಿ–ಶ್ರೀದೇವಿ ಮಂಗಳೂರು ಸಮೀಪದ ಸಸಿಹಿತ್ಲುವಿನಲ್ಲಿ ಜಲಸಾಹಸ ಕ್ರೀಡೆಗಳಲ್ಲಿ ತೊಡಗಿಸಿಕೊಂಡಿದ್ದ 'ಮಂತ್ರ ಸರ್ಫಿಂಗ್ ಕ್ಲಬ್'ನಲ್ಲಿ ಕೆಲಸಕ್ಕೆ ಸೇರಿಕೊಂಡರು. ರಜಾ ದಿನಗಳಲ್ಲಿ ತಾಯಿ ಮಹಾದೇವಿ ಜೊತೆ ಸರ್ಫಿಂಗ್ ಕ್ಲಬ್‌ಗೆ ಹೋಗುತ್ತಿದ್ದ ಆಕಾಶ್ ಪೂಜಾರ ಕಣ್ಣುಗಳು ಅಲೆಗಳ ಮೇಲೆ ಸಾಹಸ ಮಾಡುವವರನ್ನು ಕಂಡು ಬೆರಗುಗೊಂಡಿದ್ದವು. ಬೆರಗು ಬಯಕೆಯಾಗಿ ಆ ಬಯಕೆ ಅಲ್ಲೇ ಈಡೇರಿತು.

ಆಕಾಶ್ ನಂತರ ಪ್ರವೀಣನೂ ಚಿಕ್ಕಮ್ಮನ ಮಕ್ಕಳಾದ ರಾಜು ಮತ್ತು ಪ್ರದೀಪ ಕಡಲಿಗಿಳಿದರು. ಸಹೋದರ ಸಂಬಂಧಿ ಹನುಮಂತ ಪೂಜಾರ್ ಕೂಡ ಇವರನ್ನು ಸೇರಿಕೊಂಡರು. ಇವರೆಲ್ಲರೂ ಈಗ ದೇಶದ ಪ್ರಮುಖ ಜಲಸಾಹಸಿಗರು. ಆಕಾಶ್ ಈಗಾಗಲೇ ಅಂತರ ರಾಷ್ಟ್ರೀಯ ಮಟ್ಟದ ಸ್ಟ್ಯಾಂಡ್ ಅಪ್ ಪ್ಯಾಡಲಿಂಗ್ (ಎಸ್‌ಯುಪಿ) ಸ್ಪರ್ಧೆಗಳಲ್ಲಿ ಎರಡು ಪದಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆರು ಪದಕ ಗೆದ್ದುಕೊಂಡಿದ್ದಾರೆ. ಜೂನಿಯರ್ ವಿಭಾಗದ ಸ್ಪರ್ಧಿಯಾದರೂ ಓಪನ್ ವಿಭಾಗದಲ್ಲಿ ಸೀನಿಯರ್‌ಗಳಿಗೆ ಸವಾಲೊಡ್ಡುವ ಛಲ ಮತ್ತು ಛಾತಿ ಬೆಳೆಸಿಕೊಂಡಿರುವ ಪ್ಯಾಡ್ಲರ್ ಆಕಾಶ್.

ತಮಿಳುನಾಡಿನ ಮಹಾಬಲಿಪುರಂ, ಕೋವಳಂ (ಕವ್‌ಲಾಂಗ್), ಮಣಪಾಡ್, ಪುದುಚೇರಿ, ಕೇರಳದ ವರ್ಕಲ ಹಾಗೂ ಕೋವಳಂ, ಆಂಧ್ರ ಪ್ರದೇಶದ ವಿಶಾಖಪಟ್ಟಣ, ಒಡಿಶಾದ ಪುರಿ, ಲಕ್ಷದ್ವೀಪ, ಅಂಡಮಾನ್ ಮುಂತಾದ ಕಡೆಗಳಲ್ಲೇ ಹೆಚ್ಚು ಅಲೆಯಾಡುತ್ತಿದ್ದ ಜಲಸಾಹಸ ಕ್ರೀಡೆಗಳು ಕರ್ನಾಟಕ ಕರಾವಳಿಯಲ್ಲೂ ಸಂಚಲನ ಮೂಡಿಸಿದ್ದರಿಂದ ಆಕಾಶ್ ಅವರಂಥ ಅನೇಕರ ಪ್ರತಿಭೆ ಹೊರ ಜಗತ್ತು ಕಾಣುವಂತಾಗಿದೆ. ಚಾಂಪಿಯನ್‌ಷಿಪ್‌ಗಳಲ್ಲಿ ಪದಕಗಳನ್ನು ಬಾಚುವ ತಮಿಳುನಾಡಿನ ಅಜೀಶ್ ಅಲಿ, ಕಮಲಿ ಮೂರ್ತಿ, ಸಿವರಾಜ್ ಬಾಬು, ಶೇಖರ್ ಪಚಾಯ್ ಮೊದಲಾದವರು ಕೂಡ ಈಚೆಗೆ ಮಂಗಳೂರಿನಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿಸುತ್ತಿದ್ದಾರೆ.


ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಮಣಿಕಂಠನ್... ಚಿತ್ರಗಳು: ಫಕ್ರುದ್ದೀನ್ ಎಚ್.

> **15 ವರ್ಷಗಳಿಂದ ಕರ್ನಾಟಕದ ಕರಾವಳಿಯಲ್ಲಿ ಸರ್ಫಿಂಗ್ ಉತ್ತಮ ಬೆಳವಣಿಗೆ ಕಂಡಿದೆ. ಕ್ಲಬ್‌ಗಳ ಸಂಖ್ಯೆ ಹೆಚ್ಚಾಗಿದೆ. ಸರ್ಫಿಂಗ್ ಆಸಕ್ತರ ಸಂಖ್ಯೆ ಸುಮಾರು 40 ಸಾವಿರದ ಆಸುಪಾಸು ಇದೆ. ಇಲ್ಲಿ ಸಾಕಷ್ಟು ಅವಕಾಶಗಳು ಇವೆ. ಇದನ್ನು ಮನಗಂಡು ಸರ್ಕಾರವೂ ಪ್ರೋತ್ಸಾಹಕ್ಕೆ ಮುಂದೆ ಬರಬೇಕು.**
> **ರಾಮಮೋಹನ್ ಪರಾಂಜಪೆ,**
> ಕರ್ನಾಟಕ ರಾಜ್ಯ ಸರ್ಫಿಂಗ್ ಸಂಸ್ಥೆಯ ಅಧ್ಯಕ್ಷ

ಕರ್ನಾಟಕದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಜಲಸಾಹಸ ಕ್ರೀಡೆಗಳ ಪ್ರಮುಖ ತಾಣಗಳು. ದಕ್ಷಿಣ ಕನ್ನಡದ ಸಸಿಹಿತ್ಲು, ತಣ್ಣೀರುಬಾವಿ ಮತ್ತು ಪಣಂಬೂರು, ಉಡುಪಿ ಜಿಲ್ಲೆಯ ಮಲ್ಪೆ, ಕಾಪು, ಪಡುಬಿದ್ರಿ, ಉತ್ತರ ಕನ್ನಡದ ಗೋಕರ್ಣದಲ್ಲಿ ಸರ್ಫಿಂಗ್ ಕ್ಲಬ್‌ಗಳು ಮತ್ತು ಸ್ಕೂಲ್‌ಗಳು ಸರ್ಫ-ರ್‌ಗಳನ್ನು ಬೆಳಕಿಗೆ ತರುತ್ತಿವೆ. ಈ ಪೈಕಿ ಸಸಿಹಿತ್ಲು, ಜಾಗತಿಕ ಸರ್ಫಿಂಗ್ ಭೂಪಟದಲ್ಲಿ ಕಾಣಿಸಿಕೊಂಡಿದೆ. ಸುರತ್ಕಲ್ ಸಮೀಪದ ಮುಕ್ಕ ಪಟ್ಟಣದಿಂದ ಒಳರಸ್ತೆಗೆ ಹೊರಳಿ ಕಡಲಕಿನಾರೆಯಲ್ಲಿರುವ ಸಾಲು ಸಾಲು ಐಶಾರಾಮಿ ಮನೆಗಳ ನೋಟ ಸವಿಯುತ್ತ ಸಾಗಿದರೆ ಸಿಗುವ ಸಸಿಹಿತ್ಲು ಸರ್ಫಿಂಗ್ ಚಟುವಟಿಕೆಗೆಂದೇ ಹೇಳಿಮಾಡಿಸಿದಂತಿರುವ ಕಿನಾರೆ. ಗಾಳಿಮರಗಳ ವಿಶಾಲ ಆವರಣ, ಕುರುಚಲು ಗಿಡಗಳ ಹಸಿರು ಹೊದಿಕೆ, ಬೋರ್ಡ್‌ಗಳ ಮೇಲೆ ಕಾಲುಗಳನ್ನು ಬಿಗಿದು ವಾರ್ಮ್ ಅಪ್ ಮಾಡಲು ಅನುಕೂಲಕರವಾದ ಹಿನ್ನೀರು ಮುಂತಾದ ನೈಸರ್ಗಿಕ 'ಸಂಪನ್ಮೂಲ' ಇರುವುದು ಇಲ್ಲಿನ ಹೆಗ್ಗಳಿಕೆ. ಹೀಗಾಗಿ ವರ್ಷದ ಆರೇಳು ತಿಂಗಳು ಚಟುವಟಿಕೆಯಿಂದ ಕೂಡಿರುವ ಪ್ರದೇಶ ಇದು. ಭಾರತ ಸರ್ಫಿಂಗ್ ಫೆಡರೇಷನ್ ಪ್ರತಿ ವರ್ಷ ನಡೆಸುವ ಸ್ಟ್ಯಾಂಡ್ ಅಪ್ ಪ್ಯಾಡಲ್ ಫೆಸ್ಟ್ ಮತ್ತು ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಷಿಪ್‌ಗೆ ಇದು ಶಾಶ್ವತ ತಾಣ.

3ನೇ ಪುಟಕ್ಕೆ...



ರೈತರ ಬದುಕು ಬದಲಿಸಿದ ಸಸಿಮಡಿ

ನರ್ಸರಿಯಲ್ಲಿ ಬೆಳೆದ ಸಸಿಮಡಿ

ಚಿತ್ರಗಳು: ಗೋವಿಂದರಾಜ ಜವಳಿ

• ಇಮಾಮ್‌ಹುಸೇನ್ ಗೂಡುನವರ



ಸಸಿಮಡಿ ಮಾಡುವಲ್ಲಿ ನಿರತ ಮಹಿಳೆ

ಕೃಷಿ ಬೆಳೆಗಳಲ್ಲಿ ಬಿತ್ತನೆ ಸಾಮಾನ್ಯ. ಆದರೆ, ತೋಟಗಾರಿಕೆ ಬೆಳೆಗಳಲ್ಲಿ ಸಸಿ ನಾಟಿ ಮಾಡಲಾಗುತ್ತದೆ. ಅದು ಸಹಜ ಪ್ರಕ್ರಿಯೆ ಎಂದು ಉಪೇಕ್ಷಿಸುವಂತಿಲ್ಲ. ಏಕೆಂದರೆ, ಸಸಿಮಡಿ ಸಜ್ಜುಗೊಳಿಸುವ ಪ್ರಕ್ರಿಯೆಯೇ, ಈ ಭಾಗದಲ್ಲಿ ಕೃಷಿಯಿಂದಲೇ ವಿಮುಖವಾಗುವ ಹಂತದಲ್ಲಿದ್ದ ರೈತರ ಬದುಕು ಬದಲಿಸಿದೆ. ನೀರುಂಡು, ಮಣ್ಣುಹೊದ್ದು ಮೆಲ್ಲಗೆ ಮೊಳೆತು ನಸುನಕ್ಕಂತೆ ನಳನಳಿಸುವ 'ಹಸಿರು ಹೊನ್ನು' ರೈತರ ಹೊಟ್ಟೆಯನ್ನಷ್ಟೇ ಅಲ್ಲ; ಜೇಬನ್ನೂ ತುಂಬಿಸುತ್ತಿದೆ.

ಗೋಕಾಕ ತಾಲ್ಲೂಕಿನ ಅರಭಾವಿಮಠದಿಂದ ಘಟಪ್ರಭಾ ಮಾರ್ಗದಲ್ಲಿ ನಾಲ್ಕು ಕಿಲೋಮೀಟರ್ ಸಾಗಿದರೆ, ಒಂದಲ್ಲ, ಎರಡಲ್ಲ.. 120ಕ್ಕೂ ಅಧಿಕ ನರ್ಸರಿಗಳು ಕಾಣಸಿಗುತ್ತವೆ. ಇಲ್ಲಿ ತರಹೇವಾರಿ ತರಕಾರಿ, ಹೂವು-ಹಣ್ಣು ಮತ್ತು ಕಬ್ಬಿನ ಸಸಿ ಬೆಳೆಸಲಾಗುತ್ತಿದೆ.

ಎರಡೂವರೆ ದಶಕದ ಹಿಂದಿನ ಮಾತು. ಆಗ ರೈತರು ತಮ್ಮ ಅಲ್ಪಭೂಮಿಯಲ್ಲೇ ಎತ್ತರದ ಮಡಿ ಮಾಡಿ, ತರಕಾರಿಗಳ ಸಸಿ ಬೆಳೆಯುತ್ತಿದ್ದರು. ಅವುಗಳನ್ನು ತಮ್ಮ ಜಮೀನಿನಲ್ಲೇ ನಾಟಿ ಮಾಡಿ ಕೃಷಿ ಮಾಡುತ್ತಿದ್ದರು. ಅಕ್ಕಪಕ್ಕದ ಗ್ರಾಮಗಳ ರೈತರು ಖರೀದಿಸುತ್ತಿದ್ದರು. ಈ ಮಧ್ಯೆ, ಆಂಧ್ರಪ್ರದೇಶದ ಕೆಲವರು ಇಲ್ಲಿಗೆ ಬಂದು ನರ್ಸರಿ ಆರಂಭಿಸಿ, ಕೈತುಂಬಾ ಆದಾಯ ಗಳಿಸಿದರು. ಇದು ಸ್ಥಳೀಯ ರೈತರನ್ನೂ ಆಕರ್ಷಿಸಿತು.

ಬೇರೆ ರಾಜ್ಯಗಳಿಂದ ಬಂದವರು ಇಲ್ಲಿ ನರ್ಸರಿ ಮಾಡುತ್ತಿರುವಾಗ, ನಾವೇಕೆ ಮಾಡಬಾರದೆಂದು ತಡಮಾಡದೆ ಕಾರ್ಯೋನ್ಮುಖರಾದರು. ಆರಂಭದಲ್ಲಿ ಬೆರಳೆಣಿಕೆ ಸಂಖ್ಯೆಯಲ್ಲಿದ್ದ ನರ್ಸರಿಗಳ ಸಂಖ್ಯೆ ಹೆಚ್ಚುತ್ತಾ-ಹೋಯಿತು.

ವರ್ಷಪೂರ್ತಿ ಕ್ರಿಯಾಶೀಲವಾಗಿರುವ ಈ ನರ್ಸರಿಗಳಲ್ಲಿ ಟೊಮೆಟೊ, ಕ್ಯಾಬೇಜ್, ಬದನೆ, ಹಸಿಮೆಣಸಿನಕಾಯಿ, ಡಬ್ಬು ಮೆಣಸಿನಕಾಯಿ, ಚೆಂಡೂ ಹೂವು, ಕಲ್ಲಂಗಡಿ, ಕಬ್ಬು ಹೀಗೆ... ಹತ್ತಾರು ಬೆಳೆಗಳ ಸಸಿ ಸಿದ್ಧಪಡಿಸಲಾಗುತ್ತಿದೆ. ಒಂದೊಂದೇ ಬೆಳೆಯ ಐದಾರು ತಳಿಗಳ ಸಸಿಗಳು ಲಭ್ಯ ಇವೆ. ಹೈಬ್ರೀಡ್ ಮತ್ತು ಜವಾರಿ ತಳಿ ಸಿಗುತ್ತವೆ. ಸೀಸನ್ ಆಧಾರದಲ್ಲಿ ಇಲ್ಲಿ ಸಸಿ ಬೆಳೆಸಲಾಗುತ್ತದೆ.

ಬೆಳಗಾವಿ, ಬಾಗಲಕೋಟೆ, ಗದಗ, ವಿಜಯಪುರ, ಧಾರವಾಡ, ಹಾವೇರಿ, ರಾಯಚೂರು, ಬಳ್ಳಾರಿ ಜಿಲ್ಲೆಗಳು ಹಾಗೂ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ರೈತರು ಖರೀದಿಸುತ್ತಿದ್ದಾರೆ.

'ಇಪ್ಪತ್ತೊಂದು ವರ್ಷಗಳ ಹಿಂದೆ ನಮ್ಮ ಹೊಲಕ್ಕೆ ಸೀಮಿತವಾಗಿ, ಬಯಲಿನಲ್ಲೇ ತರಕಾರಿ ಸಸಿ ಬೆಳೆಯುತ್ತಿದ್ದೆವು. ಕೆಲವೊಮ್ಮೆ ಸಸಿಗಳೇ ಹಾಳಾಗಿ, ಉತ್ತಮ ಫಸಲು ಬರುತ್ತಿರಲಿಲ್ಲ. ನೆರಳು ಪರದೆ, ಪಾಲಿಹೌಸ್ ಪರಿಚಯವಾದ ನಂತರ ಅವುಗಳಲ್ಲೇ ಸಸಿ ಬೆಳೆಯಲಾರಂಭಿಸಿದೆವು. ದಿನಗಳೆದಂತೆ ಸಸಿಗಳನ್ನು ಬೆಳೆಯುವ ಕಾಯಕ ಬೃಹತ್ತಾಗಿ ಬೆಳೆಯುತ್ತ ಹೋಯಿತು. ಈಗ ಸ್ವಂತ ಮತ್ತು ಗುತ್ತಿಗೆ ಪಡೆದ ಹನ್ನೊಂದು ಎಕರೆ ಜಮೀನಿನಲ್ಲಿ ಸಸಿ ಬೆಳೆಯುತ್ತಿದ್ದು, 120 ಜನ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕರ ಕೊರತೆ ಹೆಚ್ಚಾದಂತೆ, ಸಸಿಗಳನ್ನು ಸಿದ್ಧಪಡಿಸಲು ಯಂತ್ರೋಪಕರಣ ಬಳಸುತ್ತಿದ್ದೇವೆ' ಎಂದು ನರ್ಸರಿ ಮಾಲೀಕ ಪ್ರವೀಣ ಮುತಾರಿ ಹೇಳುತ್ತಾರೆ.

ಉತ್ತರದ ನರ್ಸರಿ ಹಬ್

'ಘಟಪ್ರಭಾ ತರಕಾರಿ ಮಾರುಕಟ್ಟೆಯಲ್ಲಿ ನಸುಕಿನ ಜಾವ ಮೂರಕ್ಕೆ ವಹಿವಾಟು ಆರಂಭವಾಗುತ್ತದೆ. ಉತ್ತಮ ರೈಲು ಮತ್ತು ರಸ್ತೆ ಸಂಪರ್ಕ ಇರುವುದರಿಂದ ಇಲ್ಲಿಂದ ಮಹಾರಾಷ್ಟ್ರ, ಗೋವಾಕ್ಕೆ ಸಾಕಷ್ಟು ಪ್ರಮಾಣದಲ್ಲಿ ತರಕಾರಿ ಸರಬರಾಜು ಆಗುತ್ತದೆ. ಇಲ್ಲಿ ತರಕಾರಿ ಮಾರಲು 35ಕ್ಕೂ ಅಧಿಕ ಹಳ್ಳಿಗಳಿಂದ ನಿತ್ಯ ಬರುವ ರೈತರು, ವಾಪಸ್ ಹೋಗುವಾಗ ಘಟಪ್ರಭಾ ಮತ್ತು ಪಕ್ಕದ ಹಳ್ಳಿಗಳಿಂದ ಸಸಿ (ತೆರವು) ಒಯ್ಯಲು ಆರಂಭಿಸಿದರು. ಸಸಿಗಳ ಮಾರಾಟದಲ್ಲಿ ಉತ್ತಮ ಗಳಿಕೆ ಇರುವುದನ್ನು ಮನಗಂಡ ರೈತರು ಒಬ್ಬೊಬ್ಬರಾಗಿ ನರ್ಸರಿಗಳನ್ನು ಆರಂಭಿಸತೊಡಗಿದರು' ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಜನಮಟ್ಟಿ.

'ಘಟಪ್ರಭಾ ನದಿ ಸನಿಹದಲ್ಲೇ ಇರುವ ಈ ಗ್ರಾಮಗಳು ಉತ್ತಮ ನೀರಾವರಿ ಸೌಕರ್ಯ ಹೊಂದಿವೆ. ಕೆಂಪುಮಿಶ್ರಿತ (ಜಾಜ್) ಮಣ್ಣು ಸಸಿಗಳ ತಯಾರಿಕೆಗೆ ಹೇಳಿಮಾಡಿಸಿದಂತಿದೆ. ಮೊದಲು ತಮ್ಮ ಜಮೀನಿನ ಬಯಲು ಪ್ರದೇಶದಲ್ಲೇ ಸಸಿ ಬೆಳೆಸುತ್ತಿದ್ದ ರೈತರು, ನಂತರ ನೆರಳು ಪರದೆಯತ್ತ ವಾಲಿದರು. ಈಗ ಪಾಲಿಹೌಸ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಎಲ್ಲೂ ಇಷ್ಟೊಂದು ನರ್ಸರಿಗಳಿಲ್ಲ. ಹಾಗಾಗಿ ಇದಕ್ಕೆ ಉತ್ತರದ ನರ್ಸರಿಗಳ ಹಬ್ ಎಂದೂ ಕರೆಯುವುದುಂಟು' ಎಂದು ಅವರು ಹೇಳುತ್ತಾರೆ.

ದೊಡ್ಡ ಹಿಡುವಳಿದಾರರಷ್ಟೇ ಅಲ್ಲ; ತುಂಡು ಭೂಮಿ ಹೊಂದಿದವರ ನರ್ಸರಿಗಳೂ ಇಲ್ಲಿವೆ. ಕನಿಷ್ಠ 8 ಗುಂಟೆಯಿಂದ ಒಂದು ಎಕರೆಯಲ್ಲಿನ ನರ್ಸರಿ ಹೆಚ್ಚಿವೆ.

'ತೆಂಗಿನನಾರಿನ ಹುಡಿ (ಕೊಕೋಪಿಟ್)ಯನ್ನು ಪ್ಲಾಸ್ಟಿಕ್ ಟ್ರೇನಲ್ಲಿ ಹಾಕುತ್ತೇವೆ. ನಂತರ ವಿವಿಧ ಕಂಪನಿಗಳ ಬೀಜಗಳನ್ನು ಹಾಕಿ, ಮೂರು ದಿನ ಪ್ಲಾಸ್ಟಿಕ್ ಹೊದಿಕೆಯಿಂದ ಟ್ರೇಗಳನ್ನು ಮುಚ್ಚಿಟ್ಟು ತೇವಾಂಶ, ಉಷ್ಣತೆ ಕಾಪಾಡುತ್ತೇವೆ. ಸಸಿ ಮೊಳಕೆಯೊಡೆದ ನಂತರ, ಸಾಲು ಸಾಲಾಗಿ ಟ್ರೇಗಳನ್ನು ಜೋಡಿಸಿ ಇರಿಸುತ್ತೇವೆ. ನಂತರ ನೀರು, ಔಷಧದ ಮೂಲಕ ಉಪಚಾರ ಮಾಡಿದರೆ 25 ರಿಂದ 35 ದಿನಗಳಲ್ಲಿ ಸಸಿಗಳು ಸಿದ್ಧವಾಗುತ್ತವೆ' ಎಂದು ನರ್ಸರಿಯೊಂದರ ಮಾಲೀಕ ಸುರೇಶ ದೇವಮಾನೆ ತಿಳಿಸುತ್ತಾರೆ.

'ನಮ್ಮವು ಹೈಟೆಕ್ ನರ್ಸರಿಗಳಾಗಿರುವ ಕಾರಣ, ಬೇಸಿಗೆಕಾಲ, ಚಳಿಗಾಲ, ಮಳೆಗಾಲ ಯಾವುದಿದ್ದರೂ ತೊಂದರೆ ಇಲ್ಲ. ಬಿಸಿಲು ಸಸಿಗಳಿಗೆ ತಾಗದಂತೆ, ಮಳೆಹನಿಗಳ ಸಿಂಚನವಾಗದಂತೆ ತಡೆಯುವ ವ್ಯವಸ್ಥೆ ಇದೆ. ವಿವಿಧ ಸಸಿಗಳ ದರ ಬೇರೆ ಬೇರೆ ಇದೆ' ಎನ್ನುತ್ತಾರೆ ಅವರು.

'ನನ್ನದು ನಾಲ್ಕು ಎಕರೆ ಜಮೀನಿದೆ. ಈ ಪೈಕಿ ತಲಾ ಎರಡು ಎಕರೆಯಲ್ಲಿ ಕಬ್ಬು, ತರಕಾರಿ ಬೆಳೆದಿರುವೆ. ಮೊದಲು ಏರು ಮಡಿಯಲ್ಲಿ ಬೆಳೆದ ಸಸಿ ನಾಟಿ ಮಾಡಿದಾಗ ಫಸಲು ಸರಾಸರಿ ಬರುತ್ತಿತ್ತು. ಈಗ ನರ್ಸರಿಯಲ್ಲಿನ ಸಸಿ ನಾಟಿ ಮಾಡಿದಾಗ ಇಳುವರಿ ಹೆಚ್ಚಿದೆ. ಮೊದಲು ಎರಡೂವರೆ ತಿಂಗಳಿಗೆ ಕಟಾವಿಗೆ ಬರುತ್ತಿದ್ದ ತರಕಾರಿ ಬೆಳೆ, ಈಗ ಎರಡೇ ತಿಂಗಳಿಗೆ ಕಟಾವು ಹಂತಕ್ಕೆ ಬರುತ್ತಿದೆ. ಸಸಿಗಳಿಗೆ ರೋಗಬಾಧೆಯೂ ಇಲ್ಲ' ಎನ್ನುತ್ತಾರೆ ಶಿಂಧಿಕುರಬೇಟದ ರೈತ ರಾಜು ರಾಯಬಾಗ.

'ಮೊದಲೆಲ್ಲ ಬಯಲಿನಲ್ಲೇ ಬೆಳೆದ ತರಕಾರಿ ಸಸಿ ಒಯ್ದು ನಾಟಿ ಮಾಡುತ್ತಿದ್ದೆವು. ಕೆಲವೊಮ್ಮೆ ಫಸಲು ಬಾರದೆ ನಷ್ಟವಾಗುತ್ತಿತ್ತು. ಈಗ ವೈಜ್ಞಾನಿಕ ಅಂಶ ಅನುಸರಿಸಿ ನರ್ಸರಿಯಲ್ಲಿ ಬೆಳೆಸಿದ ಸಸಿಗಳನ್ನು ಒಯ್ದು ನಾಟಿ ಮಾಡುತ್ತಿರುವುದರಿಂದ ಉತ್ತಮ ಇಳುವರಿ ಬರುತ್ತಿದೆ. ಎರಡು ಎಕರೆಯಲ್ಲಿ ನಾಟಿ ಮಾಡಲು ಈಗ ತರಕಾರಿ ಸಸಿ ಒಯ್ಯುತ್ತಿದ್ದೇನೆ' ಎನ್ನುತ್ತಾರೆ ಹುಕ್ಕೇರಿ ತಾಲ್ಲೂಕಿನ ಶಿರಹಟ್ಟಿ ಬಿ.ಕೆ. ಗ್ರಾಮದ ಸಿದ್ದಪ್ಪ ಹೊಸಮನಿ.

ಹೀಗೆ ಈ ಪರಿಸರದಲ್ಲಿರುವ ನರ್ಸರಿಗಳು ಸಾವಿರಾರು ರೈತರ ಬದುಕನ್ನು ಹಸನು ಮಾಡುತ್ತಿವೆ.

ಎಕರೆ ಆದಾಯ ಹತ್ತೇ ಗುಂಟೆಯಲ್ಲಿ

'ಮೊದಲು ಒಂದು ಎಕರೆಯಲ್ಲಿ ಕಬ್ಬು ಬೆಳೆಯುತ್ತಿದ್ದೆ. ಆದಾಯ ಅಷ್ಟಕ್ಕಷ್ಟೇ ಇತ್ತು. ಆಂಧ್ರದವರು ಇಲ್ಲಿ ನರ್ಸರಿ ಆರಂಭಿಸಿದ್ದನ್ನು ಪ್ರೇರಣೆಯಾಗಿಸಿಕೊಂಡು ಹತ್ತೇ ಗುಂಟೆಯಲ್ಲಿ ನರ್ಸರಿ ಮಾಡಿದೆ. ಕಬ್ಬು ಬೆಳೆದಾಗ ಎಕರೆಯಲ್ಲಿ ಬರುತ್ತಿದ್ದ ಆದಾಯವೀಗ ಹತ್ತೇ ಗುಂಟೆಯಲ್ಲಿ ಬರುತ್ತಿದೆ. 15 ಮಂದಿಗೆ ಕೆಲಸ ಕೊಟ್ಟ ಖುಷಿಯೂ ಇದೆ. ವರ್ಷವಿಡೀ ಆದಾಯ ಕೈಗೆಟುಕುತ್ತಿದೆ' ಎಂಬುದು ನಿರ್ವಾಣೆಪ್ಪ ಹೊಸಪೇಟೆ ಅವರ ಮಾತು.



ನರ್ಸರಿಯಲ್ಲಿ ಬೆಳೆದ ಸಸಿಗಳು ಫಸಲು ನೀಡಿದಾಗ...



ಮೋಡದ ಮರೆಯಲ್ಲಿ ಮಾಗೋಡ

• ಚಿತ್ರ-ಲೇಖನ : ಗ. ಮ. ತುಂಬೇಮನೆ



ಮೈದುಂಬಿರುವ ಮಾಗೋಡ ಜಲಪಾತದ ವಿಹಂಗಮ ನೋಟ

ಮಳೆಗಾಲ ಜಲಪಾತಗಳಿಗೆ ನೀರಿನ ಟಾನಿಕ್ ನೀಡಿ ಮೈದುಂಬಿಸುತ್ತದೆ. ಜಲಪಾತದ ಸಂಪೂರ್ಣ ಸೌಂದರ್ಯ ಸವಿಯಲು ಮಳೆಗಾಲವೇ ಸೂಕ್ತ. ಆದರೆ ದುರ್ಗಮ ಮಾರ್ಗಗಳಿರುವ ಕಡೆ ಮಳೆಗಾಲದಲ್ಲಿ ಎಲ್ಲ ಜಲಪಾತಗಳಿಗೆ ಹೋಗಲು ಸಾಧ್ಯವಾಗುವುದೇ ಇಲ್ಲ. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಿಂದ ಹದಿನೇಳು ಕಿಲೋಮೀಟರ್ ದೂರವಿರುವ ಮಾಗೋಡ ಜಲಪಾತಕ್ಕೆ ಮಾತ್ರ ಎಂತಹ ಮಳೆಗಾಲದಲ್ಲೂ ಸುಲಭವಾಗಿ ಹೋಗಬಹುದು.

ಮಳೆಗಾಲದ ಮಧ್ಯ ಅಂದರೆ ಆಗಸ್ಟ್ ತಿಂಗಳಲ್ಲಿ ಜಲಪಾತದ ವೈವಿಧ್ಯಮಯ ನೋಟಗಳು ಲಭ್ಯ. ಮಾಗೋಡಿನಲ್ಲಿ ಬೇಡ್ತಿ ನದಿ ಎರಡು ಹಂತಗಳಲ್ಲಿ ಸುಮಾರು ನಾಲ್ಕು ನೂರು ಮೀಟರ್ ಎತ್ತರದಿಂದ ಧುಮ್ಮಿಕ್ಕುತ್ತದೆ. ಮಳೆಗಾಲದಲ್ಲಿನ ಅಗಾಧ ನೀರು ಬೀಳುವ ರಭಸಕ್ಕೆ ಸಿಡಿದು ತುಂತುರುಗಳಾಗಿ ನಮಗೆಲ್ಲ ಸಿಂಚನವಾಗುವುದು. ನಮಗೆ ಅದೃಷ್ಟವಿದ್ದರೆ ಬಿಸಿಲು ಮತ್ತು ಮಳೆ ಜೊತೆಯಾಗಿ ಬಂದರೆ ಇಡೀ ಜಲಪಾತಕ್ಕೆ ಕಾಮನಬಿಲ್ಲು ಸಿಂಗಾರ ಮಾಡಿ ಕಿನ್ನರಲೋಕವನ್ನೇ ಕ್ಷಣಾರ್ಧದಲ್ಲೇ ನಿರ್ಮಿಸಿಬಿಡುವುದು. ದಟ್ಟಡವಿಯ ಕಣಿವೆಯಿಂದ ಎದ್ದು ಬರುವ ಮೋಡಗಳು ಜಲಪಾತಕ್ಕೆ ಮುಸುಕಿ ಭ್ರಮಾಲೋಕವನ್ನೆ ಸೃಷ್ಟಿಸಿಬಿಡುವುದು.

ಕೆಲವೊಮ್ಮೆ ಮಂಜು ಪೂರ್ತಿ ಆವರಿಸಿ ಜಲಪಾತದ ಇರುವನ್ನೇ ಇಲ್ಲವಾಗಿಸಿಬಿಡುತ್ತದೆ. ದಿಗಿಲು ಹುಟ್ಟಿಸುವ ಜಲಪಾತದ ಭೋರ್ಗರೆತದ ದಿಕ್ಕಿನಲ್ಲಿ ನೋಡುತ್ತಿರುವಂತೆ ಬೀಸುವ ಗಾಳಿಗೆ ನಿಧಾನವಾಗಿ ಮಂಜಿನ ಪರದೆ ಸರಿಯತೊಡಗಿ ಸಿನಿಮಾದಲ್ಲಿ ನಾಯಕ ಬಂದಂತೆ ಜಲಪಾತದ ದರ್ಶನವಾಗುವುದನ್ನು ಅನುಭವಿಸಿಯೇ ನೋಡಬೇಕು. ಮೋಡದ ಮರೆಯಿಂದ ತೂರಿ ಬರುವ ಸೂರ್ಯಕಿರಣಗಳು ಅಲ್ಲಲ್ಲಿ ಸ್ಪಾಟ್‌ಲೈಟ್ ಬಿಟ್ಟು ಜಲಪಾತದ ಕೆಲವು ಭಾಗಗಳಿಗೆ ಮಹತ್ವ ನೀಡುತ್ತವೆ.

ಗಾಳಿ ಜೋರಾಗಿ ಬೀಸಿದರೆ ಜಲಪಾತಕ್ಕೆ ಕವಿದ ಮಂಜು ನಮಗೂ ಬಂದು ಮುತ್ತಿಕೊಂಡು ಹತ್ತಿರವಿರುವವರೇ ಗೋಚರಿಸುವುದಿಲ್ಲ! ನಾವು ಮಧ್ಯಾಹ್ನದಲ್ಲಿದ್ದರೂ ದಟ್ಟ ಮಂಜಿಗೆ ಸೂರ್ಯನೂ ಮಬ್ಬಾಗಿ ಬೆಳಗಿನ ಜಾವಕ್ಕೆ ಹೋಗಿಬಿಡುತ್ತೇವೆ. ಜಲಪಾತ ವೀಕ್ಷಿಸಲು ಬಾನಿಂದ ಭೂಮಿಗೆ ಮೋಡ ಇಳಿವ ವೈಭವ ನೋಡಲು ನಾವೂ ಮಳೆಗಾಲದಲ್ಲಿ ಹಾಗೂ ನಂತರ ಮರೆಯದೇ ಜಲಪಾತ ನೋಡಲು ಹೋಗಬೇಕು.

...ರಜನಿಗೆ 75




ಕಮಲ್ ಹಾಸನ್, ಕೆ.ಬಾಲಚಂದರ್, ರಜನಿಕಾಂತ್

1ನೇ ಪುಟದಿಂದ...

1976 ರಲ್ಲಿ ಕೆ.ಬಾಲಚಂದರ್ 'ಅಂತುಲೇನಿ ಕಥಾ' ಚಿತ್ರವನ್ನು ನಿರ್ಮಿಸಿ ಅದರಲ್ಲೂ ರಜನಿಗೆ ಅವಕಾಶ ನೀಡಿದರು. ಅದೇ ವರ್ಷ 'ಮೂನ್ರು ಮುಡಿಚ್ಚು' ಚಿತ್ರ ಉತ್ತಮ ಅವಕಾಶ ಕಲ್ಪಿಸಿತು. ಬಾಲಚಂದರ್ ಅವರಿಗೆ ನಾಯಕನಟರನ್ನು ರೂಪಿಸುವ ಕಲೆ ಗೊತ್ತಿತ್ತು. ರಜನಿ ಹಾಗೂ ಕಮಲ್ ಇಬ್ಬರನ್ನೂ ಏಕಕಾಲದಲ್ಲಿ ನಾಯಕನಟರನ್ನಾಗಿ ಬೆಳೆಸಿದರು. 'ಮೂನ್ರು ಮುಡಿಚ್ಚು' ಚಿತ್ರದಲ್ಲಿ ರಜನಿ ಅವರ ಸ್ಟೈಲ್, ಮ್ಯಾನರಿಸಂ, ಸಿಗರೇಟು ಹೊಗೆ ಬಿಡುವ ಶೈಲಿ, ಕನ್ನಡಕವನ್ನು ಮುಖಕ್ಕೆ ಎಳೆದುಕೊಳ್ಳುವ ಶೈಲಿ ಇವೆಲ್ಲಾ ತಮಿಳು ಸಿನಿಮಾ ಪ್ರೇಮಿಗಳನ್ನು ಸೆಳೆದವು. 'ಅವರ್‌ಗಳ್', 'ಪದಿನಾರು ವಯದಿನಿಲೆ', 'ಆಡು ಪುಲಿಆಟ್ಟಂ' ಮೊದಲಾದವು ಸಿನಿಮಾಗಳು ಭಾರೀ ಯಶಸ್ಸು ಗಳಿಸಿದವು. ಆರಂಭದ 15 ಸಿನಿಮಾಗಳಲ್ಲೂ ವಿಲನ್ ಆಗಿದ್ದ ರಜನಿಕಾಂತ್, ನಾಯಕನಾಗುವ ಅದೃಷ್ಟಕ್ಕಾಗಿ ಕಾದರು. 1978 ರಲ್ಲಿ ಆ ದಿನ ಬಂದೇ ಬಿಟ್ಟಿತು. 'ಭೈರವಿ' ಚಿತ್ರದಲ್ಲಿ ನಾಯಕನಾಗಿ ಬಡ್ತಿ ಪಡೆದ ಅವರು ಯಶಸ್ವಿಯಾದರು. 'ಮುಳ್ಳುಂ ಮಲರುಂ', 'ಅವಳ್‌ಅಪ್ಪಡಿದಾನ್' ಚಿತ್ರಗಳೂ ಯಶಸ್ಸಿನ ಹಾದಿ ಹಿಡಿದವು. 1977 ರಲ್ಲಿ ಕನ್ನಡದ 'ಸಹೋದರರ ಸವಾಲ್' ಚಿತ್ರದಲ್ಲಿ ರಜನಿ ಎರಡನೇ ನಾಯಕನಟ.

ಏರಿತ್ತು ರಜನಿ ಅಮಲು

ರಜನಿಯ ಸ್ಟೈಲ್ ಅಮಲು ಈ ವೇಳೆಗೆ ತಮಿಳು ಚಿತ್ರರಸಿಕರಿಗೆ ಏರಿತ್ತು. ಇದನ್ನೇ ಬಂಡವಾಳವನ್ನಾಗಿಸಿಕೊಂಡು ನಿರ್ದೇಶಕ ಎಸ್.ಪಿ.ಮುತ್ತುರಾಮನ್, ರಜನಿಗೆ ಮತ್ತೊಂದು ಇಮೇಜು ಸೃಷ್ಟಿಸಲು ಯತ್ನಿಸಿ ಅದರಲ್ಲಿ ಯಶಸ್ವಿಯೂ ಆದರು. ಅವರು ತಯಾರಿಸಿದ 'ಭುವನಾ ಒರು ಕೇಳ್ವಿಕುರಿ' ಚಿತ್ರದಲ್ಲಿ ರಜನಿ ಒರಟು ಸ್ವಭಾವದ ಆದರೆ ಒಳ್ಳೆಯ ಮನಸ್ಸುಳ್ಳ ನಾಯಕ. ಒಂದು ರೀತಿಯಲ್ಲಿ ವಿಲನ್. ಚಿತ್ರ ಸೂಪರ್ ಹಿಟ್ ಆದದ್ದೇ ತಡ ರಜನಿ ಖ್ಯಾತಿ ಮುಗಿಲಿಗೇರಿತು. ಅಲ್ಲಿಂದ ಮುಂದೆ ಅವರ ಸ್ವರೂಪವೇ ಬದಲಾಯಿತು. 'ಕಾಳಿ', 'ಶಂಕರ್ ಸಲೀಂ', 'ಸೈಮನ್' ಚಿತ್ರಗಳು ಸಾಲುಗಟ್ಟಿದವು. 'ಬಿಲ್ಲಾ' ಚಿತ್ರದಿಂದ ರಜನಿಯ ಸಿನಿ ಜೀವನದ ಮತ್ತೊಂದು ಮಜಲು ಆರಂಭವಾಯಿತು. 'ಪೋಕರಿ ರಾಜ', 'ತನಿಕಾಟ್ಟು ರಾಜ', 'ನೆಟ್ರಿ ಕಣ್', 'ಮೂಂಡ್ರು ಮುಗಂ', 'ಆರುಲಿರುಂದು ಅರವದುವರೈ' ಚಿತ್ರಗಳು ಅವರಿಗೆ ಹೊಸ ಜೀವನವನ್ನೇ ಕಟ್ಟಿಕೊಟ್ಟವು. ಮುಂದೆ ರಜನಿ ಹತ್ತಿದ್ದು ಸೂಪರ್ ಸ್ಟಾರ್ ಅಟ್ಟಣಿಗೆಯನ್ನೇ. 'ಬಾಷಾ' ಚಿತ್ರವನ್ನು ಅಭಿಮಾನಿಗಳು ಎಷ್ಟು ಬಾರಿ ಬಿಡುಗಡೆಯಾದರೂ ವೀಕ್ಷಿಸುತ್ತಾರೆ. ಉತ್ತರ ಭಾರತದಲ್ಲಿ ಹಿಂದಿ ಸಿನಿಮಾ ನಾಯಕನಟರನ್ನಷ್ಟೇ ಹೀರೊಗಳು ಎಂದು ಒಪ್ಪುತ್ತಿದ್ದರು. ಅಂತಹ ನಿಯಮವನ್ನು ಮುರಿದವರು ರಜನಿಕಾಂತ್. 'ಬಾಷಾ' ಹಿಂದಿಗೂ ಡಬ್ ಆಗಿ ಅಲ್ಲಿನ ಜನ ರಜನಿಕಾಂತ್ ಅಭಿಮಾನಿಗಳಾಗಿದ್ದರು. 'ಮುತ್ತು' (1995) ಸಿನಿಮಾ ಜಪಾನಿನಲ್ಲಿ ಅತ್ಯಂತ ಜನಪ್ರಿಯ ರಂಜನೀಯ ಚಿತ್ರವೆನಿಸಿ, 25 ವಾರ ಪ್ರದರ್ಶನಗೊಂಡಿತು. 'ಪಡೆಯಪ್ಪ' ಸಾರ್ವಕಾಲಿಕ ದಾಖಲೆಯ ಚಿತ್ರ.



ದಾಖಲೆಗಳ ವೀರ

50 ವರ್ಷಗಳ ಸಿನಿಮಾ ನಡಿಗೆಯಲ್ಲಿ ರಜನಿಕಾಂತ್ ಹಲವಾರು ಮೈಲುಗಲ್ಲುಗಳನ್ನು ನೆಟ್ಟಿದ್ದಾರೆ. 2010 ರಲ್ಲಿ 'ಎಂದಿರನ್' ₹600 ಕೋಟಿ ವೆಚ್ಚದಲ್ಲಿ ತಯಾರಾದ ಬಿಗ್ ಬಜೆಟ್ ಚಿತ್ರವೆನಿಸಿತು. 'ಎಂದಿರನ್' ಹಾಗೂ '2.0' (ರೋಬೋ) ಚಿತ್ರಗಳ ಬಿಡುಗಡೆಯ ನಂತರ ರಜನಿ ಅವರಷ್ಟು ಟ್ರೋಲ್ ಆದ ಮತ್ತೊಬ್ಬ ನಟ ವಿಶ್ವದಲ್ಲೇ ಬೇರೊಬ್ಬ ಇರಲಾರನೆನಿಸುತ್ತದೆ. ಸರ್ದಾರ್ಜಿ ಜೋಕುಗಳನ್ನು ಹಿಂದಿಕ್ಕಿ ರಜನಿಕಾಂತ್ ಜೋಕುಗಳು ಪುಂಖಾನುಪುಂಖವಾಗಿ ಪ್ರಸಾರಗೊಂಡವು. 'ಶಿವಾಜಿ' ಚಿತ್ರಕ್ಕಾಗಿ 2007 ರಲ್ಲೇ ಅವರು ಪಡೆದ ಸಂಭಾವನೆ ₹26 ಕೋಟಿಗಳಂತೆ. (ಅದು ಚಿತ್ರದಿಂದ ಚಿತ್ರಕ್ಕೆ, ವರ್ಷದಿಂದ ವರ್ಷಕ್ಕೆ ಬದಲಾಗುತ್ತಾ ಈಗ 200 ಕೋಟಿ ಮುಟ್ಟಿದೆ ಎಂಬುದು ಖಚಿತವಲ್ಲದ ಮಾಹಿತಿ.) ಆ ಕಾಲದಲ್ಲಿ ಅದು ಅತಿ ಹೆಚ್ಚು. ಜಾಕಿ ಚಾನ್ ನಂತರ ಇಷ್ಟೊಂದು ಮೊತ್ತದ ಸಂಭಾವನೆ ಪಡೆದ ಎರಡನೇ ನಾಯಕ ನಟ ಎಂಬ ದಾಖಲೆ ಇವರದು. 2005 ರಲ್ಲಿ 'ಚಂದ್ರಮುಖಿ' 126 ವಾರ ಸತತವಾಗಿ ಪ್ರದರ್ಶನಗೊಂಡು ಅತಿ ಹೆಚ್ಚು ವಾರ ಪ್ರದರ್ಶನಗೊಂಡ ತಮಿಳು ಸಿನಿಮಾ ಎಂಬ ದಾಖಲೆ ಬರೆಯಿತು. ಅದುವರೆಗೆ ಅಂದಿನ ಕಾಲದ ಸೂಪರ್ ಸ್ಟಾರ್ ಎಂ.ಕೆ.ತ್ಯಾಗರಾಜ ಭಾಗವತರ್ ಅವರ ಅಭಿನಯದ 'ಹರಿದಾಸ'ಕ್ಕೆ ಈ ದಾಖಲೆ ಇತ್ತು. 73 ನೇ ವಯಸ್ಸಿನಲ್ಲಿ ಅವರು ನಾಯಕನಾಗಿ ಅಭಿನಯಿಸಿದ 'ಜೈಲರ್' ಚಿತ್ರ ₹600 ಕೋಟಿ ಗಳಿಸಿತು. 2023 ರಲ್ಲಿ ಬಿಡುಗಡೆಯಾದ ಚಿತ್ರಗಳ ಪೈಕಿ ಅತ್ಯಂತ ಹೆಚ್ಚು ಲಾಭಗಳಿಸಿದ ಚಿತ್ರವೆನಿಸಿದೆ.

ಇದೇ ರೀತಿ ರಜನಿಕಾಂತ್ ಎಂಬ ಸ್ಟೈಲ್ ಕಿಂಗ್ ನಟನ ಮೋಡಿ ಮುಂದುವರಿದಿದೆ!

ಮುನ್ನೋಟ 28-09-2025 ರಿಂದ 04-10-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಿರಿಯರೊಂದಿಗೆ ಶಾಂತತೆಯಿಂದ ವ್ಯವಹರಿಸುವುದು ಉತ್ತಮ. ಆದಾಯವು ಕಡಿಮೆ ಇರುತ್ತದೆ. ಅನಿರೀಕ್ಷಿತ ಖರ್ಚುಗಳು ಹೆಚ್ಚಾಗುವ ಸಾಧ್ಯತೆಗಳಿವೆ. ನಿಮ್ಮ ಪ್ರತಿಭೆಗೆ ತಕ್ಕ ಅವಕಾಶಗಳು ಒದಗಿಬರುತ್ತವೆ. ಕೃಷಿಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಬೇರೆಯವರ ಕಷ್ಟಕ್ಕೆ ನೆರವಾಗುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಲಲಿತ ಕಲೆಯತ್ತ ಹೆಚ್ಚು ಗಮನಹರಿಸುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ವಿದೇಶಿ ವ್ಯವಹಾರಗಳಿಂದ ಉತ್ತಮ ಲಾಭವನ್ನು ನಿರೀಕ್ಷಿಸಬಹುದು. ಮುಂದಾಲೋಚನೆಯಿಂದ ಹೂಡಿದ ಹಣದಲ್ಲಿ ನಿರೀಕ್ಷಿತ ಲಾಭವನ್ನು ಕಾಣಬಹುದು. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರಿಗೆ ಉತ್ತಮ ಬೆಳವಣಿಗೆ ಇರುತ್ತದೆ. ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಬಿಡುವಿಲ್ಲದ ಕೆಲಸಗಳು ಬರಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅತ್ಯಂತ ಗಂಭೀರ ನಡವಳಿಕೆಯನ್ನು ಈಗ ಕಾಣಬಹುದು. ಆದಾಯವು ಕಡಿಮೆ ಇರುತ್ತದೆ. ಬಂಧುಗಳ ನಡುವೆ ಕೆಲವು ಜಿಜ್ಞಾಸೆಗಳು ಮೂಡಬಹುದು. ಕೃಷಿ ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಕೃಷಿ ಭೂಮಿಯನ್ನು ಕೊಳ್ಳುವ ಎಲ್ಲಾ ಅವಕಾಶಗಳಿವೆ. ಲಲಿತ ಕಲಾವಿದರುಗಳಿಗೆ ಹೆಚ್ಚಿನ ಕೆಲಸ ಒದಗಿಬರುತ್ತದೆ. ನೃತ್ಯಗಾರರಿಗೆ ಕಲೆಯ ಸೂಕ್ಷ್ಮತೆಯನ್ನು ತಿಳಿಸುವ ಗುರು ದೊರೆಯುತ್ತಾರೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ತಾಯಿಯ ಕಡೆಗೆ ಹೆಚ್ಚಿನ ಗಮನ ಹರಿಯುತ್ತದೆ. ಆರ್ಥಿಕ ಸಂಕಷ್ಟಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತವೆ. ಬಂಧುಗಳಿಂದ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಭೂಮಿಯ ವ್ಯಾಪಾರವನ್ನು ಮಾಡುವವರಿಗೆ ಸಾಮಾನ್ಯ ಆದಾಯವಿರುತ್ತದೆ. ಉದ್ಯೋಗದಲ್ಲಿರುವವರಿಗೆ ಅಧಿಕಾರ ವರ್ಗದವರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಕೃಷಿಕರು ತಾವು ಬೆಳೆಯುವ ಬೆಳೆಯನ್ನು ಸರಿಯಾಗಿ ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಗೌರವ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಒಡಹುಟ್ಟಿದವರ ನಡುವೆ ಭಿನ್ನಾಭಿಪ್ರಾಯಗಳು ಕಾಣಿಸಬಹುದು. ಹೈನುಗಾರಿಕೆ ಮಾಡುವವರಿಗೆ ಉತ್ತಮ ಆದಾಯವಿರುತ್ತದೆ. ಮಕ್ಕಳಿಂದ ಸಂಸಾರದಲ್ಲಿ ಸಂತೋಷವಿರುತ್ತದೆ. ವಾತ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ವಿದೇಶಕ್ಕೆ ಹೋಗುವ ಅವಕಾಶ ದೊರೆಯುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವ್ಯಕ್ತಿಗತ ಗೌರವಕ್ಕೆ ಹೆಚ್ಚು ಗಮನ ಕೊಡುವಿರಿ. ಕೃಷಿ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿ ಇದ್ದು ಹೆಚ್ಚಿನ ಲಾಭಾಂಶವನ್ನು ಕಾಣಬಹುದು. ಇತರೆ ಆದಾಯಗಳು ಕಡಿಮೆ ಇರುತ್ತವೆ. ನ್ಯಾಯಾಲಯದ ತೀರ್ಪುಗಳು ನಿಮ್ಮ ಪರವಾಗಿ ಬರುವ ಸಾಧ್ಯತೆಗಳಿವೆ. ಉದ್ಯೋಗ ಸ್ಥಳದಲ್ಲಿ ಅನುಕೂಲಕರ ವಾತಾವರಣವಿದ್ದರೂ ಒಳಗೊಳಗೆ ನಿಮಗೆ ಅತೃಪ್ತಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಕೃಷಿಯಲ್ಲಿ ಪ್ರಗತಿಯನ್ನು ಕಾಣಬಹುದು. ಆದಾಯವು ಚೇತರಿಕೆಯ ಹಾದಿಯನ್ನು ಕಾಣುತ್ತದೆ. ಹಿರಿಯರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ಪ್ರಿಯ ವ್ಯಕ್ತಿಗಳ ಆಗಮನದಿಂದ ಮನಸ್ಸಿಗೆ ಉಲ್ಲಾಸವಾಗುವುದು. ಕೆಲವು ಶತ್ರುಗಳು ಈಗ ತಾವಾಗಿಯೇ ಬಯಸಿ ಮಿತ್ರರಾಗುವರು. ಬಂಧುಗಳ ಆಸ್ತಿಯನ್ನು ಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವಿದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಯ ಅವಕಾಶ ಒದಗಿ ಬರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ನಿಮ್ಮ ಕೆಲಸಗಳಿಗೆ ಬಂಧುಗಳ ವಿರೋಧವಿರುತ್ತದೆ. ವಿದೇಶದಲ್ಲಿರುವವರಿಗೆ ಆಸ್ತಿ ಮಾಡಿಕೊಳ್ಳುವ ಅವಕಾಶ ದೊರೆಯುತ್ತದೆ. ಆಸ್ತಿ ವಿವಾದಗಳಿಂದ ಮುಕ್ತಿ ದೊರೆಯಬಹುದು. ಹಿರಿಯರ ಆರೋಗ್ಯದಲ್ಲಿ ಏರುಪೇರಾದರೂ ಭಯವಿಲ್ಲ. ಸಹವರ್ತಿಗಳಿಗೆ ಉತ್ಸಾಹ ತುಂಬಿ ಕೆಲಸ ಮಾಡಿಸುವಿರಿ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಪಾಡಿಗೆ ನೀವು ಇರುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಮಂದಗತಿಯಲ್ಲಿ ಇದ್ದ ನಿಮ್ಮ ಕೆಲಸ ಕಾರ್ಯಗಳು ವೇಗ ಪಡೆಯುತ್ತವೆ. ಹಿರಿಯರು ತಮ್ಮ ಸ್ವಯಂಕೃತ ಅಪರಾಧಗಳಿಂದ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯ ಹೆಚ್ಚಾಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಉದ್ಯೋಗದಲ್ಲಿ ಬಹಳ ಶಿಸ್ತನ್ನು ಮೂಡಿಸಿಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ಆಮದು ಮತ್ತು ರಫ್ತನ್ನು ಮಾಡುವವರ ಆದಾಯ ಹೆಚ್ಚುತ್ತದೆ. ಶತ್ರುಗಳನ್ನು ಹುಡುಕಿ ನಿಗ್ರಹ ಮಾಡುವ ಯೋಗ ನಿಮಗಿದೆ. ಲೇವಾದೇವಿ ವ್ಯವಹಾರಗಳು ಬೇಡ. ಮಹತ್ತರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೂಲಂಕಶವಾಗಿ ಅವಲೋಕಿಸಿ. ದೂರದಲ್ಲಿರುವ ಮಕ್ಕಳ ಓದಿಗಾಗಿ ಹಣ ಕಳಿಸಬೇಕಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಲ್ಲಿ ಉದ್ಧಟತನ ಹೆಚ್ಚಾಗುವ ಸಾಧ್ಯತೆಗಳಿವೆ. ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಮಂದಗತಿಯನ್ನು ಕಾಣಬಹುದು. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಭಾಷಾಂತರ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆತು ಈಗ ಸಂಪಾದನೆ ಹೆಚ್ಚುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಾರದ ಆರಂಭದಲ್ಲಿ ಆಲಸಿತನ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಬಂಧುಗಳ ನಡುವಿನ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾಗುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳಬಹುದು. ಮಕ್ಕಳ ಅಭಿವೃದ್ಧಿಗಾಗಿ ಹೆಚ್ಚು ಹಣ ಖರ್ಚು ಮಾಡುವಿರಿ. ಸ್ವಂತ ಆರೋಗ್ಯದ ಕಡೆ ಹೆಚ್ಚು ಗಮನವಿರಲಿ.

ಪದಬಂಧ 2911



ಮೇಲಿನಿಂದ ಕೆಳಕ್ಕೆ

1. ಹಿಂದಿನ ಕಾಲದಲ್ಲಿ ಹುಟ್ಟಿದ ನಮ್ಮ ಹಿರಿಯ 3
2. ಇದು ಬಹು ದೊಡ್ಡ ಸಂಧಿಕೂಟ 5
3. ಯಾರಿಗೂ ಕಾಣಿಸಿದೆ ಒಳಗೊಳಗೇ ಹರಿಯುವವಳು 5
4. ಮಹಾಶಿವನೆತ್ತುವ ಉಗ್ರ ಸ್ವರೂಪ 5
6. ಯಾದವ ವಂಶದ ಕುವರನಾಗಿ ಶ್ರೀಕೃಷ್ಣ 5
11. ತಾರಾ ಮನರಂಜನೆಯ ಸಂಗೀತ ಕಾರ್ಯಕ್ರಮ 5
12. ಅನೇಕವೇಳೆ ಈ ನಿಜವಿಚಾರ ಹೊರಬರುವುದೇ ಕಷ್ಟ 5
13. ದನ ಕಟ್ಟಿರುವ ಮೃತ್ಯುದೇವನ ಮನೆ 5
14. ಜೊತೆ ಜೊತೆಯಲ್ಲಿ ಒಂದೇ ಕಾಲದವರು 5
19. ದರ್ಬಾರಿನಲ್ಲಿ ಹಾಡುವ ರಾಗ ಕನ್ನಡದಿಂದ ಮೂಡಿದೆ 3

ಎಡದಿಂದ ಬಲಕ್ಕೆ

1. ವಾಕ್ಯಕ್ಕೆ ಮತ್ತು ಜೀವನಕ್ಕೆ ಕೊಡಬಹುದಾದ ಪೂರ್ತಿ ವಿಶ್ರಾಂತಿ 5
3. ದೇವಸ್ಥಾನದ ರಥ 4
5. ನವರಾತ್ರಿಯ ನಂತರ ಗೆಲುವಿನ ಹತ್ತನೆ ದಿನ 5
7. ಪರಮಾತ್ಮ ಪವನಪುತ್ರ ಹನುಮನನ್ನು ಕನ್ನಡದಲ್ಲಿ ಹೀಗೂ ಹೇಳಬಹುದು 4
8. ವಿರಳವಾಗಿ ಬರುವ ಕನ್ನಡದ ಲಕ್ಷ್ಮಿ 3
9. ಕರುಣೆ ಮತ್ತು ಸಂತೋಷವನ್ನು ಒಟ್ಟಿಗೆ ಈತನಲ್ಲಿ ಕಾಣಬಹುದು 4
10. ತಳ, ಬುಡ, ಆಸರೆ, ನೆಲಗಟ್ಟು ಯಾವುದೂ ಇಲ್ಲದ್ದು 4
12. ನಯ ನಮ್ರತೆಯಿಂದ ಕೂಡಿದ ಪ್ರಾರ್ಥನೆ 4
15. ಸಕಾರದಲ್ಲಿ ಮಂಜ ಸೇರಿ ಒಪ್ಪಿಗೆಯಾಗಿ ಸೂಕ್ತವಾಗಿದೆ 4
16. ಅಧಮ ಮತ್ತು ಉತ್ತಮನ ನಡುವೆ ನಿಂತವ 3
17. ಸಂಜೆಯವೇಳೆ ಮಾಡುವ ಕಸರತ್ತು 4
18. ಸುದೀರ್ಘ ಕತೆಯ ಸಾಹಿತ್ಯ ಕೃತಿಯ ರಚನಕಾರ ಭೈರಪ್ಪನವರನ್ನು ನೆನೆಪಿಸಿಕೊಳ್ಳಿ 5
20. ಯಾವುದೇ ರಾಡಿಯಿಲ್ಲದೆ ತೇಲಿಬರುವ ನಿಶ್ಯಬ್ದ 4
21. ಹಳೆ ಮತ್ತು ಹೊಸತರ ನಡುವಿನ ನಮ್ಮ ಭಾಷೆ 5

ಪದಬಂಧ ಉತ್ತರ -2910

ಮೇಲಿಂದ ಕೆಳಕ್ಕೆ

1.ಪದ್ಮಲತಾ 2.ಮಹಾಗಣ 3.ಕಲರವ 4.ಸತಿಮೋಹ 7.ಮಹಾಸಮಾಧಿ 8.ಗುರುಮಹಿಮಾ 10.ಸಭಾಕಲಾಪ 11.ಗೃಹಪ್ರವೇಶ 14.ಅನಾಯಾಸ 15.ಸರಿಸಾಟಿ 16.ಪಾರಿಜಾತ 17.ಕರ್ಣದಾನ

ಎಡದಿಂದ ಬಲಕ್ಕೆ

1.ಪರಶುರಾಮ 3.ಕರುಣಾರಸ 5.ಗಮಾರ 6.ತಾಮಸಗುಣ 9.ವಸತಿಗೃಹ 12.ರಸಸಮಯ 15.ಸರಿಸಾಟಿ 16.ಪಾಪನಾಶಕ 18.ರಿಸರಿ 19.ಸಹಸ್ರ-ಕೋಟಿ 20.ತತ್ವದರ್ಶನ

ಗಂಧರ್ವ ತಾರೆಯರ ಅನಾವರಣ

ಬೆಂಗಳೂರಿನ ಕಸ್ತೂರಬಾ ರಸ್ತೆಯ ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿಯಲ್ಲಿ ಜನವರಿ 26ರವರೆಗೆ ಈ ಪ್ರದರ್ಶನ ಇರಲಿದೆ.





ಕಲಾಕುಂಚದಲ್ಲಿ ಗಂಧರ್ವಲೋಕದ ಅನನ್ಯ ತಾರೆಯರು

ಕುಂಚದಲ್ಲಿ ಅರಳಿದ ಗರುಡನ ಕಥೆಯನ್ನು ನೋಡುತ್ತಿರುವ ಕಲಾಪ್ರೇಮಿ



ನಂದಿಕೇಶ್ವರನ ಕಲಾಕೃತಿ

• ರೂಪಾ ಕೆ.ಎಂ.

ದೇವರು ಮತ್ತು ಮನುಷ್ಯರ ನಡುವಿನ ಭಾವ ಸೇತುಗಳು ಏನು ಎಂದರೆ ಪುರಾಣ ಕಾಲದಿಂದಲೂ ಚಿತ್ರಣಗೊಂಡಿರುವ ದೇವಗಣಗಳು, ಗಂಧರ್ವರು, ಕಿಂಪುರುಷರು ಮತ್ತು ಯಕ್ಷರು.

ನಾನಾ ಕಲಾ ಮಾಧ್ಯಮಗಳಲ್ಲಿ ರೂಪುಗೊಂಡ ಗಂಧರ್ವಲೋಕದ ಅನನ್ಯ ತಾರೆಗಳನ್ನು ಚಿತ್ರಿಸಿರುವ ಹಲವು ಕಲಾಪರಂಪರೆಗಳನ್ನು ಬೆಂಗಳೂರಿನ 'ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ'ಯು ಸಂಗ್ರಹಿಸಿ, ಪ್ರದರ್ಶಿಸಿದೆ. ನಾನಾ ಶತಮಾನಗಳಲ್ಲಿ ರಚನೆಗೊಂಡ ದೇವದೂತರು, ದೇವರ ವಾಹನಗಳ ಕಲಾಚಿತ್ರಣವನ್ನು ಅರಿಯಲು ಅಗತ್ಯವಾಗಿ ಪ್ರದರ್ಶನಕ್ಕೆ ಭೇಟಿ ನೀಡಬಹುದು.

ದೇವರು ಎಂದರೆ ಯಾರು? ದೇವದೂತರು ಯಾರು? ಹೀಗೆ ಹಲವು ತಾತ್ವಿಕ ಪ್ರಶ್ನೆಗಳಿಗೆ ಪುರಾಣ ಹಾಗೂ ಜನಪದೀಯ ಹಿನ್ನೆಲೆಯಲ್ಲಿ ಹಲವು ಕಥೆಗಳು ತೆರೆದುಕೊಳ್ಳುತ್ತವೆ. ಕಥನಕಲೆಯನ್ನು ಕೆತ್ತನೆ ಕಲೆಯ ಮೂಲಕ ಹಿಡಿದಿಡುವ ಆಯಾ ಕಾಲಘಟ್ಟದ ಸೊಗಸಾದ ಪ್ರಯತ್ನಗಳನ್ನು ಈ ಪ್ರದರ್ಶನವು ನೋಡುಗರಿಗೆ ಕಟ್ಟಿಕೊಡುತ್ತದೆ.

ಇಲ್ಲಿ ಸಂಗ್ರಹಗೊಂಡಿರುವ ಪ್ರತಿ ಕಲಾಕೃತಿಯ ಹಿಂದೆ ಕಥಾಲೋಕವೇ ಅಡಗಿದೆ. ಪುರಾಣ ಹಾಗೂ ಜನಪದೀಯ ನೆಲೆಯಲ್ಲಿ ದಾಖಲಾಗಿರುವ ಕಥೆಗಳನ್ನು ಈ ಕಲಾಕೃತಿಗಳು ಉಸಿರಾಡುತ್ತವೆ ಎಂಬುದಕ್ಕೆ ಹಲವು ನಿದರ್ಶನಗಳು ಸಿಗುತ್ತವೆ. 1920ರ ಸುಮಾರಿಗೆ ತಮಿಳುನಾಡಿನಲ್ಲಿ ರಚನೆಯಾದ ಬಹುವರ್ಣೀಯ ಮರ ಬಳಸಿ ಮಾಡಲಾದ ಶಿವನ ವಾಹನ ನಂದಿಕೇಶ್ವರ ಕಲಾಕೃತಿಯು ಮನ ಸೆಳೆಯುತ್ತದೆ.

ಭಾರತದಾದ್ಯಂತ ಹಲವು ಶಿವನ ದೇಗುಲಗಳ ಪ್ರಾಂಗಣದಲ್ಲಿ ನಂದಿಯು ಸದಾ ಎಚ್ಚರದ ಸಂಕೇತವಾಗಿ ಸ್ಥಾಪನೆಗೊಂಡಿದೆ. ಶಿವನ ಗರ್ಭಗುಡಿಯ ಕಡೆ ನಂದಿಯು ಮುಖಮಾಡಿರುತ್ತದೆ. ಬಾಲ ಮಡಚಿದ್ದರೂ ಸ್ಥಿರವಾಗಿರುತ್ತದೆ. ಕಂಗಳು ಅನಂತ ನೋಟವನ್ನು ತೆರೆದಿಡುತ್ತದೆ. ನಂದಿಯ ಕಿವಿಯಲ್ಲಿ ನಿಮ್ಮ ಬೇಡಿಕೆಯನ್ನು ಪಿಸುಗುಟ್ಟಿದರೆ, ಅದು ನೇರವಾಗಿ ಶಿವನನ್ನು ತಲುಪುತ್ತದೆ ಎಂಬ ನಂಬಿಕೆಯೂ ಇದೆ. ನಂದಿಯ ಇಷ್ಟೆಲ್ಲ ಪ್ರವರಗಳನ್ನು ಬಹಳ ಸಲೀಸಾಗಿ ಅರಹುತ್ತದೆ ನಂದಿಕೇಶ್ವರನ ಕಲಾಕೃತಿ.

ಇನ್ನು ನಂದಿ ಹುಟ್ಟಿನ ಬಗ್ಗೆ ಇರುವ ಹಲವು ಕಥೆಗಳನ್ನು ಇಲ್ಲಿ ನೀಡಲಾಗಿದೆ. ಶಿಲಾದ ಎಂಬ ಋಷಿಯ ಸಾವಿರ ವರುಷದ ತಪ್ಪಸ್ಸಿನ ಫಲವಾಗಿ ಆತನದ್ದೇ ಬೆವರಿನಿಂದ ನಂದಿ ಹುಟ್ಟಿದೆನೆಂಬ ಕಥೆಯೂ ಇದೆ. ಇದಲ್ಲದೇ ಯಜ್ಞವೊಂದರ ಬೆಂಕಿಯಿಂದ ನಂದಿಯ ಜನನವಾಯಿತು ಎನ್ನುತ್ತದೆ ಮತ್ತೊಂದು ಕಥೆ. ಮತ್ತೊಂದು ಕುತೂಹಲಕಾರಿ ಎನಿಸುವ ಕಥೆಯೊಂದು ಇದೆ. ಅದೇನೆಂದರೆ ಪರಶಿವನು ಸ್ವತಃ ತನಗೊಬ್ಬ ಮಗ ಬೇಕೆಂದು ತಾನೇ ವರಕೊಟ್ಟುಕೊಂಡು ನಂದಿಯನ್ನು ಪಡೆದುಕೊಂಡನಂತೆ.

ಹುಟ್ಟು ಮತ್ತು ಸಾವನ್ನು ಮೀರಿದ ನಂದಿ, ಆರಂಭದಿಂದಲೂ ಎಲ್ಲ ಕಥೆಗಳಲ್ಲಿಯೂ ಪರಶಿವನೆಡೆಗೆ ಅನನ್ಯ ಭಕ್ತಿಯನ್ನು ತೋರಿಸುವ ವಾಹನವಾಗಿಯೂ ಅಗಾಧ ಶಕ್ತಿಯನ್ನು ಹೊಂದಿರುವ ದಿವ್ಯಾತ್ಮವಾಗಿಯೂ ಚಿತ್ರಿತಗೊಂಡಿದೆ.

ಇಲ್ಲಿ ಮತ್ತೊಂದು ಅಂಶವಿದೆ. ನಂದಿ ಶಿವನ ವಾಹನವಾಗಿದ್ದರೂ ಅಷ್ಟೆ ಆಗಿ ಉಳಿಯಲಿಲ್ಲ. ಅನನ್ಯ ಭಕ್ತಿಯಿಂದ ಶಿವನ ಪ್ರೀತಿಯನ್ನು ಅನಾಯಾಸವಾಗಿ ಗಳಿಸಿಬಿಟ್ಟ ನಂದಿ ಎಲ್ಲ ಗಣಗಳ ಮುಖ್ಯಸ್ಥನೂ ಆಗಿಬಿಟ್ಟ. ಗಣಗಳೆಂದರೆ ದೇವರ ಸೃಷ್ಟಿ ಹಾಗೂ ವಿನಾಶ ಪ್ರಕ್ರಿಯೆಯಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಕಾಪಿಡುವವರು ಎನ್ನುವ ನಂಬಿಕೆಯೂ ಇದೆ.

ದ್ವಾರಪಾಲಕನಂತೆ ಇರುವ ನಂದಿಯ ಕಲಾಕೃತಿ ಹೇಳುವ ಕಥೆ ಕುತೂಹಲಕಾರಿಯಾಗಿದೆ. ಒಮ್ಮೆ ಶಿವನ ವೈಯಕ್ತಿಕ ಕೋಣೆಯನ್ನು ಅಪ್ಪಣೆ ಇಲ್ಲದೇ ನಂದಿ ಪ್ರವೇಶ ಮಾಡಿಬಿಟ್ಟನಂತೆ!. ಇದರಿಂದ ಸಿಟ್ಟಾದ ಶಿವ ಆತನನ್ನು ದ್ವಾರಪಾಲಕನಾಗಿ ಉಳಿಯುವಂತೆ ಆಜ್ಞಾಪಿಸಿದನಂತೆ. ಅಲ್ಲಿಂದ ನಂದಿಯು ಶಿವನ ದ್ವಾರಪಾಲಕನಾಗಿ ಹೊರಗುಳಿದ.

ಇನ್ನು 19 ರಿಂದ 20ನೇ ಶತಮಾನದ ಅವಧಿಯದ್ದೆಂದು ಹೇಳಲಾದ ಐರಾವತ ಆನೆಯ ಮರದ ಕಲಾಕೃತಿಯ ಕುಸುರಿಗಳು ಹೇಳುವ ಕಥೆ ವಿಶಿಷ್ಟವಾಗಿದೆ.

ಭಾರತೀಯ ಪುರಾಣಗಳಲ್ಲಿ ಆನೆಗಳು ಸಮೃದ್ಧಿ, ಫಲವತ್ತತೆ ಹಾಗೂ ಗಾಂಭೀರ್ಯದ ಸಂಕೇತ. ಇಂಥ ಆನೆಗಳು ರೆಕ್ಕೆ ಕಟ್ಟಿಕೊಂಡು ಹಕ್ಕಿಯಂತೆ ಹಾರಾಟ ಮಾಡಿದರೆ? ಎಷ್ಟೊಂದು ವಿಶಿಷ್ಟವಾದ ಪರಿಕಲ್ಪನೆಯಲ್ಲವೇ. ಅಪಾರಗಾತ್ರದ ಆನೆಯು ರೆಕ್ಕೆಗಳ ನೆವದಿಂದ ಹಾರಾಟ ಮಾಡುವುದೇ ಒಂದು ಚಂದದ ಯೋಚನೆಯಲ್ಲವೇ?

ಈ ಕೆತ್ತನೆಗಳು ಹೇಳುವುದಿಷ್ಟು: ಇಂದ್ರನ ಆಸ್ಥಾನದಲ್ಲಿರುವ ಶ್ವೇತವರ್ಣದ ಆನೆ ಅಂದರೆ ಐರಾವತಕ್ಕೆ ರೆಕ್ಕೆಗಳಿವೆ. ಇನ್ನೂ ಅದೃಷ್ಟದೇವತೆ ಎನಿಸಿಕೊಂಡ ಗಜಲಕ್ಷ್ಮಿಗೆ ರಕ್ಷಕನಾಗಿಯೂ ಆನೆಯಿರುತ್ತದೆ.


ಸೃಷ್ಟಿಕರ್ತ ಬ್ರಹ್ಮನು ಗರುಡನನ್ನು ಸೃಷ್ಟಿ ಮಾಡಿದ ನಂತರ ಉಳಿದುಹೋದ ಮೊಟ್ಟೆ ಚಿಪ್ಪಿನಿಂದ ಐರಾವತನನ್ನು ಸೃಷ್ಟಿಸಿದನಂತೆ. ಮತ್ತೊಂದು ಕಥೆಯಲ್ಲಿ ದೇವತೆಗಳು ಮತ್ತು ರಾಕ್ಷಸರ ನಡುವೆ ಅಮೃತಕ್ಕಾಗಿ ಸಮುದ್ರ ಮಥನವಾದಾಗ, ಹಾಲುನೊರೆಯಂಥ ಐರಾವತ ಎದ್ದು ಬಂದಿತಂತೆ! ಈ ಐರಾವತದ ಜತೆಗೆ ಕೇಳಿದ್ದನ್ನು ಕೊಡುವ ಕಲ್ಪವೃಕ್ಷ ಹಾಗೂ ಕೌಸ್ತುಭಮಣಿಯೂ ಸೃಷ್ಟಿಯಾಯಿತಂತೆ.

ಇನ್ನು ಐರಾವತದ ವರ್ಣನೆಯೇ ಸೊಗಸಾಗಿದೆ. ನಾಲ್ಕು ದಂತಗಳು, ಹತ್ತು ರೆಕ್ಕೆಗಳಿದ್ದು, ಅದರ ಸೊಂಡಿಲು ಪಾತಾಳದಲ್ಲಿರುವ ನೀರನ್ನು ತಲುಪಬಲ್ಲದು. ಇನ್ನು ದಂತಗಳಿಗೆ ಪರ್ವತವನ್ನು ಬಗೆಯುವ ಶಕ್ತಿ ಇದೆ. ಬರಪೀಡಿತ ಭೂಮಿಯಲ್ಲಿ ಮಳೆ ಸುರಿಸಬಲ್ಲ ಐರಾವತವಿದು.

19ನೇ ಶತಮಾನದ ಕೊನೆಯ ಭಾಗದಲ್ಲಿ ಕಾಗದ ಮೇಲೆ ಚಿತ್ರಿತಗೊಂಡಿರುವ ಓಡುತ್ತಿರುವ ಸೂರ್ಯ ಮತ್ತು ಬೆನ್ನಟ್ಟುತ್ತಿರುವ ಚಂದ್ರನ ಕಲಾಕೃತಿಯು ರಾಜಸ್ಥಾನ ಮೂಲದ್ದು. ಸೂರ್ಯ ಬೆಳಕಿನ ಪ್ರಖರತೆಗೆ ಸಾಕ್ಷಿಯಾದರೆ, ಚಂದ್ರ ರಾತ್ರಿಯನ್ನು ವ್ಯಾಖ್ಯಾನಿಸುತ್ತದೆ. ಇವರೆಡೂ ವಿಭಿನ್ನ ಅಸ್ತಿತ್ವಗಳು. ಆದರೆ, ಸಮಯದ ಹೆಣಿಗೆಯನ್ನು ಕಟ್ಟುವಲ್ಲಿ ಸೂರ್ಯ–ಚಂದ್ರರೇ ಪ್ರಮುಖ ಪಾತ್ರಗಳು. ಹಗಲು–ಇರುಳು ಎನ್ನುವುದು ಮನುಷ್ಯನಿಗೆ ಬಂದೊದಗುವ ಕಷ್ಟ–ಸುಖಗಳ ವ್ಯಾಖ್ಯಾನವೂ ಹೌದಲ್ಲವೇ. ಇವುಗಳಲ್ಲಾಗುವ ಏರಿಳಿತದಲ್ಲಿ ಬದುಕಿನ ಸಾರವೂ ಅಡಗಿದೆ ಎಂಬುದನ್ನು ಕಾಗದ ಕಲಾಕೃತಿ ನಾಜೂಕಾಗಿ ತಿಳಿಸುತ್ತದೆ. ಯುದ್ಧ ಸನ್ನದ್ಧನಾದ ಕಾರ್ತಿಕೇಯನಿಗೆ ನವಿಲು ವಾಹನವಾಗಿ ಬಂದು ಗೆಲ್ಲುವಂತೆ ಮಾಡುವುದು, ಹಿತ್ತಾಳೆ ಲೋಹದಲ್ಲಿ ನದಿ ಯಮುನೆಯನ್ನು ಹೆಣ್ಣಾಗಿ ಚಿತ್ರಿಸಿರುವುದನ್ನು ಈ ಪ್ರದರ್ಶನದಲ್ಲಿ ನೋಡಬಹುದು. ಕಾಗೆ, ನವಿಲು, ಮೂಷಿಕ ಹೀಗೆ ನಾನಾ ದೇವರುಗಳ ವಾಹನಗಳು ಇಲ್ಲಿ ತನ್ನದೇ ಕಥೆಯನ್ನು ಹೇಳುತ್ತವೆ.

ಕಲಾವಿದನ ಅನಾಮಿಕತೆಯು ಕಲಾಕೃತಿಗಳಿಗೆ ಕುತೂಹಲದ ಚೌಕಟ್ಟನ್ನು ಒದಗಿಸಿದೆ. ಮಕ್ಕಳು ಸೇರಿದಂತೆ ಕಲಾ ಕುತೂಹಲಿಗರೆಲ್ಲರೂ ಕಲಾಕೃತಿಗಳು ಹೇಳುವ ಒಂದೊಂದು ವಿಶೇಷ ಎನಿಸುವ ಕಥೆಯನ್ನು ಕೇಳಲು ಪ್ರದರ್ಶನಕ್ಕೆ ಭೇಟಿ ನೀಡಬಹುದು.

ಕರ್ನಾಟಕ ಕರಾವಳಿ ಸರ್ಫಿಂಗ್ ಪ್ರಭಾವಳಿ



ಸರ್ಫಿಂಗ್ ಖುಷಿಯಲ್ಲಿ...

1ನೇ ಪುಟದಿಂದ...

ಏನಿದೆ ಕರ್ನಾಟಕದ ಕರಾವಳಿಯಲ್ಲಿ?

ವರ್ಷದ ಬಹುತೇಕ ತಿಂಗಳಲ್ಲಿ ಬೃಹತ್ ಅಲೆಗಳನ್ನು ಹೊತ್ತುತಂದು ಸರ್ಫರ್‌ಗಳಿಗೆ ಹಿತ ನೀಡುವ ಹಾಗೂ ಆಗಾಗ ಚಂಡಮಾರುತ ಸೃಷ್ಟಿಯಾಗುವ, ನೈಸರ್ಗಿಕವಾಗಿ 'ಬೇ'ಗಳು ಮತ್ತು ಬ್ರೇಕ್ಸ್ ಇರುವ ಪೂರ್ವ ಕರಾವಳಿ ಸರ್ಫಿಂಗ್ ಚಟುವಟಿಕೆಯ ನೆಚ್ಚಿನ ತಾಣ ಎಂಬ ಪಟ್ಟವನ್ನು ತನ್ನದಾಗಿಸಿಕೊಂಡಿತ್ತು. ಪಶ್ಚಿಮ ಕರಾವಳಿಯ ಕೇರಳದಲ್ಲೂ ಸ್ಪರ್ಧಾತ್ಮಕ ಸರ್ಫಿಂಗ್‌ಗೆ ಅನುಕೂಲಕರ ವಾತಾವರಣ ಇದೆ. ಆದರೂ ಕರ್ನಾಟಕ ಕರಾವಳಿಯಲ್ಲಿ ಈಚೆಗೆ ಸರ್ಫಿಂಗ್ ಚಟುವಟಿಕೆ ಗರಿಗೆದರಿದೆ. ಇಲ್ಲಿನ 'ಸೌಮ್ಯ' ಅಲೆಗಳು ಮತ್ತು ಸೌಲಭ್ಯಗಳೇ ಇದಕ್ಕೆ ಕಾರಣ ಎನ್ನುತ್ತಾರೆ ಸರ್ಫರ್‌ಗಳು ಮತ್ತು ಸಂಘಟಕರು.

ಪ್ರವಾಸೋದ್ಯಮ ಬೆಳವಣಿಗೆಗೆ ಸರ್ಫಿಂಗ್ ದಿಡ್ಡಿಬಾಗಿಲು. ಆದ್ದರಿಂದ ಸರ್ಕಾರದ ಕಟಾಕ್ಷವೂ ಈ ಕ್ರೀಡೆಯತ್ತ ಹರಿದಿದೆ. ಸಸಿಹಿತ್ಲು ಕಡಲ ಕಿನಾರೆಯ ಅಭಿವೃದ್ಧಿಗಾಗಿ ಎರಡು ಪ್ರತ್ಯೇಕ ಯೋಜನೆಗಳಿಗೆ ಟೆಂಡರ್ ಆಗಿದೆ. ಅದರಲ್ಲಿ ಒಂದು ಯೋಜನೆ ಸರ್ಫಿಂಗ್‌ಗೇ ಮೀಸಲು.

'ಜಲಸಾಹಸ ಕ್ರೀಡೆಗಳ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಯ ಆಶಯ ಪರಿಣಾಮಕಾರಿ ಪರಿಕಲ್ಪನೆ. ಪ್ಯಾಡಲ್ ಫೆಸ್ಟ್ ಮತ್ತು ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಷಿಪ್‌ಗೆ ಎರಡು ವರ್ಷಗಳಿಂದ ತಲಾ ₹ 10 ಲಕ್ಷ ನೀಡಲಾಗಿದೆ. ಸಸಿಹಿತ್ಲುವಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ₹ 6 ಕೋಟಿ ವೆಚ್ಚದ ಯೋಜನೆ ಹಾಕಿಕೊಳ್ಳಲಾಗಿದೆ. ಜೊತೆಯಲ್ಲಿ ₹ 1.5 ಕೋಟಿ ವೆಚ್ಚದಲ್ಲಿ ಸರ್ಫಿಂಗ್‌ಗೆ ಪೂರಕ ಅಭಿವೃದ್ಧಿ ಕೆಲಸಗಳು ನಡೆಯಲಿವೆ. ಈ ಭಾಗದಲ್ಲಿ ಸರ್ಫಿಂಗ್ ಸ್ಕೂಲ್ ಅಥವಾ ಅಕಾಡೆಮಿ ಸ್ಥಾಪನೆಯಾಗುವ ಸಾಧ್ಯತೆಯೂ ಇದೆ' ಎನ್ನುತ್ತಾರೆ ಪ್ರವಾಸೋದ್ಯಮ ಇಲಾಖೆಯ ಪ್ರಭಾರ ಉಪನಿರ್ದೇಶಕ ದಿಲೀಪ್.

ಕಾರ್ಪೊರೇಟ್ ನೆರವು ಬೇಕು

ಕರ್ನಾಟಕದಲ್ಲಿ ಪ್ರವಾಸೋದ್ಯಮ ಇಲಾಖೆ, ಸರ್ಫಿಂಗ್ ಸ್ವಾಮಿ ಫೌಂಡೇಷನ್ ಮತ್ತು ಮಂತ್ರ ಸರ್ಫ್ ಕ್ಲಬ್‌ಗಳು ಸಸಿಹಿತ್ಲುವಿನಲ್ಲಿ ಸರ್ಫಿಂಗ್ ಬೆಳೆಸಲು ಪ್ರಶ್ನಿಸುತ್ತಿವೆ. ಚಾಂಪಿಯನ್‌ಷಿಪ್‌ಗಳನ್ನು ಆಯೋಜಿಸಲು ಕಾರ್ಪೊರೇಟ್ ನೆರವು ಕೂಡ ಲಭಿಸಿದರೆ ಕರಾವಳಿಯಲ್ಲಿ ಈ ಕ್ರೀಡೆ ಇನ್ನಷ್ಟು ಸದ್ದು ಮಾಡಬಲ್ಲದು ಎಂದು ಜಲಕ್ರೀಡೆಗಳ ಚಟುವಟಿಕೆಯಲ್ಲಿ ತೊಡಗಿಸಿಕೊಡಿರುವ ಗೌರವ್ ಹೆಗ್ಡೆ ಅಭಿಪ್ರಾಯ.

'ಪ್ರವಾಸಿಗರಿಗಾಗಿ ಎರಡು–ಮೂರು ದಿನಗಳ ಅಲ್ಪಕಾಲದ ತರಬೇತಿ ಮತ್ತು ಕ್ರೀಡಾಪಟುಗಳನ್ನು ತಯಾರಿ ಮಾಡಲು ದೀರ್ಘಕಾಲದ ತರಬೇತಿ ನೀಡಲಾಗುತ್ತಿದೆ. ಸಸಿಹಿತ್ಲುವಿನಲ್ಲಿ ಸುಮಾರು ಹತ್ತು ಕ್ರೀಡಾಪಟುಗಳು ಈಗಾಗಲೇ ಸಿದ್ಧರಾಗಿದ್ದು ಪಣಂಬೂರಿನಲ್ಲಿ ಎರಡು ವರ್ಷಗಳಲ್ಲಿ ಮೂವತ್ತು ಮಂದಿ ತರಬೇತಿ ಪಡೆದುಕೊಂಡಿದ್ದಾರೆ. ಸಾಧಕರನ್ನು ವಿದೇಶದಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗಳಿಗೂ ಕಳುಹಿಸಲಾಗುತ್ತಿದೆ' ಎಂದರು ಅವರು.



ಸರ್ಫಿಂಗ್ ನಿರತ ಕಮಲಿಮೂರ್ತಿ

ಕ್ರೀಡಾ ಇಲಾಖೆ ವ್ಯಾಪ್ತಿಗೆ?

ಕರ್ನಾಟಕ ಸರ್ಫಿಂಗ್ ಸಂಸ್ಥೆಯನ್ನು ಈಚೆಗೆ ಸ್ಥಾಪಿಸಲಾಗಿದೆ. ಹೀಗಾಗಿ ಈಗ ಸರ್ಫಿಂಗ್‌ಗೆ ಸಾಂಸ್ಥಿಕ ರೂಪ ಸಿಕ್ಕಿದೆ. ಸಂಸ್ಥೆಗೆ ಕ್ರೀಡಾ ಇಲಾಖೆಯಿಂದ ಮಾನ್ಯತೆ ಪಡೆಯುವ ಪ್ರಯತ್ನ ನಡೆಯುತ್ತಿದ್ದು ಅದು ಸಾಧ್ಯವಾದರೆ ಅನುದಾನ, ಶಿಕ್ಷಣ ಮತ್ತು ಉದ್ಯಮದಲ್ಲಿ ಮೀಸಲಾತಿ ಮುಂತಾದ ಸೌಲಭ್ಯಗಳ ಭರವಸೆಯೂ ಚಿಗುರಲಿದೆ. ಅದು ಹೊಸ ತಲೆಮಾರನ್ನು ಈ ಕ್ರೀಡೆಯತ್ತ ಸೆಳೆಯಲಿದೆ.

'ಕರ್ನಾಟಕದಲ್ಲಿ ಹತ್ತಕ್ಕೂ ಹೆಚ್ಚು ಸರ್ಫಿಂಗ್ ಸ್ಕೂಲ್‌ಗಳಿವೆ. ಪ್ರವಾಸೋದ್ಯಮದ ಆಯಾಮವೂ ಇರುವುದರಿಂದ ಈ ಕ್ರೀಡೆಯ ಸಾಧ್ಯತೆಗಳು ಅಪಾರ. ಸರ್ಫಿಂಗ್‌ನಲ್ಲಿ ಸಾಧನೆ ಮಾಡಿದವರಿಗೆ ತರಬೇತಿ ಶಾಲೆಗಳನ್ನು ತೆರೆಯಲು ಮತ್ತು ಜೀವರಕ್ಷ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಲು ವಿಪುಲ ಅವಕಾಶಗಳು ಇವೆ. ದೇಶದಲ್ಲಿ ಈಗ ಪ್ರಮಾಣೀಕೃತ ಜೀವರಕ್ಷಕ ಸಿಬ್ಬಂದಿ ಇರುವುದು ಎಂಬತ್ತು ಮಂದಿ ಮಾತ್ರ. ಸಾಹಸ ಕ್ರೀಡೆಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಜೀವರಕ್ಷಕ ಸಿಬ್ಬಂದಿಯ ಅಗತ್ಯವೂ ಹೆಚ್ಚಾಗಲಿದೆ. ಆರಂಭಿಕ ಕಲಿಕೆಗೆ ಹೆಚ್ಚು ಅನುಕೂಲಕರವಾಗಿರುವ ಸಸಿಹಿತ್ಲುವಿನಂಥ ಪ್ರದೇಶಗಳು ಇರುವುದರಿಂದ ಕರ್ನಾಟಕದ ಸರ್ಫರ್‌ಗಳಿಗೆ ಅವಕಾಶಗಳ ಹೆಬ್ಬಾಗಿಲೇ ತೆರೆದಿದೆ' ಎಂಬುದು ಭಾರತದಲ್ಲಿ ತರಬೇತುದಾರರಿಗೆ ಪ್ರಮಾಣಪತ್ರ ನೀಡಲು ಅಂತರರಾಷ್ಟ್ರೀಯ ಸರ್ಫಿಂಗ್ ಫೆಡರೇಷನ್‌ನಿಂದ ನೇಮಕವಾಗಿರುವ ಶಮಂತ್ ಅನಿಸಿಕೆ.

'ಛಲದಿಂದ ನೀರಿಗಿಳಿಯುವ ಉತ್ತರ ಕರ್ನಾಟಕ ಭಾಗದ ಕ್ರೀಡಾಪಟುಗಳು ಮತ್ತು ಸಹಜವಾಗಿ ಸಮುದ್ರದಲ್ಲಿ ಈಸಿ ಜೈಸಬಲ್ಲ ಕರಾವಳಿಯ ಕ್ರೀಡಾಪಟುಗಳಿಗೆ ಸಸಿಹಿತ್ಲುವಿನಂಥ ಪ್ರದೇಶಗಳು ವರದಾನವಾಗಿವೆ' ಎಂದು ಭಾರತ ಸರ್ಫಿಂಗ್ ಫೆಡರೇಷನ್‌ನ ಜಂಟಿ ಕಾರ್ಯದರ್ಶಿ ಮತ್ತು ಮಂಗಳೂರಿನ ಸರ್ಫಿಂಗ್ ಸ್ವಾಮಿ ಫೌಂಡೇಷನ್ ನಿರ್ದೇಶಕರೂ ಆಗಿರುವ ಶಮಂತ್ ಹೇಳುತ್ತಾರೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನೀರ್ಮಸಣ

ನೀರ್ಮಸಣ (ನಾ). ನೀರು ಶ್ಮಶಾನ

ಮೇಘನಾದನ ಮಾತಿನಲ್ಲಿ ಕುವೆಂಪು ಅವರು 'ನೀರ್ಮಸಣ' ಪದ ಬಳಸಿ, ಅವನ ಸಾಹಸದ ಉದ್ಗಾರವನ್ನು ಹೀಗೆ ಅಭಿವ್ಯಕ್ತಿಸಿದ್ದಾರೆ.

'ಕಡಲ್
ನೀರ್ಮಸಣವಾಗದಿರಲವರಿಗೆ, ಸಮಾಧಿಯಂ
ತನ್ನ ಮಣ್ಣೊಡಲೊಳೀ ಲಂಕೆ ರಚಿಪುದೆ ದಿಟಂ
ಶತ್ರುಗಾತ್ರಕ್ಕೆ!'

ಚಿತ್ತನಾರಾಚ

ಚಿತ್ತನಾರಾಚ (ನಾ). ಚಿತ್ತವೆಂಬ ಬಾಣ

ಶ್ರೀರಾಮಚಂದ್ರನು ಕಡಲಿನ ಎದುರು ಪುಣ್ಯವೇದಿಕೆಯಲ್ಲಿ ಕುಳಿತು 'ಮರಣ ಅಥವಾ ಶರಧಿಯನ್ನು ದಾಟುವುದು' ಎಂಬ ಪ್ರತಿಜ್ಞೆಯನ್ನು ಕೈಗೊಳ್ಳುವನು. ಅವನ ರೌದ್ರವನ್ನು ತಡೆ ಎಂದು ವರುಣನು ವಿಶ್ವಕರ್ಮನಿಗೆ ಹೇಳುವನು. ರುದ್ರಭೀಷಣ ರಾಮನನ್ನು ಬಣ್ಣಿಸುತ್ತ ಕುವೆಂಪು ಅವರು 'ಚಿತ್ತನಾರಾಚ' ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

'ಲೋಕಪ್ರಳಯಕರ ಭಯಂಕರ ಕಾರ್ಯಕ್ಕೆ
ಕೋಪಚಾಪಕೆ ಘೋರ ಚಿತ್ತನಾರಾಚಮಂ
ಸಂಧಾನಗೈವ ವಿಕಟಕ್ರಿಯಾ ನಿಕಟನಂ
ಬಳಿಸಾರ್'

ವಾಗಸಿಪತ್ರ

ವಾಗಸಿಪತ್ರ (ನಾ). ಮಾತಿನ ಕತ್ತಿಯ ಅಲಗು

ಮೈಂದ ಮತ್ತು ದ್ವಿವಿದರು ರಾಘವನ ಅಪೇಕ್ಷೆ ತಿಳಿಸಲು ವಿಭೀಷಣನಲ್ಲಿಗೆ ಬರುವರು. ಮೈಂದನ ನುಡಿಗಳಿಂದ ವಿಭೀಷಣ ಘಾಸಿಗೊಳ್ಳುವನು. ಆಗ ಅವನು ಹೇಳುವ ಮಾತಿನಲ್ಲಿ ಕುವೆಂಪು 'ವಾಗಸಿಪುತ್ರ' ನುಡಿರಚಿಸಿ ಹೀಗೆ ಆಡಿಸಿದ್ದಾರೆ:

'ಕ್ರೂರ ವಾಗಸಿಪತ್ರದಿಂದೆನ್ನ ಹೃದಯಮಂ
ಸೀಳುತಿರ್ಪ್ಪಯ್.'

ಮೊದಲ ಓದು


ವೈಚಾರಿಕ ಚಿಂತನೆಯ ಬರಹಗಳು

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣ ಮತ್ತು ಲೇಖನಗಳ ಸಂಗ್ರಹವಿದು. ಈ ಲೇಖನಗಳ ಮಾಲಿಕೆಯ 'ಊರ ಮಧ್ಯದ ಕಣ್ಣ ಕಾಡಿನೊಳಗೆ' ಎಂಬ ಹೆಸರಿನ ರೂಪಕ ಲೇಖಕರ ಕಾವ್ಯ ಗುಣವನ್ನು ಸೂಚಿಸುವಂತಿದೆ. ಇಲ್ಲಿ ಅವರು ವರ್ತಮಾನದ ಘಟನೆಗಳನ್ನು ವೈಚಾರಿಕ ಚಿಂತನೆಯಲ್ಲಿ ವಿಶ್ಲೇಷಿಸಿದ್ದಾರೆ. ಹಾವೇರಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಸ್ಲಿಂ ಲೇಖಕರನ್ನು ಕಡೆಗಾಣಿಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಈ ನಡೆಯನ್ನು ವಿರೋಧಿಸಿ 'ಜನಸಾಹಿತ್ಯ ಸಮ್ಮೇಳನ'ವನ್ನು ಪ್ರಗತಿಪರ ಲೇಖಕರು ಮತ್ತು ಸಂಘಟನೆಗಳ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಮಾಡಲಾಗಿತ್ತು. ಆ ಸಮ್ಮೇಳನದ ಉದ್ಘಾಟನಾ ಭಾಷಣವನ್ನು ಲೇಖಕ ಮಾಡಿದ್ದರು. ಅದು ಈ ಸಂಕಲನದ 'ಬಲ–ಪ್ರಭುತ್ವ ಮತ್ತು ಸಾಂಸ್ಕೃತಿಕ ಹಿಂಚಲನೆ' ಎಂಬ ಮೊದಲ ಲೇಖನ.

ಇದರಲ್ಲಿ ಲೇಖಕ, ಧಾರ್ಮಿಕ ಮತ್ತು ಜಾತಿ ಕಾರಣಕ್ಕಾಗಿ ನಡೆಯುವ ಭೇದಭಾವವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದ್ದಾರೆ. ಇವತ್ತು ಬಳಕೆಯಲ್ಲಿರುವ 'ಹಿಂದೂ' ಎನ್ನುವ ಪದ ಸ್ವಾಮಿ ವಿವೇಕಾನಂದ ಮತ್ತು ಗಾಂಧಿ ಗ್ರಹಿಸಿದ ಪದವಲ್ಲ, ಅದನ್ನು ನಾವು ಸೂಕ್ಷ್ಮವಾಗಿ ನೋಡಬೇಕು ಎಂದು ಪ್ರತಿಪಾದಿಸುತ್ತಾರೆ. ಪರ್ಷಿಯನ್ ಮೂಲದ ಹಿಂದಿ, ಹಿಂದೂ, ಹಿಂದೂಸ್ಥಾನ್ ಎಂಬ ಪದಗಳನ್ನು ಒಂದು ರಾಷ್ಟ್ರ ಎನ್ನುವ ಕಲ್ಪನೆಯಲ್ಲಿ ಒಂದು ಭಾಷೆ–ಒಂದು ಧರ್ಮ ಎಂದು ತೇಲಿ ಬಿಡಲಾಗುತ್ತಿದೆ. ಇದು ಭಾರತದ ವೈವಿಧ್ಯಕ್ಕೆ ಮಾರಕ ಎನ್ನುತ್ತಾರೆ. ಶಾಲಾ ಪಠ್ಯದಲ್ಲಿಯೂ ಇತಿಹಾಸವನ್ನು ತಿರುಚಲಾಗಿದೆ. ಬೌದ್ಧ, ಜೈನ ಧರ್ಮಗಳ ಉಗಮ ವಿಕಾಸವನ್ನು ಮಕ್ಕಳಿಗೆ ಹೇಳಬೇಕು ಅಲ್ಲವೇ ಎಂದು ಪ್ರಶ್ನಿಸುವ ಅವರು, ಬಸವಣ್ಣನವರ ವೈದಿಕ ಮೂಲದ ಮೌಢ್ಯ ಮತ್ತು ಜಾತಿ ಪದ್ಧತಿಯ ವಿರೋಧವನ್ನೂ ಪ್ರಸ್ತಾಪಿಸುತ್ತಾರೆ.

ನಟ ಚೇತನ ಅಹಿಂಸಾ ಅವರ 'ಬ್ರಾಹ್ಮಣ್ಯ' ಹೇಳಿಕೆ ಹುಟ್ಟುಹಾಕಿದ ವಿವಾದಕ್ಕೆ ಸಂಬಂಧಿಸಿದಂತೆ 'ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ' ಲೇಖನ ಪ್ರತಿಕ್ರಿಯಿಸುತ್ತದೆ. ಜಾತಿ ಆಧಾರಿತ ತಾರತಮ್ಯವನ್ನು ಉಳಿಸಿಕೊಳ್ಳಲು ಬ್ರಾಹ್ಮಣ್ಯ ಯತ್ನಿಸುತ್ತದೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ದಂಪತಿಯನ್ನು ಪುರಿಯ ಜಗನ್ನಾಥ ದೇವಸ್ಥಾನದ ಒಳಗೆ ಬಿಟ್ಟುಕೊಳ್ಳಲಿಲ್ಲ. ಈ ಲೋಪವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಿತ್ತು ಎಂಬ ಆಶಯವನ್ನು ಚಿನ್ನಸ್ವಾಮಿ ಈ ಲೇಖನದಲ್ಲಿ ವ್ಯಕ್ತಪಡಿಸುತ್ತಾರೆ.


'ಬಣ ಮತ್ತು ಪಂಗಡಗಳಾಚೆ ದಲಿತ ಜಾತಿಗಳ ಐಕ್ಯತೆ ಸಾಧ್ಯವೆ?', 'ಧರ್ಮಾಂತರ ಅನಿವಾರ್ಯ ಏಕೆ', 'ಶಾಲೆಯಲ್ಲಿ ಅಸ್ಪೃಶ್ಯತೆ–ಏಟಿಗೆ ಎದುರೇಟು', 'ಬೌದ್ಧಧರ್ಮ ಮಾನವೋಪಕಾರಿ' ಲೇಖನಗಳು ಸೇರಿದಂತೆ 18 ಲೇಖನಗಳನ್ನು ಈ ಕೃತಿ ಒಳಗೊಂಡಿದೆ.



ಊರ ಮಧ್ಯದ ಕಣ್ಣ ಕಾಡಿನೊಳಗೆ
ಲೇ: ಮೂಡ್ನಾಕೂಡು ಚಿನ್ನಸ್ವಾಮಿ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080–22161900

ಪುಟ: 104 ₹130

ತಾಯ್ತನದ ಅನುಭವ ಕಥನ



ಮಿಲೇನಿಯಲ್ ಅಮ್ಮ
ಲೇ: ಮೇಘನಾ ಸುಧೀಂದ್ರ
ಪ್ರ: ಹರಿವು ಬುಕ್ಸ್
ಸಂ: 080888 22171

ತಾಯ್ತನ ಎಂಬ ಪದವೇ ಬೆಚ್ಚನೆಯ ಭಾವ ಮೂಡಿಸುವಂಥದ್ದು. ಹೆಣ್ಣು ಮಗಳಾಗಿ, ಮಡದಿಯಾಗಿ, ತಾಯಿಯಾಗಿ... ಹೀಗೆ ಜೀವನದ ಹಲವು ಘಟ್ಟಗಳನ್ನು ದಾಟಿ ಬರುವ ಪರಿಯೇ ಕೌತುಕದ್ದು. ಈ ನಿಟ್ಟಿನಲ್ಲಿ 'ಮಿಲೇನಿಯಲ್ ಅಮ್ಮ' ಕೌತುಕದ ಕಥಾನಕ ಎನ್ನಬಹುದು.

ಅವಳಿ ಮಕ್ಕಳು ಲೇಖಕಿಯ ಹೊಟ್ಟೆಯಲ್ಲಿದ್ದ ಕ್ಷಣದಿಂದ ಈಗಿನ ತನಕ ಬಹಳಷ್ಟು ಪಾಠಗಳನ್ನು, ಖುಷಿಯನ್ನು, ಅಗಾಧವಾದ ಭಾವನೆಗಳನ್ನು ಅನುಭವಿಸಲು ಕಾರಣರಾಗಿದ್ದಾರೆ. ಮಕ್ಕಳು ಗರ್ಭದಲ್ಲಿದ್ದಾಗಿನಿಂದ ಹಿಡಿದು ಅವು ಹುಟ್ಟಿ ಹೊರಬರುವ ತನಕದ ಭಾವನೆ, ಮಾನಸಿಕ ತುಮುಲ, ಮೇಲಾಗಿ ಗೊಂದಲಗಳನ್ನು ಈಗಿನ ತಲೆಮಾರಿನ ಹೆಣ್ಣುಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ದಾಖಲಿಸುವ ಪ್ರಯತ್ನ ಈ ಹೊತ್ತಗೆಯಲ್ಲಿ ನವಿರಾಗಿ ನಿರೂಪಿತವಾಗಿದೆ. ಈಗಿನ ಕಾಲದ ತಾಯಂದಿರ ಸವಾಲು, ಪ್ರಶ್ನೆ, ತವಕ ತಲ್ಲಣ, ಸೂಕ್ಷ್ಮ ಸಂವೇದನೆ, ಖುಷಿ, ಪಟ್ಟಪಾಡು, ಅನುಭವಿಸಿದ ದುಃಖ ಎಲ್ಲವನ್ನೂ ಇಲ್ಲಿ ದಾಖಲಿಸಲಾಗಿದೆ. ಇದು ಹೊಸ ತಲೆಮಾರಿನ ತಾಯಂದಿರ ತಾಯ್ತನದ ಕಥಾ ಹಂದರ.

ಈ ಹೊತ್ತಗೆಯಲ್ಲಿ ಒಟ್ಟು ಹದಿನಾರು ಅಧ್ಯಾಯಗಳಿವೆ. ಗರ್ಭಿಣಿ ಎಂಬ ಸಮಾಚಾರ ತಿಳಿದಾಗಿನಿಂದ ಮಕ್ಕಳು ಹುಟ್ಟಿ ಬೆಳೆಯುವವರೆಗಿನ ಪಯಣವನ್ನು ರೋಚಕವಾಗಿ ಕಟ್ಟಿಕೊಡಲಾಗಿದೆ. 'ಕನ್‌ಸೀವ್' ಆಗಿರುವುದು 'ಕನ್‌ಫರ್ಮ್' ಮಾಡಿಕೊಳ್ಳಲು ಮಾಡುವ ಸ್ವಯಂ ಪರೀಕ್ಷೆ ಬಗ್ಗೆ 'ಪರೀಕ್ಷೆ ಒತ್ತಡ' ಅಧ್ಯಾಯದಲ್ಲಿ ವಿವರಿಸಿದ್ದು, 'ಎರಡು ಪಿಂಕ್ ಲೈನುಗಳು ಗಾಢವಾಗಿ ಕಂಡ ಮೇಲೆ ಡಬಲ್ ಶ್ಯೂರ್ ಆಗಬೇಕು' ಎಂಬ ವಾಕ್ಯ ಗರ್ಭಿಣಿ ಎಂಬುದನ್ನು ಖಚಿತಪಡಿಸಲು ಮಾಡುವಂಥದ್ದಾಗಿದ್ದು, ಆರಂಭವೇ ಕೌತುಕ ಸೃಷ್ಟಿಸುತ್ತದೆ. ಹೀಗೆ ತಾಯ್ತನದ ಎಲ್ಲ ಆಯಾಮಗಳನ್ನು, ಒಳಹೊರಗನ್ನು ಕೂಲಂಕಷವಾಗಿ, ವಿಸ್ತೃತವಾಗಿ ವಿವರಿಸಿದ್ದು ಲೇಖಕಿಯ ಹೆಚ್ಚುಗಾರಿಕೆ ಎನ್ನಬಹುದು.

ಈ ಪುಸ್ತಕದಲ್ಲಿ ಲೇಖಕಿ ತನ್ನ ಸ್ವಾನುಭವವನ್ನು ಬರೆದಿರುವುದಾದರೂ ಇದು ಸಾರ್ವತ್ರಿಕವೂ ಆಗಿರುವುದರಿಂದ ಈ ಪುಸ್ತಕದ ಮೌಲಿಕತೆ ಹೆಚ್ಚಿದೆ.

ಪುಟ: 135 ₹180

ದೇಶ ಸುತ್ತಿ, ಕೋಶ ರಚಿಸಿದರು

ದೇಶ ಸುತ್ತು, ಕೋಶ ಓದು ಎಂಬ ಗಾದೆ ಮಾತಿನಂತೆ ದೇಶ ಸುತ್ತಿ ಅದರ ಮಾಹಿತಿಯ ಕೋಶವನ್ನು ಶ್ರೀನಿವಾಸ ಎಂ.ಜಿ. ಪಾಣಿಭಾತೆ ರಚಿಸಿದ್ದಾರೆ.

'ಸ್ವಂತ ಕಾರಿನಲ್ಲಿ, ಬೆಂಗಳೂರಿನಿಂದ ಲಂಡನ್‌ಗೆ– ಒಂದು ರೋಚಕ ಪ್ರವಾಸಕಥನ' ಎಂಬ ಈ ಕೃತಿಯಲ್ಲಿ ಲೇಖಕ ಶ್ರೀನಿವಾಸ ಮತ್ತು ಸವಿತಾ ಅವರು ತಮ್ಮ ಕಾರಿನಲ್ಲಿ 75 ದಿನಗಳ ಕಾಲ 19,354 ಕಿ.ಮೀ ಕ್ರಮಿಸಿ 20 ದೇಶಗಳನ್ನು ಸುತ್ತಾಡಿದ ಪ್ರವಾಸದ ಅನುಭವವನ್ನು ದಾಖಲಿಸಿದ್ದಾರೆ.

ಭೂ ಮಾರ್ಗದ ಮೂಲಕ ಲಂಡನ್‌ಗೆ ಪ್ರಯಾಣಿಸುವುದು ಹಲವರ ಕನಸು. ಈ ಪ್ರಯತ್ನಕ್ಕೆ ಕೈಹಾಕುವವರು ವಿರಳ. 20 ದೇಶಗಳ ಅನುಮತಿ ಪಡೆಯುವ ಹಾಗೂ ವಾಹನ ನಿರ್ವಹಣೆಯ ಸವಾಲು, ಪರಿಚಯವಿಲ್ಲದ ಆಯಾ ರಾಷ್ಟ್ರಗಳ ರಸ್ತೆಗಳಲ್ಲಿ ಸಂಚಾರಕ್ಕೆ ಹಿಂಜರಿಯುವವರೇ ಹೆಚ್ಚು. ಅಂಥವರಿಗೆ ಕೈಪಿಡಿಯಾಗುವ ಲಕ್ಷಣವಿರುವ ಈ ಕೃತಿಯನ್ನು ಲೇಖಕ ರಚಿಸಿದ್ದಾರೆ.

ಪ್ರವಾಸದುದ್ದಕ್ಕೂ ತಮ್ಮ ರಸ್ತೆ ಪಯಣದ ಅನುಭವದ ಜತೆಗೆ, ಅಲ್ಲಲ್ಲಿ ತಾವು ಕಂಡ ಹಾಗೂ ಭೇಟಿ ನೀಡಿದ ರಮಣೀಯ ದೃಶ್ಯಗಳನ್ನೂ ಇಲ್ಲಿ ದಾಖಲಿಸಿದ್ದಾರೆ. ಪ್ರಾಚೀನ ರೇಷ್ಮೆ ಮಾರ್ಗದ ಇತಿಹಾಸ ಮತ್ತು ಆಯಾ ಪ್ರದೇಶಗಳ ಅಂದಿನ ಪ್ರಾಮುಖ್ಯತೆ ಕುರಿತೂ ಲೇಖಕ ಇಲ್ಲಿ ಪ್ರಸ್ತಾಪಿಸಿದ್ದಾರೆ.

ಬೆಂಗಳೂರಿನಿಂದ ಲಂಡನ್‌ವರೆಗೂ ದಾಟಿದ ರಾಷ್ಟ್ರಗಳು ಯಾವುವು? ಅಲ್ಲಿ ತಾವು ಕಂಡ ವಿಶೇಷಗಳಾವುವು? ಅಲ್ಲಲಿನ ರೋಚಕ ಅನುಭವಗಳ ಗುಚ್ಛ ಈ ಕೃತಿ.



ಸ್ವಂತ ಕಾರಿನಲ್ಲಿ, ಬೆಂಗಳೂರಿನಿಂದ ಲಂಡನ್‌ಗೆ
ಲೇ: ಶ್ರೀನಿವಾಸ ಎಂ.ಜಿ. ಪಾಣಿಭಾತೆ
ಪ್ರ: ಪ್ರಭಾತೆ ಪ್ರಕಾಶನ
ಸಂ: 98804 24780


ಪುಟ: 360 ₹380

ವಾಲ್‌ಪರೈ ಹಾದಿಯಲ್ಲಿ ಕಂಡ ಚಿತ್ರಗಳು



ಬೈಕ್ ಸವಾರಿಗೆ ಹೇಳಿಮಾಡಿಸಿದಂತಿದೆ ಅಥಿರಪಳ್ಳಿ–ವಾಲ್‌ಪರೈ ನಡುವಿನ ಪ್ರಯಾಣ. ಜಲಾಶಯಗಳ ಹಿನ್ನೀರು, ಚಹಾ ತೋಟಗಳನ್ನು ಸೀಳಿಕೊಂಡು ಸಾಗುವ ರಸ್ತೆ, ರಮಣೀಯವಾದ ಪ್ರಕೃತಿ ಮನಸ್ಸಿಗೆ ಮುದ ನೀಡುತ್ತವೆ. ವಿಸ್ಮಯಲೋಕವೊಂದಕ್ಕೆ ಹೋದಂತಹ ಅನುಭವವಾಗುತ್ತದೆ.

ಅಥಿರಪ್ಪಳ್ಳಿಯಿಂದ ವಾಲ್‌ಪರೈಗೆ ಹೋಗುವ ದಾರಿಯಲ್ಲಿ ಕಂಡ ರಮಣೀಯ ದೃಶ್ಯ



ಅಥಿರಪಳ್ಳಿ ಜಲಪಾತದ ದೃಶ್ಯ

ಪ್ರವಾಸ

• ಹರ್ಷಿತ್ ಬಿ.

ಬದುಕಿನ ಆಫ್-ರೋಡ್ (ಕಲ್ಲು-ಮಣ್ಣು ರಸ್ತೆ) ನಲ್ಲಿ ಸಿಲುಕಿಕೊಂಡಿದ್ದ ಗೆಳೆಯನಿಗೆ, ಯಾರೋ ಶನಿವಾರದಂದು ಗುರುವಾಯೂರುವಿನ ಶ್ರೀಕೃಷ್ಣನ ದರ್ಶನ ಪಡೆದರೆ, ಬಾಳ ಹಾದಿ ಸುಗಮವಾಗುವುದೆಂದು ಸಲಹೆ ಕೊಟ್ಟರಂತೆ. ಆಗಷ್ಟೇ ಹೊಸ ಆಫ್-ರೋಡ್ ಬೈಕ್ ಖರೀದಿಸಿದ್ದ ಆತ, ಅದರಲ್ಲಿ ಗುರುವಾಯೂರುವಿಗೆ ಹೋಗಿಬರೋಣವೆಂದು ನನ್ನನ್ನು ಕರೆದ. ದೇವರ ಬಗ್ಗೆ ನಂಬಿಕೆ ಇರದ ನಾನು, ಅವನೊಂದಿಗೆ ಹೊರಡಲು ಸಿದ್ಧನಾದೆ. ಕಾರಣವಿಷ್ಟೇ, ಗುರುವಾಯೂರುವಿನ ಜೊತೆಗೆ ಪದವಿ ಪೂರ್ವ ಹಂತದಲ್ಲಿ ನನ್ನ ಕುತೂಹಲ ಕೆರಳಿಸಿದ್ದ ಕೃಪಾಕರ ಸೇನಾನಿ ಹಾಗೂ ಕೆ. ಪುಟ್ಟಸ್ವಾಮಿ ಅವರ, ‘ವಾಲ್‌ಪರೈ: ಅಭಿವೃದ್ಧಿ ತಂದ ದುರಂತ’ ಎಂಬ ಗದ್ಯದಲ್ಲಿ ಬರುವ ವಾಲ್‌ಪರೈ ಅರಣ್ಯದ ಚಿತ್ರಣ ಹಾಗೂ ‘ಅಥಿರಪಳ್ಳಿ-ವಾಲ್‌ಪರೈ’ ನಡುವಿನ ರಸ್ತೆ ಮಾರ್ಗವನ್ನು ಬೈಕ್‌ನಲ್ಲಿ ಸುತ್ತಬೇಕೆಂಬ ಆಸೆ.

ಯೋಜನೆಯಂತೆ ಒಂದು ಮುಂಜಾನೆ 5.30ಕ್ಕೆ ಮೈಸೂರನ್ನು ಬಿಟ್ಟು ಬಂಡೀಪುರ-ಮುದುಮಲೈ-ಗೂಡಲೂರು ಮಾರ್ಗವಾಗಿ ಸಾಗಿ ಗುರುವಾಯೂರು ತಲುಪುವಷ್ಟರಲ್ಲಿ ಗಂಟೆ ಹನ್ನೆರಡಾಗಿತ್ತು. ಹಾಗೆಯೇ ಅಲ್ಲಿಂದ ಮೂರು ಕಿಲೋಮೀಟರ್ ದೂರದಲ್ಲಿ ದೇವಸ್ಥಾನದ ಆನೆಗಳ ಸಂರಕ್ಷಿತ ಪ್ರದೇಶವಾದ ‘ಆನೆಕೊಟ್ಟ’ಗೆ ಭೇಟಿ ನೀಡಿ ನಮ್ಮ ಯೋಜನೆಯ ಮೊದಲ ಹಂತವನ್ನು ಮುಗಿಸಿದೆವು.

ಪೌರಾಣಿಕವಾಗಿ ಇಲ್ಲಿನ ಕೃಷ್ಣನ ವಿಗ್ರಹವನ್ನು ಮುಳುಗಿಹೋಗಿದ್ದ ದ್ವಾರಕೆಯಿಂದ ದೇವಗುರು ಬೃಹಸ್ಪತಿ ಹಾಗೂ ವಾಯುದೇವರು ತಂದು ಪ್ರತಿಷ್ಠಾಪಿಸಿದರು ಎಂಬ ದಂತಕಥೆಯಿದೆ. ಆದಕಾರಣ ಈ ಸ್ಥಳಕ್ಕೆ ಗುರುವಾಯೂರು ಎಂದು ಹೆಸರು ಬಂದಿದೆ ಎನ್ನಲಾಗುತ್ತದೆ. ಕೇವಲ ಹಿಂದೂ ಭಕ್ತರಿಗೆ ಮಾತ್ರ ಇಲ್ಲಿ ಪ್ರವೇಶವಿದ್ದು, ಕೆಲ ದಿನಗಳ ಹಿಂದೆಯಷ್ಟೇ ಹಿಂದೂಯೇತರ ಮಹಿಳಾ ಯೂಟ್ಯೂಬರ್ ಒಬ್ಬರು ದೇಗುಲ ಪ್ರವೇಶಿಸಿದ ಕಾರಣ ದೇವಸ್ಥಾನದ ಆವರಣವನ್ನು ಶುದ್ಧಗೊಳಿಸಿದ ಸುದ್ದಿ ವಿವಿಧ ಮಾಧ್ಯಮಗಳಲ್ಲಿ ಹರಿದಾಡಿತ್ತು.

ವಿಶೇಷವೆಂದರೆ, ಐತಿಹಾಸಿಕ ವೈಕೋಂ ಸತ್ಯಾಗ್ರಹ ನಡೆದು ಇಂದಿಗೆ ಸರಿಯಾಗಿ ನೂರು ವರ್ಷ ಸಂದಿದೆ. ಅಸ್ಪೃಶ್ಯತೆ ಹಾಗೂ ಜಾತಿ ತಾರತಮ್ಯದ ವಿರುದ್ಧ ಭಾರತದಲ್ಲಿ ನಡೆದ ಅತಿದೊಡ್ಡ ಹೋರಾಟಗಳಲ್ಲಿ ಒಂದು. ಹಾಗಾಗಿ ಆ ಚಳವಳಿಯ ಮುಂದಾಳುಗಳಾದ ಕೆ.ಕೇಲಪ್ಪನ್, ಮಾಧವನ್, ಪೆರಿಯಾರ್, ನಾರಾಯಣಗುರು ಹಾಗೂ ಮಹಾತ್ಮರನ್ನು ಮನದಲ್ಲೇ ನೆನೆದು ನಮ್ಮ ಪ್ರಯಾಣ ಮುಂದುವರೆಸಿದೆವು. ರಾತ್ರಿ ಚಾಲಕುಡಿ ಪಟ್ಟಣದ ಮುಂಚೆಯೇ ಕಾಯ್ದಿರಿಸಿದ ವಸತಿಗೃಹಕ್ಕೆ ಬಂದು ತಂಗಿದೆವು.



ಚಹಾತೋಟಗಳನ್ನು ಸೀಳಿ ಸಾಗುವ ರಸ್ತೆ...

ಮರುದಿನ ಮುಂಜಾನೆ ಸುಮಾರು 8.30ರ ಸಮಯ. ಬೈಕನ್ನು ಒಂದೆಡೆ ನಿಲ್ಲಿಸಿ, ಒಂದಷ್ಟು ದೂರ ಕಾಲ್ನಡಿಗೆಯಲ್ಲಿ ನಡೆಯುವಷ್ಟರಲ್ಲೇ ನಮ್ಮ ಕಣ್ಣಿನ ರೆಪ್ಪೆಗಳು ಅರಳಿದವು. ಹಾಲಿನ ಹೊಳೆಯೊಂದು ಕೊಂಚವೂ ಅಳುಕದೆ ಆಳಕ್ಕೆ ಬೀಳುವಂತೆ, ಅಥಿರಪಳ್ಳಿ ಜಲಪಾತದ ದೃಶ್ಯವು ನಮ್ಮನ್ನು ಪುಳಕಿತರನ್ನಾಗಿಸಿತು. ‘ಬಾಹುಬಲಿ’ ಚಿತ್ರದಲ್ಲಿ ವೀಕ್ಷಕರನ್ನು ಬಾಯಿ ತೆರೆದು ನೋಡುವಂತೆ ಮಾಡಿದ್ದ ಬೃಹತ್ ಜಲಪಾತವಿದು. ‘ಚಾಲಕುಡಿ’ ನದಿಯಿಂದಾದ ಈ ಜಲಪಾತವು ಕೇರಳದಲ್ಲೇ ಅತಿದೊಡ್ಡದು. ಕೆಲಕಾಲ ಅದರ ತೀರದಲ್ಲೇ ನಿಂತು ಆ ಸೊಬಗನ್ನು ಸವಿದು ಮುಂದುವರಿದೆವು.

ಮಲಕ್ಕಪ್ಪಾರ ಅರಣ್ಯ ಚೆಕ್‌ಪೋಸ್ಟ್‌ನಲ್ಲಿ ಪ್ರವೇಶ ಪಡೆದು ಕೇರಳವನ್ನು ತಮಿಳುನಾಡಿಗೆ ಸಂಪರ್ಕಿಸುವ ಅಥಿರಪ್ಪಳ್ಳಿ-ವಾಲ್‌ಪರೈ ಮಾರ್ಗವನ್ನು ಹಿಡಿದು ಹೊರಟೆವು. ನಂತರ ಕಂಡಿದ್ದೆಲ್ಲಾ ಅಪ್ರತಿಮ ಚಿತ್ರಕಾರನೊಬ್ಬ ತನ್ನ ಬಿಡುವಿನ ವೇಳೆಯಲ್ಲಿ ನಿರ್ಮಲ ಚಿತ್ತದಿಂದ ಚಿತ್ರಿಸಿದ ವಿಸ್ಮಯ ಲೋಕ ಎಂಬಂತೆ ಕಾಣತೊಡಗಿತ್ತು. ಆನೆಗಳ ದಾಳಿಗೆ ಹೆಸರುವಾಸಿಯಾದ ಈ ಮಾರ್ಗವು, ನಮ್ಮ ಮನದಾಳದ ಅಳುಕನ್ನು ತನ್ನ ಚಿತ್ತಾರದಿಂದ ಮರೆಸುತ್ತಾ ಶೋಲಾಯರ್ ಜಲಾಶಯದ ಬಳಿ ಕರೆತಂದು ನಿಲ್ಲಿಸಿತು.

ಸುಮಾರು 216 ಅಡಿಗಳಷ್ಟು ಎತ್ತರವಿರುವ ಈ ಜಲಾಶಯವು, ಸುತ್ತಲೂ ಬೆಟ್ಟಗುಡ್ಡಗಳನ್ನು ಸವರಿ ಬೆಳೆಸಿದ ಚಹಾ ಗಿಡಗಳಿಂದ ಆವರಿಸಲ್ಪಟ್ಟಿದೆ. ಹಾಗೆಯೇ ಅದರ ಹಿನ್ನೀರಿನ ಪಕ್ಕದಲ್ಲೇ ಹಾದುಹೋಗುವ ರಸ್ತೆಯಿಂದ ಸಾಗುವಾಗ ಸಿಗುವ ಅದರ ವಿಹಂಗಮ ನೋಟವನ್ನು ಕಂಗಳಿಂದ ಸೆರೆಹಿಡಿಯುವಷ್ಟರಲ್ಲೇ, ನಮ್ಮ ಹೃದಯದ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಾ ಸಾಗುತ್ತದೆ.

ಹಾಗೆಯೇ ಸುಮಾರು 20 ಕಿಲೋಮೀಟರ್‌ವರೆಗೂ ಚಹಾ ತೋಟಗನ್ನು ಸೀಳಿದ ರಸ್ತೆಯಲ್ಲಿ ಸಾಗಿದ ನಮಗೆ ವಾಲ್‌ಪರೈ ಸಿಕ್ಕಿತು. 19ನೇ ಶತಮಾನದಲ್ಲಿ ಮಾರ್ಷ್ ಕಂಡ ವಾಲ್‌ಪರೈನ ದಟ್ಟಾರಣ್ಯ, 20ನೇ ಶತಮಾನದಲ್ಲಿ ಕೃಪಾಕರ ಸೇನಾನಿಯವರು ಕಂಡಂತ ಚಹಾ ತೋಟ ಹಾಗೂ 21ನೇ ಶತಮಾನದಲ್ಲಿ ನಾವು ಕಾಣುತ್ತಿರುವ ಜನನಿಬಿಡ ಪಟ್ಟಣವಾದ ವಾಲ್‌ಪರೈಯು ತೀರಾ ಬದಲಾಗಿದೆ. ಪ್ರಕೃತಿಯು ಮಾನವನ ಹಸ್ತಕ್ಷೇಪದಿಂದ ತನ್ನ ಅರಣ್ಯ ಸಂಸ್ಕೃತಿಯ ಎಲ್ಲಾ ಲಕ್ಷಣಗಳನ್ನೂ ಕಳಚಿಕೊಂಡು ಸುಸ್ಥಿರತೆಯಿಂದ ಅಸ್ಥಿರತೆಯೆಡೆಗೆ ಸಾಗುತ್ತಿದ್ದ ದೃಶ್ಯ ಕಣ್ಣ ಮುಂದಿತ್ತು.

ಭಾರವಾದ ಹೃದಯದಲ್ಲಿ ಈ ಬದಲಾವಣೆಯನ್ನು ಸಹಿಸಿಕೊಂಡು, ಅಲ್ಲಿಯೇ ಸುತ್ತಮುತ್ತಲಿನ ಕೂಲಂಗಲ್ ನದಿ, ಕರುಮಲೈ ಚರ್ಚ್‌ಗಳಿಗೆ ಭೇಟಿ ನೀಡಿ ಮುಂದೆ ನಡೆದೆವು. ವಾಲ್‌ಪರೈಯಿಂದ ಪೊಲ್ಲಾಚಿ ನಡುವಿನ ಮಾರ್ಗವು 40 ಹೇರ್-ಪಿನ್ ತಿರುವುಗಳಿಂದ ಕೂಡಿದ ಅಂಕುಡೊಂಕಾದ ಹಾದಿ. ಬೈಕ್ ಸವಾರರಿಗೆ ಹೆಚ್ಚು ಮಜಾ ನೀಡುವ ಈ ಹಾದಿಯ ಮಧ್ಯದಲ್ಲಿ ಕಾಣುವ ಆಲಿಯರ್ ಜಲಾಶಯದ ದೃಶ್ಯವು, ನೋಡುಗರ ಮನಸ್ಸನ್ನು ರಂಜಿಸುತ್ತದೆ. ಘಟ್ಟ ಇಳಿದ ನಂತರ ಆಲಿಯರ್ ಜಲಾಶಯಕ್ಕೆ ಭೇಟಿ ನೀಡಿ ಸತ್ಯಮಂಗಳ ಮಾರ್ಗವಾಗಿ ಮೈಸೂರು ಸೇರುವಷ್ಟರಲ್ಲಿ ಗಂಟೆ ರಾತ್ರಿ ಹತ್ತಾಗಿತ್ತು. ❖




ಮರದ ಮೇಲೆ ನಿರ್ಮಾಣ ಮಾಡಿರುವ ಕಾವಲು ಮನೆ

ಕಾಡಂಚಿನ ಮಾಳಗಳು

• ಜಿ.ಎಂ.ಬೊಮ್ನಳ್ಳಿ

‘ಕಾಡಂಚಲಿ ಹೊಲವ ಮಾಡಿ ಕಾಡಿನ ಪ್ರಾಣಿಪಕ್ಷಿಗಳಿಗಂಜಿದೊಡೆ ಎಂತಯ್ಯಾ..’ ಎನ್ನುವಂತಿವೆ ಇಲ್ಲಿನ ಕಾವಲು ಮನೆಗಳು. ಬೆಳೆ ಬೆಳೆಯಲು, ಬೆಳೆದ ಬೆಳೆ ಕಾಪಾಡಿಕೊಳ್ಳಲು ರೈತರು ಪಡುವ ಕಷ್ಟ, ಸಾಹಸ ಅಷ್ಟಿಷ್ಟಲ್ಲ. ಅಂಥವುಗಳ ಸಾಲಿಗೆ ಈ ಮರದ ಮೇಲಿನ ಕಾವಲು ಮನೆಗಳೂ ಸೇರುತ್ತವೆ. ಸ್ಥಳೀಯ ಭಾಷೆಯಲ್ಲಿ ಇಲ್ಲಿಯ ಜನರು ‘ಮಾಳ’ ಎಂದೇ ಕರೆಯುವ ಇಂತಹ ಕಾವಲು ಮನೆಗಳನ್ನು ನೆಲ ಮಟ್ಟದಿಂದ ಸಾಕಷ್ಟು ಎತ್ತರದಲ್ಲಿ, ಕೆಲವೊಮ್ಮೆ ಮರಗಳ ಮೇಲೆಯೂ ರೈತರು ಕಟ್ಟಿಕೊಂಡಿರುವುದನ್ನು ನೋಡುತ್ತೇವೆ. ಭಯಬೀಳಿಸುವ ಇಂತಹ ಮಾಳಗಳನ್ನು ನೋಡುವಾಗ ‘ರೈತನೇ, ನೀ ಏನಾದರೂ ಮಾಡು, ಆದರೆ ಧೈರ್ಯ ಮಾತ್ರ ಕಳೆದುಕೊಳ್ಳದಿರು’ ಎಂದು ಹಾರೈಸೋಣ ಎನಿಸಿಬಿಡುತ್ತದೆ. ಬೆಳೆದ ಬೆಳೆಯನ್ನು ಕಾಡುಪ್ರಾಣಿ, ಪಕ್ಷಿಗಳಿಂದ ಕಾಪಾಡಿಕೊಳ್ಳುವುದು ರೈತನಿಗೆ ಅನಿವಾರ್ಯ.



ಮರಗಳ ಮೇಲೆ ಹೀಗೊಂದು ಮಾಳ

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ, ಹಳಿಯಾಳ ಭಾಗದ ಕಾಡಂಚಿನ ಹೊಲಗಳಲ್ಲಿ ಇಂತಹ ದೃಶ್ಯಗಳು ಕಂಡುಬರುತ್ತವೆ. ಈ ಭಾಗದಲ್ಲಿ ಕಾಡು ಅಧಿಕವಾಗಿರುವುದರಿಂದ ಕಾಡಂಚಿನಲ್ಲಿ ವಾಸವಾಗಿದ್ದು, ಕೃಷಿ ಮಾಡಿಕೊಂಡಿರುವ ರೈತರು ಬೆಳೆದ ಬೆಳೆಗಳ ಮೇಲೆ ಕಾಡುಹಂದಿ, ಜಿಂಕೆ, ನವಿಲು, ಆನೆಗಳ ಹಾವಳಿಯೂ ಹೆಚ್ಚಾಗುತ್ತಿದೆ. ನೆಲಮಟ್ಟದಲ್ಲೇ ಕಾವಲುಮನೆ ಮಾಡಿದರೆ ಆನೆಗಳು ರಾತ್ರಿ ಅವನ್ನು ಧ್ವಂಸಗೊಳಿಸುವ ಅಪಾಯ ಇದ್ದೇ ಇದೆ. ಆ ಕಾರಣಕ್ಕೆ, ಹೊಲದಲ್ಲಿ ಬೆಳೆದ ಬೆಳೆಗಳನ್ನು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ರೈತರು ಹೊಲದ ನಡುವೆ ಅಥವಾ ಹೊಲದ ಅಂಚಿನ ಎತ್ತರದ ಮರಗಳ ಮೇಲೆ ತುರ್ತಾಗಿ ಕಾವಲು ಮನೆಗಳನ್ನು ನಿರ್ಮಿಸಿಕೊಂಡು, ರಾತ್ರಿ ಸಮಯದಲ್ಲಿ ಅಲ್ಲಿ ಮಲಗಿದ್ದು, ಕಾವಲು ಕಾಯುವುದು ಸರ್ವೆಸಾಮಾನ್ಯವಾಗಿ ಕಂಡುಬರುತ್ತದೆ.

ಈ ನೆಲದ ಕೃಷಿ ಸಂಸ್ಕೃತಿಗೆ ಜನಪದೀಯ ಸ್ಪರ್ಶವಿದೆ. ಬೆಳೆ ಬರುವ ಕಾಲಕ್ಕೆ ಕಾವಲು ಮನೆಗಳು ಅಥವಾ ಮಾಳಗಳ ಕಲ್ಪನೆ ಕೂಡ ಹಿಂದಿನವರದ್ದು. ಕಾಡುಪ್ರಾಣಿಗಳನ್ನು ಕೊಲ್ಲುವ ಅಥವಾ ಬೇಟೆಯಾಡುವ ಯಾವುದೇ ಉದ್ದೇಶ ಇಲ್ಲದ ಹಿರಿಯರು, ಯಾವುದೇ ಆಧುನಿಕ ಕೋವಿ ಹಿಡಿದುಕೊಂಡು ಹೊಲಗಳಿಗೆ ಹೋಗಿದ್ದು ಇಲ್ಲ. ರಾತ್ರಿಯ ಕತ್ತಲು ಓಡಿಸಲು ಧೈರ್ಯಕ್ಕೆಂದು ಕೈಯಲ್ಲಿ ಲಾಟೀನು ಹಿಡಿದುಕೊಂಡು ಮಾಳಕ್ಕೆ ಹೋಗಿ ಮಲಗುವುದು, ರಾತ್ರಿ ಎಚ್ಚರವಾದಾಗ ಎರಡು ಮೂರು ಬಾರಿ ದೊಡ್ಡದಾಗಿ ಕೂಗುವುದು, ಪಟಾಕಿ ಸಿಡಿಸಿ ಹೊಲದ ಆಜುಬಾಜು ಬಂದ ಕಾಡುಪ್ರಾಣಿಗಳನ್ನು ಹೆದರಿಸಿ ಓಡಿಸುವುದು ಮಾಳ ಕಾಯುವವನ ಕೆಲಸವಾಗಿತ್ತು. ಬೆಳಕು ಮೂಡುವ ಸಮಯಕ್ಕೆ ಕಾವಲು ಮಾಳದಿಂದ ಎದ್ದು, ಹಾಸಿಗೆಯನ್ನು ಅಲ್ಲೇ ಮಡಚಿಟ್ಟು, ಮನೆಯ ದಾರಿ ಹಿಡಿಯುತ್ತಾರೆ. ಮತ್ತೆ ಆ ದಿನದ ಕೃಷಿ ಕಾರ್ಯ ಶುರುವಾಗುತ್ತದೆ. ಕಾಡು ಪ್ರಾಣಿ ಪಕ್ಷಿಗಳನ್ನು ಹಿಂಸಿಸುವುದಾಗಲೀ, ಕೊಲ್ಲುವುದಾಗಲೀ ಮಾಡದೇ, ಕೇವಲ ಬೆದರಿಸಿ ಓಡಿಸುವ ಅಂದಿನ ಕಾವಲು ಮಾಳದ ಕಲ್ಪನೆಯೇ ಈಗ ಅಪರೂಪವಾಗುತ್ತಿದೆ. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಚಿಕ್ಕಲೆಕ್ಕ

$56^2 = 3136 = 3+1+3+6 = 13$

$65^2 = 4225 = 4+2+2+5 = 13$

ಅರ್ಥ ಅಪಾರ್ಥವಾದಾಗ

STOP, NOT KILL

STOPNOT, KILL

ಡಣ್ಣ ಚಕ್ಕು ಕೇಳ್ರಪ್ಪ ಕಥೆಯ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಬೆದರಿದ ನಾಯಿಮರಿ

ಗುಂಡ ಮನೆಗೊಂದು ನೀಲಿ ಬಣ್ಣದ ನಾಯಿಮರಿ ತಂದಿದ್ದ. ಅದಕ್ಕೊಂದು ಪುಟ್ಟದಾದ ಮನೆ ನಿರ್ಮಿಸಿ, ಆ ಗೂಡಿನ ಹತ್ತಿರ ಯಾರೂ ಬರಬಾರದು ಎನ್ನುವ ಕಾರಣಕ್ಕೆ ‘ನಾಯಿ ಇದೆ ಎಚ್ಚರಿಕೆ’ ಎನ್ನುವ ಬೋರ್ಡ್ ಹಾಕಿದ. ಆದರೆ ಬೋರ್ಡ್ ಓದಿದ ನಾಯಿಮರಿ ಅಲ್ಲಿ ಬೇರೊಂದು ನಾಯಿ ಇರಬೇಕು ಎಂದು ಹೆದರಿ ಅಲ್ಲಿಂದ ಕಾಲ್ಕಿತ್ತಿತು. ಇದನ್ನು ನೋಡಿದ ಗುಂಡನಿಗೆ ನಗು ತಡೆಯಲಾಗಲಿಲ್ಲ.



ಗಣಿತದಲ್ಲಿ ಗರ್ದಿಗಮ್ಮತ್ತು

ಗುಣಿಸುವುದನ್ನು ಭಾಗಿಸಿದಾಗ...
ಒಂದು ಸಂಖ್ಯೆಯನ್ನು 2ರಿಂದ ಗುಣಿಸಬೇಕಾಗಿದೆ ಎಂದಿಟ್ಟುಕೊಳ್ಳಿ. ಅದನ್ನೇ ಭಾಗಿಸಿದಾಗಲೂ ಅದೇ ಉತ್ತರ ಬರುವ ಮೋಜಿದು.

ಉದಾ:

1238
X2 ಗುಣಿಸಿದಾಗ
=2476

5)1238(247.6
10
23
20
38
35
30
30
00

ಇಲ್ಲಿ ದಶಮಾಂಶ ಚಿಹ್ನೆ (.) ತೆಗೆದು ಉತ್ತರ ತಿಳಿದರೆ 2476

(ಯಾವಾಗಲೂ 2ರಿಂದಲೇ ಗುಣಿಸಬೇಕು, 5ರಿಂದಲೇ ಭಾಗಿಸಬೇಕು ನೆನಪಿಡಿ)

ಅಕ್ಷರ ಪಟ್ಟಿ

ಲ	ನಿ	ಕ್ಷಾ	ನ	ಸ್ತಾ
ಸ	ಅ	ಡಾ	ಪ	ಧ್ಯ
ರ	ಅ	ಹಾ	ಭ್ಯ	ಕ್ಷಾ
ಮಾ	ಗು	ಗಂ	ಹ	ಮ

ಕೊಂಚ ತಂತ್ರ

ಅಮೀಬಾದ ದೇಹರಚನೆಯನ್ನು ‘ಆಸಂಜೀಕೋಸು’ ಎಂಬುದನ್ನು ನೆನಪಿಟ್ಟುಕೊಂಡು ಹೇಳಬಹುದು.

ಆ = ಆಹಾರಕಣ
ಸಂ = ಸಂಕೋಚನಾ ರಸದಾನಿ
ಜೀ = ಜೀವಧಾತು
ಕೋ = ಕೋಶಕೇಂದ್ರ
ಸು = ಸುಳ್ಳುಪಾದ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ‘ಂತರ’ ಅಕ್ಷರಗಳಿಗೆ ಅಕ್ಷರ ಪಟ್ಟಿಯಿಂದ ಇನ್ನೆರಡು ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ರಚಿಸಿ

1			೦	ತ	ರ
2			೦	ತ	ರ
3			೦	ತ	ರ
4			೦	ತ	ರ
5			೦	ತ	ರ
6			೦	ತ	ರ
7			೦	ತ	ರ
8			೦	ತ	ರ
9			೦	ತ	ರ
10			೦	ತ	ರ

ಪದಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧವಾದ ಒಂದೇ ಪದ ಮಾಡಿರಿ.

1	ಕತ್ತಿ	+	ಬುಟ್ಟಿ	+	ಟ್ಟ	=	
2	ಕಾಕಾ	+	ವಶ	+	ಲಾ	=	
3	ಜಗಿ	+	ನಾನು	+	ರಾ	=	
4	ಜೋಲಿ	+	ಕಾಡು	+	ಆ	=	
5	ಜನ್ನ	+	ಮಣೆ	+	ನ	=	

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಸೈಲೆಂಟ್ ಅಕ್ಷರಗಳಿಗೆ ಮುಂದೆ ಕೊಟ್ಟಿರುವ ಅಕ್ಷರಗಳನ್ನು ಹೊಂದಿಕೆಯಾಗುವಂತೆ ಜೋಡಿಸಿ 10 ಸೈಲೆಂಟ್ ಪದಗಳನ್ನು ರಚಿಸಿ.

1			L		
2	W				
3			D		
4	H				
5	K				
6			L		
7			G		
8	Y				

-KWA
-TERI
-GOLE
-RUO
-ONW
-HFA
-SIN
-REA

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಡೋಲಾಯಮಾನ 2.ಪಾರದರ್ಶಕ 3.ಜಾತಿಗಣತಿ 4.ನಕಲಿಚಿನ್ನ 5.ಬರಡುನೆಲ

ಮೋಜಿನ ಇಂಗ್ಲಿಷ್: 1.STALE 2.REGAL

ಪದ ಪರಿಚಯ ಪರೀಕ್ಷೆ: 1.ಸದನ 2.ಚಾಮರಸ 3.ಕಸ 4.ಮತ 5.ಮದ 6.ರವಿ 7.ಚಾಮರ 8.ಮಕರ 9.ಮನವಿ 10.ದಾನ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಕ್ಷರ ಎಂ.ಎಸ್.
ಮೈಸೂರು



ಮನ್ವಿತ್ ಆರ್.ಕೆ.
ಬೆಂಗಳೂರು



ಮಾನ್ಯ ಎನ್.
ನವನಗರ



ಮಾನ್ವಿ ವಿ.ತೋಟಗರ್
ಕಾರಿಗನೂರು



ಮಹಾಂತ ನೇಸರಗಿ
ಬೈಲಹೊಂಗಲ



ಸಾನ್ವಿಕ ಕೆ.ಎಸ್.
ಅರಕಲಗೂಡು